ಮುಮುಕ್ಷು ಜನಹಿತಾರ್ಥವಾಗಿಯೂ, ಸಮಸ್ತ ಸಾಧುಜನರ
ಸೇವಾರ್ಥವಾಗಿಯೂ, ವೇದಾಂತ ರಹಸ್ಯವನ್ನು
ಪ್ರಚುರಗೊಳಿಸಿ
ಬಳ್ಳಾರಿ
[illegible] ಬುಕ್ ಡಿಪೋ ಪ್ರೆಸ್ ಪ್ರೊಪ್ರೈಟರ್
[illegible] ಸ್ವಾಮಿ [illegible] ಅವರಿಂದ ಮುದ್ರಿಸಿ
ಪ್ರಸಿದ್ಧಪಡಿಸಲ್ಪಟ್ಟಿತು.
[illegible]
[illegible] ೧-೮-೦

ಶ್ರೀ

ಶ್ರೀಸಚ್ಚಿದಾನಂದ ಪರಬ್ರಹ್ಮಣೇನಮಃ

ಓಂ ಶ್ರೀಪ್ರಣವಸ್ವರೂಪ ವಿಘ್ನರಾಜಾಯನಮಃ

ಅಖಂಡೇಶ್ವರವಚನವು

ಶ್ರೀ ಷಣ್ಮುಖದೇವರು ಶ್ರೀಬಸವಲಿಂಗದೇವರಿಗೆ ನಿರೂಪಿಸಿದ ತೂರ್ಯನಿರಾಲಂಬ ಶರಣನ ಷಡುಸ್ಥಲ ವಚನ.

ಮೊದಲುಪಿಂಡಸ್ಥಲ ಆಸ್ಥಲದವಚನ.

ಆದಿ ಆಧಾರವಿಲ್ಲದಂದು । ನಾದುಬಿಂದುಕಳೆಗಳಿಲ್ಲವೆಂದು । ವೇದಶಾಸ್ತ್ರಾಗಮತರ್ಕತಂತ್ರಾಗಳಿಲ್ಲದಂದು । ಚೌಷಷ್ಟಿವಿದ್ಯಕಲೆಗಳಿಲ್ಲದಂದು । ಭೇದಾಭೇದಂಗಳಿಂದ ತೋರುವತೋರಿಕೆಗಳೇ ಯಿಲ್ಲದಂದು । ಅಖಂಡೇಶ್ವರನಿಂವುನೀನರಿಯದೆ ಅನಂತಕಾಲವಿರ್ದರಂದೂ ||೧|| ಪೃಥ್ವಿಆಕಾಶವಿಲ್ಲದಂದು । ದಿಕ್ಕುವಿದಿಕ್ಕುಗಳಿಲ್ಲದಂದು । ಸಪ್ತದ್ವೀವಸಪ್ತಸಮುದ್ರಗಳಿಲ್ಲದಂದು । ತತ್ವಮಶಾವಿವಾಕ್ಯಂಗಳಿಲ್ಲದಂದು । ನಿತ್ಯಾನಿತ್ಯಂಗಳೇನುಯಿಲ್ಲದಂದು। ಅಖಂಡೇಶ್ವರನಿಮ್ಮನೀನರಿಯದೆ ಅನಂತಕಾಲವಿರ್ದರಂದು ||೨|| ಕಾಲಕಲ್ಪಿತಂಗಳಿಲ್ಲದಂದು । ಲೀಲೆಯಿಪ್ಪತ್ತೈದುನಟಿಸದಂದು। ಬಾಲಚಂದ್ರನಸೂಡದಂದು। ಸಾಲವುಸ್ತಕದವೂಲೆಯುಧರಿಸದಂದು । ಕಾಲಕಾಮುವೂಯೂದಕ್ಷಾದಿಗಳಿಲ್ಲದಂದು । ಅಖಂಡೇಶ್ವರ ನಿಂವ್ಮನೀವರಿಯದ ಅನಂತಕಾಲವಿರ್ದರಂದು ||೩|| ಪ್ರಕೃತಿವಿಕೃತಿಗಳಿಲ್ಲದಂದು । ಮಹಾಶೇಷಕಮತಾದಿಗ್ಗಜಂಗಳಿಲ್ಲದಂದು ಅಷ್ಟತನುಕುಲಗಿರಿಗಳಿಲ್ಲದಂದು । ಷಡ

ಧ್ವಜಪತಾಕೆಗಳಿಲ್ಲದಂದು । ಶಶಿರವಿಗಳ ಜಳಾಪಸೋಸದಂದು । ಅಖಂಡೇಶ್ವರನಿಂಮುನೀವರಿಯುದ । ಅನಂತಕಾಲವಿರ್ದಿರಂದು ॥೪॥ ಹಗಲಿರುಳಿಲದಂದು । ಯುಗಜಗಂಗಳುಮರಳಿತಿರುಗದಂದು । ಗಗನಮೇರು ಕೈಲಾಸಂಗಳಿಲ್ಲದಂದು । ಖಗಮೃಗಶೈಲವೃಕ್ಷಂಗಳಿಲ್ಲದಂದು । ಅಜ ಹರಿಸುರಾಸುರಮನುಮುನಿಗಳಿಲ್ಲದಂದು । ಜಗದಲೀಲಾ ವೈಭವಂಗಳೇನು ಯಿಲ್ಲದಂದು । ಅಖಂಡೇಶ್ವರನಿಂಮುನೀ ವರಿಯೆದೆ । ಅನಂತ ಕಾಲವಿರ್ದಿರಂದು ॥೫॥

ಇಂತುಪಿಂಡಸ್ಥಲ.

ಇಂತು ಪಿಂಡಜ್ಞಾನಸ್ಥಲ ॥ ನೀವಿನಿಂಮುಸ್ವಲೀಲೆಯಿಂದ ಬಗದಲೀಲೌವೈಭವಂಗಳನುನಟಸಬೇಕೆಂದು । ನಿಮ್ಮಲ್ಲನೆನಹುದೋರಲು । ಆನನಹುನಿರ್ಧರಿಸಿಚಿತ್ತನಿಸುತ್ತ । ಆಚಿತ್ತಿನಿಂದಚಿನ್ನದಚಿದ್ಬಿಂದುಚಿತ್ಕಳೆಗಳೊಗೆದವು ಆಚಿನ್ನದಚಿದ್ಬಿಂದುಚಿತ್ಕಳೆ ಅಮೂಲಚಿತ್ತುಸಹವಾಗಿ ಘಟ್ಟಗೊಂಡು ಅಖಂಡಗೋಳಕಾರತೇಜೋಮೂರ್ತಿಯುಪ್ಪ ಮಹಾಲಿಂಗವಾಯಿತು ॥ ಆಮಹಾಲಿಂಗವೇಪಂಚಮುಖವನ್ನೈದಿಸದಾಶಿವನೆಂದೆನಿಸಿತು ಆಸದಾಶಿವನಿಂದ ಬ್ರಹ್ಮ, ವಿಷ್ಣುಖುದ್ರರೆಂಬತ್ರ್ಯಮೂರ್ತಿಗಳು ಜನಿಸಿದವು ॥ ಆತ್ರ್ಯಮೂರ್ತಿಗಳಿಂದ ಸ್ವರ್ಗ, ಮರ್ತ್ಯ, ಪಾತಾಳಂಗಳೆಂಬ ತ್ರ್ಯಲೋಕಂಗಳು ಜನಿಸಿದವು ॥ ಆತ್ರ್ಯಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಂಣುಗಂಡುನಾಮರೂಪು ಕ್ರಿಯೊದಿಸಕಲವಿಸ್ತಾರವಾಯಿತು ॥ ಯಿಂತಿಯೆಲ್ಲವು ನಿಂಮನೆನಹುಮಾತ್ರದಿಂದಾದವೈಯೊಅಖಂಡೇಶ್ವರಾ ॥೧॥ ಯೆನ್ನತನುವಿನನಮರೆಯೆಲ್ಲಿರ್ದಚಿನ್ನಯಾನ ಹರಸುವಬನ್ನಿರೆಯೆನ್ನಮನದಮರೆಯಲ್ಲಿರ್ದಮಹಾಘನವಸ್ತುವನು ಹುಡುಕುವಬನ್ನಿರೆ ಯೆನ್ನಪ್ರಾಣದಮರೆಯಲ್ಲಿರ್ದಪರಬ್ರಹ್ಮವೆಂಬ ಅಖಂಡೇಶ್ವರನ ನೋಡುವಬನ್ನಿರೆ ॥೨॥ ಬೀಜದಮರೆಯಲ್ಲಿಅಡಗಿರ್ದಅಂಕುರವುಬಹಿರ್ಗತವಾದಂತೆ ॥ ಮುಗಿಲಮರಯಲಿರ್ದಕ್ಷಣಿಕವುಸ್ಫುರಿಸಿದಂತೆ

ಯೆನ್ನ ಮನದಲ್ಲಿ ಅಡಗಿರ್ದ ಮಹಾಘನವು ತನ್ನ ಲೀಲೆಯಿಂದ ತಾನೆ
ಉದಯವಾಗಲು ನಿಮ್ಮ ಆದಿ ಅನಾದಿಯ ನಿಲವು ಕಂಡನಯ್ಯಾ ಅಖಂ
ಡೇಶ್ವರಾ ||೩|| ಭವಕ್ಕೆ ಬಾರದ ವಸ್ತುವ ಭಾವಿಸುವ ಪರಿಯಿನ್ನೆಂತೊ |
ನೆನಹಿಗೆ ಬಾರದ ವಸ್ತುವ ನೆನೆವ ಪರಿಯಿಂನೆಂತೊ | ನೆನೆಯದೆ ಭಾವಿಸ
ದ ಯೆನ್ನೊಳಗೆ ಬಯಲರೂಪವಾಗಿ ತೋರಿಪನು ನೋಡಾ ಅಖಂಡೇ
ಶ್ವರಾ ||೪|| ಅನಂತಕಾಲ ಯೆನ್ನ ವಡಲ ಮರೆಯೊಳಗಡಗಿರ್ದಂದು|
ಯಿದೇನು ನಿಮ್ಮ ಗಾರುಡವಯ್ಯಾ | ನೀವು ನಿಮ್ಮ ಕರುಣವಿಂದ ಯೆನ್ನ
ವಡಲ ಮರವೆಯ ವಡದು ಯೆನ್ನ ಕಂಣ ಮುಂದಣ ಸತ್ವ ರಜ ತಮದ ಪ
ರದಿಯ ಹರಿಯಲೊಡನೆ ನಿಮ್ಮ ಗಾರುಡವಯ್ಯಾ | ನೀವು ನಿಮ್ಮ ಕರು
ಣವಿಂದ ಯೆನ್ನ ವಡಲ ಮರವೆಯ ವಡದು ಯೆನ್ನ ಕಂಣ ಮುಂದಣ ಸ
ತ್ವ ರಜ ತಮದ ಪರದಿಯ ಹರಿಯಲೊಡನೆ ನಿಮ್ಮ ನಿತ್ಯದ ನಿಲವು ಕಂ
ಡೆನಯ್ಯಾ ಅಖಂಡೇಶ್ವರಾ ||೫|| ಯೆನ್ನಂಗದ ಮಧ್ಯದೊಳಗೆ ಮಂಗ
ಳಾಂಗನ ಬೆಳಗು ಥಳೆಥಳೆನೆ ಹೊಳವುತಿರ್ಪುದಾಗಿ ಯೆರನಂಗಳ ಕಾಳಿಕೆ
ಯು ಕಡೆಗಾಯಿತು | ಯೆನ್ನ ಮನದ ಮುಂದಣ ಮರವೆ ಹಾರಿಹೋ
ಯಿತು | ಅಖಂಡೇಶ್ವರನ ನಿಲವು ನಿಶ್ಚಲವಾಗಿ ಕಾಣಬಂದಿತು ||೬||
ಅಂಜನದ ಬಲದಿಂದ ನೆಲದ ಮರೆಯ ದ್ರವ್ಯ ಕಾಣಬಂದಿತು | ಯೆನ್ನ ಚಿ
ತ್ತಿನ ಮಧ್ಯದಲ್ಲಿ ನಿತ್ಯ ಶಿವಜ್ಞಾನಾಂಜನವು ಪ್ರಜ್ವಲಿಸಲಾಗಿ | ತತ್ವಾ
ತತ್ವಂಗಳು ಏಕೀಕರವಾದವು | ಅಖಂಡೇಶ್ವರನೆಂಬ ಪರವಸ್ತು
ಹೊಳಿರ್ದಗೊತ್ತು ಕಾಣಬಂದಿತು ||೭||

ಇತಿ ಪಿಂಡಜ್ಞಾನಸ್ಥಲ ಸಂಪೂರ್ಣಂ.

ಸಂಸಾರಹೇಹಸ್ಥಳ || ಯೆನ್ನ ಭವಭವದಲ್ಲಿ ತೊಳಲಿ ಬಳಸಿದ
ಕಾರಣವೇನಯ್ಯಾ | ಯೆಂನ ಸಂಸಾರಶರಧಿಯಲ್ಲಿ ಮುಳುಗಿಸಿ ಯೊಳೆ
ಗುಡದಯಿರಿಸಿದ ಕಾರಣವನಯ್ಯಾ | ನಾನು ಮಾಡಿದ ಅಪರಾಧವೇನ
ಯ್ಯಾ | ನೀವು ಮಾಡಂದುದ ನಾನು ಮಾಡಿದನು | ಯೆನಗೆ ಬೇರೆ ಸ್ವ
ತಂತ್ರವುಂಟೇ | ಹೇಳಾ ಅಖಂಡೇಶ್ವರ ||೧|| ಅಡವಿಯಲ್ಲಿರ್ದ ಗೋವು |

ಮನೆಯಲಿರ್ದಕರುವಿಗೆಚಿಂತಿಸಿಬಂದುಹಾಲುನೀಡಿ ಮೋಹವಮಾಡುವದಲ್ಲದೆ । ಆಕರುವೆತ್ತಬಲುದೈಯ್ಯ ನಾನುಕರ್ಮದೇಹವಿಡದು ಪರಿಭವದಲ್ಲಿಲ್ಲಿತೊಳಲುತ್ತಿರಲು । ನೀನುದಯಹುಟ್ಟಿಯೆನ್ನ ಮರವೆಯ ಸಂಸಾರಸ । ತೊಲಗಿಸಿಕರುಣದಿಂದಾ ಸಲಹಬೇಕೆಂಬ ಚಿಂತೆ ನಿನಗಿಲ್ಲದನಾನೇನುಬಲ್ಲೆನಯ್ಯ ಅಖಂಡೇಶ್ವರಾ ॥೧॥ ಎಂದುಅಷ್ಟತನುಗಳುನಿರ್ಮಿತವಾಗಿ ಪಿಂಡಾಂಡವಾದವು । ಅಂದುಯಿಂದುಪರಿಯಂತರಬಂದೆನಯ್ಯ । ಬಹುಜನ್ಮಂಗಳಲ್ಲಿನೊಂದೆನಯ್ಯ । ಸುಖದುಃಖಂಗಳಲ್ಲಿಬೆಂದೆನಯ್ಯ । ಸಂಸಾರದಲ್ಲುರಿದಗ್ಧನಾದೆನಯ್ಯ । ಅಖಂಡೇಶ್ವರ ಈಸಂಸಾರದಂದುಗವ ತೊಲಗಿಸಿನಿಮ್ಮತ್ತ ಯೆಳೆದುಕೊಳ್ಳಯ್ಯ । ಯೆನ್ನನಿಮ್ಮಧರ್ಮನಿಮ್ಮಧರ್ಮ ॥೨॥ ಘ್ರಾಣೇಂದ್ರಿಯವಿಷಯದಿಂದೆಭ್ರಮರಕೆಡುವದು । ಸಂಪಿಗೆಯಪುಷ್ಪದಲ್ಲಿರಸನೇಂದ್ರಿಯವಿಷಯದಿಂದಮತ್ಸ್ಯಕೆಡುವದು । ಜಾಲಗಾರನಬಲೆಯಲ್ಲಿನಯನೇಂದ್ರಿಯವಿಷಯದಿಂದಪತಂಗಾಕೆಡುವದು । ದೀಪಜ್ವಾಲೆಯಲ್ಲಿತ್ವಗಂದ್ರಿಯವಿಷಯದಿಂದಗಜಕೆಡುವದು ॥ ರಾಜನಕೃತಕದಲ್ಲಿಶ್ರವಣೇಂದ್ರಿಯವಿಷಯದಿಂದಯೆರಳೆಕೆಡುವದು ॥ ಬೇಟಕಾರನಸರಳಿನಲ್ಲಿ ಇಂತೀಪ್ರಾಣಿಗಳುವೊಂದೊಂದು ವಿಷಯದಿಂದಬಂಧನಕ್ಕೊಳಗಾದವು॥ ಇಂತಪ್ಪಪಂಚೇಂದ್ರಿಯವಿಷಯ ವ್ಯಾಪಾರದಲ್ಲಿಲಂಪಟರಾದಮನುಜರು ಕೆಟ್ಟಕೇಡಾನೇನನೆಂಬೆನಯ್ಯ ಅಖಂಡೇಶ್ವರಾ ॥೪॥ ವಿಷಯವೆಂಬಕಾಲಕಿಚ್ಚಿನಜ್ವಾಲೆಯಲ್ಲಿ ಈರೇಳುಲೋಕವೆಲ್ಲ ಹತವಾಗುತಿರ್ಪುದುನೋಡಾ । ಅದಂತೆಂದೊಡ ॥ ಕುಂಡಲಿಯೆಂಬಮಾಯಾಸರ್ಪನತನ್ನಬಾಲವಬ್ರಹ್ಮರಂಧ್ರಕ್ಕೆಸೇರಿಸಿ । ನಾಭಿಚಕ್ರವುಸುತ್ತಿಕೊಂಡು ಅಧೋಮುಖವಾಗಿ ಇಂದ್ರಿಯವೆಂಬ ವಿಷವಕಾರುತಿರ್ಪುದುನೋಡಾ । ಆವಿಷಯದನಂಜುತಲೆಗೇರಿದಲ್ಲಿ ಅಸಿಯೆಜವ್ವನೆಯರಸಂಪತ್ತುಸುಖವಬಹುಸವಿಯೆಂದುತಲೆದೂಗುತಿರ್ಪರುನೋಡಾ । ಸಕಲ ಪ್ರಾಣಿಗಳು ಇದು ಪಶುಪತಿಮಾಡಿದಮಾಯಾವಿಧಿಯೆಂದುತಿಳಿಯದೆ

ಹಸಗೆಟ್ಟುಹೋಯಿತುನೋಡಾ । ಮೂಜಗವೆಲ್ಲಾ ಅಖಂಡೇಶ್ವರಾ॥ ಬಣ್ಣದಚರ್ಮದಹೆಣ್ಣಿನಲಿಂಗಸಂಗದಕೂಟದಸುಖದ ಸವಿಯಿಂದ ಮನವೆಳಸುವಕಣ್ಣಗೆಟ್ಟಅಣ್ಣಗಳು ನೀವುಕೇಳಿರೋ । ಶುನಕ ಯೆಲುವುಕಡಿವಲ್ಲಿತನ್ನ ಬಾಯಜೊಳೊಳೆತನಗೆ ಸವಿದಿಟ್ಟುತಿರ್ಪುದ ಲ್ಲದೆ । ಆಯೆಲುವಿನೊಳಗೇನುಸವಿಸಾರವುಂಟೇ ॥ ತನ್ನ ಊರ್ಧ್ವ ಬಿಂದು ಮಾಯಾವಿಲಾಸದಿಂದ ಅಧೋರ್ಗತಿಗಿಳಿದು । ಮೂತ್ರದ ನಾಳವತಗಲಿಸಿ ಕಿಂಚಿತ್ಸುಖ ವುಂಟಾಗುತಿರ್ಪುದಲ್ಲದೆ ಹೆಣ್ಣಿನಿಂದ ಸು ಖವುಂಟೇ ಎಡ್ಡಪ್ರಾಣಿಗಳಿರಾ । ಇಂತೀದೃಷ್ಟವತಿಳಿದು ಭೇದಿಸಿತಾ ಕಾಣಲರಿಯದ ಹೇಸಿಕೆಯಕಿಸುಕುಳದ ಕೀವುತುಂಬಿದಸುರುವ ಹಸಿಯೆಮೆತೊಗಲಿನ ಹಳಿಯ ಘಾಹದಲಿ ವಿಷಯಾತುರದಿಂದೆಬಿದ್ದು । ಮತಿಮಸಲಿಸಿ ಮುಂದುಗಾಣದೆ । ಮುಳುಗಾಡುತಿರ್ಪುದುನೋ ಡಾ । ಮೂಜಗವೆಲ್ಲಾ ಅಖಂಡೇಶ್ವರಾ ॥೬॥ ಅಂಡಜಾಯಿಪ್ಪತ್ತೊಂ ದಲಕ್ಷ । ಪಿಂಡಜಯಿಪ್ಪತ್ತೊಂದಲಕ್ಷ । ಉದ್ಭಿಜಯಿಪ್ಪತ್ತೊಂದು ಲಕ್ಷ । ಇಂತೀ ಯೆಂಬತ್ತುನಾಲ್ಕುಲಕ್ಷ ಜೀವರಾಶಿಗೊಳಗೆ ಒಂದೊಂ ದುಜನ್ಮದೊಳಗೆ ಷಹಸ್ರಸಹಸ್ರವೇಳೆ ಹುಟ್ಟಿಬಂದು । ಅನೇಕ ದುಃಖವಂತಿರಿಲಿ । ಮುಂದೆ ಮಾನುಷ್ಯದೇಹವಿಡಿದುಬಂದು । ಅನೇಕ ದುಃಖವಂತಿರಿಲಿ । ಮುಂದೆಮಾನುಷ್ಯದೇಹವಿಡಿದುಬಂದ । ದುಃಖ ಮಂ ಪೇಳ್ವೆನದೆಂತೆನ ॥ ತಂದೆಯವಿಕಾರದ್ದೆಸೆಯಿಂದ । ಬಿಂದುರೂ ಪಾಗಿತಾಯೆ ಬಸುರಲ್ಲಿನಿಂದು ಒಂಬತ್ತುತಿಂಗಳಪರಿಯಂತರ ಅವ ಯವಂಗಳೆಬಲಿದು । ಪಿಂಡದವರ್ಧನವಾಗಿಕಳ್ಳನಹೆಡಗಯ್ಯಕಟ್ಟಿ । ಶರಮನೆಯಲ್ಲಿ ಕುಳ್ಳಿರಿಸುವಂತೆ । ಗರ್ಭವೆಂಬಶರಮನೆಯಲ್ಲಿಶಿಶು ವುಮುಚ್ಚಿದಾಕಣ್ಣು ಮುಗಿದಬಾಯಾಗಿಕುಕ್ಕುಟಾಸನದಲ್ಲಿಕುಳ್ಳಿ ರ್ದು । ಕಡಿವಜಂತುಹುಳುಗಳೆಬಾಧ । ಸುಡುವಜಠರಾಗ್ನಿಯ ಬಾಧೆ ಇಂತಿವುಮೊದಲಾದ ಅನಂತಕೋಟಿ ಬಾಧೆಗಳಿಂದ ದಿನದಿನಕೆ ದುಃಖವುಂಬಡುತ್ತಾ । ಆಮೇಲೆ ಜಾತಿಸ್ಮರತ್ವವುದಯವಾಗಿ ತನ್ನ

ಹಿಂದಣ ಧರ್ಮಕರ್ಮಂಗಳ ಪುಣ್ಯಪಾಪಂಗಳ ಆರುಹುಮರಹುಗಳ ನಾರೈದುನೋಡಿ ಹಿಂದಅರಿಯದೆ । ಪಾಪದದೆಸೆಯಿಂದ ಈಗರ್ಭನರಕಕೆಬಂದೆ । ಇನ್ನು ಮುಂದೆತೆರನೇನೆಂದು । ತನ್ನೊಳಗೆತಾನೇ ಚಿಂತಿಸಿ ಸರ್ವರಿಗೆ ಪರಮೇಶ್ವರನೇ ಕರ್ತನು । ಸರ್ವರಭವಪಾಶಂಗಳ ಚೇಧಿಸುವಾತನು ಪರಮೆಶ್ವರನೆಂದರಿದು ಮನದಲ್ಲಿ ನಿಶ್ಚೈಸಿಕೊಂಡು ॥ ಆಪರಮೆಶ್ವರಗೆ ಶಿವಧೋ ಶಿವಧೋಯೆಂದು ಮೊರೆಯಿಡುತ್ತಾ ಶಿವಧ್ಯಾನಮಂಪೊಳ್ವ ಸಮಯದಲ್ಲಿ । ಕೋಟಿಶಿಡಲು ಹೋಯಿದಂತೆ । ವಿಷ್ಣುಪ್ರಸೂತಿಯ ಘಾಳಿಬೀಸಲು । ಅದುಕಂಡು ತರತರನೆನಡುಗಿ । ಧ್ಯಾನಪಲ್ಲಟವಾಗಿ ದಿಗ್ಭ್ರಮಣೆಗೊಂಡು ಊರ್ಧ್ವಮುಖವಾಗಿ ಕುಳ್ಳಿರ್ದಶಿಶುವು ಗಿರ್ರನೆತಿರಗಿ ತಳೆಕೆಳಗಾಗಿ ಕರ್ಕಕಂಜಿಚ್ಛನಲ್ಲಿ ಚಿನ್ನದಸಲಾಕೆಯತೆಗದಂತೆ । ಬಚ್ಚಲಹುಳುವಿನಂದದಿ ಯೋನಿಯೆಂಬ ಸೂಕ್ಷ್ಮದ್ವಾರದಿಂದೆ ಪೊರಮಟ್ಟುಹುಟ್ಟಿದಲ್ಲಿ ಕೋಟಿಬಾಧೆಗಳಿಂದ ನೊಂದುಹಮ್ಮನೆಹಾರಿಕಡುದುಃಖಮಂಬಟ್ಟು । ಹಿಂದಣಜಾತಿಸ್ಮರತ್ವಕೆಟ್ಟುಮತಿಮಸುಳಿಸಿ । ತನ್ನ ಮಲಮೂತ್ರಂಗಳಲ್ಲಿ ತಾಹೊರಳಾಡಿ । ಬಾಲಲೀಲೆಯಸುಖದುಃಖಂಗಳೆನನುಭವಿಸಿ । ಆಬಾಲಲೀಲೆಇಂದುಳಿದು । ಮೇಲೆಯವ್ವನದವಯಸ್ಸುವದಗಿದಲ್ಲಿ ಕಾಮಕ್ರೋಧದಿಂಕರಗಿ । ಮದಮತ್ಸರದಲ್ಲಿ ಮುಂದುಗೆಟ್ಟು । ನಾನಾವ್ಯಾಪಾರವ ನಂಗೀಕರಸಿ ಬಂದಯೋನಿಯೆಂದರಿಯೆದೆ । ಉಂಡಮೊಲೆಯೆಂದೆರಿಯದೆ । ಕಾಮವಿಕಾರತಲೆಗೇರಿ । ವಿಷಯಾತುರನಾಗಿ ಇಳಿಗಾರನದೆಸೆಯಿಂದ । ಈಚಲಮರ ನಿಸ್ಸಾರವಾದಂತೆ । ಸ್ತ್ರೀಯರಸಂಗದಿಂದ ದೇಹದೊಳಗಣಊರ್ಧ್ವಬಿಂದುಜಾರಿಜಾರಿಇದು । ಸೋರಿಸೋರಿಹೋಗಿ ದೇಹವು ನಿಸ್ಸಾರವಾಗಿ ಯವ್ವನಬಲಗೆಟ್ಟು । ಮುಪ್ಪಾವರಿಸಿ ಜೇತನಗೊಂಡು । ಸರ್ವಾಂಗವೆಲ್ಲವ್ರೂ ನರೆತೆರೆಗಳಿಂದಮುಸುಕಲು । ಪಾಟುತನಗಾಗಿ । ಆಧಿವ್ಯಾಧಿವಿಪತ್ತುರೋಗರುಜೆಗಳಿಂದ । ಬಹುದುಃಖಮಂಬಟ್ಟು ।

ಯದಗೂಡುಗಟ್ಟಿಬೆನ್ನು ಬಾಗಿ ಕಂಣಾವಳಿನಟ್ಟು ಶರೀರಯಳತಾಟ
ಗೊಂಡು । ಕಾಲಮೇಲೆಕೈಯನ್ನೂರಿಕೋಲುಪಿಡಿದುಯೇಳುತ್ತೆ ।
ನಾನಾತೆರದ ದುಃಖಭಾವತೆಯಿಂದ । ಆತ್ಮನುಕೆಟ್ಟು ನಷ್ಟವಾಗಿ
ಹೋಹಿತುನೋಡಾ ॥ ಇದುಕಂಡು ನಾನುಅಂಜಿ ಮರಳಿಜನ್ಮಕ್ಕೆ
ಬರಲಾರದೆ ನಿಮ್ಮಮರೆಹೊಕ್ಕೆನಯ್ಯಾ ಅಖಂಡೇಶ್ವರಾ ||೭|| ಹರಿಹ
ತ್ತುಭವದಲ್ಲಿ ಬರಿಸಿತ್ತುಮಾಯೆ । ಬ್ರಹ್ಮನತಲೆಯಕೋಳಿಮಾಡಿತು
ಮಾಯೆ ಇಂದ್ರನಂಗಕೆಭಂಗವನಿತುಮಾಯೆ । ಸಿದ್ಧಸಾಧಕರಿಗೆಲ್ಲ
ಗುದ್ಯಾಟವಕ್ಕಿತುಮಾಯೆ । ಮನುಮುನಿಗಳಿಗೆಲ್ಲಮನವಳಿಸಿಕೊಂ
ಡು ಮರಣಕೊಳಗುಮಾಡಿತುಮಾಯೆ । ಸ್ವರ್ಗಮರ್ತ್ಯಪಾತಾಳ
ವೆಂಬ ಮೂರುಲೋಕದವರೆಲ್ಲರ ಯೋನಿಮುಖವಲಿ ಹರಿಹರಿದು
ನುಂಗಿತೊತ್ತುಳಿದುಳಿಯಿತಮಾಯೆ । ಮುಕ್ಕಣ್ಣನೀಮಾಡಿದಮಾ
ಯವಚಿಕ್ಕಸನೆಬೆರಗಾದೆನ್ನೈಯ್ಯಾ । ಅಖಂಡೇಶ್ವರಾ ||೮|| ಬಂಧನ
ಕ್ಕೊಳಗಾದ ಹುಲಿಗೆಬಲಾತ್ತರವುಂಟೆನಯ್ಯಾ ಸಂಸಾರದಂದುಗದಲ್ಲಿ
ತೊಳಲುವಜೀವರಿಗೆ ಮುಂದೆಮುಕ್ತಿಯನರಸು ಜ್ಞಾನವುಂಟೇನ
ಯ್ಯಾಅಖಂಡೇಶ್ವರಾ||೯||ಕೆಟಕೆಟ್ಟೆನಯ್ಯಾವಡಲುಷಾಪಿಯಹಿಡಿದು।
ಕೆಟ್ಟೆಕೆಟ್ಟೆನಯ್ಯಾವಡಲದುರ್ಗುಣದೊಡನಾಡಿ । ಕೆಟ್ಟೆಕೆಟ್ಟೆನಯ್ಯಾ
ನಿಮ್ಮಡಿಯಭಕ್ತಿಯಮರದು ಅಖಂಡೇಶ್ವರಾ ||೧೦|| ಕಿಸುಕುಳಕೀ
ವುರಕ್ತವಸದುತುಂಬಿದಮಲಮೂತ್ರರಂಜನ । ಮುಸುಕಿದಮಾಂಸ
ಅಸ್ಥಿಗಳಸುತ್ತಿನಹಸನಾದಚರ್ಮದಹೊಕೆಯಹುಸಿತನು ಮೆಚ್ಚಿ
ಪಶುಪತಿನಿಮ್ಮಮರದನ್ನೈಯ್ಯಾ ಅಖಂಡೇಶ್ವರಾ ||೧೧|| ಸುಡುಸುಡು
ಈದೇಹದರೂಪುನೋಡಿದರೇನು ಹುರುಳಿಲ್ಲವೈಯ ॥ ಯಲುವುಚ
ರ್ಮನರಮಾಂಸ ಮಲಮೂತ್ರಯುಕ್ತವಾದ ಅನಿತ್ಯದೇಹವನೆಚ್ಚಿ
ನಿಮ್ಮನಿಜವಮರದು ಭವಭಾರಿಯಾದೆನ್ನೈಯ್ಯಾ ಅಖಂಡೇಶ್ವರಾ
||೧೨|| ಭವನಕ್ಕೆಬೀಜವಾದುದು ತನುವೋಮನವೋ । ಯಂದುವಿ
ಚಾರಿಸೆನೋಡಲು । ಮನವೇಕಾರಣವಾಗಿರ್ಪುದರಿಯದ ಕೆಟ್ಟವು

ನದಸಂಗದಿಂದೆ ಮರ್ತ್ಯಲೋಕದಲ್ಲಿ ಹುಟ್ಟಿತಾಪತ್ರಯಾಗ್ನಿಯಿಂದೆ ಕುಂದಿಕುಂದಿ ನೊಂದುಬೆಂದನಯ್ಯಾ । ಈಮನದಸಂಗದಿಂದ ಭವಭವಗಳಲ್ಲಿ ತೊಳಲಿಬಳಲಿದೆನಯ್ಯಾ । ಈಮನದಸಂಗದಿಂದೆ ಅನಂತ ಮರವೆಯಜಾಲಗಳಲ್ಲಿ ಶರೆಯಸಿಕ್ಕಿದನಯ್ಯಾ । ಈಮನದಸಂಗವ ಬಿಡಿಸಿ ನಿಮ್ಮನೆನಹಿನಸಂಗದಲ್ಲಿರಿಸಿ ಸಲಹೈಯ್ಯಾಯನ್ನ ಅಖಂಡೇಶ್ವರ ||೧೩|| ಮನವೆಂಬಮರ್ಕಟನು ತನುವೆಂಬವೃಕ್ಷವನೇರಿ । ಇಂದ್ರಿಯಂಗಳೆಂಬ ಶಾಖೆಶಾಖೆಗೆ ಹಾರಿವಿಷಯಂಗಳೆಂಬ ಹಣ್ಣಾಫಲಂಗಳಗ್ರಹಿಸಿ । ಭವದತ್ತಮುಖವಾಗಿ ಹೋಗುತ್ತಿದನೋಡಾ । ಈಮನವೆಂಬಮರ್ಕಟನಿಮ್ಮನೆನವೆಂಬ ಪಾಶದಲ್ಲಿಕಟ್ಟಿ ಯನ್ನನುಳುಹಿಕೊಳ್ಳಯ್ಯಾ ಅಖಂಡೇಶ್ವರಾ ||೧೪|| ತನುವಿಕಾರಕತ್ತಲೆಯಲ್ಲಿ ಸಿಕ್ಕಿಕಂಗೆಟ್ಟುಕಳವಳಿಸಿ ತೊಳಲಿದನಯ್ಯಾ ಮನವಿಕಾರದಮರವೆಯಲ್ಲಿ ಸಿಕ್ಕಿಮಣ್ಣುಮಸಿಯಾಗಿ ಬಣ್ಣಗೆಟ್ಟನಯ್ಯಾ । ಈತನುಮನಹವಿಕಾರವಮಾಡಿಸಿ । ನಿಮ್ಮಭಕ್ತಿವಿಚಾರದಲರಿಸಿ ಸಲಹೆಯ್ಯಾಯೆನ್ನನು ಅಖಂಡೇಶ್ವರಾ ||೧೫|| ಮತಿಗೆಟ್ಟೆನಯ್ಯಾ ಮನದಾಸೆಯಕಚ್ಚಿ ದೃಶ್ರಿಗೆಟ್ಟೆನಯ್ಯಾ । ತನುವಿನಾಶೆಯಮೆಚ್ಚಿ ಈತನುಮನದಾಶೆಯಕೆಡಿಸಿ । ನಿಮ್ಮಭಕ್ತಿಯಲೇಸತೋರಿಸಿ ಬದುಕಿಸಯ್ಯಾ ಯೆನ್ನಅಖಂಡೇಶ್ವರಾ ||೧೬|| ಹಶಿವುತೃಷಿಯೆಂಬಲೆ ಯಾವರಿಸಿಹುಸಿವೃತಿಪುರ್ದಾನೋಡುಮಾನವಾ । ವಿಷಯಾವಿಕಾರದಂಡಲೆಯಾವರಿಸಿದೆಸಗೆಸುಳುವೃತಿಪುರ್ದುನೋಡಾತನುವು । ಈತನುಮನದಲ್ಲಿ ಮುಸುಕಿದಮಾಯಾವಾಸನೆಯಕಳೆದು । ಮ್ಮಭಕ್ತಿಯನೆತೋರಿಸಿಬದುಕಿಸೈಯ್ಯಾಅಖಂಡೇಶ್ವರಾ ||೧೭|| ಸಾಕುಸಾಕುಮಾಡುವದು ಭವಬಂಧನಂಗಳಸೋಂಕಿಬಿಡದಾ । ಸಕಲಸಂಸಾರಬೇಕೆಂದಳಸುವದಾವಿಷಯಭೋಗಕ್ಕೆಶಿವಶಿವಾ । ಈಕಾಕುಮನಕ್ಕೆಯೇನುವಡಲಿ ಹರಹರಾ । ಈಕಳ್ಳಮನಕ್ಕೆಯೆಂತುಮಾಡಲಿ । ಅಖಂಡೇಶ್ವರಾನಿಮ್ಮಕೃಪಾಲೋಕನವಿದಸೋಡಿಪಾಲಿಪುದೈಯ್ಯಾ । ಯನ್ನನಿಮ್ಮ

ಧರ್ಮ ॥೧೮॥ ಸತ್ಯವನುಡಿಯದು । ಸದಾಚಾರದಲ್ಲಿನಡೆಯದು । ಭಕ್ತಿಯಹಿಡಿಯದು । ಮುಕ್ತಿಯಪಡೆಯದು । ಸುಡುಸುಡುಮನದಯುಕ್ತಿಯಅಖಂಡೇಶ್ವರಾ । ನಿಮ್ಮಭಕ್ತಿಭಾವದಲ್ಲಿರಿಸಿ ಸಲಹೈಯ್ಯಾಯೆಂನನಿಮ್ಮಧರ್ಮನಿಂಮಧರ್ಮ ॥೧೯॥ ಹುಲಿಯಬಾಯಲ್ಲಿಸಿಕಿದ । ಹುಲ್ಲೆಯಂತೆ । ಸರ್ಪನಬಾಯಲ್ಲಿಸಿಕಿದಕಪ್ಪೆಯಂತೆ ॥ ಸಕಲಲೋಕಾದಿಲೋಕಂಗಳುಮಾಯೆಬಲೆಯಲ್ಲಿಸಿಲ್ಕಿ । ಸೆರೆಯಹೋಗುವದುಕಂಡುನಾನಂಜಿನಿಮ್ಮಹೊಕೆನುಕಾಯ್ಯೆಯ್ಯಾ । ಕಾರುಣ್ಯನಿಧಿಯೇ.ಅಖಂಡೇಶ್ವರಾ ॥೨೦॥ ಕಾಲನೆಂಬಜಾಲಗಾರನ । ಕರ್ಮವೆಂಬಬಲೆಯಬೀಸಿ । ಸಂಸಾರಾಬ್ಧಿಯಲ್ಲಿರ್ಪ ಸಕಲಪ್ರಾಣಿಗಳೆಂಬಮೀನುಗಳಹಿಡಿದುಕೊಲ್ಲುತೈದಾನೆ । ಕಾಮನೆಂಬಬೇಂಟೆಗಾರನೂಕಂಗಳಕೊನೆಯಲ್ಲಿನಿಂದು । ಕಳೆವಳದಬಾಣವನೆಸೆದು । ಭವವೆಂಬಬಲೆಯಲ್ಲಿ ಸಕಲಪ್ರಾಣಿಗಳಕೆಡಹಿಕೊಂಡು ಕೊಲ್ಲುತ್ತೈದಾನೆ । ಮಾಯೆಯೆಂಬರಕ್ಕಸಿ ಸಕಲಪ್ರಾಣಿಗಳ ಹೀರಿಹಿಪ್ಪೆಯಮಾಡಿವುಃಪೆದು ವ್ರಾಪುತ್ತೈದಾಳೆ । ಇಂತೀತ್ರಿವಿಧಮುಖದಲ್ಲಿಕಾಡುವ ನಿಮ್ಮಮಾಯೆಯಗೆಲುವರೆಅರಿಗಳವಲ್ಲ।ಅಖಂಡೇಶ್ವರಾನೀವೀಕರುಣಿಸಿವನಕ್ಕ॥೨೧॥ ಸಿರಿವಂತರೆಂದುಹೇಳುವ ದಾರಿದ್ರಕ್ಕೆ ವಳಗುಮಾಡಿಕಾಡಿತುನೋಡಾನಿಮ್ಮಮಾಯೆಸತ್ಯವೆಂದುಹೇಳುವವರ । ಅಸತ್ಯಕ್ಕೆವಳಗುಮಾಡಿಕಾಡಿತುನೋಡಾ । ಮಾಯಹಿರಿಯರೆಂದುಹೇಳುವವರಾ । ಕಿರಿದಿಗೆವಳಗುಮಾಡಿಕಾಡಿತುನೋಡಾನಿಮ್ಮಮಾಯೆ । ನಿತ್ಯವೆಂದುಹೇಳುವವರ । ಅಸಿತ್ಯಕ್ಕೆವಳಗುಮಾಡಿತುನೋಡಾ ನಿಂಮಮಾಯೆ । ನಿಃಕಾಮಿಯೆಂದುಹೇಳುವವರ । ಕಾಮದಕತ್ತಲೆಯಕೆಡಹಿಕಾಡಿತುನೋಡಾನಿಂಮಮಾಯ । ಇಂತೀಜಗವೆಲ್ಲಾನುಂಗಿ । ಜಾಳಿಸುತಿರ್ಪನಿಂಮಮಾಯಪೇಲಿಗೆಯಗೆಲುವಡೆಅಳವಲ್ಲ ಅಖಂಡೇಶ್ವರನೀವುಕರುಣಹುಟ್ಟಿವಲಿಯೆದನಕಾ ॥೨೨॥ ಎಂಟುಕಾಯದಕರಣವಕಳೆಯಯ್ಯಾಎಂಟುಜೀವದುಪಾಧಿಯನಳಿಯಯ್ಯಾ । ಎಂಟುಪ್ರಾಣವಪ್ರಪಂ

ಚವತೊಲಗಿಸ್ಯೆಯ್ಯಾ। ಎಂನಬಾವದಭ್ರಮೆಯುಕೆಡಿಸಯ್ಯಾ। ಎನ್ನ ಮನದವ್ಯಾಕುಳವಮಾಣಿಸಯ್ಯಾ। ಎಂನಕರಣೇಂದ್ರಿಯಂಗಳಕಷ್ಟ ಗುಣವನಷ್ಟವಮಾಡ್ಯೆಯ್ಯಾ। ಎಂನೊಳಗೆನಿಂಮಕರುಣಾಮೃತವ ತುಂಬಯ್ಯಾಗುರುದೇವ್ರೊಅಖಂಡೇಶ್ವರಾ ॥೨೫॥

ಶ್ರೀಗುರುಕರುಣ ಸ್ಥಲದ ವಚನಗಳು.

ಗುರುವೆಪರತತ್ವವ್ರುತಾನೆನೋಡಾ। ಗುರುವೆಪರವಸ್ತುವ್ರುತಾನೆನೋಡಾ। ಗುರುವೆಪರಬ್ರಹ್ಮವ್ರುತಾನೆನೋಡಾ। ಗುರುವೆಪರಶಿವನುತಾನೆನೋಡಾ। ಗುರುವಿಸಿಂದಪರವಿಲ್ಲವೆಂದು ಸಕಲಶ್ರುತಿಗಳು ಹೊಗಳುತಿರ್ಪವ್ರುನೋಡಾಇಂತಪ್ಪ ಶ್ರೀಗುರುಲಿಂಗ ನಮೋನಮೋ ಯೆಂಬೆನ್ಯೆಯ್ಯ ಅಖಂಡೇಶ್ವರಾ ॥೧॥ ಶ್ರೀಗುರುಕಟಾಕ್ಷವಿಂದಲ್ಲದೆಭವಪಾಶಹರಿಯದು। ಶ್ರೀಗುರುಕಟಾಕ್ಷವಿಂದಲ್ಲದೆಜಾತಿಭೇದವಮಾಣದು। ಶ್ರೀಗುರುಕಟಾಕ್ಷವಿಂದಲ್ಲದೆಸೂತಕಪಾತಕಗಳುಕೆಡದಹವ್ರು। ಗುರುಕಟಾಕ್ಷವಿಂದಲ್ಲದೆ ನಿಜಮುಕ್ತಿಆಗದು। ಇದಲ್ಲದೆಅಂಗಮನಪ್ರಾಣಗಳುಶುದ್ಧವಾಗಲರಿಯವು। ಗುರುಕಟಾಕ್ಷದಿಂದಲ್ಲದೆಲಿಂಗಕ್ಕೆಕಳೆವೇದಿಸಲರಿಯದು। ಗುರುಕಟಾಕ್ಷವಿಂದಲ್ಲದೆ ಸದ್ಭಕ್ತಿದೊರಕಲರಿಯದೆ ನೆಲೆಗೊಳದು। ಗುರುಕಟಾಕ್ಷವಿಂದಲ್ಲದೆ ಮುಕ್ತಿಕಾಣಬರದು। ಗುರುಮುಟ್ಟಿದಕಾರಣ ಗುರುಮುಟ್ಟಿಗುರುವಾದ ಪರಮಶರಣನ ಶ್ರೀಚರಣಕ್ಕೆ ನಮೋನಮೋಯೆಂಭೆನಯ್ಯ ಅಖಂಡೇಶ್ವರಾ॥ ತಂದೆತಾಯಿಬಂಧು ಬಳಗಹೆಂಡರುಮಕ್ಕಳು ತೊತ್ತುಬಂಟರುಗಳಿಗೆವ್ರೊಬ್ಬನೇಗುರುವುವ್ರೊಂದೇದಿಕ್ಷಯಾದರೆ ಅತ್ಯುತ್ತಮನೋಡಾ। ಇದಲ್ಲದೆ ಬಹುಮುಖದಗುರುಬ್ರಹ್ಮ ಮುಖದೀಕ್ಷಯಾದರೆ। ಅಘೋರನರಕತಪ್ಪದಯ್ಯ ಅಖಂಡೇಶ್ವರಾ ॥೩॥ ಎನ್ನ ಭವಪಾಶಂಗಳಹರಿದುಶಿವಸಂಸಾರಿಯಮಾಡಿದ ಶ್ರೀಗುರುವೇನಮೋನಮೋಯೆಂಬೆನಯ್ಯ। ಯನ್ನ ಭೂತಕಾಯವಳಿದು ಮಂತ್ರಶರೀರವಮಾಡಿದ ಶ್ರೀಗುರುವಿಗೆ ನಮೋನಮೋಯೆಂಬೆನಯ್ಯಾ ಯೆಂನಹಣೆಯದುರ್ಲಿ

ಖಿತವತೊಡದು ಶಿವಮಂತ್ರವಸಂಬೋಧಿಸಿದ ಶ್ರೀಗುರುವಿಗೆನಮೋ ನಮೋಯೆಂಬೆನಯ್ಯಾ । ಯೆನ್ನ ಮಾಯಾಪ್ರಾಣಿಯೆಂದೆನಿಸದೆ ಲಿಂಗ ಪ್ರಾಣಿಯೆಂದೆನಿಸಿದ ಶ್ರೀಗುರುವಿಗೆ ನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥೪॥ ಗುರುವೆನಮೋನಮೋ ಯೆನ್ನ ಜೀವಭವಿಯೆ ನಿಸದಾಶಿವಾಶಿವಾಯೆಂದೆನಿಸಿದಗುರುವೆ ನಮೋನಮೋ । ಯೆನ್ನ ಕಾಲಕಲ್ಪಿತವಕಳೆದು ಯೆಂನೊಳಗೆ ಮೂಲಮಂತ್ರವ ತೋರಿದಗು ರುವೇನಮೋನಮೋ । ಯೆನ್ನ ತನುತ್ರಯೆಗಳಲ್ಲಿ ಮುಸುಕಿದಮಲ ತ್ರಯೆಗಳಕಳೆದು ಲಿಂಗತ್ರಯೆಗಳನೆಲೆಗೊಳಿಸಿದಗುರುವೇ ನಮೋ ನಮೋ । ಯೆಂನಭವಿಜನ್ಮವನಳಿದಭಕ್ತನಮಾಡಿ ಮುಕ್ತಿಯುತೋ ರಿದಪಥನಹಚ್ಚಿದಗುರುವೆನಮೋಅಖಂಡೇಶ್ವರಾ॥೫॥ಯೆನ್ನ ಭಾವನ ಸಿಂಹಾಸನವಮಾಡಿದನೈಯ್ಯಾ ಶ್ರೀಗುರುವುಪರಮಶಿವಲಿಂಗಕ್ಕೆ । ಯೆ ನ್ನ ಮನಸಿಂಹಾಸನವಮಾಡಿದ್ಯೈಯ್ಯಾಶ್ರೀಗುರುವುಪರಮಶಿವಲಿಂಗಕ್ಕೆ ಯೆನ್ನ ಮನಸಿಂಹಾಸನವ ಮಾಡಿದ್ಯೈಯ್ಯಾ ಶ್ರೀಗುರುವುಪರಮಶಿವ ಲಿಂಗಕ್ಕೆ ಯೆನ್ನ ಕರಸ್ಥಳ ಸಿಂಹಾಸನವಮಾಡಿದನಯ್ಯಾ ಶ್ರೀಗುರು ಪರಮಶಿವಲಿಂಗಕ್ಕೆ । ಯೆನ್ನ ಸರ್ವಾಂಗವ ಸಿಂಹಾಸನವಮಾಡಿದನ ಯ್ಯಾ ಶ್ರೀಗುರುಪರಮಶಿವಲಿಂಗಕ್ಕೆ ಪರಿಭವವತಪ್ಪಿಸಿದ ಶ್ರೀಗುರು ಲಿಂಗಾನಮೋನಮೋ ಯೆಂಬೆನಯ್ಯಾಅಖಂಡೇಶ್ವರಾ ॥೬॥ ಸಕಲವಿ ಸ್ತಾರದೊಳಗೆ ಲಿಂಗವತೋರಿದ ಆಲಿಂಗದೊಳಗೆ ಯೆನ್ನ ಯುತೋ ರಿದ ಯೆನ್ನೊಳಗೆತನ್ನ ತೋರಿದ ಶ್ರೀಗುರುಲಿಂಗನಮೋನಮೋ ಯೆಂಬೆನಯ್ಯಾ ಅಖಂಡೇಶ್ವರಾ ॥೭॥ ಕಲ್ಪತರುಕಾಮರವಾಗಬಲ್ಲ ದೇನಯ್ಯಾ । ಕಾಮಧೇನುಕಾಡಪಶುವಾಗ ಬಲ್ಲದೇನಯ್ಯಾ । ಸಿಂ ಹದ ಮರಿಸೀಳನಾಯಾಗಬಲ್ಲದೇನಯ್ಯಾ । ಪರಮಶ್ರೀಗುರುವಿನಕರ ಕಮಲದಲ್ಲಿ ವುದಯವಾದಮಹಾಶಿವಶರಣರು ಮರಳಿನರರಾಗಬಲ್ಲ ರೆಹೇಳಾ ಅಖಂಡೇಶ್ವರಾ ॥೮॥ ಪರಶುಮುಟ್ಟಿದಲೋಹದಂತೆಮಾಡಿ ತೆಂನ ಶ್ರೀಗುರುವಿನುಪದೇಶ । ಕರ್ಪೂರಜೋತಿಯಂತೆಮಾಡಿತೆನ್ನ

ಶ್ರೀಗುರುವಿನುಪದೇಶ ಉರಿವುಂಡಕ್ರ್ಪೂಣದಂತೆಮಾಡಿ ತನ್ನ ಶ್ರೀಗುರುವಿನುಪದೇಶವರೆಗಲ್ಲುಪುತ್ತಳಿ ಯೊಪ್ಪನೋಡಿದಂತೆ ಅಖಂಡೇಶ್ವರಾ ನಿಮ್ಮವಚನೋಪದೇಶ ||೯|| ಬೀಜವಿಂದಹುಟ್ಟಿದ ವೃಕ್ಷಬೀಜವ ಹೋಲುವಂತೆ। ತಾಯಿಂದಹುಟ್ಟಿದಮಕ್ಕಳು ತಾಯಹೋಲುವಂತೆ ಧಾನ್ಯಗಳಿಂದಹುಟ್ಟಿದಬೆಳಸು ಧಾನ್ಯಗಳಹೋಲುವಂತೆ। ಗುರುವಿನಿಂದಹುಟ್ಟಿದ ಶಿಷ್ಯನು ಗುರುರೂಪವಲ್ಲದೆ। ಬೇರೊಂದುರೂಪವಲ್ಲವಯ್ಯಾ ಅಖಂಡೇಶ್ವರಾ||೧೦|| ಸಚ್ಚಿದಾನಂದಸದ್ಗುರುತೋರಿದರೆ ಕಂಡೆನಯ್ಯಾ ಸತ್ಯಸದಾಚಾರವ। ಸಚ್ಚಿದಾನಂದ ಸದ್ಗುರುತೋರಿದದರೆ ಕಂಡೆನಯ್ಯಾ ಜ್ಞಾನಭಕ್ತಿವೈರಾಗ್ಯವ। ಸಚ್ಚಿದಾನಂದಸದ್ಗುರುತೋರಿನರೆ ಕಂಡೆನಯ್ಯಾ ನಿತ್ಯಲಿಂಗಾಂಗಸಮರಸವ ಸಚ್ಚಿದಾನಂದಸದ್ಗುರುತೋರಿದರೆ ಕಂಡೆನಯ್ಯಾ ಅಖಂಡೇಶ್ವರಾ ನಿಮ್ಮಶ್ರೀಚರಣಕಮಲವ ||೧೧|| ಗುರುವಿಡಿದು ಕುರುಹುಕಾಣಬೇಕು ಗುರುವಿಡಿದು ಅರಹುಕಾಣಬೇಕು। ಗುರುವಿಡುದು ಆಚಾರವಕಾಣಬೇಕು। ಆಚಾರವಪಿಡಿದು ನಿಜವಕಾಣಬೇಕು। ನಿಜವಿಡಿದುನಿಮ್ಮ ಅಖಂಡೇಶ್ವರನಕೂಡಬೇಕು ||೧೨|| ಶ್ರೀಗುರುಸ್ವಾಮಿಮಾಡಿದಡಾಯಿತು ಜಗದುತ್ಪತ್ತಿಸಚರಾಚರಗಳನ್ನೆಲ್ಲಾ। ಶ್ರೀಗುರುಸ್ವಾಮಿಮಾಡಿದಡಾಯಿತ್ತು ತತ್ವಾತತ್ವಸಕಲಸ್ಥಲಕುಲಂಗಳೆಲ್ಲಾ। ಶ್ರೀಗುರುಸ್ವಾಮಿಮಾಡಿದಡಾಯಿತ್ತು ನಿಗಮಾಗಮಶಾಸ್ತ್ರಗಳನೆಲ್ಲಾ। ಶ್ರೀಗುರುಸ್ವಾಮಿಮಾಡಿದಡಾಯಿತು ಅಖಂಡೇಶ್ವರಾ ನಾನೀನೆಂಬ ತೊಡರುಗಳೆಲ್ಲಾ||೧೩||ಯೆನ್ನಕರಸ್ಥಲದಲ್ಲಿಲಿಂಗಮೂರ್ತಿಯಾಗಿನೆಲೆಗೊಂಡೆನಯ್ಯಾ। ಶ್ರೀಗುರುದೇವನು। ಯನ್ನಮನಸ್ಥಳದಲ್ಲಿಸ್ವಾನುಭಾವಜ್ಞಾನಮೂರ್ತಿಯಾಗಿ ನೆಲೆಗೊಂಡನಯ್ಯಾ ಶ್ರೀಗುರುದೇವನುಅಖಂಡೇಶ್ವರಾ ||೧೪|| ಯೆನ್ನಕರಸ್ಥಳದಮಧ್ಯದಲ್ಲಿ ಪರಮನಿರಂಜನಕುರುಹದೋರಿದ। ಆಕುರುಹಿನಮಧ್ಯದಲ್ಲಿ ಅರುಹಿನಕಳೆತೋರಿದ। ಆಕಳೆಯಮಧ್ಯದಲ್ಲಿ ಮಹಾಜ್ಞಾನದಬೆಳಕುತೋರಿ

ದ ಆಚೆಲಿಕಿನನಿಲುವಿನೊಳಗೆಯನ್ನ ತೋರಿದ । ಯನ್ನೊಳಗೆತನ್ನ
ತೋರಿದ । ತನ್ನೊಳಗೆನ್ನ ನಿಂಬಿಟ್ಟುಕೊಂಡಾ ಮಹಾಗುರುವಿಗೆ ನ
ಮೋನಮೋಯೆನುತಿರ್ದನಯ್ಯಾ ಅಖಂಡೇಶ್ವರಾ ॥

ಲಿಂಗಧಾರಣಸ್ಥಲವು.

ಆಶ್ವವಕೊಂದವನಾದಡಾಗಲಿ । ಪಶುವಕೊಂದವನಾದಡಾಗ
ಲಿ । ಬ್ರಾಹ್ಮಣನಕೊಂದವನಾದಡಾಗಲಿ । ಶಿಶುವಿನಕೊಂದವನಾದ
ಡಾಗಲಿ । ಸ್ತ್ರೀಯಕೊಂದವನಾಗಲಿ । ಈ ಅನಂತಪಾತಕವಮಾ
ಡಿದವನಾದಡಾಗಲಿ । ಶಿವಲಿಂಗದರ್ಶನವಾದಾಕ್ಷಣವಲ್ಲಿಯೆ ಆಪಾತಕ
ಗಳು ಪಲಟವಾಗಿ ಪರಮಪದವಿಯನೈದುತಿಹನಯ್ಯಾ ಅಖಂಡೇಶ್ವ
ರಾ ॥೧॥ ಜ್ಞಾನದಿಂದಆದವರಾಗಲಿ । ಅಜ್ಞಾನದಿಂದಆದವರಾಗಲಿ ।
ಭೀತಿಯಿಂದಾದವರಾಗಲಿ । ನಿರ್ಭೀತಿಯಿಂದಾದವರಾಗಲಿ । ಸದ್ಭಾವ
ದಿಂದಆದರುಆಗಲಿ । ಅವವರಿಯಿಂದಆದರುಆಗಲಿ । ಪರಮಶಿವಲಿಂಗ
ದರುಶನಮಾತ್ರದಿಂದಜಾತಿಸ್ಮರತ್ಯವು ಮಹದೈಶ್ವರ್ಯವು । ಪರಮಾ
ಯುಷ್ಯಶುದ್ಧ ವಿದ್ಯಗಳು । ಸುವಿಮಲಜ್ಞಾನಸಕಲಸಂಪತ್ತುಗಳು
ದೊರಕೊಂಬುವವುನೋಡಾ ಅಖಂಡೇಶ್ವರಾ ॥೨॥ ಅವ ಜಾತಿಯಲ್ಲಿ
ಹುಟ್ಟಿದವನಾದರು ಆಗಲಿ ಶ್ರೀಮಹಾದೇವನ ನೆನೆವಾತನಧಿಕನೋ
ಡಾ ಆತನಿಂದಧಿಕಕೈಗಳತುಂಬನೋಡುವಾತ ಆತನಿಂದಧಿಕಕೈಮು
ಟ್ಟಿಪೂಜಿಸುವಾತ । ಅಂತಪ್ಪ ಶಿವಲಿಂಗವೆನು । ಹರೆಹಿಂಗದಅಂಗದ
ಮೇಲೆನಿರಂತರವುಧರಿಸಿಕೊಂಡಿರುವಾತನೇ ಯಲ್ಲರಿಗಿಂಥಧಿಕನೋಡಾ
ಅಖಂಡೇಶ್ವರಾ ॥ ಮುನ್ನ ಶ್ರೀಗುರುಸ್ವಾಮಿಕರುಣಿಸಿಕೊಟ್ಟ ವಿಷ್ಟ
ಲಿಂಗದಲ್ಲಿನೆಟ್ಟನೆ ಅಂಗಮನಪ್ರಾಣಗಳು ಸಂಧಿಸಬೇಕುಬಳಿಕ । ನಡೆ
ನುಡಿಯಲ್ಲಿ ಆಲಿಂಗಸನ್ನಹಿತನಾಗಿ ಯಿರಬೇಕಲ್ಲದೆ ಹಿಂಗಿರಲಾಗದು
ಕೊಡುವಕೊಂಬುವವ್ಯವಹಾರದಲ್ಲಿ ಆಲಿಂಗಸನ್ನಹಿತನಾಗಿರಬೇಕು
ಅಲ್ಲದೆಹಿಂಗಿರಲಾಗದು ಅದೆಂತೆಂದರೆ ॥ ಶ್ಲೋ ॥ ವಠಂತಿಷ್ಠನ್ಸ್ವಪಂಜಾ
ಗ್ರನ್ನಿಮಿಷನ್ನಿಮಿಷಸ್ತಥಾ ಸುಖೇನವಾನ್ಮಿಶುಜೀವಾನಿಂಗಂಸರ್ವ

ತ್ರಧಾರಯೇತ್ ॥೧॥ ಯೆಂದುದಾಗಿಸರ್ವಾವಸ್ಥೆಯಲ್ಲಿಲಿಂದ ಸನ್ನಿ
ಹಿತನಾಗಿರಬೇಕಲ್ಲದೆ ನಿಮಿಷನಿಮಿಷಾರ್ಧ ಲಿಂಗವನಗಲಿಸಿದರೆಕುಂ
ಭೀಪಾತಕನರಕತಪ್ಪದುನೋಡಾ ಅಖಂಡೇಶ್ವರಾ ॥೪॥ ಸಕಲೇಂದ್ರಿ
ಯಗಳುನಾಸ್ತಿಯಾಗಿರಬೇಕಲ್ಲದೆ ಕಕ್ಷದಲ್ಲಿಧರಿಸುವದಯ್ಯಾ ಶಿವ
ಲಿಂಗವಾ । ಕಾಂಚನಕ್ಕೆಕೈಯಾನದಿದ್ದರೆ ಕರಸ್ಥಲದಲ್ಲಿಧರಿಸುವದ
ಯ್ಯಾ ಶಿವಲಿಂಗವಾ । ಪರಸ್ತ್ರೀಯರಅಪ್ಪುಗೆಯಿಲ್ಲದಿದ್ದರೆ ಆರು
ಸ್ಥಳಗಳಲ್ಲಿ ಧರಿಸುವದಯ್ಯಾ ಶಿವಲಿಂಗವಾಯೆಂದೆಂದುಹುಸಿಯನಾ
ಡದಿದ್ದರೆ ಜಿಹ್ವೆಪೀಠದಲ್ಲಿಧರಿಸುವದಯ್ಯಾ ಶಿವಲಿಂಗವಾ । ಅನ್ನಪಾ
ನಾದಿಗಳಿಗೆ ಬಾಯಿತೆರೆಯದಿದ್ದರೆ ಅಮಳೈಕ್ಯದಲ್ಲಿ ಧರಿಸುವದ
ಯ್ಯಾ ಶಿವಲಿಂಗವಾ । ಅನ್ಯರಾಜರಿಗೆತಲೆಬಾಗದಿದ್ದರೆ ವೃತ್ತಮಾಂಗ
ದಲ್ಲಿಧರಿಸುವದಯ್ಯಾ ಶಿವಲಿಂಗವಾ । ಇಂತೀಷಡ್ವಿಧಾಚರಣೆನೆಲೆ
ಗೊಂಡು ಷಡ್ವಿಧಸ್ಥಾನದಲ್ಲಿಶಿವಲಿಂಗವ ಧರಿಸಬಲ್ಲರೆಭಕ್ತನೆಂಬೆನೈ
ಯ್ಯಾ ಪ್ರಸಾದಿನೆಂಬೆನಯ್ಯಾ ಪ್ರಾಣಲಿಂಗಿಯೆಂಬೆಶರಣನೆಂಬೆಐಕ್ಯ
ನೆಂಬೆ ಇಂತೀಭೇದವನರಿಯದೆ ಲಿಂಗವಧರಿಸಿದರೆ ಬಡಲಲ್ಲಿಕಟ್ಟಿಕೊಂ
ಡುಮಡುಬಿದಂತಾಯಿತುಕಣಾಅಖಂಡೇಶ್ವರಾ॥೫॥ಆರುಸಾಧಿಸಬಾರ
ದಂತಾವಸ್ತುಸಾಧಿಸಿತಂದುಕೊಟ್ಟನಯ್ಯಾ । ಶ್ರೀಗುರು ಯೆಂನಕರ
ಸ್ಥಲಕ್ಕೆ ಆರುಭೇದಿಸಬಾರದಂತಾವಸ್ತುವತಂದು ಕೊಟ್ಟನಯ್ಯಾ
ಶ್ರೀಗುರುಯೆನ್ನಕರಸ್ಥಳಕ್ಕೆ ಆರುನೋಡಬಾರದವಸ್ತು ನೋಡೆಂ
ದುಕೊಟ್ಟನಯ್ಯಾ । ಶ್ರೀಗುರುಯೆನ್ನಕರಸ್ಥಳಕ್ಕೆ ಆರುಕೊಡಬಾರ
ದವಸ್ತುವ ಕೊಡುವೆನೆಂದು ತಂದುಕೊಟ್ಟನಯ್ಯಾ । ಶ್ರೀಗುರುಯೆ
ನ್ನಕರಸ್ಥಳಕ್ಕೆ ಯೆನ್ನಕರಸ್ಥಳದಲ್ಲಿ ಮೂರ್ತಗೊಂಡು ಬೆಳಗುವಯೆ
ನ್ನ ಪರಬ್ರಹ್ಮವಯೆಂನಕಂಗಳತುಂಬಾ ನೋಡಿಕೈಮುಟ್ಟಿಪೂಜಿಸಿ।
ಯೆನ್ನಜಿಹ್ವೆತುಂಬಾಕೊಂಡಾಡಿಯೆನ್ನ ಮನೆತುಂಬಾ ಅಪ್ಪಿಅಗಲದೆ
ಇದನೆಯುನಿಮ್ಮ ಅಖಂಡೇಶ್ವರ ॥೬॥ ಅಂಧಕನಿಗೆಕಂಗಳುಬಂದಂತೆ
ಹೆಳವನಿಗೆಕಾಲುಗಳುಬಂದಂತೆಬಂಜೆಗೆ ಮಗನಾದಂತೆನಿರ್ಧನಿಕನಿಗೆ

ಘನವುಸೇರಿದಂತೆ । ಮರಣವುಳ್ಳವನಿಗೆ ಮರುಜವಣಿದೆ ೞರಕಿದಂತೆ ಅಖಂಡೇಶ್ವರಾ ನೀವೆನ್ನ ಕರಸ್ಥಲಕ್ಕೆ ಬಂದಫಲವು ಇಂತಾಯಿತಯ್ಯಾ ಅಖಂಡೇಶ್ವರಾ ||೭|| ಜಗವನೊಳಕೊಂಡಲಿಂಗವು ಸೊಗನಿದ್ದೆನ್ನ ಕರಸ್ಥಲಕ್ಕೆಬಂದಿರಲು ಕಂಡು ಹಗರಣವಾಯಿತೆನಗೆ ಆಹಾಯೆನ್ನ ಪುಣ್ಯವೆ । ಆಹಾಯೆನ್ನ ಭಾಗ್ಯವೆ ಆಹಾ ಅಖಂಡೇಶ್ವರಾ । ನಿಮ್ಮ ಘನವಕಂಡು ಯೆನ್ನ ಮನಕ್ಕೆ ಮಂಗಳವಾಯಿತನೋಡಾ ||೮|| ಅಣುವಿಗೆ ಅಣುವುಮಹತ್ತಿಗೆವ ಹತ್ತುಯೆನಿಸುವ ಲಿಂಗದೇವನಕಂಡೆನಯ್ಯಾ ಯೆನ್ನ ಕರಸ್ಥಲದಲ್ಲಿ ವುಪಮಾತೀತವಾಙ್ಮನಕಗೋಚರನೆನ್ನುವ ದೇವನಕಂಡೆನಯ್ಯಾ ಯೆನ್ನ ಕರಸ್ಥಲದಲ್ಲಿ ಶೃತಿತ್ತತಿಯುಶಿರದ ಮೇಲೆ ದಶಾಂಗುಲನೆಂದೆನಿಸುವದೇವನ ಕಂಡನಯ್ಯಾ ನಾನನ್ನ ಕರಸ್ಥಲವಲ್ಲಿ ಭಾವಭರಿತಜ್ಞಾನಗಮ್ಯನೆನಿಸುವದೇವನ ಕಂಡೆನಯ್ಯಾ ಯೆನ್ನ ಕರಸ್ಥಲದಲ್ಲಿಅಖಂಡೇಶ್ವರನೆಂಬಅನಾದಿಯು ಪರಶಿವನಕಂಡೆನಯ್ಯಾ ಯೆಂನಕರಸ್ಥಲದಲ್ಲಿ ||೯|| ಮನಕ್ಕೆಮನೋಹರವಾದದೇವನ ಕಂಡೆನಯ್ಯಾ ಯೆನ್ನ ಕರಸ್ಥಲವಲ್ಲಿ ಕಂಗಳಿಗೆಮಂಗಳವಾದದೇವನ ಕಂಡನಯ್ಯಾ ಯೆನ್ನ ಕರಸ್ಥಲದಲ್ಲಿಪ್ರಾಣಕ್ಕೆ ಪರಿಣಾಮುವಾದದೇವನ ಕಂಡನಯ್ಯಾ ಯೆನ್ನ ಕರಸ್ಥಲದಲ್ಲಿ । ಅಖಂಡೇಶ್ವರನೆಂಬಲಿಂಗವಕಂಡನಯ್ಯಾ ।ಯೆನ್ನ ಕರಸ್ಥಲದಲ್ಲಿ ।। ೧೦ || ಸತ್ತುಚಿತ್ತಾನಿಂದನಿತ್ಯಪರಿಪೂರ್ಣವಾದವಸ್ತುವು ಪ್ರತ್ಯಕ್ಷವಾಗಿ ಯೆನ್ನ ಕರಸ್ಥಲಕೆ ಬದಬಳಿಕಯಿಂನೆಲ್ಲಿಯು ಜಪತಪದಚಿಂತೆ ಇಂನೆಲ್ಲಿಯುದ್ಯೆಯ್ಯಾನನಗೆ ನಿತ್ಯನೇಮದಚಿಂತೆಯಿನ್ನೆಲ್ಲಿಯುದಯ್ಯಾ ಯೆನಗೆಮನವುರುಗದಚಿಂತೆ । ಅಖಂಡೇಶ್ವರಲಿಂಗವು ಯೆಂನವಳಹೊರಗೆ ತಾನಾದಬಳಿಕ ಯಿಂನೆಲ್ಲಿದಯ್ಯಾಬೇರೆತತ್ವವತಿಳಿಯುಬೇಕೆ ಬಚಿಂತ ||೧೧|| ನಿನಗೆನಾ ಮಹಾಪ್ರಸಾದ ಯೆನ್ನಾಚಾರವು ನಿಂಮಶಿವಾಚಾರಮಾರ್ಗವಲ್ಲದೆ ಅನ್ಯಮಾರ್ಗದಲ್ಲಿ ವಿಚಾರಿಸದಂತೆಮಾಡಯ್ಯಾ । ಯೆನ್ನ ಹಸ್ತವುನಿಂಮನಿಂಮನಲ್ಲದೆ ಅನ್ಯವಮುಟ್ಟದಂತೆಮಾಡೈಯ್ಯಾ ಯೆನ್ನ ಕಂ

ಗಳುನಿಮ್ಮನಲ್ಲದೆಅನ್ಯವನೋಡದಂತೆಮಾಡಯ್ಯಾ । ಯೆನ್ನ ಶ್ರೋತ್ರ ವುನಿಮ್ಮಕೀರ್ತಿಯನಲ್ಲದೆ ಅನ್ಯವಕೇಳದಂತೆ ಮಾಡಯ್ಯಾ । ಯೆನ್ನ ಜಿಹ್ವೆಯುನಿಮ್ಮನಲ್ಲದೆಅನ್ಯವಹೊಗಳದಂತೆಮಾಡಯ್ಯಾ । ಯೆಂನ ಮನವುನಿಮ್ಮನಲ್ಲದೆಅನ್ಯವನೆನೆಯದಂತೆ ಮಾಡಯ್ಯಾ ಯೆನ್ನ ಭಾವ ವುನಿಂಮನಲ್ಲದೆ ಅನ್ಯವಬಯಸದಂತೆಮಾಡಯ್ಯಾಅಖಂಡೇಶ್ವರಾ ಬಾ ರಯ್ಯಾಬಾರಯ್ಯಾಭಕ್ತದೇಹಿಕನೆ।ಬಾರಯ್ಯಾಬಾರಯ್ಯಾಭಕ್ತವತ್ಸಲನೆ ಬಾರಯ್ಯಾಬಾರಯ್ಯಾಭಕ್ತಜನಪ್ರಿಯನೆ । ಬಾರಯ್ಯಾಬಾರಯ್ಯಾಭ ಕ್ತಜನಬಂಧುವೆಬಾರಯ್ಯಾಬಾರಯ್ಯಾಭಕ್ತಜನ ಮನೋವಲ್ಲಭನೆ। ಬಾರಯ್ಯಾಬಾರಯ್ಯಾ । ಅಖಂಡೇಶ್ವರಾನೀವೆಂನಪರಮಾಮಂದಿರಕ್ಕೆ ॥

ವಿಭೂತಿಯಸ್ಥಲವು

ಶಿವಶಿವಾಯೆಂದುಶಿವನಕೊಂಡಾಡುತ್ತಶ್ರೀವಿಭೂತಿಯಧರಿಸಿ ಶ್ರೀಮಹಾದೇವನಪೂಜಿಸುವಾತನಕಾಯವೆಕೈಲಾಸ ಆತನನಡಿಯೆ ಪಾವನ।ಆತನನುಡಿಯೆಆಗಮ। ಆತನದರುಶನಸ್ಪರ್ಶನಸಕಲಪ್ರಾಣಿ ಗಳಿಗೆ । ನಾಲೋಕ್ಯಪದವಿನೋಡಾ । ಆಮಹಾತ್ಮನಿಂದಾಅಧಿಕರು ದಾರುಲೋಕದೊಳಗಿಲ್ಲನೋಡಾಅಖಂಡೇಶ್ವರಾ ॥ ೧ ॥ ಅವಕಾರ್ಯ ಕ್ಕಾದರುಶ್ರೀವಿಭೂತಿಯೆಬೇಕುಅವಕ್ರಿಯಕ್ಕೆ ಆದರುಶ್ರೀವಿಭೂತಿ ಯಬೇಕು । ಶ್ರೀವಿಭೂತಿಯಧರಿಸಿದಅವನೊಬ್ಬನುವೇದವನೋ ದಿದರೇನುಆತಓದಿದಂತಾವೇದಗಳು ವ್ಯರ್ಥವುಕಾಣಿರೊಅವನೊ ಬ್ಬನುಶ್ರೀವಿಭೂತಿಯಧರಿಸದೆದ ನಗಳಮಾಡಿದರೇನು ಆತಮಾಡಿ ದದಾನವ್ಯರ್ಥಕಾಣಿರೊ । ಆವನೊಬ್ಬನುಶ್ರೀವಿಭೂತಿಯಧರಿಸದೆ ತಪವಂಮಾಡಿದರೇನುಅತಮಾಡಿದಂದಾತಪಸ್ಸುವ್ಯರ್ಥವುಕಾಣಿರೊ। ಅವನೊಬ್ಬನ ಶ್ರೀವಿಭೂತಿಯಧರಿಸದನಿತ್ಯನೇಮವ್ರತಉಪವಾಸ ಗಳಮಾಡಿದರೇನು ಅತಮಾಡಿದನಿತ್ಯನೇಮ ವ್ರತವುಪವಾಸಗಳು ವ್ಯರ್ಥಕಾಣಿರೊ ಆದೆಂತೆಂದರೆ । ಬೌದ್ಧಾಯನಸೂತ್ರ ಶ್ಲೋ॥ ವೃ ಥಾವೇದ ವೃಥಾಯಜ್ಞಂ ವೃಥಾದಾನಂ ವೃಥಾತಪಃ । ವೃಥಾವ್ರ

ತೋಪವಾಸಸ್ತು ತ್ರಿಪುಂಡ್ರಯೇನಧಾರಯೇತ್ ॥ ೧ ॥ ಯೆಂಬುದಾಗಿ ಸಕಲಕ್ಕು ಶ್ರೀ ವಿಭೂತಿಯು ಆಧಾರವಯ್ಯ ಅಖಂಡೇಶ್ವರ ॥೨॥ ಆದಿಯಲ್ಲಿ ಶ್ರೀ ವಿಭೂತಿಯಿಂದ ಸ್ನಾನವಮಾಡಿದ ಬ್ರಾಹ್ಮರಿಗೆ ಬ್ರಹ್ಮಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯು ಸ್ನಾನವಮಾಡಿದ ವಿಷ್ಣುಗೆ ವಿಷ್ಣುಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯುಸ್ನಾನವಮಾಡಿದ ಗಂಧರ್ವರಿಗೆ ಗಂಧರ್ವಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯು ಸ್ನಾನವಮಾಡಿದ ದೇವರ್ಕಳುಗಳಿಗೆ ದೇವಪದವಾಯಿತು ಆದಿಯಲ್ಲಿ ಶ್ರೀ ವಿಭೂತಿ ಸ್ನಾನವಮಾಡಿದ ಋಷಿಗಳಿಗೆ ಋಷಿಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವಮಾಡಿದ ಮರೂದ್ಗಣಗಳಿಗೆ ಮರುದ್ಗಣಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯು ಸ್ನಾನವಮಾಡಿದ ಪಿತೃಗಳಿಗೆ ಪಿತೃಗಣಪದವಾಯಿತು ಆದಿಯಲ್ಲಿ ಶ್ರೀ ವಿಭೂತಿಯು ಸ್ನಾನವಮಾಡಿದ ಭೂತಗಣರಿಗೆ ಭೂತಗಣಪದವಾಯಿತು ಅದೆಂತೆಂದರೆ ॥ ಶ್ಲೋ ॥ ಬ್ರಹ್ಮತ್ವದೇವರ್ಷಯೋಗಂಧರ್ವಾ ಯಕ್ಷಕಿನ್ನರಮರುದ್ಗಣಾಃ । ಪಿತೃಗಣೋಸರ್ವಭೂತಗಣಾದಪಿ । ನಿತ್ಯಂಚಸರ್ವಯತ್ನಾನಿ ಭಸ್ಮಸ್ನಾನಪ್ರವರ್ತತೇ॥ ೧ ॥ ಯೆಂಬುದಾಗಿ ಇಂತಪ್ಪ ಶ್ರೀ ವಿಭೂತಿಯ ಮಹತ್ವವಕಂಡು ಕೇಳಿ ॥ ೨ ॥ ನಂಬಲರಿಯದೆ ಗರ್ವದಿಂದ ಮುಂಗೆಟ್ಟ ಮಗುಳುಮೂನವರಿಗೆ ಭವರಾಟಾಳದಲ್ಲಿ ಸತ್ತುಸತ್ತು ಹುಟ್ಟಬಪ್ಪುದು ತಪ್ಪದು ನೋಡಾ ಅಖಂಡೇಶ್ವರ ॥ ಮಹದೈಶ್ವರ್ಯದಪದವು ಕೈಗೂಡುವದೇ ಶ್ರೀ ವಿಭೂತಿಇಂದಲ್ಲದಿನೋಡ । ಪರಮಪವಿತ್ರನೆನಿಸಬೇಕಾದರೆ ಶ್ರೀ ವಿಭೂತಿಯಿದಲ್ಲದಿಲ್ಲನೋಡಾ । ಸರ್ವವಶ್ಯವಸಿದ್ಧಿ ದೊರಕೊಂಬುವಡೆ ಶ್ರೀ ವಿಭೂತಿಯಿಂದಲ್ಲದಿಲ್ಲನೋಡಾ । ಮಹಪುಣ್ಯಪ್ರಾಪ್ತಿಸುವಡೆ ಶ್ರೀ ವಿಭೂತಿಯಿಂದಲ್ಲದಿಲ್ಲನೋಡಾ । ದಿನದಿನಕ್ಕೆಪಾಪವಪಲ್ಲಟವಪ್ಪಂತೆ ಶ್ರೀ ವಿಭೂತಿಯಿಂದಲ್ಲದಿಲ್ಲನೋಡಾ । ಅಂಗಕ್ಕೆ ಶ್ರೀ ವಿಭೂತಿಯಿಂದಲ್ಲದಿಲ್ಲ ಶ್ರೀ ಗುರುನೋಡಾ ॥ ಅದೆಂತೆಂದೊಡೆ॥ ಶ್ಲೋ॥

ಪ್ರೀಕರಂಚಪವಿತ್ರಂಚ ಹಾರಾದ್ಯಭರಣಂತಥಾ । ಮೋಕವೈಶ್ಯಕರಂಪುಣ್ಯ ಪಾಪನಾಶಂವಿನೆದಿನೇ ॥ ಯೆಂಬುದಾಗಿ । ಯಿಂತಪ್ಪ ಶ್ರೀ ವಿಭೂತಿಯು ಅಂತರಂಗದಲ್ಲಿ ವಿಶ್ವಾಸತುಂಬಿ ಧರಿಸಿದ ಮನುಜರಿಗೆ ಅನಂತಕೋಟಿ ಪಾತಕಂಗಳು ಪರಿಹಾರವಾಗಿ ಮುಂದೆ ಶಿವಸಾಯುಜ್ಯಪದವು ದೊರಕೊಂಬುವದುನೋಡಾ ಅಖಂಡೇಶ್ವರಾ ॥ ಸಂಚಲಗುಣವಳಿದ ಶ್ರೀ ವಿಭೂತಿಯು ಪಂಚಸ್ಥಾನದಲ್ಲಿ ಪಂಚಬ್ರಹ್ಮಮಂತ್ರವಿಂದ ಧರಿಸಲು । ಪಂಚಮಹಾಪಾತಕಂಗಳು ಪಲ್ಲಟವಪ್ಪವು ನೋಡಾ ಸರ್ವಾಂಗವನುಧೂಳನಮಾಡಲು ಸರ್ವವ್ಯಾಧಿಗಳು ಪರಿಹಾರವಪ್ಪವುನೋಡಾ ಯಿದುಕಾರಣ ಯಿಂತಪ್ಪ ಶ್ರೀ ವಿಭೂತಿಯು ಲಲಾಟದಲ್ಲಿ ಬತ್ತಿ ಸಂಸ್ಥಾನಂಗಳಲ್ಲಿ ಧರಿಸಿ ನಿತ್ಯಲಿಂಗಾರ್ಚನೆಯು ಮಾಡುವಂತಾತ ಸತ್ಯ ಶಿವನಲ್ಲದೆ ಬೇರಿಲ್ಲವೈಯ್ಯಾ ಅಖಂಡೇಶ್ವರಾ॥ ೨ ॥ ಸಚ್ಚಿದಾನಂದಪರಶಿವನ ಸದ್ಯೋಜಾತಮುಖದಲ್ಲಿ ಪೃಥ್ವಿಪುಟ್ಟಿತು । ಆತತ್ವದಿಂದನಿವೃತ್ತಿಯೆಂಬಾಕಲಪುಟ್ಟಿತು । ಆಕಲೆಯಿಂದ ಕಪಿಲವರ್ಣದನಂದಿಯೆಂಬ ಗೋವುಪುಟ್ಟಿತು ಆಗೋವಿನ ಗೋಮಯದಿಂದ ಮಹದೈಶ್ವರ್ಯವನ್ನುಂಟುಮಾಡುವಂಥಾ ವಿಭೂತಿಪುಟ್ಟಿತು ಮತ್ತಂ ಸಚ್ಚಿದಾನಂದ ಪರಶಿವವಾಮದೇವಮುಖದಿಂದ ಅಪ್ಪುತತ್ವಪುಟ್ಟಿತು ಆತತ್ವದಿಂದ ಪ್ರತಿಷ್ಠೆಯು ಎಂಬಕಲೆಪುಟ್ಟಿತು ಆಕಲೆಯಿಂದ ಕೃಷ್ಣವರ್ಣದ ಭದ್ರೆಯೆಂಬ ಗೋವುಪುಟ್ಟಿತು ಆ ಗೋವಿನ ಗೋಮಯದಿಂದ ದಿವ್ಯಪ್ರಕಾಶ ಬೆಳಗುವಂತಾ ಭಸಿತವೆಂಬ ವಿಭೂತಿಪುಟ್ಟಿತು ಮತ್ತು ಸಚ್ಚಿದಾನಂದ ಪರಶಿವನ ಅಘೋರಮುಖದಿಂದ ಅಗ್ನಿತತ್ವಪುಟ್ಟಿತು ಆತತ್ವದಿಂದ ವಿದ್ಯಾಯೆಂಬ ಕಲೆಪುಟ್ಟಿತು ಆಕಲೆಯಿಂದ ರಕ್ತವರ್ಣದ ಸುರಭಿಯೆಂಬ ಗೋವುಪುಟ್ಟಿತು ಆ ಗೋವಿನ ಗೋಮಯದಿಂದ ಸಮಸ್ತಪಾತಕಂಗಳ ಕ್ಷೀಣಿಸುವಂಥಾ ಕ್ಷಾರವೆಂಬ ವಿಭೂತಿಪುಟ್ಟಿತು ಮತ್ತು ಸಚ್ಚಿದಾನಂದ ಪರಶಿವನ ತತ್ಪುರುಷಮುಖದಿಂದ ವಾಯುತತ್ವಪುಟ್ಟಿತು ಆ ತತ್ವದಿಂದ ಶಾಂತಿಯೆಂ

ಬಕಲೆಪುಟ್ಟಿತು ಆ ಕಲೆಯಿಂದೆ ಶ್ವೇತವರ್ನದ ಸುಶೀಲೆಯೆಂಬ ಧ್ಯಾನಗೋವ್ರಪುಟ್ಟಿತು ಆ ಗೋವಿನ ಗೋಮಯದಿಂದ ಸಕಲವ್ಯಾಧಿಗಳ ಕೆಡಿಸುವಂತಾಕ್ಷರವೆಂಬ ವಿಭೂತಿಪುಟ್ಟಿತು ಮತ್ತಂ ಸಚ್ಚಿದಾನಂದ ಪರಶಿವನ ಈಶಾನ್ಯಮುಖದಿಂದ ಆಕಾಶತತ್ವಪುಟ್ಟಿತು ಆತತ್ವದಿಂದ ಶಾಂತಾತೀತವೆಂಬ ಕಲೆಪುಟ್ಟಿತು ಆ ಕಲೆಯಿಂದ ಚಿತ್ರದ ಸುಮನೆಯೆಂಬ ಗೋವ್ರಪುಟ್ಟಿತು ಗೋವಿನ ಗೋಮಯದಿಂದ ಭೂತಪ್ರೇತ ಪಿಶಾಚ ಬ್ರಹ್ಮರಾಕ್ಷಸ ಚೋರವಿಷವರ್ಗ ವ್ಯಾಘ್ರಾದಿಗಳ ಭಯವಕೆಡಿಸಿ ರಕ್ಷಿಸುವಂತಾ ರಕ್ಷವೆಂಬ ವಿಭೂತಿಪುಟ್ಟಿತು ಇಂತಪ್ಪ ಶ್ರೀ ವಿಭೂತಿಯು ನಿರಂತರ ಸಾವಧಾನಭಕ್ತಿಯಿಂದ ನಾನು ಸರ್ವಾಂಗದಲ್ಲಿ ಧರಿಸಿ ಶುದ್ಧನಿರ್ಮಲ ಪವಿತ್ರಕಾಯ ನಾದನಯ್ಯ ಅಖಂಡೇಶ್ವರಾ ॥ ೩ ॥

ರು ದ್ರಾ ಕ್ಷಿ ಯ ಸ್ಥ ಲ ವು.

ಗುರುಕಾರುಣ್ಯವಪಡೆದು ಅಂಗದಮೇಲೆ ಲಿಂಗಧಾರಣವಾಗಿ ಶ್ರೀ ವಿಭೂತಿಯಧರಿಸಿದ ಮಹಾತ್ಮನು ಮುಂದೆ ಶಿವಜ್ಞಾನಚಕ್ಷುವಿನಿಂದ ವುದ್ಭವಿಸಿದ ರುದ್ರಾಕ್ಷಿಯಧರಿಸುವ ಭೇದವೆಂತೆಂದರೆ ॥ ಶಿವಾಸ್ಥಾನದಲ್ಲಿ ಯೇಕಮುಖವನುಳ್ಳಂತಾ ವ್ರೊಂದುರುದ್ರಾಕ್ಷಿಯು "ಓಂ ಸದಾಶಿವಾಯನಮಃ" ಯೆಂಬ ಮಂತ್ರದಿಂದ ಧಾರಣವಮಾಡುವದು ಮಸ್ತಕದಲ್ಲಿ ಯೆರಡುಮುಖ ಮೂರುಮುಖ ಹನ್ನೆರಡು ಮುಖಗಳುಳ್ಳಂತಾ ಮೂರುರುದ್ರಾಕ್ಷಿಗಳ "ಜಂವನ್ಹಿಸೋಮಸೂರ್ಯಾಯನಮಃ" ಶಿವಾಯೆಂಬ ಮಂತ್ರದಿಂದ ಧಾರಣಮಾಡುವದು ಶಿರವಂಬಳಿಸಿ ಹನ್ನೊಂದುಮುಖಗಳನುಳ್ಳಂತಾ ಮುವ್ವತ್ತಾರುರುದ್ರಾಕ್ಷಿಗಳ "ಓಂ ಷಟ್ತ್ರಿಂಶತತ್ವಾತ್ಮಕಾಯಪರಶಿವಾಯನಮಃ" ಎಂಬ ಮಂತ್ರದಿಂದ ಧಾರಣವಮಾಡುವದು ಕರ್ಣಯುಗಳದಲ್ಲಿ ಐದುಮುಖದ ಏಳುಮುಖದ ಹತ್ತುಮುಖದ ರುದ್ರಾಕ್ಷಿಗಳ ನೊಂದೊಂದ "ಓಂ ಸೋಮಾಯನಮಃ" ಎಂಬ ಮಂತ್ರದಿಂದ ಧಾರಣ

ಕೆಮಾಡುವದು ಕಂಠಸ್ಥಾನದಲ್ಲಿ ಯೆಂಟುಮುಖ ಆರುಮುಖವನು ಳ್ಳಂತಾ ಮುವ್ವತ್ತೆರಡು ರುದ್ರಾಕ್ಷಿಗಳ "ಓಂ ತ್ರೈಲೋಕ್ಯತ್ರ್ಯಂ ಬಕ ಕಾಲಾಂತಕ ಶಿವಾಯನಮಃ" ಯೆಂಬ ಮಂತ್ರದಿಂದ ಧಾರಣವ ಮಾಡುವದು ಉರಸ್ಥಾನದಲ್ಲಿ ಚತುರ್ಮುಖನುಳ್ಳಂತಾ ಐವತ್ತಾರು ರುದ್ರಾಕ್ಷಿಗಳ "ಓಂ ಶ್ರೀಕಂಠಾದಿಮೂರ್ತ್ಯಾತ್ಮಕಾ ಸರ್ವಜ್ಞಾ ಯನಮಃ" ಯೆಂಬ ಮಂತ್ರದಿಂದ ಧಾರಣಮಾಡುವದಯ್ಯಾ ಬಾ ಹುದ್ವಯದಲ್ಲಿ ಹದಿಮೂರುಮುಖಗುಳ್ಳಂತಾ ಷೋಡಶರುದ್ರಾಕ್ಷಿ ಗಳ "ಓಂ ಸುಖಾಸನಾದಿ ಷೋಡಶಮೂರ್ತ್ಯಾತ್ಮಕಾಯ ಶ್ರೀಕಂ ಠಾಯನಮಃ" ಯೆಂಬ ಮಂತ್ರದಿಂದ ಬಲದೋಳಿನಲ್ಲಿ ಧಾರಣವ ಮಾಡುವದು, "ಓಂ ಶ್ರೀಸೋಮಕಳಾತ್ಮಕಾಯ ಶ್ರೀಸೋಮ ನಾಥಾಯ" ಯೆಂಬ ಮಂತ್ರದಿಂದ ಯಡದೋಳಿನಲ್ಲಿ ಧಾರಣಮಾ ಡುವದಯ್ಯಾ ಮುಂಗೈ ಯೆರಡರಲ್ಲಿ ಒಂಭತ್ತುಮುಖವ ನುಳ್ಳಂತಾ ಹನ್ನೆರಡುರುದ್ರಾಕ್ಷಿಗಳ, "ಓಂ ದ್ವಾದಶಆದಿತ್ಯಾದಿರೂಪಾಯಶ್ರೀ ಮಹಾದೇವಾಯನಮಃ" ಯೆಂಬ ಮಂತ್ರದಿಂದ ಬಲದಮುಂಗೈ ಯಲ್ಲಿ ಧಾರಣವಮಾಡುವದು ವಕ್ಷಸ್ಥಳದಲ್ಲಿಯಜ್ಞೋಪವೀತವಾ ಗಿ ಹದಿನಾಲ್ಕು ಮುಖವನುಳ್ಳಂಥಾ ನೂರಾಯೆಂಟು ರುದ್ರಾಕ್ಷಿಗಳ, "ಓಂ ಶತರುದ್ರಾವಿದ್ಯಾಸ್ವರಾತ್ಮಕಾಯ ಶ್ರೀವಿಶ್ವೇಶ್ವರಾಯನ ಮಃ" ಯೆಂಬ ಮಂತ್ರದಿಂದ ಧಾರಣವಮಾಡುವದು, ಇಂತೀಸ್ಥಾ ನಂಗಳ ಮುಖಮಂತ್ರಗಳಭೇದ ಅರಿದು ಶ್ರೀ ರುದ್ರಾಕ್ಷಿಯಧರಿಸಿದ ಶರಣತಾನೆ ಸಾಕ್ಷಾತ್ತುಶಿವನಲ್ಲದೆ ಬೇರಿಲ್ಲವಯ್ಯಾ ಅಖಂಡೇಶ್ವರಾ ॥ ೧ ॥ ಅನಂತಕೋಟಿಯಜ್ಞಗಳಮಾಡಿ ತೊಳಲಿಬಳಲುವದ್ಯಾತಕೆ । ಆದಾನದಫಲವು । ರುದ್ರಾಕ್ಷಿಯಧರಿಸಿದಕ್ಷಣದಲ್ಲಿಯೆ ದೊರಕೊಂ ಬುವದುನೋಡಾ । ಅನಂತಕಾಲ ವೇದಾಭ್ಯಾಸವಮಾಡಿ ತೊಳಲಿ ಬಳಲಲ್ಯಾತಕೆ । ಆ ವೇದಾಭ್ಯಾಸದಫಲವು ರುದ್ರಾಕ್ಷಿಯಧರಿಸಿದ ಕ್ಷಣದಲ್ಲಿಯೆ ದೊರಕೊಂಬುವದುನೋಡಾ । ಅದೆಂತೆಂದಡೆ ॥ ಶ್ಲೋ ॥

ಸರ್ವಯಜ್ಞತಪೋದಾನಂ ವೇದಾಭ್ಯಾಸಂತುಯತ್ಫಲಂ । ತತ್ಫಲಂ ಲಭತೇಸದ್ಯ ರುದ್ರಾಕ್ಷಸ್ಯಚಧಾರಣಾತ್ ॥ ಇಂತಪ್ಪ ರುದ್ರಾಕ್ಷಿಯಧರಿಸಿದ ಮಹಾತ್ಮನು ವಿಶ್ವಾಧಿಕನುನೋಡಾ ಆತವಿಶ್ವಾತೀತ ತಾನೆನೋಡಾ ॥ ೭ ॥ ಆವನಾನೊಬ್ಬನು ಪ್ರುಪಪಾತಕಗಳನ್ನು ಮಾಡಿ ಶ್ರೀ ರುದ್ರಾಕ್ಷಿಯ ನಾಮೋಚ್ಚಾರಣೆಯಮಾಡಿದರೆ ಆಪಾತಕಗಳು ಪರಿಹರವಾಗಿ ಹತ್ತುಸಾವಿರ ಗೋದಾನಗಳ ಫಲಕೈಸಾರುವದುನೋಡಾ ರುದ್ರಾಕ್ಷಿಸ್ವರೂಪವನ್ನು ಕಂಗಳತುಂಬ ನೋಡಿದಾತಗೆ ಶತಕೋಟಿಪುಣ್ಯದಫಲವು ಕೈಸಾರುತಿರ್ಪುದುನೋಡಾ ಆ ರುದ್ರಾಕ್ಷಿಯ ತತ್ಸ್ಥಾನದಲ್ಲಿ ಭಕ್ತಿಯಿಂ ಧರಿಸಿದರೆ ಲಕ್ಷಕೋಟಿ ಪುಣ್ಯದಫಲವು ಕೈಸಾರುವದುನೋಡಾ ಆ ರುದ್ರಾಕ್ಷಿಯಮುಟ್ಟಿ ಪೂಜಿಸಿದರೆ ಸಹಸ್ರಕೋಟಿ ಪುಣ್ಯಫಲವು ಕೈಸಾರು ತಿಪ್ಪದು ನೋಡಾ ಇಂತಪ್ಪ ರುದ್ರಾಕ್ಷಿಯಧರಿಸಿದ ಪುಣ್ಯಫಲಕೆ ಇನ್ಯಾವಫಲವು ಸರಿಯಿಲ್ಲವೆಂದು ಸಕಲಾಗಮಂಗಳು ಸಾರುತಿಪ್ಪವುನೋಡಾ ಅಖಂಡೇಶ್ವರಾ ॥ ೩ ಶಿವಮಂತ್ರವೆಯೆನಗೆ ಕಾಮಧೇನುವಯ್ಯ । ಶಿವಮಂತ್ರವೆಯೆನಗೆ ಕಲ್ಪವೃಕ್ಷವಯ್ಯ । ಶಿವಮಂತ್ರವೆಯೆನಗೆ ಚಿಂತಾಮಣಿಯಯ್ಯ । ಶಿವಮಂತ್ರವೆಯೆನಗೆ ಪರುಷದಕಣಿಯಯ್ಯ । ಶಿವಮಂತ್ರವೇಯೆನಗೆ ಘನಪ್ರಾಣದಮೂಲಿಕೆಯಯ್ಯ । ಅಖಂಡೇಶ್ವರಾ ॥ ೪ ॥ ಸಕಲವೇದಪುರಾಣಾಗಮ ಶಾಸ್ತ್ರಗಳೆಲ್ಲಾ ಶಿವಮಂತ್ರದಲ್ಲಿ ಜನಿಸಿದವಯ್ಯ ಸಕಲತತ್ವ ಶಕ್ತಿಮೂರ್ತಿಗಳೆಲ್ಲಾ ಶಿವಮಂತ್ರದಲ್ಲಿಯೆ ಜನಿಸಿದವಯ್ಯ ಸಕಲಬ್ರಹ್ಮಾಂಡಭುವನ ಸಚರಾಚರತ್ವ ಶಕ್ತಿಮೂರ್ತಿಗಳೆಲ್ಲಾ ಶಿವಮಂತ್ರದಲ್ಲಿಯೆ ಜನಿಸಿದವಯ್ಯ ವಟಜನ್ಯಾಯದಂತೆ ಸಕಲವಿಸ್ತಾರವನೊಳಕೊಂಡು ಇರ್ಪ ಪರಶಿವ ಮಂತ್ರವ ನೆನನೆನದು ಯೆನ್ನ ಮನದಮುಂದಣ ಮರವೆಯ ಹರದು ಭವಸಾಗರವದಾಟಿಸಯ್ಯ ಅಖಂಡೇಶ್ವರಾ ॥ ೫ ॥ ಆಶಿವಷಡಾಕ್ಷರಿಯಮಂತ್ರದಿಂದ ಸಾನಂದರುಷಿಯು ನರಕಜೀವಗಳನೆಲ್ಲಾ ಹರಣ

ವಾಲಗದಲ್ಲಿರಿಸಿದನುನೋಡಾ ಈ ಷಡಾಕ್ಷರಿಯುಮಂತ್ರದಿಂದ ಅಜ ಗಣತಂಡೆಗಳು ನಿಜಲಿಂಗೈಕ್ಯವಾದರುನೋಡಾ ಇಂತಪ್ಪ ಜೀವಷ ಡಾಕ್ಷರಿಮಂತ್ರವ ಯೆನ್ನ ಅಂತರುಗದರುಹದಮನೆಯಲ್ಲಿ ಭಚ್ಚಿಟ್ಟು ಕೊಂಡು, "ಓಂ ನಮಃಶಿವಾಯೆಂದು" ಶಿವಮಂತ್ರವಜಪಿಸಿ ನಾನು ಭವದಬಳ್ಳಿಯ ಬೇರುಕಿತ್ತಿ ನೀಡೆನಯ್ಯಾ ಅಖಂಡೇಶ್ವರಾ ‖ ೬ ‖ ಓಂ ನಮಃಶಿವಾಯಯೆಂಬುವಡೆನಗೆ ಧರ್ಮನೋಡಾ ಓಂ ನಮಃಶಿವಾ ಯ ಯೆಂಬುವಡೆನಗೆ ಕಾಮನೋಡಾ ಓಂ ನಮಃಶಿವಾಯ ಯೆಂ ಬುವಡೆನಗೆ ಮೋಕ್ಷನೋಡಾ ಓಂ ನಮಃಶಿವಾಯ ಯೆಂಬುವಡೆನ ಗೆ ಸರ್ವಕಾರ್ಣನೋಡಾ ಅಖಂಡೇಶ್ವರಾ ‖ ೭ ‖ ಓಂಕಾರವೆಂಬ ಮರಕ್ಕೆ ಷಟ್ಕೃತಿಯೆಂಬ ಶಾಖೆಪಸರಿಸಿ ಷಡಾಕ್ಷರವೆಂಬ ತಳಿರು ಕೊನರಿ ಷಡುಸ್ಥಳಗಳೆಂಬ ಕುಸುಮಗಳಾದವು ಷಡುಸ್ಥಳಗಳೆಂಬ ಮೋಕ್ಷಮಧುರಫಲಗಳ ತಳಿತಿರ್ಪುದುನೋಡಾ ಡಾಯಿದುನಾನು ಶೃತಿಗುರು ಸ್ವಾನುಭಾವಗಳಿಂದರಿದು ಆ ಓಂಕಾರವೆಂಬ ವೃಕ್ಷವ ನೇರಿ ಓಂ ನಮಃಶಿವಾಯಯೆಂದು ಷಡುಲಿಂಗಂಗಳೆಂಬ ಮಧುರಫಲ ಸವಿದು ನಿತ್ಯತೃಪ್ತನಾದೆನಯ್ಯಾ ಅಖಂಡೇಶ್ವರಾ ‖ ೮ ‖ ಯೆನ್ನ ಷ ಡಾಧತುಗಳೆಲ್ಲಾ ಷಡಾಕ್ಷರಮಂತ್ರ ಸ್ವರೂಪವಾಗಿ ತೋರುತಿರ್ಪು ದಯ್ಯಾ ಯೆನ್ನ ಷಟ್ಕರ್ಮಗಳೆಲ್ಲಾ ಷಡಕ್ಷರಮಂತ್ರ ಸ್ವರೂಪವಾಗಿ ತೋರತಿರ್ಪುದಯ್ಯಾ ಯೆಂನಷಡೇಂದ್ರಿಯಗಳೆಲ್ಲಾ ಷಡಕ್ಷರಮಂ ತ್ರ ಸ್ವರೂಪವಾಗಿ ತೋರುತಿರ್ಪುದಯ್ಯಾ ಇದುಕಾರಣ ನಿಮ್ಮ ನಾಮಾಮೃತವನುಂಡು ನಿತ್ಯಮುಕ್ತನಾದನಯ್ಯಾ ಅಖಂಡೇಶ್ವರಾ‖ ೯ ‖ ಯೆನ್ನ ಸೂಲತನುವೆಂಬ ಮನೆಯಲ್ಲಿ ಲಿಂಗವೆಂಬ ಜ್ಯೋತಿ ಯತುಂಬಿದೆನಯ್ಯಾ ಯೆನ್ನ ಸೂಕ್ಷ್ಮವೆಂಬಮನದಲ್ಲಿ ಜ್ಞಾನವೆಂಬ ಜ್ಯೋತಿಯತುಂಬಿದೆನಯ್ಯಾ ಯೆನ್ನವಳಹೊರಗೆತುಂಬಿ ತೊಳಗಿ ಬೆಳಗುವ ಜ್ಯೋತಿಯಬೆಳಗಿನಲ್ಲಿ ಸುಳಿವುತಿರ್ದನಯ್ಯಾ ಅಖಂಡೇ ಶ್ವರಾ ‖

ಭಕ್ತಿಸ್ಥಲವು.

ಇಂದುನಾಳೆಂದು ಹೇಳುವ ಮಂದಬುದ್ಧಿಗೆ ಸಂದುಗೊಡದಿರಂಣಾ ಆನಿದ್ದಕಾಲವನರಿದು ಶ್ರೀಮಹಾದೇವನ ಪೂಜಿಸಿರಂಣಾ ನೀರುಗುಳ್ಳೆಯಂತೆ ತೋರಿಯಡಗುವ ಅಸತ್ಯಶರೀರದ ಭೋಗನಿಶ್ಚಯವೆಂದು ನಿಶ್ಚೈಸಿ ಹೊತ್ತುಗಳೆದು ವ್ಯರ್ಥವಾಗಿ ಸತ್ತುಹೋಗುವಿರಂಣಾ ಕರ್ತುಗುರಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನಂಗಳ ಸಮರ್ಪಿಸಿ ನಿತ್ಯಪದವಂಸಾಧಿಸಿರಂಣಾ ನಮ್ಮ ಅಖಂಡೇಶ್ವರನಲ್ಲಿ ಸಿರಿಬಂದೊದಗಿತೆಂದು ಹಿರಿದಾಗಿಹಿಗ್ಗಬೇಡಿರಂಣಾ ಸಿರಿಯೆಂಬುದು ಕನಸಿನಪರಿಯಂತೆನೋಡಾ ಯಲೆಮರುಳಮಾನವರಿರಾ ಇದನರಿತುನಂಬಿ ಶ್ರೀಮಹಾದೇವನ ಪೂಜಿಸಿದರೆ ಸ್ಥಿರವಾದಪದವನೀವಾ ನಮ್ಮ ಅಖಂಡೇಶ್ವರಾ ॥ ಮಡದಿಮಕ್ಕಳುವಡದ ದ್ರವ್ಯವುಯನ್ನೊಡವೆಂದು ನೆಚ್ಚಿಯಿರಲು ಬ್ಯಾಡಿರೊ ಯೆಲೆಹುಚ್ಚುಮಾನವರಿರಾ ಅವುನಿಮ್ಮೊಡವೆಯೊದರೆ ನೀವುಮಡಿದುಹೋದಾಗ ನಿಂಮೊಡನೆಬಪ್ಪವೆ ಹೇಳಿರೊ ಇದನರಿತುತಡಿಯದೆ ಮೃಡಸೇವೆಯ ತೊಡಗಿದಡೆ ಕಡೆಮೊದಲಿಲ್ಲದಫಲವು ದೊರೆಕೊಂಬದುನೋಡಾ ಅಖಂಡೇಶ್ವರಾ ॥ ಅಂಗದಲ್ಲಿ ಮಹೇಂದ್ರಜಾಲದಂತೆ ಕಂಣಮುಂದೆ ವಡ್ಡಿದಹುಸಿಯ ಸಂಸಾರದಲ್ಲಿ ಹಡ್ಡಾಗಬೇಡಿರೊ ಯಲೆಥಡ್ಡಪ್ರಾಣಿಗಳಿರಾ ।ಅಡ್ಡದಾಶೆಗೆ ದುಡ್ಡಿನಲಾಭವಕಳೆವರ ಗುರುಲಿಂಗಜಂಗಮದ ಸೇವೆಯನು ತೊರೆದು ಸಂಸಾರದಲ್ಲಿಬೆರದರೆ ಮುಂದೆನರಕದಲ್ಲಿಕ್ಕುವನು ನಮ್ಮ ಅಖಂಡೇಶ್ವರಾ ॥ ೪ ॥ ಸುರಚಾಪದಂತೆ ತೋರಡಗುವತನುವನೆಚ್ಚಬೇಡಿರೊ ಸಚ್ಚಿದಾನಂದ ಲಿಂಗಜಂಗಮದ ಪೂಜೆಯಲ್ಲಿ ನಿಚ್ಚ ನಿಚ್ಚ ಮಾಡಿದರೆಮೆಚ್ಚಿ ಮಹಾಪದವು ನೀವನಮ್ಮ ಅಖಂಡೇಶ್ವರಾ ॥೫॥ ಮನದಭಕ್ತಿಗೆಕರ್ಮ ವಿಧಿಕಾಡುತಿರ್ಪುದುನೋಡಾ । ಈ ಮನವಳಿದುಬಂಮನವಾಗಿ ನಿಮ್ಮನರಿತಡೆಕರ್ಮದ ಭೀತಿಬಿಟ್ಟೀತುನೋಡಾ ಅಖಂಡೇಶ್ವರ ॥ ೬ ॥ ಅಂಜನಸಿದ್ಧಿಗಳ ಸಾಧಿಸುವಂಣಗಳ ಕಂಣು

ಮನಕೆಮಂಜುಗವಿಸಿ ಹೊರಗಾದನುನೋಡಾ ಪರಶಿವನು । ಘುಟಿಕಾ
ಸಿದ್ಧಿಗಳಸಾಧಿಸುವಂಣಗಳ ಕಂಗಳಮನಕ್ಕೆ ಸಟಿಯನೆತೋರಿ ಹೊರ
ಗಾದನುನೋಡಾ ಪರಶಿವನು । ಮಂತ್ರತಂತ್ರಗಳ ಸಿದ್ಧಿವಾದವಶ್ಯವ
ಸಾಧಿಸುವಂಣಗಳ ಕಂಣುಮನಕ್ಕೆಗಾದಿ ಕತ್ತಲುಗವಿಸಿ ಹೊರಗಾಗಿ
ಹೋದನುನೋಡಾ ಪರಶಿವನು । ಭಕ್ತಿಸಿದ್ಧಿಯ ಸಾಧಿಸುವಂಣಗಳ
ಮಂಣುಮನಕ್ಕೆ । ಮುಕ್ತಿಬೆಳಗನೆತೋರಿವಳಗಿರ್ದನೋಡಾ ನಮ್ಮ
ಅಖಂಡೇಶ್ವರಾ ॥ ೭ ॥ ವಿದ್ಯವ ಬಹಳಕಲಿತರೇನು । ಭಕ್ತಿಯಲ್ಲಿಶು
ದ್ಧವಿಲ್ಲದವನು ಬುದ್ಧಿಯಲ್ಲಿ ವಿಶೇಷನೆನಿದಡೇನು । ಭಕ್ತಿಯಲ್ಲಿಜಡ
ವನಾದವನು ಯಿಂತಪ್ಪ ಮದ್ದುಗುಣಿಕೆಯ ಕಾಯಿತಿಂದ ದರ್ಥದಲ್ಲಿ
ಅಧಿಕನೆನಿಸಿದರೇನು । ಕರ್ತ ಶಿವನನೆನಿಯದವನು ಮದೋನ್ಮ
ತನಯಂನತ್ತಲು ಕೋರವಿರಯ್ಯಾ ಅಖಂಡೇಶ್ವರಾ ॥ ೮ ॥
ಘಾಳಿಬೀಸುವವ್ಯಾಳ್ಯಯಲ್ಲಿ ತೂರಿಕಳ್ಳಿರೊಬೇಗ । ಘಾಳಿನಿಮ್ಮ
ಯಿಜ್ಜೆಯೆಲ್ಲಜಾಳುಮನಂಜರಿರಾ । ಇದನರಿತುಲಿಂಗವಪೂಜಿಸಿರೋ
ಬೇಗಬೇಗೆ ಆಗಲಿಂಗಜಂಗಮವಪೂಜಿಸಿರೊ ಅರುವುಳ್ಳಕಾಲಕ್ಕೆ ಬೇ
ಗಬೆಗನೆನಮ್ಮ ಅಖಂಡೇಶ್ವರಲಿಂಗವಕೂಡಿರೊ ॥೯॥ ಮುನ್ನಪಡೆ
ಯದೆಯಿಂನುಬೇಡಿದಡೆಬಪ್ಪದೆಯಂದು ನುಡಿಯುತಿರ್ಪರೆಲ್ಲಾ ಮು
ನ್ನಗುರುಲಿಂಗಜಂಗಮ ವಮರದಕಾರಣ ಇನ್ನಕೆಟ್ಟರೆಲ್ಲಾನಮ್ಮಅ
ಖಂಡೇಶಲಿಂಗವನರಿಯದೆ ॥೧೦॥ ಹಿಂದೆಗುರುಭಕ್ತಿಲಿಂಗಪೂಜಿಸಿ ।
ಜಂಗಮದಾಸೋಹನರಿಯದ ಕಾರಣಮುಂಪೆಹುಟ್ಟುವನು । ಕುರು
ಡಕುಂಟನಾಗಿಕುಬ್ಜನಾಗಿ ನಪುಂಸಕನಾಗಿದರಿದ್ರನಾಗಿ ಕುಲಹೀನನಾ
ಗಿ ದೇಶಿಗೇಡಿಯೂಗಿ ಬಹುಯೆೀಶಿಯೂಗಿ ಮಹಾದುಃಖಮಂಬಡುತಿ
ರ್ಪನೋಡಾಅಖಂಡೇಶ್ವರಾ ನಿಮ್ಮನರಿಯೆೀವಜನರು ಹಿಂದಣಜನ್ಮಲ್ಲಿ
ಗುರುಲಿಂಗಜಂಗಮ ಶಿವನೆಂದರಿದುನಂಬಿ ಪೂಜಿಸಿದಕಾರಣ । ಮುಂ
ದಹುಟ್ಟುವನುಸತ್ಕುಲದಲ್ಲಿ ಬಲವಂತನಾಗಿ ಧನಧಾನ್ಯಸಕಲಭಾಗ್ಯ
ಭೋಗಐಶ್ವರ್ಯವನುಳ್ಳವನಾಗಿ । ಸ್ವರ್ಗಲೋಕವುಳ್ಳವನಾಗಿ ನಮ್ಮ

ಯಖಂಡೇಶ್ವರನ ಪೂರ್ವಫಲವುಳ್ಳವನಾಗಿಪ್ಪನುನೋಡಾ ||೧೨|| ನುಡಿಯಲ್ಲಿಕರ್ಕಶವಿಲ್ಲದನಡಿಯಲ್ಲಿ ಬೇಸರಹೋಗದ ಹಿಡಿದಭಕ್ತಿಯ ಕಡಿತನಕಬಿಡದೆ ! ಬಡತನಯೆಡರುಕಂಟಕಗಳುಬಂದಲ್ಲಿ ಚಿಂತೆಯಿಂದ ಕಾಂತಿಗುಂದದೆ ಅಡಿಗಡಿಗೆ ಶಿವಶಿವಯೆಂಬನುಡಿಯಮರೆಯದಿರ್ಪ ಸದ್ಭಕ್ತಂಗೆ ಬೇಡಿದಪದವ ನೀವನಮ್ಮಯಖಂಡೇಶ್ವರಾ ||೧೩|| ಯೆನ್ನತನು ಯನ್ನಧನ ಯನ್ನಮನೆ ಯನ್ನಸತಿಸುತರೆಂಬುವನಕ್ಕರ ಭಕ್ತಿಭಿನ್ನವಾಯಿತುನೋಡಾ । ತನ್ನಮರೆದುನಡವೆಯೊತಕ್ಕೆವತನಿಯನೊಪ್ಪಿಸಿದರೆ ಕೂಡಿಕೊಂಡಿರ್ಪನನೋಡಾ ನಮ್ಮಯಖಂಡೇಶ್ವರಾ ||೧೪|| ಇವರಲ್ಲಿ ಲಿಂಗಜಂಗಮವು ಬರುವದುಕಂಡು ಸದನಿಳಿದನಡೆದುಹೋಗಿ ಚರಣಕ್ಕೆರಗುವವೆ ಉತ್ತಮಭಕ್ತಿಯನಿಸಿತುನೋಡಾ || ಇದ್ದಸ್ಥಾನದಲ್ಲಿದ್ದು ನಿಲ್ಲುವದೇಮಧ್ಯಮಭಕ್ತಿಯೆನಿಸಿತುನೋಡಾ । ಕುಳಿತಸ್ಥಾನದಲ್ಲಿ ಕರವಮುಗಿವದೆ ಕನಿಷ್ಟಭಕ್ತಿಯನಿಸಿತುನೋಡಾ । ಈಮೂರುತರದಭಕ್ತಿಯಿಲ್ಲದೆ ಗರ್ವದಿಂದಚರತುಕೊಂಡು ಕುಳಿತರಮುಂದೆಹಿರಿಯಶೂಲದಮೇಲೆ ಕುಳ್ಳಿರಿಸುವವನುನೋಡಾ ಯಖಂಡೇಶ್ವರಾ || ಸರ್ವಲೋಕೋಪಕಾರವಾಗಿ ಸದಾಶಿವನಜಂಗಮವಾಗಿ ಬಂದನೆಂದರಿಯದವನಮುಖವನೋಡಲಾಗದು । ಸರ್ವಲೋಕವಪಾವನಮಾಡಲೋಸ್ಕರ ಶಿವನೆಜಂಗಮವಾಗಿ ಬಂದನೆಂದುನಂಬದವನಂಗಳವಮೆಟಲಾಗದು । ಅದೆಂತೆಂದಡೆ ||ಶ್ಲೋ|| ಸರ್ವಲೋಕೋಪಕಾರಾಯದ್ದೇವ ಪರಮೇಶ್ವರ । ಚರಾತಿಷ್ಮತಿರೂಗೇಣನಮಸ್ತೆಜಂಗಮಾತ್ಮನೆ ||೧|| ಯೆಂದುದಾಗಿ ಯಿಂತಪ್ಪಜಂಗಮದಘನವನರಿಯದಭಂಗಗೇಡಿಗಳ ಭಕ್ತರೆಂದರೆ ಭವಹಿಂಗಲರಿಯದಯ್ಯಾ ಅಖಂಡೇಶ್ವರಾ ||೧೬|| ಮನಿಗೆಬಂದ ಜಂಗಮವಕಂಡು ಮನದಲ್ಲಿವುದಾಸೀನವತಾಳಿ । ಮೋರೆಯಅಡ್ಡನಿಕ್ಕಿದರೆ ಜಾರಿತುನೋಡಾ ಹಿಂಪೆಮಾಡಿದಭಕ್ತಿ ಪಂಕ್ತಿಯಲ್ಲಿಕುಳಿತು ಜಂಗಮಕ್ಕೆ ಬಂದುನೋಡಿ ತಾನೊಂದುಂಡರಹುಳಿಗೊಂಡದಲ್ಲಿಕ್ಕುವನು ನೋಡಾ

ಅಖಂಡೇಶ್ವರಾ ||೧೭|| ಸದ್ಭಕ್ತನಸಹಜಸ್ವಭಾವದನಡೆಹ್ಯಾಗಿರಬೇಕೆಂದರೆ | ಮನೆಗೆಬಂದಜಂಗಮರಕಂಡು ಮನದಲ್ಲಿಸಂತೋಷವತಾಳಬೇಕು | ಮದುವೆಯುಮಾಂಗಲ್ಯವೆಸಗೆ | ಉತ್ಸವದಂತೆ ಹರುಷಾಬ್ಧಿತುಂಬಿತುಳುಕಿಹೊರಸೂಸಬೇಕು| ಇಂದುನಮ್ಮಮನೆಗೆ ಮಹಾಪುಣ್ಯದಫಲವುಬಂದು ತುಂಬಿತೆಂದು ಕುಣಿಕುಣಿದುನೋಡಿ ಹಾಡಿಹರಸಬೇಕು ಸತಿಸುತರುಸಹಾವಾಗಿ ಪಡಗೂಡಿಭಕ್ತಿಯಮಾಡಿ ನಮ್ಮಯಖಂಡೇಶ್ವರ ಲಿಂಗವನೊಲಿಸಬೇಕು ||೧೮|| ಕೋಳಿಕೂಗುವದು ಬೆಳಗಿನವ್ಯಾಳ್ಯವರಿತು | ಕತ್ತೆಕೂಗುವದು ಹೊತ್ತಿನಗೊತ್ತನರಿತು | ಶಿವಭಕ್ತನಾದಬಳಿಕ ತನ್ನ ಅರುಹುಕುರಿಹಿನಭಕ್ತಿಮುಕ್ತಿಯಗೊತ್ತನರಿಯದಬಳಿಕಾ ಆಕೋಳಿಕತ್ತೆಗಿಂತಾ ಕರಕಷ್ಟನೋಡಾ ಯಖಂಡೇಶ್ವರಾ ||೧೯|| ಲಿಂಗಜಂಗಮಕ್ಕೆಮಾಡಿದಭಕ್ತಿ ಮನಕ್ಕೆಮನಸಾಕ್ಷಿಯಾಗಿರಬೇಕಲ್ಲದೆ ಯಿದಿರಿಟ್ಟುನುಡಿಯಲಾಗದು | ಅದೇನುಕಾರಣವೆಂದರೆ | ಬಡವನಿಗೆಭಾಗ್ಯದೊರಕೊಂಡಂತಿರಬೇಕಲ್ಲದೆ | ಯೆನ್ನಪದಾರ್ಥವ ನಾನುಮಾಡಿದನು | ಅವರುಕೈಕೊಂಡರೆಂದು ತನ್ನಖ್ಯಾತಿಭಕ್ತಿಯನ್ನುಮನಹಿಗ್ಗಿ ಅನ್ಯರೊಡನೆಹೇಳಿಕೊಂಡರೆ ಶಿವನೊಪ್ಪಗೊಳ್ಳನು | ಪುರಾತನರುಮೆಚ್ಚರು | ಅಂತಪ್ಪಖ್ಯಾತಭಕ್ತಿಯೆಂತಾಯಿತೆಂದರೆ | ಹಾವಸಿಗತಮೆಟ್ಟಿಜಾನಿಬಿದ್ದು ಕೊದನೊಡದಂತಾಯಿತು ಕಾಣಾಯಖಂಡೇಶ್ವರಾ ||೨೦|| ಧರ್ಮಾರ್ಥವಾಗಿ ಶಾಸ್ತ್ರವನೋಡಬೇಕಲ್ಲದೆ ದೀಕ್ಷೆಯಮಾಡಬೇಕಲ್ಲದೇ ಅನರ್ಥವಾಗಿ ದೀಕ್ಷೆಯಮಾಡಲಾಗದು | ಜ್ಞಾನಾರ್ಥವಾಗಿ ಶಾಸ್ತ್ರವನೊಡಬೇಕಲ್ಲದೆ | ವಾದಾರ್ಥವಾಗಿ ಶಾಸ್ತ್ರವನೋಡಲಾಗದಯ್ಯಾ | ಮೋಕ್ಷಾರ್ಥವಾಗಿ ಶಿವಪೂಜೆಯಮಾಡಬೇಕಲ್ಲದೆ ಡಂಬಾರ್ಥವಾಗಿ ಶಿವಪೂಜೆಯಮಾಡಲಾಗದಯ್ಯಾ ಅಂತೆಂಪೊಡೆ ||ಶ್ಲೋ|| ಆಶಾರ್ಥೆದಿಯ್ಯಾತೆದಿಕ್ಷಾ | ದಂಭಾರ್ಥಂಪೂಜಿತಶ್ಶಿವಃ || ವಾದಾರ್ಥಂಪಠತೆವಿದ್ಯಾ | ಮೋಕ್ಷಂನಾಸ್ತಿವರಾನನೆ ||೧|| ಮತ್ತಂ|| ಶ್ಲೋ|| ಧರ್ಮಾರ್ಥಂದೀ

ಯಿತದೀಕ್ಷಾ । ಮೋಕ್ಷಾರ್ಥಂಪೂಜಿತಶಿವಃ ಜ್ಞಾನಾರ್ಥಂಪರತೇ ವಿದ್ಯಾ ಮೋಕ್ಷಸಿದ್ಧಿವರಾನನೆ ॥೧॥ ಯೆಂಬದಾಗಿ ಇಂತಪ್ಪಖ್ಯಾತಿ ಕೀರ್ತಿಯಕಡೆಗೆನೋಂಕಿ ನೀತಿನಿಜವನಂಗೀಕರಿಸಿ ಶಿವನೊಲಿಸುವ ಭಾವವನರಿಯದೆ ಸಂತೆಯುಪಸಾರದಂತೆ ಸರ್ವರುಮೆಚ್ಚಲೆಂದುಪಸ ರಿಸಿ ಹರಹಿಕೆಂಡುಮಾಡುವ ಡಂಭಕತನದ ಶಿವಪೂಜೆಶಂಭುವಿಗೆಮು ಟ್ಟಲರಿಯದನೋಡಾಯಖಂಡೇಶ್ವರ ॥೧॥ ಲಿಂಗಾರ್ಚನೆಯಮಾಡಿದ ಬಳಿಕ । ಜಂಗಮಾರ್ಚನೆಯಮಾಡಬೇಕು । ಜಂಗಮದಪಾದೋದ ಕಪ್ರಸಾದವಕೊಳ್ಳಬೇಕು ನಿಚ್ಚನಿಚ್ಚಲಿಂಗಾರ್ಚನೆಯಮಾಡಿ । ನಿ ಚ್ಚನಿಚ್ಚಜಂಗಮಾರ್ಚನೆಯಮಾಡಿ । ಜಂಗಮದಪಾದೋದಕಪ್ರ ಸಾದವಿಲ್ಲದಬಳಿಕಾ । ಲಿಂಗಾರ್ಚನೆಯಂತಾಯಿತೆಂದೊಡೆ । ಮೂಗ ಕೊಯಿದ ಮೂಕಾರ್ತಿಯಂತಾಯಿತುನೋಡಾ ಅಖಂಡೇಶ್ವರ ॥ ಒಳ ಗೆಲಿಂಗಕೂಟದಲ್ಲಿ ಮನವಡಗಿರಬೇಕು । ಹೊರಗೆಜಂಗಮದಮಾಟ ದಲ್ಲಿ ತನುವಿಃದಿರಬೇಕು । ಈ ಉಭಯವನ್ನು ವಂದರೊಳಗೆ ವಂದು ವೇದಿಸಿಕೋಂಡು ತಾನಳಿದುಯಿರುವ ಭಕ್ತನಕೂಡಿಕೊಂಡಿಪ್ಪನು ನೋಡಾ ನಮ್ಮಮಯಕಂಡೇಶ್ವರಾ ॥ ಆದಿಯಲ್ಲಿ ನೀನೆದೇವನು ನಾನೆಭಕ್ತನು । ಆದಿಯಿಂದತ್ತತ್ತಲು ನೀನೆದೇವನಯ್ಯಾ ನಾನೆಭಕ್ತ ನಾಗಿ ನಿಮ್ಮೊಳಗೆ ಅಡಗಿದ್ದೆನಯ್ಯಾ ಯಕಂಡೇಶ್ವರ । ನಿಂಮಾತೊ ತ್ತಿನತೊತ್ತುಪಡಿದೊತ್ತುಯೆಂದು ನನ್ನಕಯ್ಯಾಹಿಡಿದು ತಲೆವಡಹಿ ನೆರದು ಅಭಯದಹಸ್ತವಕೊಟ್ಟು ಮರ್ತ್ಯಲೋಕಕ್ಕೆನ್ನ ಕಳುಹಿ ದಿರಾಗಿ ನೀನೆಕರ್ತ ನಾನೆಭಕ್ತನು ನೀನೆವಡಿಯನು ನಾನೆಬಂಟನು ನೀನೆಅಳಿದನು ನಾನೆಅಳಿಸಿಕೊಳ್ಳುವನು ನೀನೆದೇವನು ನಾನೆಭಕ್ತ ನುಆಗಿ ನೀವುವಡೆಂದುಮಣಿಹವ ಮಾಡುತಿರ್ದನಯ್ಯಾ ನೀವುಹೇಳಿ ದತೊತ್ತುಶೇವೆಯ ಮಾಡುತಿರ್ಪನಯ್ಯಾ ಅಖಂಡೇಶ್ವರಾ ॥೨೫॥ ಲಿಂಗಪ್ರವೇಶ ಪ್ರೇಮವುಳ್ಳವಂಗ ಭವಬಂದನವಿಲ್ಲ । ಜಂಗಮದಪ್ರೇ ಮವುಳ್ಳವಂಗೆಸಂಸಾರದತೊಡಕೆಲ್ಲ । ಪ್ರಸಾದದಪ್ರೇಮವುಳ್ಳವಂಗೆ

ಇಹಪರದಯುಡಯೂಟವಿಲ್ಲ । ತಾನಿಲ್ಲದಮಾಡುವಭಕ್ತಗೆ ಆವಾವ ಫಲಪದದಹಂಗಿಲ್ಲವಯ್ಯಾ ಅಖಂಡೇಶ್ವರಾ ॥೨೬॥ ಲಿಂಗಪ್ರೇಮಿಗಳು ಅನಂತವುಂಟು ಜಂಗಮದೊಳಗೆ ಜಂಗಮಪ್ರೇಮಿಗಳಕಾಣೆನಯ್ಯಾ ಲಿಂಗಪೂಜಕರು ಅನಂತವುಂಟು ಜಂಗಮದೊಳಗೆ ಜಂಗಮಪೂಜಕರ ಕಾಣೆನಯ್ಯಾ ಲಿಂಗಪ್ರಾಣಿಗಳು ಯನಂತವುಂಟು ಜಂಗಮದೊಳಗೆ ಜಂಗಮಪ್ರಾಣಿಗಳ ಕಾಣೆನಯ್ಯಾ ಲಿಂಗದಬಾಯಿ ಜಂಗಮವೆಂದರಿದುಮಾಡಿದ ಮನವಳಿದುಘನಲಿಂಗವಾದ ಸಂಗನಬಸವಣ್ಣನ ಶ್ರೀಪಾದಕ್ಕೆನಮೋನಮೋ ವೆಂಬನಯ್ಯಾ ಅಖಂಡೇಶ್ವರಾ ॥೨೭॥ ಲಿಂಗಾರ್ಚನೆಗೆಂದಾ ಜಂಗಮಸರ್ಚನೆಯ ಧಿಕನೋಡಾ ಅದೆಂತೆಂದರೆ ಆದಿಯಲ್ಲಿ ಲಿಂಗಾರ್ಚನೆಯಮಾಡಿದಂತಾ ರಾಜರಿಗೆ ಪ್ರಳಯವಾಯಿತು ಆದಿಯಲ್ಲಿ ಲಿಂಗಾರ್ಚನೆಯಮಾಡಿದಂತಾನವ ಕೋಟಿನಾರಾಯಣರಿಗೆ ಪ್ರಳಯವಾಯಿತು । ಆದಿಯಲ್ಲಿ ಲಿಂಗಾರ್ಚನೆಯಮಾಡಿದ ಅನಂತಕೋಟಿ ರುದ್ರರಿಗೆಪ್ರಳಯವಾಯಿತು। ಇದುಕಾರಣಲಿಂಗಾರ್ಚನೆಯು ಪಳಯಕ್ಕೊಳಗು । ಜಂಗಮಾರ್ಚನೆಯು ಅಪ್ರಳಯವೆಂದರಿದು ಜಂಗಮಪ್ರಾಣವೆಂದುನಂಬಿ ಅನಂತಕೋಟಿ ಪ್ರಳಯಗಳನೀಗಿ ಪರಬ್ರಹ್ಮವನೊಡಗೂಡಿದ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥೨೮॥ ಸಂಗನಬಸವಣ್ಣನಂತೆ ಸದ್ಭಕ್ತನೆಂದನಿಸಯ್ಯಾ ಯನ್ನ ಮಡಿವಾಳ ಮಾಚಯ್ಯಗಳಂತೆ ವೀರಮಹೇಶ್ವರನೆಂದನಿಸಯ್ಯಾಯನ್ನ । ಸಿದ್ಧರಾಮಯ್ಯಗಳಂತೆ ಶುದ್ಧಪ್ರಾಣಲಿಂಗಯೆಂದನಿಸಯ್ಯಾಯನ್ನ । ಪುರುಲಿಂಗಪೆದ್ದಯ್ಯಗಳಂತೆ ಪುರಾತರಶರಣನೆಂದೆನಿಸಯ್ಯಾಯನ್ನ । ಅಜಗಣ್ಣತಂದೆಗಳಂತೆ ನಿಜಲಿಂಗೈಕ್ಯನೆಂದೆನಿಸಯ್ಯಾಯನ್ನ । ನಿಜಗುರುಯೋಗಿಗಳಂತೆ ಪರಮಾರೂಢನೆನಿಸಯ್ಯಾಯನ್ನ । ಅಕ್ಕಮಹಾದೇವಿಯಂತೆ ನಿಷ್ಕಾಮಿಯೆಂದೆನಿಸಯ್ಯಾಯನ್ನ । ಪ್ರಭುದೇವನಂತೆ ಪರಿಪೂರ್ಣನೆಂದೆನಿಸಯ್ಯಾಯನ್ನ । ಇಂತಿವರಕಾರುಣ್ಯದನಿ ಅವನೇಕರುಣಿಸಿ

ನಿಮ್ಮಗಣಂಗಳಸಮ್ಮುಖದಲ್ಲಿರಿಸಿ ಸಲಹಯ್ಯಯನ್ನ ಅಖಂಡೇಶ್ವರಾ ||೨೯|| ಸ್ವರ್ಗಕ್ಕೆಯೇಳುಸೋಪಾನವಿರ್ಪವುನೋಡಾ | ಅರುಯರಿಯಲಿಲ್ಲ | ಜಂಗಮವಕಾಣುತ್ತ ಸದ್ಭಕ್ತನುಕುಳಿತಿದ್ದ ಆಸನವಬಿಟ್ಟುಯಿದಿರೆದ್ದುನಡವನು ವೊಂದನೆಸೋಪಾನ ಮನಕರಗಿತನುವುಕ್ಕಿಕಂಗಳಲ್ಲಿ ಪರಿಣಾಮದಜಲವುಕ್ಕಿ ಅವರಚರಣಕಮಲದಮೇಲೆ ಸುರಿವಂತೆ ಸಾಷ್ಟಾಂಗದಿಂದೆ ನಮಸ್ಕರಿಸುವದ ಯೆರಡನೇಸೋಪಾನ ಆಜಂಗಮವತನ್ನ ಮಠಕ್ಕೆ ಬಿಜಯಂಗೈಸಿ ವುನ್ನತಾಸನದಗದ್ದುಗಿಯಮೇಲೆ ಕುಳ್ಳಿರಿಸಿ ಪಾದಪ್ರಕ್ಷಾಲನವಮಾಡುವದೇ ಮೂರನೆಸೋಪಾನ ಆಜಂಗಮದೇವರನ್ನು ಅಷ್ಟವಿದಾರ್ಚನೆ ಷೋಡಶೋಪಚಾರಂಗಳಿಂದರ್ಚಿಸಿ ಪಾದತೀರ್ಥಕೊಂಬುವದೇ | ನಾಲ್ಕನೇಸೋಪಾನ | ಮೃಷ್ಟಾನ್ನಪಾನಗಳಿಂದ ತೃಪ್ತಿಪಡಿಸುವದ ಐದನೇಸೋಪಾನ | ಆಜಂಗಮದವಕ್ಕಮಿಕ್ಕ ಪ್ರಸಾದಕೊಂಬುವದೆ ಆರನೇಸೋಪಾನ | ಜಂಗಮದಲ್ಲಿ ಅನುಭವವಚನಗೊಂಬುವದೆ | ಏಳನೇಸೋಪಾನ | ಇಂತಿ ಸಪ್ತಸೋಪಾನಂಗಳ ಬಲ್ಲಸದ್ಭಕ್ತರಿಗೆ ಕೈಲಾಸಕರತಲಾಮಲಕವಲ್ಲದೆ | ತನುವಸವಿಸದೆ ಮನವದಂಡಿಸದೆ | ಧನವಸಮರ್ಪಿಸದೆ ಮಿಥ್ಯಾಸಂಸಾರದಲ್ಲಿಸಿಲ್ಕಿ ಹೊತ್ತುಗಳಿದು ಹೊಡದಾಡಿ ಸತ್ತುಹೋಗುವ ವ್ಯರ್ಥಜೀವಿಗಿನ್ನೆತ್ತಣ ಕೈಲಾಸವಯ್ಯಾ ಅಖಂಡೇಶ್ವರ || ಭಕ್ತಿಸ್ಥಲ ಕುಲವನರಿಯದ | ಬರಿದೆಭಕ್ತನೆಂದನಿಸಿಕೊಂಬುವಮುಕ್ತಿಗೇಡಿಗಳನೇನೆಂಬೆನಯ್ಯಾ | ಅನಾದಿಪರಶಿವನು ತನ್ನಲೀಲೆಯಿಂದತಾನೆ ಗುರುಲಿಂಗಜಂಗಮವಾಗಿ ಬಂದನೆಂದರಿದು | ತನುಮನಧನವಸವಸಿಘನಮುಕ್ತಿಯಪಡಯಲರಿಯದೆ | ಅಣವಮಲಮಾಯಾಮಲಗಾರ್ಮಿ ಕಮಲವೆಂಬಮಲತ್ರಯಂಗಳನೆ | ಭುಂಜಿಸಿಸಂಸಾರವಿಷಯರಸವೆಂಬ ನೀರುಕುಡಿದು| ಮಾಯಾಮೋಹವೆಂಬಮದವು ತಲೆಗೇರಿಸೊಕ್ಕಿ ಬಕ್ಕಲನಂತೆತಿರುಗುವನರಕಜೀವಿಗಳಮುಖವನೋಡಲಾಗದಯ್ಯಾ ಅಖಂಡೇಶ್ವರಾ || ಗುರುವಿನಲ್ಲಿಗುಣ

ವನರಸಿದರೆ । ಒಂದನೆಪಾತಕ । ಲಿಂಗದಲ್ಲಿಶಿವನರಸಿದರೆ ಯೆರಡನೆ ಪಾತಕ । ಗುರುವಿನಲ್ಲಿಭಕ್ತಿಯಿಲ್ಲ । ಲಿಂಗದಲ್ಲಿನಿಷ್ಠೆಯಿಲ್ಲ । ಜಂಗಮ ದಲ್ಲಿವಿಶ್ವಾಸವಿಲ್ಲ । ಪಾದೋದಕ ಪ್ರಸಾದದಲ್ಲಿ ಪ್ರೇಮವಿಲ್ಲ । ಬರಿ ದಭಕ್ತರೆಂಬ ಭವಭಾರಿಗಳಮುಖವನೋಡಲಾಗದಯ್ಯಾ ಅಖಂಡೇ ಶ್ವರಾ ||೩೦|| ಜಂಗಮದಲ್ಲಿಕುಲವನರಸಿದರೆ ಮೂರನೇಪಾತಕ । ಪ್ರಸಾದದಲ್ಲಿ ರುಚಿಯನರಸಿದರೆ ನಾಲ್ಕನೇಪಾತಕ । ಪಾದೋದಕ ದಲ್ಲಿಸೂತಕವನರಸಿದರೆ ಐದನೇಪಾತಕ । ಇಂತೀಪಂಚಮಹಾಪಾ ತಕದಮನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ ||೩೧|| ಶಿವ ಭಕ್ತನೆನಿಸುವಾತಂಗೆ ಆವುದುಚಿನ್ಹವೆಂದಡೆ । ಸದಾಚಾರದಲ್ಲಿನಡ ವಡು । ಶಿವನಲ್ಲಿಭಕ್ತಿಯೊಗಿರುವದು । ಲಿಂಗಜಂಗಮ ಪ್ರೇಮದಯೆಂ ಬುಕಾಂಬುವು । ವಿಭೂತಿರುದ್ರಾಕ್ಷಿಲಿಂಗಧಾರಣ ಮುಂತಾದ ಶಿವಲಾಂ ಛನವುಳ್ಳಂಥಾ ಶಿವಶರಣರಲಿ ಅತಿಭಕ್ತಿಯೊಗಿ ಶಾಂತನೇಸದ್ಭಕ್ತನು ನೋಡಾ ||ಶ್ಲೋ|| ಸದಾಚಾರಶಿವಭಕ್ತಿ । ಲಿಂಗಜಂಗಮಮೊಕ್ಷ । ಲಾಂಛನಂಶರಣಾಭಕ್ತಿ. ಭಕ್ತಿಸ್ಥಲಮನುತ್ತಮಂ ||೧|| ಎಂಬುದಾಗಿ ಯಿಂತಪ್ಪಸಹಜಶಿವಭಕ್ತರ ತೋರಿಸಿಬದುಕಿಸಯ್ಯಾ ||ಅ|| ೩೨ || ಗುರುಲಿಂಗಕ್ಕೆ ತನುವಿನಲಕಿಂಚಹರಿಯುದು ಲಿಂಗಕ್ಕೆ ಮನವನರ್ಪಿ ಸದಲ್ಲದೆ ಈಮನದವಾಸನೆಹರಿಯದು । ಜಂಗಮಕ್ಕೆಧನವನರ್ಪಿಸ ದಲ್ಲದೆ ದುರ್ಭಾವಹರಿಯದು । ಇದುಕಾರಣತ್ರಿವಿಧಕ್ಕೆ ತ್ರಿವಿಧವ ಸಮರ್ಪಿಸಿ ತ್ರಿವಿಧವಾಸನೆಹರಿದು । ತ್ರಿವಿಧವಿದದಳೆನವನೊಡಗೂ ಡಲು । ಬಲ್ಲತಸದ್ಭಕ್ತನೆಂಬೆನಯ್ಯಾ ಅಖಂಡೇಶ್ವರಾ|| ನೀನೊಲಿದಡೆ ಕಲ್ಲೆಲ್ಲಕನಕವಯ್ಯಾ । ನೀನೊಲಿದಡೆ ಹುಲ್ಲೆಲ್ಲಾ ರಾಜಾನ್ನವಯ್ಯಾ ನೀನೊಲಿದಡೆ ನುಂಟುಪನಿಲ್ಲವಯ್ಯಾ ನೀನೊಲಿದಡೆ ಕೊರಡೆಲ್ಲಾ ಕ ಲ್ಪವೃಕ್ಷವಯ್ಯಾ । ನೀನೊಲಿದಡೆಬರಡೆಲ್ಲ ಕಾಮಧೇನುವಯ್ಯಾ । ನೀನೊಲಿದಡೆ ಅಖಂಡೇಶ್ವರ ||೩೩|| ನೀನೊಲಿದಡೆಜಗವೆಲ್ಲಾ ಕೊಂ ಡಾಡುತಿಪ್ಪನುನೋಡಾ । ನೀನೊಲಿದಡೆಜಗವೆಲ್ಲಾ ಹೊತ್ತುಗಲ್ಲು

ಹೊತ್ತುಕೊಂಡಿರ್ಪುದಯ್ಯಾ । ನೀನೊಲಿದಡೆ ವೈರಿಗಳುಸಖರಪ್ಪರುನೋಡಾ । ನೀನೊಲಿಯದಿದ್ದರೆ ಸಖರುವೈರಿಗಳಾಗಿಹರುನೋಡಾ । ನೀನೊಲಿದಡ ಬಾರದಪದಾರ್ಥಬರ್ಪುದುನೋಡಾ । ನೀನೊಲಿಯದಿರ್ಪಡೆ ಬಪ್ಪುದುಬಾರದೆಹೋಗುವದುನೋಡಾ ಯಿದಖಂಡೇಶ್ವರಾ ॥ ನಿಮ್ಮವಲಿಮೆಯಿಂದ ಘನವುನೋಡಾ ॥೩೭॥ ನಿತ್ಯನೆನಿಸಯ್ಯಯನ್ನ । ಭಕ್ತನೆಂದೆನಿಸಯ್ಯಯನ್ನ ಮುಕ್ತನೆಂದೆನಿಸಯ್ಯಯನ್ನ ನಿಮ್ಮಪೂರ್ಣವಲುಮೆಯಲಿಂಕನೆಂದೆನಿಸಯ್ಯಯನ್ನ ಅಖಂಡೇಶ್ವರಾ ॥೩೮॥ ಯನ್ನಕಣ್ಣುಗಳೆಮುಂದಣಕಾಮುವಕಳೆದುನಿಮಗಣಂಗಳ॥ ಸ್ವರೂಪವತೋರಿಸಯೂ । ದೇವಾಯನ್ನಪ್ರಾಣದಮುಂಣಪ್ರಪಂಚವಕೆಡಿಸಿ ನಿಮ್ಮಪರಮ ಪ್ರಸಾದವನೆಲೆಗೊಳಿಸಯ್ಯಾದೇವಾ । ಯನ್ನತನುವಮುಸುಕಿದತಾಮಸವಕಳೆದುನಿಮ್ಮಭಕ್ತಿಯ ಅನುವತೋರಿಸಿಬದುಕಿಸಯ್ಯಾದೇವಾ ॥ಅಖ॥೩೯॥ ಗುರುಲಿಂಗಜಂಗಮದಲ್ಲಿ ಭಯಭಕ್ತಿಕಿಂಕರವಾಣನಯನುಡಿನಮಸ್ಕಾರ । ಕ್ಷಮೆದಯೆಮೈರಣೆಸವಧಾನ ಶಾಂತಿದಯೆಗುಣ ವಿಶ್ವಾಸನಂಬುಗೆ । ನೈಷ್ಟಿಸಮರಸವನುಳ್ಳ ಸದ್ಭಕ್ತರತೋರಿಸಿಬದುಕಿಸಯ್ಯಯನ್ನ ಅಖಂಡೇಶ್ವರಾ ॥೪೦॥ ಸತ್ಕಾಯಕದಿಂದ ತಂದದ್ರವ್ಯಗಳಅಂದಂದಿಗೆ ಗುರುಲಿಂಗಜಂಗಮಕ್ಕೆಸವಿಸಿ । ಹಿಂದುಮುಂದಣಿಸದೆ । ಇಂದಿಗೆನಾಳೆವರುಷ ತುಂಬಿತೆಂದು ಆನಂದಭಕ್ತರತೋರಿಸಿ ಬದುಕಿಸಯ್ಯಾ ಅಖಂಡೇಶ್ವರಾ ॥೪೧॥ ಭಕ್ತನಾದಡೆನಿರ್ವಂಚಕಭಾವದಿಂದೆತ್ರಿವಿಧಕ್ಕೆ ತ್ರಿವಿಧಪದಾರ್ಥವ ಸಮರ್ಪಿಸಬೇಕು । ಮಹೇಶ್ವರನಾದರೆ ತ್ರಿವಿಧವಬಯಸದಿರಬೇಕು । ಪ್ರಸಾದಿಯಾದರೆಹುಲ್ಲುಕಡ್ಡಿಮೊದಲಾದ ದರ್ಪಣಾಸಕಲಪದಾರ್ಥಗಳಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳದಿರಬೇಕು । ಪ್ರಾಣಲಿಂಗಿಯಾದರೆ ಪ್ರಪಂಚವಹಿಂಗಿರಬೇಕು । ಶರಣನಾದರೆ ಭೋಗೋಪಭೋಗವನುನಿಲ್ಲದೆ ಲಿಂಗದಮೂಲವರಿದು ಕೊಡಬೇಕು । ಐಕ್ಯನಾದೊಡೆ । ಸಕಲವು ತನ್ನೊಳಗೆಂದರಿದು ಸ

ರ್ವರೊಳಗೆಲತನ್ನನೆಕಾಣಬೇಕು । ಇಂತೀಷಟ್‌ಸ್ಥಲದ ಅನುವನರಿತು ಆಚರಿಸುವಮಹಾಶರಣನೆ ಆಳಿನಆಳುನಾನಯ್ಯ ॥ ಅಖ ॥ ೪೦ ॥ ಭಕ್ತಿಯನಿಲವನರಿಯೆಜ್ಞಾನದಕುರುಹನರಿಯೆ । ವೈರಾಗ್ಯದದೃಢವನರಿಯೆ । ವಿರಕ್ತಿಯಹೊಲಬನರಿಯೆ । ಮುಕ್ತಿಯಪಥವನರಿಯೆ । ಭಕ್ತಿಜ್ಞಾನವೈರಾಗ್ಯ ವಿರಕ್ತಿಯಿಂದ ಮುಕ್ತರಾದ ಮಹಾಶರಣರಮಗನಯ್ಯ ಅಖಂಡೇಶ್ವರಾ ॥ ೪೩ ॥ ಶಿವಶಿವಾಯೆನ್ನಮನದಾಳಾಪವನವಧರಿಸಯ್ಯ । ಸ್ವಾಮಿಯೆನಗೆಭಕ್ತಿಬೇಡಾ ॥ ಯು ಜ್ಞಾನಬೇಡ । ವಿರತಿಬೇಡ । ನಿಮ್ಮಶರಣರುವೃಟವೆಲಿಗೆವುಗಳತಾಂಬೂಲವಕ್ಕೆ ಮಿಕ್ಕಪ್ರಸಾದವನೆಕರುಣಿಸಿ ಅವರಪಡಗಪಾದರಾಕ್ಷಿಯನೋಡಿರಿ ಇವುರಕ್ಕಯೋಗ್ಯಸ್ಥನಮಾಡಿ ಅವರಕಡೆಯಬಾಗಿಲುಕಾಯುಂತೆಮಾಡಯ್ಯಯೆನ್ನ ಅಖಂಡೇಶ್ವರಾ ॥೪೪॥ ಸೋಹಮೆಂದಡೆಅಂತರಂಗದಗರ್ವ ಶಿವೋಹಂಯೆಂದರೆಬಹಿರಂಗದಹಂಕಾರ। ಈವುಭಯವಳ್ಳಿದ್ದು ದಾಸೋಹವೆಂದಡೆ ಪರಮಪದವು । ಇದಂಕಾರಣವೆನಗೆ ದಾಸೋಹಂಭಾವವನೆ ಕರುಣಿಸೆಬದುಕಿಸಯ್ಯ ಅಖಂಡೇಶ್ವರಾ ॥೪೫॥ ಸದ್ಭಕ್ತರೇಯೆನ್ನ ತಂದೆತಾಯಿಗಳಯ್ಯ । ಸದ್ಭಕ್ತರೇಯೆನ್ನ ಬಂಧುಬಳಗವಯ್ಯ । ಸದ್ಭಕ್ತರು ತಮ್ಮ ವಕ್ಕವಿಕ್ಕದನಿಕ್ಕಿಸುವವರಾಗಿ ಅಖಂಡೇಶ್ವರಾ ನಿಮ್ಮಕಡೆಯ ಬಾಗಿಲುಪಾಯುವದಕ್ಕೆ ಯೋಗ್ಯನಾದೆನಯ್ಯ ॥೪೬॥ ಗುರವೇತಂದೆತಾಯಿಲ್ಲದೆ ಬೇರೆತಂದೆತಾಯಿಗಳಿಲ್ಲಯ್ಯ । ನನಗೆಶಿವಶರಣರೆ ಬಂಧುಬಳಗವಲ್ಲದೆ ಬೇರೆಮತ್ತೊಂದುಬಂಧುಬಳಗವಿಲ್ಲವಯ್ಯಾ । ಯೆನಗೆಶಿವಕುಲವಲ್ಲದೆ । ಬೇರೊಂದುಕುಲವಿಲ್ಲವಯ್ಯಾಯೆನಗೆ ಅಖಂಡೇಶ್ವರನೀವೆನ್ನಕುಲದೈವತವಲ್ಲದೆ । ಬೇರೆಮತ್ತುಕುಲದೈವ ಮನೆದೈವವಿಲ್ಲವಯ್ಯಾಯೆನಗೆ ॥ಅಖಂಡೇಶ್ವರಾ ॥೪೭॥ ಗುರುಕರಜಾತನಾದಿಆಣವಮಲಹೋಯಿತಯ್ಯಾಯೆನಗೆ ಭಕ್ತಜನಬಾಂಧತ್ವವಾಗಿಮಾಯಾಮಲಹೋಯಿತಯ್ಯಯೆನಗೆ । ದ್ರವ್ಯತ್ರೈಲಿಂಗದಾಸೋಹಂ

ಮೊಂದರಿದೆನಾಗಿ । ಕಾರ್ಮಿಕಮಲ।ಹೋಯಿತಯ್ಯಾಯೆನಗೆ । ಇಂತು
ಮಲತ್ರಯಂಗಳು ಹರಿದು ನಿಮ್ಮ ಕರುಣದ ಕಂದ ನಾದನಯ್ಯಾ,
ಅ ॥ ೪೮ ॥ ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂ
ದ್ರನಾಗಲಿ ಆವಜಾತಿಯಲ್ಲಿ ಹುಟ್ಟಿದಾತ ನಾವರು ಆಗಲಿ ಗುರುಕಾ
ರುಣ್ಯವಪಡದು ಅಂಗದಮೇಲೆ ಲಿಂಗವಧರಿಸಿದವನಾಗಲಿ ಆಚಾರ
ಸಂಪನ್ನ ಸತ್ಕ್ರಿಯನಾದ ಮಹಾತ್ಮನೆ ಮೂರುಲೋಕಕ್ಕೆ ಅಧಿ
ಕಾರಿಯು ನೋಡಾ ॥ ಅ ॥ ೪೯ ॥ ಸದ್ಭಕ್ತರಡೆ ಶುದ್ಧ ಸದ್ಭಕ್ತರನು
ಡಿ ಶುದ್ಧ ಸದ್ಭಕ್ತರತನು ಶುದ್ಧ ಸದ್ಭಕ್ತರ ಮನಶುದ್ಧ ಸದ್ಭಕ್ತರ ಭಾ
ವಶುದ್ಧ ಅಖಂ ॥ ೫೦ ॥ ನೀವುವೊಲಿದ ಸದ್ಭಕ್ತರಕಾಯವೆ ಕೈಲಾ
ಸವಯ್ಯಾ । ಮುಕ್ತಿಪಡೆವೆನೆಂದು ಯುಕ್ತಿಗೆಟ್ಟು ಸಕಲತೀರ್ಥಕ್ಷೇ
ತ್ರಗಳಿಗೆ ಯಡೆಯಾಡಿ ತೊಟ್ಟನೆನೊಳಲಿಬಳಲಿ ಬೆಂಡಾಗಲ್ಯಾಕೊ ।
ಒಬ್ಬ ಶಿವಭಕ್ತನ ಅಂಗದಲ್ಲಿ ಎಂಭತ್ತುಕೋಟಿ ಕ್ಷೇತ್ರತೀರ್ಥಂಗ
ಳಿರ್ಪವು ಆತನಕಾಯವೆ ಕೈಲಾಸ ಆತನ ಬಚ್ಚಲಲ್ಲಿ ಅರುವತ್ತಾರು
ಕೋಟಿ ತೀರ್ಥಂಗಳಿರ್ಪವು ಆತನ ಅಂಗದಮೇಲಿರ್ಪ ಲಿಂಗವೆ ಪರ
ಶಿವನಾದಿಯು ತಪ್ಪದು ಇದುಕಾರಣ ಅಂತಪ್ಪ।ಸದ್ಭಕ್ತನಗೃಹವಂ
ಪ್ರೊಕ್ಕು ಆತನ ದರ್ಶನ ಸ್ಪರ್ಶವಾದಾತಂಗೆ ಅನಂತಭವಕೋಟಿ
ಪಾತಕಂಗಳು ಪರಿಹಾರವು ವಪ್ಪವುನೋಡಾ ।ಆತನ ವಕ್ಕಮಿಕ್ಕದ
ಕೊಂಡಾತಂಗೆ ಮುಂದೆ ಮುಕ್ತಿಯಪ್ಪದುನೋಡಾ ॥ ಅ ॥ ೫೧ ॥
ಸ್ನೇಹಸಮರಸ ಮೋಹವಿರಬೇಕು ಪಾದೋದಕ ಪ್ರಸಾದದಲ್ಲಿ
ಸ್ನೇಹಸಮರಸ ಮೋಹವಿರಬೇಕು ಶಿವಭಕ್ತ ಶರಣಜನಂಗಳಲ್ಲಿ
ಇಂತಿವರಲ್ಲಿ ಸ್ನೇಹ ಸರಸಮೋಹವನುಳ್ಳಂಥಾ ಸದ್ಭಕ್ತರತೋರಿಸಿ
ಬದುಕಿಸಯ್ಯಾ ॥ ಅ ॥ ೫೨ ॥ ಹೊನ್ನೆಂನದು ಮೊಂಣಿನದು ಹೆಣ್ಣೆ
ನ್ನದು ತನುವೆಂನದು ಎಂದು ಭಿನ್ನವಿಟ್ಟು ಭಕ್ತಿಯಮಾಡಿ ಬಡ್ಡಿ
ಕಾರನಂತೆ ಮಂದುಕೊಟ್ಟು ಎರಡುಪಡೆವ ಜಡಜೀವಿಗಳ ಭಕ್ತರನಬ
ಹುದೇ ॥ ಅ ॥ ೫೩ ॥ ಅಂಗಳಷ್ಟಸ್ಥಾನ ಸದ್ಭಾವವೆಂಬ ಚತುರ್ವಿಧ

ಭಕ್ತಿಯಿಂದ ಗುರುವಿಂಗೆ ತನುವ ಸವಸಿದಡಿ ಆ ತನುವಿನಲ್ಲಿ ದೀಕ್ಷಾ ಶಿಕ್ಷಾ ಸ್ವಾನುಭವ ಜ್ಞಾನಸ್ವರೂಪನಾದ ಶ್ರೀಗುರುದೇವನು ನೆಲೆಗೊಂಬನು ನೋಡಾ ಮಂತ್ರಜ್ಞಾನ ಧ್ಯಾನ ಜಪಸ್ತೋತ್ರವೆಂಬ ನಾಲ್ಕುತರದ ಭಕ್ತಿಯಿಂದ ಲಿಂಗಕ್ಕೆ ಮನವಸವಸಿದಡೆ ಈ ಮೂನದ ಇಷ್ಟಪ್ರಾಣಭಾವಸ್ವರೂಪವಾದ ಪರಶಿವಲಿಂಗವು ನೆಲೆಗೊಂಬುವದುನೋಡಾ ಅನ್ನವಸ್ತ್ರಾಭರಣಾದಿ ಹದಿನೆಂಟುತರದ ಭಕ್ತಿಯಿಂದ ಜಂಗಮಕ್ಕೆ ಧನವಸವಸಿದಡೆ ಆ ಧನದಲ್ಲಿ ಸ್ವಾಯುಚರಪರಸ್ವರೂಪವಾದ ಮಹಾಘನಜಂಗಮವು ನೆಲೆಗೊಂಬುದುನೋಡಾ ಇಂತೀ ತ್ರಿವಿಧಸಂಪತ್ತು ನಿಮ್ಮಶರಣರಿಗಲ್ಲದೆ ವುಳಿದವರಿಗೆ ಅಳವಡದಯ್ಯಾ ॥ ಅ ॥ ೫೪ ॥ ಹಿಂದಣಜನ್ಮದ ಸಂಸಾರವಮರದು ಮುಂದಣ ಭವಬಂಧನಂಗಳಜರಿದು ಸಂದೇಹಸಂಕಲ್ಪಂಗಳು ಹರಿದು ನಿಮ್ಮ ಅವಿರಳಭಕ್ತಿಯ ಬೆಳಗಿನಲ್ಲಿ ಜೋಲ್ಯಾಡುವ ಮಹಾಮಹಿಮರತೋರಿಸಿ ಬದುಕಿಸಯ್ಯಾ ॥ ಅ ॥ ೫೫ ॥ ಉಪಾದಿಯನಳಿದು ನಿರುಪಾಧಿಯತಿಳಿದು ಸಹಜವೂಟದಲ್ಲಿ ಸುಳಿಸುಳಿದು ಜಾತಿಸೂತಕ ಜನನಸೂತಕ ಪ್ರೇತಸೂತಕ ವುಚ್ಛಿಷಸೂತಕ ರಜಃಸೂತಕವೆಂಬ ಪಂಚಸೂತಕಂಗಳಕಳೆದು ಸದಾಚಾರ ಲಿಂಗಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರಂಗಳ ವಟ್ಟು ಪಂಚಭೂತಗಳ ಪರಿಹರಿಸಿ ಪಂಚಪ್ರಾಣ ವಾಯುಗಳ ಸಂಚಲಗುಣವಳಿದು ಪಂಚೇಂದ್ರಿಯಗಳಲ್ಲಿ ಪಂಚಲಿಂಗ ಪ್ರತಿಷ್ಟಿಸಿ ಪಂಚಬ್ರಹ್ಮದ ಮೂಲವನರಿದು ಮೂಲಲೋರುಕದೊಡೆಯನಲ್ಲಿಮನ ವನಡಗಿರ್ಪ ಮಹಾಶರಣರಪಾದಕ್ಕೆ ನಮೋನಮೋ ಯೆಂಬೆನಯ್ಯಾ ॥ ಅ ॥ ೫೬ ॥ ತಾನೆಗುರುವಾಗಿ ಭಕ್ತಿಯಮಾಡುದಿಪ್ಪನಂ । ತಾನೆಲಿಂಗವಾಗಿ ಲಿಂಗಪೂಜೆಯಮಾಡುತಿಪ್ಪನು ॥ ತಾನೆಜಂಗಮವಾಗಿ ಜಂಗಮಪೂಜೆಯಮಾಡುತಿಪ್ಪನು ತಾನೆ ಪಾದೋದಕ ಪ್ರಸಾದವಾಗಿ ಪಾದೋದಕಪ್ರಸಾದವ ಸೇವನೆಮಾಡುತಿಪ್ಪನು ತಾನೆ ವಿಭೂತಿ ರುದ್ರಾಕ್ಷಿಯಾಗಿ ವಿ

ಭೂತಿ ರುದ್ರಾಕ್ಷಿಯ ಧರಿಸುತಿಪ್ಪನು ತಾನೆ ಮಂತ್ರವಾಗಿ ಮಂತ್ರ
ವ ಜಪಿಸುತಿರ್ಪನು ಇಂತೀ ಅಷ್ಟಾವರಣವೆ ಅಂಗವಾಗಿ ಅಷ್ಟಾವ
ರಣವೆ ಸಂಗವಾಗಿ ಅಷ್ಟಾವರಣವೆ ಸಮರಸವಾಗಿ ಯಿರುವ ಸದ್ಭ
ಕ್ತನು ಸಾಕ್ಷಾತ್ ಪರವಸ್ತುವು ತಾನೆಯಯ್ಯಾ ॥ ಅ ॥ ೫೭ ॥ ಹಾ
ಡುವರೆ ಹಾಡುವೆನಯ್ಯಾ ಶಿವಶರಣ । ಯನ್ನ ಮನವಿದು ನೋಡಿ
ದರೆ ನೋಡುವೆನಯ್ಯಾ ಸದ್ಭಕ್ತರ ಸ್ತ್ರೀಯರ ಯನ್ನ ಹೆತ್ತತಾ
ಯಿಗಳೆಂದು ಬೇಡಿದರೆ ಬೇಡುವೆನಯ್ಯಾ ಯಂನ ಶ್ರೀಗುರುವಿನಲ್ಲಿ
ನಿತ್ಯನಿಜಮೂರ್ತಿಯ ಕೂಡಿದರೆ ಕೂಡುವೆನಯ್ಯಾ ॥ ಅ ॥ ೫೮ ॥
ನಿಮ್ಮಚರಣವ ನೊಡಗೂಡುವ ಅವಿರಳಸಮರಸಭಕ್ತಿಯಲ್ಲಿ ಯ
ನ್ನ ತನುವೆ ಗುರುವಿನಸ್ಥಾನವಯ್ಯಾ ಯನ್ನ ಮನವೆ ಲಿಂಗದಪ್ರಾಣ
ವಯ್ಯಾ ಯೆನ್ನ ಆತ್ಮನೆ ಜಂಗಮದಸ್ಥಾನವಯ್ಯ ಯನ್ನ ಪ್ರಾಣವೆ
ಪ್ರಸಾದಸ್ಥಾನವಯ್ಯಾ ಯೆನ್ನ ಗುರುವೆ ರುದ್ರಾಕ್ಷಿಯ ಸ್ಥಾನವ
ಯ್ಯಾ ಯೆನ್ನ ಜಿಹ್ವೆಯ ಶಿವಮಂತ್ರಸ್ಥಾನವಯ್ಯಾ ಯೆಂನಕಂಗಳೆ
ಲಿಂಗಾಚಾರಸ್ಥಾನವಯ್ಯಾ ಯೆನ್ನ ಶ್ರೋತ್ರವೆ ಶಿವಾಚಾರದ ಸ್ಥಾನ
ವಯ್ಯಾ ಯೆನ್ನ ಹಸ್ತವೆ ಗಣಾಚಾರ ಸ್ಥಾನವಯ್ಯಾ ಯನ್ನ ಚರಣ
ವೆಸದಾಚಾರಸ್ಥಾನವಯ್ಯಾ ಯನ್ನ ಷಡ್ರ್ವತುಗಳೆ ಷಟುಸ್ಥಲವಸ್ಥಾ
ನವಯ್ಯ ಯನ್ನ ಸುಜ್ಞಾನವೆ ಶಿವಾನುಭಾವದ ಸ್ಥಾನವಯ್ಯಾ ಇಂತೀ
ಅಷ್ಟಾವಗಣಪಂಚಾಚಾರ ಷಡುಸ್ಥಳದ ಶಿವಭಾವವನೊಳಕೊಂಡು
ಯನ್ನ ಚಿದ್ಘನವೆ ಮಹಾಕೈಲಾಸವಯ್ಯ॥ಅ॥ ಮಾಡುವಭಕ್ತನು ನೀ
ನೆಮಾಡಿಸಿಕೊಂಡದೇವನು ನೀನೆಯೆಂದರಿದ ಇದುಕಾರಣ॥ಅ॥ ನಿಮ್ಮ
ಫಲಪದವ ಬೇಡಲಿಲ್ಲಾ ನೀವು ವಲಿದುಯೆನಗೆ ಕೊಡಲಿಲ್ಲ ॥ ೬೦ ॥
ತನುವ ನಿಮಗರ್ಪಿಸಿಹ ನೆಂದಡೆ ತನುವಿಲ್ಲವಯ್ಯಾಯನಗೆ ಯನ್ನ
ಮನವ ನಿಮಗರ್ಪಿಸಿಹೆನೆಂದಡೆ ಮನವಿಲ್ಲವಯ್ಯಾಯನಗೆ ಧನವ
ನಿಮಗೆ ಅರ್ಪಿಸಿಹವೆಂದಿಡೆ ಧನವಿಲ್ಲವಯ್ಯಾಯನಗೆ ಅದೇನುಕಾರ

ಣವೆಂದರೆ ನೀವುಗುರುವಾಗಿ ಬಂದುಯೆನ್ನ ತನುವನೊಳಕೊಂಡಿರ್ಪಿರಾಗಿ ಮನವನಿಮಗರ್ಪಿಸಿಹೆನೆಂದಡೆ ಮನವಿಲ್ಲವಯ್ಯಾ ಯನಗೆ ಅದೇನುಕಾರಣವೆಂದರೆ ನೀವು ಲಿಂಗವಾಗಿಬಂದು ಯೆನ್ನಮನವನೊಳಕೊಂಡಿರ್ಪಿರಾಗಿ ಧನವನೆರ್ಪಿಸಿಹೆನೆಂದಡೆ ಧನವಿಲ್ಲವಯ್ಯಾ ಯನಗೆ ಅದೇನುಕಾರಣವೆಂದಡೆ ನೀವುಜಂಗಮವಾಗಿಬಂದು ಯನ್ನಧನವನೊಳಕೊಂಡಿರ್ಪಿರಾಗಿ ಯರುವಕಾರಣ ತನುವೆಗುರು ಮನವೆಲಿಂಗ ಮನವೆ ಜಂಗಮವಾಗಿತ್ತಾಗಿ ನಿಮ್ಮೊಳಗಿರ್ದನಯ್ಯಾ ॥ ಅ ॥೬೧॥ ಮಾಡುವತನುವು ನೀವೇಯಾದಿರಾಗಿ ನೀಡುವಧನವು ನೀವೆಯಾದಿರಾಗಿ ಕೊಡುವಮನವು ನೀವೆಯಾದಿರಾಗಿ ॥ ಅ ॥ ನಾನುಯಿಲ್ಲಾ ನೀನುಯಿಲ್ಲ ಯೇನೇನುಯಿಲ್ಲ ॥ ೬೨ ॥

ತೂರ್ಯನಿರಾಲಂಬ ಮಾಹೇಶ್ವರಸ್ಥಲವು.

ಪರಸ್ತ್ರೀಯರಮುಟ್ಟದಿರಬೇಕು ಪರಧನವನಪಹರಿಸದಿರಬೇಕು ಪರದೈವವ ಪೂಜಿಸದಿರಬೇಕು ಪರಹಿಂಸೆಯಮಾಡದಿರಬೇಕು ಪರಲೋಕ ಫಲಪದವ ಬಯಸದಿರಬೇಕು ಮನವುನಿರ್ಮಲವಾಗಿಇಷ್ಟಲಿಂಗ ನಲ್ಲಿನಿಷ್ಟಬಲಿದಿರಬೇಕುಕಷಕನ್ಮವಕಡೆಗೊದ್ದಿಪ್ಪಾತನೆವೀರಮಾಹೇಶ್ವರನುನೋಡಾ ಅದೆಂತೆಂದರೆ ಶ್ಲೋ॥ ಪರಸ್ತ್ರೀಣಾಂಪರಾರ್ಥಂಚ । ವರ್ಜಿತಾಭಾವಶುದ್ಧಮಾ ಲಿಂಗನಿಷ್ಠಾನಿಯುಕ್ತಾತ್ಮಮಾಹೇಶ್ವರಮಹಾಸ್ಥಳಂ ॥ ಯೆಂಬುದಾಗಿ ಯಿಂತಪ್ಪ ಮಾಹೇಶ್ವರನೆ ಶ್ರೀಪಾದಕ್ಕೆ ನಮೋನಮೋ ಯೆಂಬನಯ್ಯಾ ಅ॥೧॥ ನೈಷ್ಟಿಕಭಾವ ನಂಬುಗೆಯಿಲ್ಲದ ಬಳಿಕ ಯಷ್ಟುವ್ರೋದರೇನು ಯೆಷ್ಟುಕೇಳಿದರೇನು ಯೆಷ್ಟುಜಪವಮಾಡಿದರೇನು ಅದುನಿಷ್ಪಲವಲ್ಲದೆ ದೃಷ್ಟಕ್ಕೆ ಸಂಧಾನವಲ್ಲನೋಡಾ ಇದುಕಾರಣ ನಿಷ್ಟಬಲಿದು ಭಾವತುಂಬಿ ನಂಬುಗೆಯು ಇಂಬುಗೊಂಡು ಮಾಡುವದೇವರಪೂಜೆ ಅದೇನಮ್ಮ ॥ ಅ ॥ ಲಿಂಗದವಲುಮೆ ॥ ೨ ॥ ಹುಸಿಕಳವು ಪರದಾರ ಪಿಶುನಯ್ನಸೆಬಿಟಕುಲೋನೆಚ್ಚು ಮೆಚ್ಚು ಸುಟ್ಟು ಸಚ್ಚಿದಾನಂದ

ಲಿಂಗದಲ್ಲಿ ಮನಮೆಚ್ಚಿಂದಿರ್ದ ಅಚ್ಚ ಮಾಹೇಶ್ವರರತೋರಿಸಿ ಬದು ಕಿಸಯ್ಯಾ ॥ ಅ ॥ ೩ ॥ ನೈಷ್ಟೆನೆಲೆಗೊಳಬೇಕು ಗುರುಭಕ್ತಿಯಮಾ ಡುವಲ್ಲಿ ನೈಷ್ಟೆನೆಲೆಗೊಳಬೇಕು ಲಿಂಗಪೂಜೆಯಮಾಡುವಲ್ಲಿ ನೈಷ್ಟೆನೆ ಲೆಗೊಳಬೇಕು ಜಂಗಮವ ನರ್ಚಿಸುವಲ್ಲಿ ನೈಷ್ಟೆನೆಲೆಗೊಳಬೇಕು ಪಾದೋದಕಪ್ರಸಾದವ ಕೊಂಬುವಲ್ಲಿ ನೈಷ್ಟೆನೆಲೆಗೊಳಬೇಕು ನ ಮ್ಮ ॥ ಅ ॥ ನವಲಿಸುವಲ್ಲಿ ಛಲವಿರಬೇಕು ಭಕ್ತಿಯಮಾಡುವಲ್ಲಿ ಹಿಡಿದುಬಿಡೆನೆಂಬುವ ಛಲವಿರಬೇಕು ನಿತ್ಯನೇಮದಲ್ಲಿ ಹಿಡಿದುಬಿಡೆ ನೆಂಬುವ ಛಲವಿರಬೇಕುನಮ್ಮ ॥ ಅ ॥ ಲಿಂಗವಕೂಡಿ ಅಗಲಬಾರ ದೆಂಬ ನೈಷ್ಟೆಯಲ್ಲಿ ॥ ೫ ॥ ಗುರುಭಕ್ತಿಯಮಾಡಿದ ಬಳಿಕ ಸರ್ವಲ ಘುಣಂಗಳು ಹಿಂಗಿರಬೇಕು ಲಿಂಗಪೂಜೆಯ ಮಾಡಿದಬಳಿಕ ಅಂಗದ ಪ್ರಕೃತಿಗಳು ಹಿಂಗಿರಬೇಕು ಜಂಗಮಾರ್ಚನೆಯ ಮಾಡಿದಬಳಿಕ ಸಂ ಸಾರದಲ್ಲಿಯ ಮೋಹವದೊಲಗಿರಬೇಕು ಪಾದೋದಕ ಪ್ರಸಾದವ ಕೊಂಡಬಳಿಕ ಇಹಪರದ ಭೋಗಮೋಕ್ಷಂಗಳ ಬಯಕೆ ಅರಿತಿರ ಬೇಕು ಇದೇನಂಮ ಅ॥ ಲಿಂಗದಕೂಟವು ॥ ೬ ॥ ಫಲಪದವ ಯಾ ಶೆಯಮಾಡಲಾಗದು ಜಂಗಮಾರ್ಚನೆಯ ಮಾಡಿ ಅದೇನುಕಾರಣ ವೆಂದರೆ ಬಯಕೆಯಭಕ್ತಿಯನ್ನು ಪೂರ್ವಪುರಾತನರು ಮೆಚ್ಚರು ನಮ್ಮ ಅ॥ ದೇವನುಸಂಗಿನ ಭಕ್ತನಲ್ಲನೋಡಾ ॥ ೭ ॥ ನಿತ್ಯಲಿಂಗ ಜಂಗಮಕ್ಕೆ ನಿತ್ಯಪೂಜೆಯಮಾಡಿ ನಿತ್ಯಮುಕ್ತಿಯಪಡೆಯದೆ ಮ ತ್ತತನದಿಂದ ಅನಿತ್ಯಫಲಭೋಗವಪಡೆದು ಮರ್ತ್ಯದಭವಜಾಲದಲ್ಲಿ ಸುತ್ತಿಸುತ್ತಿ ಸುಳಿದುತೊಳಲಿ ಬಳಲುವ ವ್ಯರ್ಥರನೋಡಿ ನಗುತಿರ್ದ ನಯ್ಯಾ ನಮ್ಮ ಅ॥ ೮ ॥ ಮೊಟ್ಟೆಮೊಟ್ಟೆಯಪತ್ರ ಪುಷ್ಪವತಂದು ವಟ್ಟೆವಟ್ಟೆಲಿಂಗವ ಪೂಜಿಸಿದರೇನು ತನುಮನಧನವಕೊಟ್ಟು ತನು ಮಹಿಂಗದನ್ನ ಕಾಹುಸಿಕಳವು ಪರದಾರವ್ಯಾಪಾರದಲ್ಲಿ ಹರಿದಾಡುವ ಮರುಳು ಬುದ್ಧಿಯ ದುರಾಚಾರಿಗಳಿಗೆ ದೂರನಾಗಿಪ್ಪನು ನೋ ಡಾನಮ್ಮ ಅ॥ ೯ ॥ ಶಿವಶಿವಾಯೆನ್ನ ಮನವು ನಿಮ್ಮನೆನೆಯಲೊಲ್ಲ

ದೆ ಅನ್ಯಕ್ಕೆಹರಿವುತಿಪ್ಪುದುನೋಡಾ ಗುರುಚರದಲಿಂಗದ ಸೇವೆಯಂ ಬಡೆ ಹಿಂದುಳಿವುತಿಪ್ಪುದುನೋಡಾ ಅನ್ಯರಒಡವೆ ಯೊಡಹೊನ್ನು ಹೆಣ್ಣು ಮಣ್ಣು ಯೆಂಬವುಗಳ ಮುಂದವರಿದು ನೋಡುತಿರ್ಪುದು ನೋಡಾ ಈ ಮನದವು ಪಟಳವು ಘನವಾಯಿತು ಇಂನೇನುಗತಿ ಯಯ್ಯಾ ಅ|| ೧೦ || ಹೊರಗೆಹೊನ್ನು ಬಿಟ್ಟೆನೆಂದು ನುಡಿಯುತಿರ್ಪ ನಲ್ಲದೆ ಒಳಗೆಬಿಟ್ಟ ನೆಚಿಂತನಲ್ಲವಯ್ಯನಾನು ಹೊರಗೆಹೆಣ್ಣು ಬಿಟ್ಟೆ ನೆಂದು ನುಡಿಯುತಿರ್ಪನಲ್ಲದೆ ಒಳಗೆಬಿಟ್ಟ ನಿಶ್ಚಿಂತನಲ್ಲವಯ್ಯಾ ನಾ ನು ಹೊರಗೆಮಣ್ಣು ಬಿಟ್ಟೆನೆಂದುನುಡಿವನಲ್ಲದೆ ವಳಗೆಬಿಟ್ಟ ನಿಶ್ಚಿಂ ತನಲ್ಲವಯ್ಯನಾನು ಹೊರಗೆಮಣ್ಣು ಬಿಟ್ಟೆನೆಂದು ನುಡಿವನಲ್ಲದೆ ವ ಳಗೆಬಿಟ್ಟ ನಿಶ್ಚಿಂತನಲ್ಲವಯ್ಯನಾನು ಇಂತಪ್ಪ ಏಕಾಂತದ್ರೋಹಿ ಗು ಪ್ತಪಾತಕಂಗೆ ಅಖಂಡೇಶ್ವರನು ವಲಿಯೆಲಿಯೆಂದರೆ ಯೆಂತೊಲಿವ ನುಯನಗೆ || ೧೧ || ಬಾಳೆಎಲೆಯಮೇಲೆ ತುಪ್ಪವತೊಡದಂತೆ ಒ ಪ್ಪವಿಟ್ಟುವಚನವನುಡಿದೆನಲ್ಲದೆ ನಡೆಯಲಿಲ್ಲ ಒಪ್ಪವಿಟುನಡೆಯಲಿಲ್ಲ ವಯ್ಯನಾನು ನುಡಿಹೀನನಡೆತಪ್ಪ ಜಡದೇಹಿ ಕಡುಪಾತಕಗೆವಡೆಯ ಅಖಂಡೇಶ್ವರ ಲಿಂಗವುಸ್ವಪ್ನದಲ್ಲಿ ಸುಳಿಯಲಿಲ್ಲವಯ್ಯಾನೀನು ಅ || || ೧೨ || ದುರ್ಗುಣಿದುರಾಚಾರಿಯಯ್ಯಾನಾನು ದುರ್ಬುದ್ಧಿ ದು ರ್ನೀತಿಯುಳ್ಳವನಯ್ಯನಾನು ದುರಾತ್ಮ ದುಷ್ಕರ್ಮಿಯಯ್ಯಾನಾ ನು ತಿಪ್ಪೆಯಕೆದರಿದಂತೆ ಶತಕೋಟಿ ಕೆಟ್ಟಗುಣದವನಯ್ಯ ಯೆನ್ನ ಲ್ಲಿ ಸದ್ಗುಣನ ನರಸಿದರೇನು ಹುರಳಿಲ್ಲವಯ್ಯಾ ಮನದಲ್ಲಿವಿಕಾರ ಹುಟ್ಟಿ ತನುವುನಂಡಲಿದು ವಿಷಯಾತುರನಾಗಿ ತಲೆಹುಳಿತಶ್ವಾನನಂ ತೆ ದೇಶದೇಶಕ್ಕೆ ಹರಿದಾಡಿದೆನಲ್ಲದೆ ನಿಮ್ಮನರಿವುತ್ತಾ ಚರಿವುತ್ತಾ ಭ ಕ್ತಿಸ್ಥಾನವೈರಾಗ್ಯದಲ್ಲಿ ಸುಳಿಯಲಿಲ್ಲವಯ್ಯ ನಾನು ಅ|| ೧೩ || ಆ ಶೆಯಹಿಡಿದು ಹಲವುದೇಶಕ್ಕೆ ಹರಿದಾಡಿದೆನಲ್ಲದೆ ನಿಮ್ಮನರಿವುತ್ತಾ ಚರಿಯುತ್ತ ಭಕ್ತಿಜ್ಞಾನವೈರಾಗ್ಯದಲ್ಲಿ ಸುಳಿಯಲಿಲ್ಲವಯ್ಯನಾನು ನಿರಾಶೆವಿಡಿದು ನಿಜವಿರಕ್ತನಾಗಿ ಚರಿಸಲಿಲ್ಲವಯ್ಯಾನಾನು ವೇಷಾ

ಡಂಬರದಲ್ಲಿ ಅಧಿಕನೆನಿಸಿ ತಾನೇಕವಚನವಿ ನಡೆಯದೆ ಸಲ್ಲದಿಹಬಾ ಷೆಯಲ್ಲಿ ಅಧಿಕನೆನಸಿ ಲಿಂಗವೆಚ್ಚ ನಡೆಯಲಿಲ್ಲವಯ್ಯ ನಾನು ಮಾತಿ ನಲ್ಲಿ ವಿರಕ್ತನೆಂದು ಠಕ್ಕತನದ ಠವಳಿಕಾರಿಗೆ ಸುಳ್ಳಂನೆನುಡಿದನಲ್ಲದೆ ಮನದಲ್ಲಿ ಸರ್ವಸಂಗಪರಿತ್ಯಾಗಿಯೂದ ಪರಮವಿರಕ್ತತ ನಲ್ಲವ ಯ್ಯನಾನು ಇಂತಪ್ಪ ಹುಸಿಡಂಭದುರ್ಮ್ಮತಿ ಬರಿಕಾಯನಿಗೆ ಅಖಂಡೇ ಶ್ವರನದಂತು ಮಚ್ಚುವನಯನಗೆ ॥ ೧೪ ॥ ಮನದಲ್ಲಿ ಆಶೆವೊಳ ದೋರಿ ಮತ್ತೆಮತ್ತೆ ಬೇಕಂದಲ್ಲಿ ಯನ್ನಮೆನಕಿರಿದಾಯಿ ಲಿಂಗದ ನೆನಹು ಜಂಗಮದಸೇವೆಯಂತೊರೆವು ಅಂಗವಿಕಾರಕ್ಕೆ ಹರಿದಲ್ಲಿ ಯನ್ನ ಮನಕಿರಿದಾಯಿತು ನುಡಿಯಲ್ಲಿಪ್ರಪಾಧಿಕೆ ವೊಳದೋರಿ ಸ ರ್ವರನ್ನು ಕೊಡುಕೊಡುಯಂದು ಬೇಡಿದಲ್ಲಿ ಯನ್ನಮನಕರಿದಾ ಯಿತು ಇಂತೀತ್ರಿಕರಣಶುದ್ಧಿಯಿಲ್ಲದ ಬದ್ಧಪಾಪಿ ಚಾಂಡಾಲದ್ರೋ ಹಿಗೆ ಯಂತೊಲಿವನಯ್ಯಾ ಯನಗೆ ॥ ೧೫ ॥ ಎನ್ನ ತನುವುನಿಮ್ಮ ಶ್ರೀಚರಣವೆ ಪೂಜಿಸಲಿಲ್ಲದೆ ಹಸಿವುತೃಷೆಯಲ್ಲಿ ಹತವಾಗುತಿರ್ಪುದು ನೋಡಾ ಯನ್ನಮನವುನಿಮ್ಮ ದಿವ್ಯನಾಮವನೆನೆಯಲಿಲ್ಲದೆ ಬಿನ ಗುವಿಷಯಕ್ಕೆ ಹರಿದಲ್ಲಿ ಯನ್ನನುಡಿ ಕಿರಿದಾಯಿತು ಇಂತಿರುವುತಿ ರ್ಪುದು ನೋಡಾ ಶಿವಶಿವಾ ಈ ತನುಮನ ಧನಗಳ ದುರ್ಗುಣ ಧೂರ್ತನೆಯ ನೇನೆಂಬೆನಯ್ಯಾ ಹಂದೆಹಣಿಕಿವಿಷಯಕ್ಕೆ ನೆನಸಿಹಳ ಗೇರಿಯ ಹೋಗುವಂತೆ ಪ್ರಪಂಚದೊಳು ಓಡ್ಯಾಡುತಿರ್ಪುದಯ್ಯಾ ಯೆನ್ನದುರ್ಗುಣವು ಅ॥ ೧೬ ॥ ತನುವನಿಮಗೊಪ್ಪಿಸಿ ತನುಶುದ್ಧ ವಾಗಿರಲರಿಯದಯ್ಯಾ ನಾನುಧನವನಿಮಗೊಪ್ಪಿಸಿ ಮನಶುದ್ಧವಾಗ ರಲರಿಯನಯ್ಯಾ ನಾನು ಈತನುಮನಧನದಲ್ಲಿ ಶುದ್ಧವಿಲ್ಲದಪ್ರಪಂಚ ಡಾಂಬೀಕನನಾದೆನಯ್ಯಾ ನಖಂಡೇಶ್ವರಾ ॥೧೭॥ತನುವುಕೊಟ್ಟುನಾ ನಿಂಮವಲಿಸೇನೆಂದರೆ ಆಭಾವತಿಳಿಯದೆ ಮನದಕೊಟ್ಟು ನಿಂಮವ ಲಿಸೇನೆಂದೊಡೆ ಆಭಾವಯನಗೆತಿಳಿಯದು ಧನವಕೊಟ್ಟುನಿಮ್ಮ

ನೋಲಿಸೇನೆಂದೊಡೆ ಆಭಾವಯನಗೆತಿಳಿಯದು ಸತಿಯಿದ್ದಮನಿಗೆ ಪತಿಯೊಲಿದು ಬರುವಂತೆನೀನೆವಲಿದು ಬಂದುಯನ್ನ ವ ತನುಮನ ಧಲ್ಲಿ ಭರಿತನಾಗಯ್ಯಾದೇವಾ ಅಖಂ ॥ ೧೮ ॥ ಸತ್ತುಹುಟ್ಟುವನಲ್ಲ ವಯ್ಯನೋಡಾ ಮಹೇಶ್ವರನು ಹುಟ್ಟಿಸಾವನಲ್ಲನೋಡಾ ಮಹೇ ಶ್ವರನು ಈಲೋಕದಬಯಕೆಯ ಬಯಸುವನಲ್ಲನೋಡಾ ಮಹೇ ಶ್ವರನು ಪರಲೋಕವ ಮೋಕ್ಷವನೆನಿಸುವನಲ್ಲನೋಡಾ ಮಹೇಶ್ವ ರ ಇಹಪರವಹೆದ್ದದ ಧೀರನು ಹಿಂದುಮುಂದೆಂಬ ದ್ವಂದ್ವಕರ್ಮಂಗ ಳವಿೂರಿದ ವೀರಮಹೇಶ್ವರಂಗೆ ನವೋನವೋಯೆಂಬೆನಯ್ಯಾ ಅ॥ ॥ ೧೯ ॥ ನುಡಿಯಲ್ಲಿಯುರಡುನುಡಿ ನಡೆಯಲ್ಲಿಯುರಡುನಡೆ ನುಡಿದಂ ತೆನಡೆವಿಸ್ತರಿಸಿ ನಡಿದಂತೆನುಡಿದಂತೆ ನಪಿವಗುರಲಿಂಗ ಜಂಗಮದ ಸೋಹವನು ಬಿಡುವನ ಹೊನ್ನುಹೆಂಣುಯೆಂಬ ತ್ರಿವಿಧವಲದಾಶೆ ಇಂತಪ್ಪ ವೀರಮಹೇಶ್ವರನ ನಾನೇನನೆಂಬೆನಯ್ಯಾ ಅ॥ ೨೦ ॥ ಹಿಡಿ ದುದ ಬಿಡವನಲ್ಲ ಶರಣಾಬಿಟ್ಟುದ ಹಿಡಿವನಲ್ಲಶರಣಾ ನಡುಮಧ್ಯದಲ್ಲಿ ಯೆಡರುಬಡತನ ಕಂಟಕಂಗಳು ಬಂದರೆಕಡುದುಃಖಿಯಾಗಿ ಬಳಲುವ ನಲ್ಲ ಅಡಿಗಡಿಗೆಲಿಂಗಪೂಜೆ ಅಡಿಗಡಿಗೆ ಜಂಗಮದಸೋಹವ ಮರವ ನಲ್ಲ ಇದುಕಾರಣ ಅ॥ ನಿಮ್ಮಮಹೇಶ್ವರನಚರಿತ್ರವು ಇಹಪರಲೋಕ ದಲ್ಲಿ॥ಪರಧನಪರಸ್ತ್ರಿಯರಬಿಟ್ಟರೆ ।ಗುರುವುಲಿಂಗವುಸಾಧ್ಯವುನೋ ಡಾ ॥ ಇಹಪರದಭೋಗಮೋಕ್ಷದ । ಬಯಕೆಯಬಿಟ್ಟರೆ ಚಲಶೇ ಷವುಸಾಧ್ಯವುನೋಡಾ । ಕರಣಾದಿಗುಣಂಗಳಿಗೆ ಹರಿಯೆದಿರ್ದಡೆ ಅರವುಸಾಧ್ಯವುನೋಡಾ ॥ ತಾನಿವಿಭೆಯವನಳಿದಡೆ । ನಿಜವುಸಾ ಧ್ಯವುನೋಡಾ ಅಖಂಡೇಶ್ವರಾ ॥೨೧॥ ಮಾತಿನಲಿಕರ್ಕಶವುನದಲ್ಲಿ ಘಾತಕತನವುಳ್ಳವನ ಕನಿಷ್ಟನೆಂಬರು ಮಾತಿನಲ್ಲಿಲೀಲೆ ॥ ಮನೆದಲ್ಲಿ ಕಕ್ತರೆವುಳ್ಳವನ ಮಧ್ಯಮನೆಂಬರು । ಮಾತಿನಲ್ಲಿಮೃದು । ಮನದ ಲ್ಲಿಪ್ರೀತಿಯುಳ್ಳವನು ವುತ್ತಮನೆಂಬರನೋಡಾ । ಜಗದವರುಮಾತಿ ನಲ್ಲಿಮಂತ್ರ ಮನದಲ್ಲಿ ಮಹಾನುಭವ । ಆತ್ಮದಲ್ಲಿ ಖ್ಯಾತೆಬೆಳಗುತಿ

ರ್ಪದಾಗಿ । ವುತ್ತಮನಲ್ಲಿ ಮಧ್ಯಮನಲ್ಲಿ ಕನಿಷ್ಟನಲ್ಲಿನೋಡಾ ॥ಅ॥ ನಿಮ್ಮಶರಣರು ॥೨೩॥ ತಾನುವಳ್ಳಿಯವನಾದರೆ ತನಗೆಯೂವಳ್ಳಿಯವನಾಗಿರ್ಪರು । ತಾಹೀನನಾದರೆ ತನಗೆಸರ್ವರು ಹೀನರಾಗಿರ್ಪರು ತಾನುವಳ್ಳಿಯವನಾಗಿ ತನಗೆಸರ್ವರು ಹೀನನಾದರೆ ಅದುತನ್ನ ಪೂರ್ವದಕರ್ಮ ತಾಹೀನನಾಗಿ ತನಗೆಸರ್ವರುವಳ್ಳಿಯವರಾದರೆ ಅದು ತನ್ನದೈವದಬಲುವುನೋಡಾ ॥ಅಖ ೨೪ ॥ ಕೂತ್ತಿಗೆವಡತೆಯೆಬಲವಯ್ಯಾ । ಬಡವಗೆಬಲ್ಲಿದನಬಲವಯ್ಯಾ ಆಳಿಗೆ ಅರಸನಬಲಯ್ಯಾ । ನನಗೆ ಗುರುಲಿಂಗಜಂಗಮುದಬಲವಯ್ಯಾ ॥ಅಖ॥ ೨೫ ॥ ಕಾಯವ ದಂಡಿಸಿ ಕಂಡಕ-ಡಕ್ಷೇತ್ರಗಳಿಗೆಹೋಗಿ ತೊಳಲಿಬಳಲಿದರಿಲ್ಲ । ಜಪತಪಹೋಮಸೇವಾನಿತ್ಯಂಗಳ ಮಾಡಿದರಿಲ್ಲ ಅಶನವ್ಯಶನ ವಿಷಯ ವಿಕಾರಂಗಳತೊರದರುಯಿಲ್ಲ ॥ಅಖ॥ ನೀವುವಲಿದುಸಲಹದನಕಾಯೆನುಮಾಡಿದಡೇನು ಫಲವಿಲ್ಲವಯ್ಯಾ ॥೨೬॥ ಕನಕಕಾಮಿನಿಭೂಮಿಗಾಗಿ ಹೊಡದಾಡಿಕಟ್ಟಿತು ಜಗವೆಲ್ಲಾಯಿದುಡುಕೇಳಿನೀನ್ಯಾತಕ್ಕೆ ಇಚ್ಛೈಸುವೆಯಲಿ । ಹುಚ್ಚುಮನವೆ । ಹಗಲುಕಂಡಕಮರಿಯಾಯಿರಳುಮರಿಯಲ್ಯಾಕೆ । ಬೀಳುವರೆಯೆಲೆಮರುಳುಮನವೆ । ಕತ್ತುಬೇಡನಿನಗೊಂದುಪಾಯವಹೇಳುವೆಕೇಳು । ಯಲೆಮನವೆ ಜಗದಲಿಂಗಭೋಗವನು ಹೊಗಡಜಗದೀಶ ಯಖಂಡೇಶ್ವರನನೆರೆ ನಂಬಿದೆಯೂಪರೆನಿನಗೆ ಜನನಮರಣಂಗಳು ವಿಃಹಿತವಾಗಿ ಪರಮಪದವು ದೊರಕೊಂಬುವದುನೋಡಾ ಯೆಲೆಮನವೆ ॥೨೭॥ ಅಂದೊಬ್ಬದೇವ। ಇಂದೊಬ್ಬದೇವನೆಂಬಸಂದೇಹಗೊಳಬೇಡಯೆಲೆಮನವೆ । ಅಂದುಕೈಲಾಸದಲ್ಲಿ ಮನುಮುನಿದೇವದಾನವರಿಂದನಾಲವಕೊಂಬದೇವ ಇಂದುಯನ್ನಕರಸ್ಥಲದಲ್ಲಿಯಿದ್ದಾನೆ । ಇಲ್ಲಿಯನೋಡುಯಲೆಮನವೆ । ಅಂದುಅರವತ್ತುಮೂರು ಪುರಾತನರಿಗೊಲಿದು ಶಂಭುಪುರಕೊಯಿದ ದೇವ ಯಿಂದುಯನ್ನಕರಸ್ಥಲದಲ್ಲಿಖದಾನೆ। ಯಿಲ್ಲಿಯೆನೋಡುಯಲೆಮನವೆ ಅಂದು ಬಸವಣ್ಣಮೊದಲಾದ ಅಸಂಖ್ಯಾತಮಹಾಪ್ರಮಥ

ಗಣಂಗಳತನ್ನೊಳಗೆ ಗರ್ಭೀಕರಿಸಿಕೊಂಡದೇವ ಯಿಂದೆಂನಕರಸ್ಥಳ
ದಲ್ಲಿಯಿದ್ದಾನೆ ನೋಡುಯಲಿವುನವೆ । ಯನ್ನಕರಸ್ಥಲದಲ್ಲಿ ಮೂ
ರ್ತಿಗೊಂಡು ಬೆಸಗುವಪರಶಿವನ ನಂಬಿನಿಶ್ಚೈಸಿಕೊಂಡರೆ । ದೇವ
ನಿಂದಲಾದನವ್ಮ ॥ಅಖ॥ ಲಿಂಗದಲ್ಲಿನಿಂದಾಬಟ್ಟು ಸುಖಿಗಳ್ಯಾರೂ
ಯಿಲ್ಲ ಕಾಣಾಯಲಿವುನವೆ ॥೨೮॥ ನೋಡಕಾರದುಪರಸತಿಯುರ ।
ಮೂಡಲಾರದುಸುಗುಣವಿಲ್ಲದವರಿಗೆ ವುಪಚಾರವ ಬೇಡಬಾರದುಸ
ದ್ಭಕ್ತರಲ್ಲದವರಂನ ಹಾಡಬಾರದುಶಿವನಲ್ಲದನ್ಯದೈವಂಗಳ । ಅದೇ
ನುಕಾರಣವೆಂದರೆವುಂದೆಭವಬಂಧನ ತೊಡಕ್ಕುಂಡಾದಕಾರಣ ॥ಅ
ನಿಂವ್ಮನಲ್ಲದೆ ಅನ್ಯವನರಿಯುದಂತೆ ಮೂಡಯ್ಯಾ ನಿಂವುಬೇಡಿಕೊಂ
ಬೆನು ॥೨೯॥ ನೋಟಭಂಗಪರಸತಿಯುರ । ಬ್ಯಾಟಭಂಗಪರಸತಿಯು
ರ ಕೂಟಭಂಗಪರಸತಿಯುರ । ಅದೇನುಕಾರಣವೆಂದರೆ । ವುಂದಿನ
ರಿಯುದೆಕೆಟ್ಟರು । ಕೀಚಕರಾವಣ । ದೇವೇಂದ್ರರು । ಯಿನ್ನುಬಯು
ಸುವವರಿಗೆ ಅದೇವಿಧಿನೋಡಾ ॥ಅಖ॥ ೩೦ ॥ ಗುರುವಚನವ ಪ್ರ
ಮೂಣದಿಂದ ಹಿಡಿದವ್ರತವೇ ಮಂಗಳಕಡೆತನಕಾ ಬಿಡದಿರಬೇಕು ।
ಆಣವಮಲವೂಯೂಮಲಕಾರ್ಮಿಕ ಕಮಲವೆಂಬ ಮಲತ್ರಯಂಗ
ಳಬಲೆಯು ಹರಿಯುಬೇಕು । ಅರುಹು ಆಚಾರಸತ್ರಿಯೂ ಸಂಪನ್ನ
ನಾಗಿರಬೇಕು । ಇಂತೀಮುರ್ಮವನರಿಯುದೆ । ದೇವಭಕ್ತರೆನಿಸಿ
ಕೊಂಬಭವಪಾತಕರ ಯುನಗೊವ್ಮೆತೊರದಿರೆಯ್ಯಾ ॥ಅ॥ ೩೧ ॥
ನಿವ್ಮನೋಡಿನೋಡಿಯೆನ್ನ ಕಂಗಳುದಣಿಯುವಯ್ಯಾ । ನಿವ್ಮಹಾ
ಡಿಹಾಡಿಯುನ್ನ ಜಿಹ್ವೆದಣಿಯುದಯ್ಯಾ । ನಿವ್ಮಪೂಜೆಯುಮೂಡಿಮೂ
ಡಿ ಯುನ್ನಕೈಗಳುದಣಿಯುವಯ್ಯಾ ॥ಅಖ॥ ೩೨ ॥ ಯುನ್ನಜನನಮ
ರಣಂಗಳು ಜಾರಿಹೋದವಯ್ಯಾ ನಿವ್ಮನೆನಹಿನಬಲದಿಂದ ಯುನ್ನ
ಕಾಲಾಕಲ್ಪಿತಗಳು ಕರಗಿಹೋದವಯ್ಯಾ । ನಿವ್ಮನೆನಹಿನಬಲದಿಂದ
ಯುನ್ನಪೂರ್ಣಪಾಪಗಳು ಪಲ್ಲಟವಾಗಿಹೋದವಯ್ಯಾ ನಿವ್ಮನೆನ
ಹಿನಬಲದಿಂದ। ಯುಂನಪಂಚೇಂದ್ರಿಯು ಸಪ್ತವ್ಯಸನಂಗಳೆಂಬ ಪರ್ವಾ

ಶ್ರವುಕುಲ । ಗೋತ್ರಂಗಳೆಂಬತನ್ನ ಪೂರ್ವಾಶ್ರಯದಪದ್ಧತೆಯು ಮರೆಯೊದಿತುಯಿಂದಿಗೆಬೇಕು ನಾಳಿಗೆಬೇಕೆಂಬಲಿಶೆಯಕಳೆಯಬೇಕು । ಅಘಂಗಳೆಲ್ಲಾನ ನಷ್ಟವಾದವಯ್ಯಾ ನಿಮ್ಮನೆನಹಿನಬಲದಿಂದ। ಯೆನ್ನತನುಕರಣೇಂದ್ರಿಯಂಗಳೆಲ್ಲಾ ತರಹರವಾದಚರಿದಾದವಯ್ಯಾ ನಿಮ್ಮನೆನಹಿನಬಲದಿಂದಯ ॥ ಯೆನ್ನ ಮನಃಪ್ರಾಣಭಾವಂಗಳೆಲ್ಲಾ। ವಯ್ಯಾ ನಿಮ್ಮನೆನಹಿನಬಲದಿಂದ ಯನ್ನ ಕರಕಮಲಮಧ್ಯದಲ್ಲಿ ಪರಮಶಿವಲಿಂಗತುಂಬಿ । ಆಲಿಂಗಮಧ್ಯದಲ್ಲಿ ಕಂಗಳುತುಂಬಿ ಅಕಂಗಳಮಧ್ಯಮನವುತುಂಬಿ । ಆಮನದಮಧ್ಯದಲ್ಲಿ ಭಾವವುತುಂಬಿ ಪರಶಿವನಾಗಿದ್ದೆನಯ್ಯಾ ನಿಮ್ಮೊಳಗೆನಾನು ॥ಅಖ॥ ೩೪ ॥ ಪ್ರಾಣಲಿಂಗವನುಂಗಿತೊ ಲಿಂಗವುಪ್ರಾಣವನುಂಗಿತೊ ಯೆಂದರಿಯನಯ್ಯಾ । ಭಾವವುಲಿಂಗದಲ್ಲಿ ತುಂಬಿತೊಲಿಂಗವುಭಾವದಲ್ಲಿ ತುಂಬಿತೊಯೆಂದರಿಯನಯ್ಯಾ । ಮನವುಲಿಂಗದಲ್ಲಿ ಮುಳಿಗಿತೊ । ಲಿಂಗವುಮನದಲ್ಲಿ ಮುಳಿಗಿತೋ। ಯೆಂದರಿಯನಯ್ಯಾ ॥ಅಖ॥ ನಿಮ್ಮಕೊಡುವವಿಕಳಾವಸ್ಥೆಯಲ್ಲಿ ಯೇನೇನುಅರಿಯನಯ್ಯಾ ॥೩೫॥ ಘನತರಯಿಷ್ಟಲಿಂಗದಲ್ಲಿ ಅನಿಮಿಷದೃಷ್ಟಿಬಲಿದುಮನಕರಗಿ ತನುವುಬ್ಬಿ ಹೃದಯಕಮಲಪಸರಿಸಿಸರ್ವಾಂಗಳಲ್ಲಿ ಪರಿಣಾಮಜಲವುಕ್ಕಿ ಹೊರಸೂಸುತ್ತಾ ಪರಮಕಾಷ್ಟಯಂತೆ । ಪರಬ್ರಹ್ಮಲಿಂಗದಲ್ಲಿ ಬೆರದು । ಪರವಶಗೊಂಡಿರ್ಪ ಮಹಾಶರಣಗತೋರಿಸಿ ಬದುಕಿಸಯ್ಯಾ ಯನ್ನಅಖಂಡೇಶ್ವರಾ ॥೩೬॥ ಬೇಕೆಂಬುವನಲ್ಲವಯ್ಯಾ ನಿಂಮಶರಣ । ಬಾಡೆಂಬುವನಲ್ಲವಯ್ಯಾ ನಿಂಮಶರಣ। ಲೋಕದನಡತೆಯಂತೆ ನಡಿಯನಯ್ಯಾ ನಿಮ್ಮಶರಣ । ಲೋಕದನುಡಿಯಂತೆ ನುಡಿಯನಯ್ಯಾ ನಿಮ್ಮಶರಣ ಕಾಕುನಟಕುಟಿಲಕಹಕವ್ಯಾಪಾರವ ಹೊದ್ದನಯ್ಯಾ ನಿಮ್ಮಶರಣ ಏಕಲಿಂಗನಿಷ್ಟಾಪರನಾಗೆ ಆವಾವ ಪ್ರಪಂಚವನರಿಯನಯ್ಯಾ ನಿಂಮಶರಣ ॥ಅಖ॥ ೩೭ ॥ ನಾನಾವರ್ಣದಕಾಷ್ಟವೆಸುಟ್ಟಲ್ಲಿ ಏಕವರ್ಣದಬೂದಿಯಪ್ಪುದಲ್ಲದೆ । ಅಲ್ಲಿಕಾಷ್ಟದಕುಹವುಂಟೆ । ತೊಟ್ಟುಬಿಟ್ಟ

ಹಣುಮರಳಿತೊಟ್ಟಹತ್ತೆಬಲ್ಲದೇನಯ್ಯಾ । ಕಾಷ್ಟಜನ್ಮದಲ್ಲಿ ಹುಟ್ಟಿದವನಾದರುಳಗಲಿ । ನೆಟ್ಟನೆಶ್ರೀಗುರುಕಾರುಣ್ಯವಪಡದು । ಇಷ್ಟಲಿಂಗಸಂಬಂಧಿಯಾಗಿ ಆಚಾರಕ್ರಿಯಾಸಂಪನ್ನನಾದ ಶರಣರ ಪೂರ್ವಜಾತಿನೆಂತೆಂದು ದೂಷಿಸುವ ಪಾತಕರಬಾಯಲ್ಲಿ । ಬಾಲಹುಳಸುರಿಯದೆ ಮಾಣ್ಬವೇಹೇಳಾ ॥ಅಖ॥ ೩೮ ॥ ನೀರುಗಟ್ಟಿಗೊಂಡುಮುತ್ತಪ್ಪುದಲ್ಲದೆ । ಮುತ್ತುನೀರಪ್ಪುದೇನಯ್ಯಾ । ಹಾಲುಹೆಪ್ಪುಗೊಂಡುತುಪ್ಪಳಗುವದಲ್ಲದೆ । ತಪ್ಪಹಾಲಪ್ಪುದೇನಯ್ಯಾ ಹೀನಜಾತಿಯಲ್ಲಿ ಜನಿಸಿದನರನುಗುರುವಿನಕಾರುಣ್ಯದಿಂದ । ಶಿವಜಾತಾಭರಣನಾದಬಳಿಕಾ । ಮರಳಿನರನಪ್ಪನೇನಯ್ಯಾ ॥ಅಖ॥ ೩೯ ॥ ಜಾತಿಪೂರ್ವಾಶ್ರಯಂಗಳಕಳದು । ಸೂತಕಪಾತಕಂಗಳನರಿದು । ಅಂಗತ್ರಯಗಳಲ್ಲಿಮುಸುಕಿರ್ದ ಆಜ್ಞಾನತಾಮಸವಜರಿದು । ಅಂಗತ್ರಯಂಗಳಸಂಗಸಮರಸವನರಿದಶರಣಂಗೆ ಉತ್ಪತ್ಯಸ್ಥಿತಿಪ್ರಳಯಂಗಳಲ್ಲಿನೋಡಾ। ಅದೇನುಕಾರಣವೆಂದರೆ । ಇಷ್ಟಲಿಂಗದಲ್ಲಿವುತ್ಪತ್ಯ । ಪ್ರಾಣಲಿಂಗದಲ್ಲಿ ರಕ್ಷಣ್ಯ । ಭಾವಲಿಂಗದಲ್ಲಿ ಬಯಲನೆಯಿಂದಶರಣಂಗೆ । ಹುಟ್ಟುಹೊಂದುಗಳುನಷ್ಟವಾದವಯ್ಯಾ ॥ಅಖ॥ ಯೆನ್ನಜನನಸೂತಕಹೋಯಿತು ಶ್ರೀಗುರುವಿನಪ್ಪಣೆಯಲ್ಲಿ । ಪಾದಪದ್ಮದಲ್ಲಿ ಜನಿಸಿದವನಾಗಿ ಯೆಂನಜಾತಿಸೂತಕಹೋಯಿತು । ಆಚಾರಲಿಂಗಸಂಬಂಧದಿಂದ ಯೆನ್ನಕುಲಸೂತಕಹೋಯಿತು । ಶಿವನಲ್ಲಿವೆ ಅನ್ಯವನರಯನಾಗಿಯೆನ್ನಛಲಸೂತಕಹೋಯಿತು। ಯೆನ್ನಕೈಯಸೂತಕಹೋಯಿತಯ್ಯಾ ನಿಮ್ಮಪೂಜಿಸಿ । ಯನ್ನಕಿವಿಗಳ ಸೂತಕಹೋಯಿತಯ್ಯಾ ನಿಮ್ಮಕೀರ್ತಿನೆಗಳಕೇಳಿಕೇಳಿ ಎನ್ನಜಿಹ್ವೆಯ ಸೂತಕಹೋಯಿತಯ್ಯಾ ನಿಮ್ಮಪ್ರಸಾದವಸವಿದು । ನೆಂತಿಸರ್ವಸೂತಕಗಳ ಹರಿಹರಿದು ಪೂರ್ವಕಲ್ಪಿತಗಳವಿಾರಿ ನಿಂನೊಳಗೆ ನಿಶ್ಚಿಂತನಿಜವಾಸಿಯಾಗಿದ್ದೇನಯ್ಯಾ ॥ಅಖ॥ ೪೧ ॥ ಅಚಾರವಿಚಾರವೆಂಬುದರಿಯದೆ ಅಂತರಂಗಬಹಿರಂಗವೆಂದರಿಯರು ಸತ್ಕ್ರಿಯಾಸಮ್ಯಜ್ಞಾನವೆಂದರಿಯರು ಕಾಯಜೀವದಕ

ರ್ಮಕತ್ತಲೆಯಲ್ಲಿ ಬಿದ್ದಕಾರಣ । ಮದನಕರ್ಕಶದಿಂದ ಹೊಡದಾಡಿ ಹೊತ್ತುಗಳೆದು ಹೊಲಬುತಪ್ಪಿಸತ್ತುಹೋಗುವ ವ್ಯರ್ಥಜೀವಿಗಳ ಭಕ್ತಮಹೇಶ್ವರರೆಂದಡೆ ಭವಹಿಂಗದಯ್ಯಾ ॥ಅಖ॥ ೪೦ ॥ ನುಡಿಯನುಡಿಯಲಾಗದು ನಮ್ಮಯನುಡಿಯಲ್ಲದವರೊಡನೆ । ನುಡಿಯಲಾಗದು ನುಡಿಯಲಾಗದು ನಮ್ಮನಡೆಯಿಲ್ಲದವರರೊಡನೆ । ನುಡಿಯಲಾಗದು ನುಡಿಯಲಾಗದು । ದಯೆಗುಣವಿಲ್ಲದವರೊಡನೆ । ನುಡಿಯಲಾಗದು ನುಡಿಯಲಾಗದು ಭಕ್ತಿಯಿಲ್ಲದವರೊಡನೆ ನುಡಿಯಲಾಗದು ನುಡಿಯಲಾಗದು । ಸ್ವಯಜ್ಞಾನವಿಲ್ಲದವರೊಡನೆ ಶಿವಾನುಭಾವ । ಅದೇನುಕಾರಣವೆಂದರೆ । ತನ್ನ ಅರುಹಿಂಗೆಹಾನಿ । ಮಹಾಪರಿಣಾಮುಕೆಡುವದು । ಇದುಕಾರಣಕಡುಪಾತಕ ಜಡಜೀವಿಗಳೊಡನೆ ಲಕ್ಷಕೊಂದು ಕೋಟಿಗೊಂದುವ್ಯಾಳ್ಯವಾದರು ನುಡಿಯಲಾಗದಯ್ಯಾ ॥ಅಖ॥ ೪೧ ॥ ಇಷ್ಟಲಿಂಗ ಪ್ರಾಣಲಿಂಗವೆಂದರಿಯದೆ ಭಿನ್ನವಿಟ್ಟ ಮಡಿದಭ್ರಾಂತರಮಾತುಕೇಳಲಾಗದೆಯ್ಯಾ । ಅದೇನು ಕಾರಣವೆಂದಡೆ । ತಿಳಿದುಪ್ಪಗಟ್ಟಿಗೊಂಡು ಹೆತ್ತುಪ್ಪವಾದಂತೆ । ನಿರಾಕಾರಪರಬ್ರಹ್ಮವಸಾಕಾರಗೊಳಿಸಿ ಶ್ರೀಗುರುಸ್ವಾಮಿ ಕರಸ್ಥಳಕ್ಕೆ ಇಷ್ಟಲಿಂಗವೆಂದು ಹೇಳಿಕೊಟ್ಟಬಳಿಕ । ಆಲಿಂಗದಲ್ಲಿನಿಷ್ಟಬಲಿಯಲು । ಬಾಹ್ಯಕರಣಂಗಳು ತರಹವಾಗಿ ಆಲಿಂಗದಚಿತ್ಕಳೆದೃಷ್ಟಿಸೂತ್ರದಿಂದ । ಅಂತರಂಗಕ್ಕೆ ವೇದಿಸಿಪ್ರಾಣಲಿಂಗವೆನಿಸುವದು । ಸ್ಫಟಿಕದಘಟದಲ್ಲಿರಿಸಿದ ಜ್ಯೋತಿಯಂತೆ ಹೊರವಳಗೆತೋರುತಿರ್ಪುದು ಒಂದೇಲಿಂಗವೆಂದರಿಯದೆ ಭ್ರಾಂತಜ್ಞಾನದಿಂದ । ಅನರಂಗದಲ್ಲೆ ಬೇರೆಪ್ರಾಣಲಿಂಗವುಂಟೆಂದು ಇಷ್ಟಲಿಂಗದಲ್ಲಿ ಅವೇಶ್ವಾಸವಮಾಡುವ । ಭ್ರಷ್ಟಭವಿಗಳಮುಖವನೋಡಲಾಗದಯ್ಯಾ ॥ಅಖ॥ ಕಾಷ್ಟದಲ್ಲಿಅಗ್ನಿಪುಂಟೆಂದಡೆ । ಆಕಾಷ್ಟದರೂಪಸುಡಲರಿಯದುನೋಡಾ । ಅದೇಹಮಧ್ಯದಲ್ಲಿಪರವಸ್ತುವುಂಟೆಂದು ಆದೇಹದಜಡಭಾವವುಪರಿಯದು ನೋಡಾ । ಅದೆಂತೆಂದಡೆ । ಕಾಷ್ಟದಮಧ್ಯದಲ್ಲಿ ಅಡಗಿರ್ದಮಂದಾ

ಗ್ನಿ ಯಮಥನದಿಂದೆ ಬಹಿಷ್ಕರಿಸಿ ಆಕಾಷ್ಟವನುಡುವಂತೆ ದೇಹಮ
ಧ್ಯದಲ್ಯಡಗಿರ್ದ ಪರವಸ್ತುವನ್ನು. ಶ್ರೀಗುರುಸ್ವಾಮಿ ತಂನಕ್ರಿಯೂ
ಶಕ್ತಿಯ ಮಥನದಿಂದ । ಬಹಿಷ್ಕರಿಸಿ ಬಹಿರಂಗದಮೇಲೆ ಇಷ್ಟಲಿಂಗ
ವಾಗಿಧರಿಸಲು । ಇಷ್ಟಲಿಂಗಸತ್ರಿಯೂಪೂಜೆಯಿಂದ ಸ್ಥೂಲಾಂಗದ
ಕರ್ಮಗುಣಧರ್ಮಂಗಳೆಲ್ಲಾ ನಷ್ಟವಾಗಿ ಆಲಿಂಗಚಿತ್ಕಳೆಯುಸರ್ವಾಂ
ಗಕ್ಕೆವೇದಿಸಿ । ಅಂತರಂಗವಂದಾಗಿ ಆತ್ಮನಅಹಂಮಮತೆಕೆಟ್ಟು । ಶಿ
ಖಿಕಪೂರಸಂಯೋಗದಂತೆ ಪರತತ್ವವನೊಡಗೂಡುವ ಮಹಾತ್ಮಂ
ಗೆನಿರವಯವನಿರುವದಲ್ಲಿಸೆ । ಬರಿದೆವಣಾವಾಗ್ವಾದದ್ವೈತದಿಂದೆಅ
ಹಂಪರಬ್ರಹ್ಮವೆಂದುನುಡಿಯುದೇಹ ಪ್ರಾಣಂಗಳಲ್ಲಿ ಪ್ರಕೃತಿವರ್ತ
ನೆಯಲ್ಲಿ ನಡೆದುನಿತ್ಯರಾದವೆಂಬುವದೆಲಾ । ಭವಾಂಬುಧಿಯಲ್ಲಿಬಿದ್ದು
ಮುಳುಗುತ್ತೇಳುತ್ತಾ ತಡಿಯಸೇರಲರಿಯದೆ ಕೆಟ್ಟುಹೊದರುನೋ
ಡಾ ಅಖಂಡೇಶ್ವರಾ ॥ ಪರಾತ್ಪರವಾದ ಪರಶಿವ ಪರಬ್ರಂಹವನೋ
ಡಗೂಡುವ । ಅವಿರಳಸಮರಸ ಭಕ್ತಿಯಿಲ್ಲದೆ । ನಾನುಬ್ರಂಹ ತಾ
ನುಬ್ರಂಹವೆಂದು ಪರಬ್ರಹ್ಮದನಿಲವನರಿತೆಂದ ಕೆಟ್ಟುಹೋದರುನೋ
ಡಾ ಅಖಂಡೇಶ್ವರಾ ॥೪೬॥ ಹಲವುಕೆಲಬರುಅಂದರೆ ಅಹಂಬ್ರಂಹವೆಂ
ದು ನುಡಿದ ಮನುಮುನಿಗಳೆಲ್ಲಾ ಮರಳರುನೋಡಾ । ಇದನರಿತು
ಹಂಮನಳಿದುಹೆಂಮೆಹಿರಿಯತನವನೀಗಿ । ಪರಬ್ರಂಹವನೊಡಗೂಡಿ
ಸುಖಿಯೂಗಿರ್ಪರಯ್ಯಾ ಅಖಂಡೇಶ್ವರಾ ॥೪೭॥ ಕ್ರಿಯೆಮೇಅಧಿಕ
ವೆಂಬದೊಡ್ಡಸಿದ್ಧಾಂತಿಗಳ ಮಾತುಸೊಗಸದಯ್ಯಾ ಯನಗೆ ಅದೇ
ನುಕಾರಣವೆಂದರೆ । ಆವುದಾನೊಂದುಪಕ್ಷಿವುಭಯರೆಕೆ ಯಿಂದಗ
ಗನಕ್ಕೆ ಹಾರುವಂತೆ ಅಂತರಂಗದಲ್ಲಿ ಸಮ್ಯಜ್ಞಾನ ಬಹಿರಂಗದಲ್ಲಿ
ಶಿವಸತ್ರಿಯೂಸಂನಿಹಿತ ವಿಲ್ಲದೆ ಪರವಸ್ತುವಕೂಡಬಾರದಾಗಿ । ಇ
ದುಕಾರಣಸತ್ಕ್ರಿಯೂಸಮ್ಯಜ್ಞಾನರಾದ ಸಂಪನ್ನರಾದ ಶರಣರ
ತೋರಿಸಿ ಬದುಕಿಸಯ್ಯಾ ಯನ್ನ ॥ಅಖ॥ ೪೮ ॥ ಶೈವಸಿದ್ಧಾಂತಿಗಳ
ಬದ್ಧಭವಿಗಳ ಮುಖವನೋಡಲಾಗದು । ಅದೇನುಕಾರಣವೆಂದರೆ ।

ಸಾಂಗೋಪಾಂಗಶುದ್ಧಶರೀರಿಯಾಗಿ ಪ್ರಸನ್ನತಾಸನಗದ್ದುಗೆಯಲ್ಲಿ ಕು ಳ್ಳಿರ್ದು ಕಣ್ಣುಮುಚ್ಚಿ । ಅಂತರಂಗದಲ್ಲಿ ಪರಮಾತ್ಮನಕಳೆಯಧ್ಯಾ ನಿಸಿ ಮನಸಿನಲ್ಲಿಕಟ್ಟಿ ದೃಷ್ಟಿಗೆತಂದು ಆದೃಷ್ಟಿಯಿಂದ ಪುಷ್ಪದಲ್ಲಿ ತುಂಬಿ । ಮೃತ್ತಿಕೆಪಾಷಾಣಾದಿ ನಾನಾತೆರದ ಲಿಂಗಾಕಾರಮೂರ್ತಿ ಯಲ್ಲಿ ಸ್ಥಾಪಿಸುವರೆಂದು ಭಾವಿಸಿ ಜಲಗಂಧಾಕ್ಷತೆ ಪುಷ್ಪದೀಪಧೂ ಪ ತಾಂಬೂಲಾದಿ ಅಷ್ಟವಿಧಾರ್ಚನೆ ಶೋಡಶೋಪಚಾರಗಳನ ಮಾಡಿ । ಆಪೂಜಾಂತದಲ್ಲಿ ಯನ್ನ ಮಲಿನವಾದದೇಹದಲ್ಲಿ । ನೀನು ನಿರ್ಮಲವಾಪವಸವು ನೀನು ಯಿರಬೇಡಹೋಗೆಂದು ತನ್ನದೇವರ ಭಾವಿ ಕೆರೆ ಹೊಳೆ ಹಳ್ಳಗಳಲ್ಲಿಹಾಕಿ ಬಿಸಾಡುವ ಶಿವದ್ರೋಹಿಗೆ। ಕುಂಭಿನಿಪಾತಕನಾಯಕ ನರಕತಪ್ಪದಯ್ಯಾ ॥ಅಖ॥ ೪೯ ॥ ಪದೇಂ ದ್ರಿಸಪ್ತಧಾರತುಗಳಲ್ಲಿ ಸಚ್ಚ್ರ ಮೆಗಳಲ್ಲಿ ತುಂಬಿಪ್ಪದುಪ್ರಾಂದೇವ ಸ್ತುವು। ಪರವಸ್ತುವೆಂದರಿಯರು। ಒಳಹೊರಗೆತೆರಹಿಲ್ಲದೆ ಪರಿ ಪೂರ್ಣವಾಗಿರ್ಪುದು ಒಂದೇ ಪರವಸ್ತುವೆಂದರಿಯರು । ವಿಪರೀತ ಭ್ರಾಂತಜ್ಞಾನದಿಂದ ಪ್ರಾಳಗೆಬೇರೆಪರವಸ್ತುವುಂಟೆಂದು ಕಣ್ಣುಮು ಚ್ಚಿ ನೋಡಿ ಕಳವಳಗೊಂಡು ಪ್ರಳಯಕ್ಕೊಳಗಾಗಿಹೋದರು । ಅ ವರಕಂಡು ನಗುತಿರ್ದನಯ್ಯಾನಂಮ ॥ಅಖ॥ ೫೦ ॥ ಜಗದಪ್ರೊಳ ಹೊರಗೆಲ್ಲತೆರಹಿತದೆ ಸಂಭ್ರಮಿಸಿತುಂಬಿರ್ಪ ಪರವಸ್ತುವನು ಧ್ಯಾನಿಸಿಬಿಡುವದಕ್ಕೆ ಇಂಬುಂಟೇನೊಮರುಳೆ । ಇಂತೀಯಖಂಡ ವಾದ ಪರಿಪೂರ್ಣಪರಬ್ರಹ್ಮನ ನಿಲವನರಿಯದೆ ಖಂಡಿತಬುದ್ಧಿಯಿ ದೆಕಲ್ಪಿಸಿ। ಪೂಜಿಸಿ ಕರ್ಮದಬಲೆಯಲ್ಲಿಸಿಲಿ ಕಾಲಂಗೆಗುರಿಯಾಗಿ ಹೋದವರಕಂಡು ಬೆರಗಾದನಯ್ಯಾ ॥ಅಖ॥ ೫೧ ॥ ಕುರುಹುಂಟೆಮ ಖಿಲಿಂಗಕ್ಕೆತೆರಹುಂಟೆಮಹಲಿಂಗಕ್ಕೆ ಎಲ್ಲೆಡೆಯೊಳು ಪರಿಪೂರ್ಣವಾ ದಪರಾತ್ಪರಲಿಂಗದನಿಲವನರಿಯದೆ ಹುಸಿಯನಲ್ಪಿಸಿಹುಸಿಯನಪೂ ಜಿಸಿ । ಹುಸಿಯಫಲಪದವನುಂಡುಹುಸಿಯಾಗಿಹೋದ ವರಕಂಡು ನಗುತಿರ್ದನಯ್ಯಾನಮ್ಮ ॥ಅಖ॥ ೫೨ ॥ ಅಷ್ಟಮೂರ್ತಿಗಳು ದೇವ

ರೆಂಬಭ್ರಷ್ಟಭವಿಗಳವೂತುಕೇಳಲಾಗದು । ಅದೇನುಕಾರಣವೆಂದರೆ ಪೃಥ್ವಿದೇವರಾದರೆ ಅಪ್ಪುವಿನಪಳಿಯುದಲ್ಲಕರಗುವದೇ । ಅಪ್ಪುದೇವರಾದರೆಅಪ್ಪುವಿನಪಳಿಯುದಲ್ಲಕರಗುವದೇ । ಅಪ್ಪುದೇವರಾವರೆಅಗ್ನಿಯುಪ್ರಳಯುದಲ್ಲಿ ಅರಿತುಹೋಗುವದೇ । ಅಗ್ನಿದೇವರಾದರೆವಾಯುವಿನಪ್ರಳಯುದಲ್ಲಿಹಾರಿಹೋಗುವದೆ । ವಾಯುದೇವರಾದರೆ ಆ ಆಕಾಶದಪ್ರಳಯುದಲ್ಲಿ ಲಯುವಪ್ಪುದೆ ಆಕಾಶದೇವರಾದಡೆ ಆತ್ಮನಲ್ಲಿ ಅಡಗಿಹೋಗುವದೇಆತ್ಮಡೆವರಾದಡೆದ್ವಂದ್ವಕರ್ಮಂಗಳೆಂಬ ಜನನ ಮರಣಂಗಳಲ್ಲಿ ಬಂಧನಪಡುವನು ಚಂದ್ರಸೂರ್ಯರುದೇವರಾವರೆ ಭವಬಂದನದಲ್ಲಿಸಿಲ್ಕಿ ತೊಳಲಿಬಳಲುವರೆ ಇದಕಾರಣ । ಆಪ್ಟತನಗಳನೆಂತುದೇವರೆಂಬೆನು । ದೇವದೇವವು ಹಾದೇವಾವುಹಾವುಹಿವುಯುನೊಡಯು ಅಖಂಡೇಶ್ವರ ನೊಬ್ಬನೇದೇವನಲ್ಲದೆ ವುಳಿದವೆಲ್ಲಾ ಪುಸಿಯೆಂಬೆನೋಡಾ ॥೫೩॥ ಶರಣಭರಿತಶಿವನು । ಶಿವಭರಿತಶರಣನೆಂಬುದೇನಿಜವಲ್ಲದೆ । ಶಿವಭರಿತಜಗವು ಜಗಭರಿತ ಶಿವನೆಂಬುವದೇ ಹುಸಿಯುನೋಡಾ । ಅದೇನುಕಾರಣವೆಂದರೆ । ಜಗಕ್ಕೆಪ್ರಳಯುಮಹಾಪ್ರಳಯುಗಳುಂಟು ಇದುಕಾರಣ ಪ್ರಳಯಾತೀತಶರಣಸಂನಹಿತನವ್ಮ ಅಖಂಡೇಶ್ವರಾ ॥ ೫೪ ॥ ಪೃಥ್ವಿದೇವರೆಂಬೆನೆದೇವರಲ್ಲ ಅಪ್ಪುದೇವರೆಂಬೆನೆ ದೇವರಲ್ಲ ಅಗ್ನಿ ದೇವರೆಂಬೆನೆ ದೇವರಲ್ಲ ವಾಯುದೇವ ರೆಂಬೆನೆ ದೇವರಲ್ಲ ಆಕಾಶದೇವರೆಂಬೆನೆ ಆಕಾಶದೇವರಲ್ಲ ಆತ್ಮದೇವರೆಂಬೆನೆ ಆತ್ಮದೇವರಲ್ಲ ಚಂದ್ರಸೂರ್ಯರುದೇವರೆಂಬೆನೆ ಚಂದ್ರಸೂರ್ಯರುದೇವರಲ್ಲ ಅದೆಂತೆಂದರೆ ಪೃಥ್ವಿ ಶಿವನ ಸದ್ಯೋಜಾತಮುಖದಲ್ಲಿ ಪುಟ್ಟಿತು ಅಪ್ಪುಶಿವನ ಅಘೋರಮುಖದಲ್ಲಿ ಪುಟ್ಟಿತು ಅಗ್ನಿಶಿವನ ವಾಮದೇವಮುಖದಲ್ಲಿ ಪುಟ್ಟಿತು ವಾಯುಶಿವನ ತತ್ಪುರುಷಮುಖದಿಂದ ಪುಟ್ಟಿತು ಆಕಾಶಶಿವನ ಈಶಾನ್ಯಮುಖದಿಂದ ಪುಟ್ಟಿತು ಆತ್ಮಶಿವನಗೌಪ್ಯ ಮುಖದಿಂದ ಪುಟ್ಟಿತು ಚಂದ್ರಶಿವನಮನಸ್ಸಿನಲ್ಲಿ ಪುಟ್ಟಿತು ಇಂತೀಅಪತನುಗಳಿಗೆ ಹುಟ್ಟಿ

ಹೊನ್ನು ವುಂಟಾದಕಾರಣ ಇವುಕಲಿತವೆಂದು ಕಳೆದು ನೀನೊಬ್ಬನೆ ನಿತ್ಯ ಪರಿಪೂರ್ಣನೆಂದು ತಿಳಿದುವುಳೆದನಯ್ಯಾ ॥ ೨ ॥ ೫೫ ॥ ಸ್ವರ್ಗತಶಿವನೆಂದು ಹೇಳುವವರುಗಳು ಮಾನವರವಾತುಕೇಳಲಾಗದು ಅವರಮುಖವ ನೋಡಲಾಗದು ಅದಂತೆಂದೊಡೆ ಸರ್ವಜೀವರುವನಿತಾದಿ ವಿಷಯತ್ರಪಂಚದಲ್ಲಿ ಮಗ್ನನಾಗಿಯಿರುವನೇ ಶಿವನುಸರ್ವಜೀವರುಗಳಂತೆ ಪುಣ್ಯಪಾಪ ಸುಖದುಃಖ ಸ್ವರ್ಗನರಕಗಳೆಂಬ ದ್ವಂದ್ವಕರ್ಮಂಗಳಲ್ಲಿ ಹೊಂದಿರ್ಪನೇ ಶಿವನು ಸರ್ವಜೀವರುಗಳಂತೆ ಉತ್ಪತ್ತಿಸ್ಥಿತಿ ಪ್ರಳಯಬಂಧನಂಗಳೆಂಬ ಕಷ್ಟಕ್ಕೆಸಿಲ್ಕಿ ಹೊಡಕುಳಿಗೊಂಬನೇ ಶಿವನು ಇಂತೀ ಭೇದವನರಿಯದೆ ಸ್ವರ್ಗತಶಿವನೆಂದು ನುಡಿವಕಡುಪಾತಕರ ಜಡಜೀವಿಗಳೆ ಯನಗೊಮ್ಮೆ ತೋರದಿರಯ್ಯ ॥೫೬॥ ಪೃಥ್ವಿ ಆಕಾಶಮಧ್ಯದಲ್ಲಿ ಉತ್ಪತ್ತ್ಯವಾದ ಸಕಲಪ್ರಾಣಿಗಳು ಶಿವನೆಂದುಭಾವಿಸಲಾಗದು ಅದೇನುಕಾರಣವೆಂದರೆ ಸಕಲಪ್ರಾಣಿಗಳು ಶಿವನಾದರೆ ಮದಮತ್ಸರಂಗಳಿಂದೆ ವನ್ದರವನ್ನು ತಂದುತಿಂದು ತೇಗಲ್ಯಾತಕೊ ಆ ಸಕಲಪ್ರಾಣಿಗಳು ಶಿವನಾದರೆ ಜಾತಿವರ್ಣಾಶ್ರಮ ಕುಲಗೋತ್ರನಾಮ ಶೀಮೆಗೆಬಂದು ಬಿಟ್ಟಿಗೆ ಬಡಿದಾಡಲ್ಯಾತಕೊ ಸಕಲಪ್ರಾಣಿಗಳು ಶಿವನಾದಡೆ ಮಲಯತ್ರಯಂಗಳ ಬಲೆಯಲ್ಲಿಸಿಲ್ಕಿ ಭವಭವದಲ್ಲಿ ಕೊಳಲಿಬಳಲಿ ಬೆಂಡಾಗಲ್ಯಾಕೋ ಇದುಕಾರಣ ಅನಾದಿಸೆರಸದ್ಧ ಪರಮಲಿಂಗಜಂಗಮವೇ ಶಿವನಲ್ಲದೆ ಭವಬಂಧನಂಗಳಲ್ಲಿ ಸತ್ತುಹುಟ್ಟುವ ಸಕಲಪ್ರಾಣಿಗಳು ಶಿವನೆಂದಡೆ ಅಘೋರನರಕ ತಪ್ಪದಯ್ಯಾ ॥ ೬ ॥ ಸರ್ವಜಗದಲ್ಲಿಯು ಶಿವನಿಲ್ಲವೆಂದಡೆ ಆ ಜಂಗಮುಶಿವನೆಂದಲ್ಲದೆ ಬೇರೆತೋರಲರಿಯದಾಗಿ ಪದ್ಮಪತ್ರ ಜಲದಂತೆ ವಿಶ್ವಪರಿಪೂರ್ಣನಾಗಿ ಪೊಂದಿ ಪೊಂದದಿರ್ಪನು ನೋಡಯ್ಯಾ ಅಖಂಡೇಶ್ವರಾ ॥ ೫೭ ॥ ಜಗವಾಗಬಲ್ಲನೋಡಿರೋ ನಮ್ಮಶಿವನು। ಜಗವಾಗಲರಿಯದೆ ಯಿರಬಲ್ಲನೋಡಿರೋ ನಮ್ಮಶಿವನು । ಅನಂತ ಕೋಟಿ ಬ್ರಹ್ಮಾಂಡಗಳ ನಿಮಿಷದಲ್ಲಿ ಹುಟ್ಟಸಬಲ್ಲನೋಡಿರೋ

ನಮ್ಮಶಿವನು । ಇಂತಪ್ಪಶ್ರೀಮಹಾದೇವನ ಘನವರಿಯದೇ ಬೇರೆ ದೇವರುಗಳುಂಟೆಂದು ಬೊಗಳುವ ಭವಭಾರಿಗಳ ಮುಕನೋಡಲಾಗದಯ್ಯ ॥ ಅ ॥ ೫೯ ॥ ಹರಿಹರಗೆ ಸರಿಯುಂದರೆ ನಿಜಪರವಾದಿಗಳಿರಾ ನೀವುಕೇಳಿರೋ ಹರಿಹತ್ತುಭವದಲ್ಲಿ ।ಹುಟ್ಟಿಬಂದನಮ್ಮಹರನ ಶ್ರೀಚರಣವನರ್ಚಿಸಿ ವರವಪಡದೆನಲ್ಲದೆ ನಮ್ಮಹರನು ಆಭವದಲ್ಲಿಹುಟ್ಟಿ ಆವದೇವರ ಪೂಜಿಸಿ ಆವಫಲವನು ಪಡೆದನು ಬಲ್ಲರೆಯೇಳಿರೋ ಇದನರಿಯದೆ ಹರಿಹರಗೆ ಸರಿಯೆಂಬಪರಿವಾದಿಗಳ ಬಾಯಕೆ ರವಿನಟ್ಟಿಯಲ್ಲಿ ಪೊಯಿದಡಲ್ಲದೆ ಯನ್ನಸಿಟ್ಟುವೋಣದುನೋಡಾ ॥ ಅ ॥ ೬೦ ॥ ಅಜಹರಿಸುರಾಸುರರೆಲ್ಲಾ ಆವದೇವರ ನರ್ಚಿಸಿಫಲಪದವ ಪಡದರುತಿಳಿದುನೋಡಿರೋ ಮಾಯಾವಾದಿಗಳ ನೀವೆಲ್ಲಾ ಮನುಮುನಿಗಳು ಮರಲಗೊಂಡವರು ಅಷ್ಟದಿಕ್ಪಾಲಕರೆಲ್ಲಾ ಅದೆ ದೇವನ ಶ್ರೀಚರಣವನರ್ಚಿಸಿ ಫಲಪದವಪಡದರು ತಿಳಿದುನೋಡಿರೋ. ಮಾಯಾವಾದಿಗಳು ನೀವೆಲ್ಲಾ ವೇದಶಾಸ್ತ್ರಾಗಮ ಪುರಾಣ ಆವ ದೇವನ ಪೊಗಳುತಿರ್ಪವೋ ತಿಳಿದುನೋಡಿರೋ । ಮಾಯೊವಾದಿಗಳು ನೀವೆಲ್ಲಾ । ಇಂತೀಭೇದವ ಕಂಡುಕೇಳಿ ತಿಳಿದುನಂಬಲರಿಯರೆ ದಿಂಡೆಯತನದ ಡಂಬಕಮೂಳರಂತಿರಲಿ ಕಾಕಾದೇವರಗಂಡ ಲೋಕದಪರಿಯ ತೋರುವೆ ಮೂಜಗವರಿವಂತೆ ಕಟ್ಟಿದೆನು ಬಿರಿದಾ ಶಿವಾಚಾರದಿಂದ ಬ್ಯಾರೆಘನವಿಲ್ಲವೆಂದು ಕಟ್ಟಿದೆನು ಬಿರಿದಾ ಶಿವಶರಣರಲ್ಲದೆ ಬೇರೆಹಿರಿಯರಿಲ್ಲವೆಂದು ಕಟ್ಟಿದೆನು ಬಿರಿದಾ ಅಖಂಡೇಶ್ವರಾ ನೀಸಾಕ್ಷಿಯಾಗಿ ॥ ೬೧ ॥ ಯೆನ್ನ ನಡನುಡಿ ಚೈತನ್ಯವೆ ನೀವೆಂದರಿದೆ ಯನ್ನವಡಲೇಂದ್ರಿಯಂಗಳೆಲ್ಲಾ ನಿಮ್ಮವೆಂದರಿದೆ ನೀವು ಭಕ್ತದೇಹನೆಂದು ನಂಬಿದಬಳಿಕ ಯನ್ನಕಡಿಗೆ ನೂಕದಿರಯ್ಯ ಅಖಂ ॥ ನಿಮ್ಮಧರ್ಮ ನಿಮ್ಮಧರ್ಮ ॥ ೬೨ ॥ ವಂಮೆಜ್ಞಾನಿಯೆನಿಸಿ ವಂಮೆ ಅಜ್ಞಾನಿಯೆನಿಸಿ ವಮ್ಮೆ ವಿಕಳನೆನಿಸಿ ।ವಮ್ಮೆ ನಿಷ್ಕರುಣಿಯೆನಿಸಿ ವಮ್ಮೆ ಕಾಂತನೆನಿಸಿ ವಮ್ಮೆ ಭ್ರಾಂತನೆನಿಸಿ ನಾನಾತೆರದಿಂದ ಯನ್ನ

ಹುಸಿಥಿಟವಾಡಿ ಕಾಡದಿರಯ್ಯ ನೀವುಧಯೂ ನಿಧಿಯೆಂದುನಂಬಿದೆ ನಿಮ್ಮಕರುಣಕಟಾಕ್ಷದಿಂದ ನೋಡಿಸಲಹಯ್ಯ ಯೆನ್ನ ||ಅ|| ೬೩ || ಸುಖಬಂದಲ್ಲಿನಿಮ್ಮಹಾಡಿ ಹರಸುವೆನಯ್ಯಾ ದುಃಖಬಂದಲ್ಲಿ ನಿಮ್ಮ ಕೋಪಿಸುವೆನಯ್ಯಾ ಅದೇನುಕಾರಣವೆಂದಡೆ ಯೆನ್ನಸುಖದುಃಖಂಗಳಿಗೆ ನೀವೆ ಆಧಾರವಾದಕಾರಣ ನಿಮ್ಮನ್ನೇಹಾಡುವೆ ನಿಮ್ಮನ್ನೇ ಪೊಗಳುವೆ ನಿಮ್ಮಮುಂದೆನ್ನವಡಲ ಕಡುದುಃಂಗಳನೆಲ್ಲಾವಾ ನೀಡಾಡುವೆನಯ್ಯಾ || ಅ || ೬೪ || ತಂದೆನೀವೆಯಯ್ಯಾ ಯೆನಗೆ ತಾಯಿನೀವೆಯಯ್ಯಾ ಯೆನಗೆ ಸಕಲಚೈತನ್ಯವು ನೀವೇಯಯ್ಯಾ ಯೆನಗೆ ಅಖಂಡೇಶ್ವರಾ ನೀನೆನಗೆ ದಿಕ್ಕಲ್ಲದೆ ಮತ್ತ್ಯಾರು ಯಿಲ್ಲವಯ್ಯಾ ಯೆನಗೆ || ೬೫ || ದರ್ಪಣದೊಳಗಣ ರೂಪಿಗೆಚೇಷ್ಟಭಾದವು ವುಂಟೆಂದಡೆ ನೋಡುವಾದನ ಚೇತನದಿಂದಲ್ಲದೆ ಬೇರೆಚೇತನವುಂಟೇನಯ್ಯಾ ಯೆಂನಕರಣೇಂದ್ರಿಯಂಗಳು ಚೇಷ್ಟಿಸಿನವೆಂದಡೆ ನಿಮ್ಮಚೇತನದಿಂದಲ್ಲದೆ ಬೇರೆಅವಕ್ಕೆ ಚೇತನವುಂಟೇನಯ್ಯಾ ಸೂತ್ರದಬೊಂಬೆಯಂತೆ ನೀವಾಡಿಸಿದಡೆ ನಾನಾಡುತಿರ್ದೆನಯ್ಯಾ ಯಖಂಡೇಶ್ವರಾ || ೬೬ || ಆಚಾರಲಿಂಗವಾಗಿ ಬಂದೆನ್ನ ಘ್ರಾಣೇಂದ್ರಿಯನೊಳಕೊಂಡಿರ್ಪಿರಯ್ಯ ನೀವುಗುರುಲಿಂಗವಾಗಿ ಬಂದೆನ್ನಜಿಂಹ್ವೇಂದ್ರಿಯ ನೊಳಕೊಂಡಿರ್ಪಿರಯ್ಯಾನೀವು ಶಿವಲಿಂಗವಾಗಿ ಬಂದೆನ್ನನಯನೇಂದ್ರಿಯ ನೊಳಕೊಂಡಿರ್ಪಿರಯ್ಯಾನೀವು ಜಂಗಮಲಿಂಗವಾಗಿ ಬಂದೆನ್ನ ತ್ವಗೇಂದ್ರಿಯ ನೊಳಕೊಂಡಿರ್ಪಿರಯ್ಯಾ ನೀವು ಪ್ರಸಾದಲಿಂಗವಾಗಿಬಂದೆನ್ನ ಶ್ರೋತ್ರೇಂದ್ರಿಯನೊಳಕೊಂಡಿರ್ಪಿರಯ್ಯಾನೀವು ಮಹಾಲಿಂಗವಾಗಿ ಬಂದೆನ್ನ ಹೃದಯೇಂದ್ರಿಯ ನೊಳಕೊಂಡಿರ್ಪಿರಯ್ಯಾ ನೀವು ಇಷ್ಟಲಿಂಗವಾಗಿ ಬಂದೆನ್ನತನುವ ನೊಳಕೊಂಡಿರ್ಪಿರಯ್ಯಾ ನೀವು ಪ್ರಾಣಲಿಂಗವಾಗಿ ಬಂದೆನ್ನಮನವ ನೊಳಕೊಂಡಿರ್ಪಿರಯ್ಯಾ ನೀವು ಇಂತೆನ್ನದಶೇಂದ್ರಿಯಂಗಳು ನಿಮ್ಮಲ್ಲಿ ಸಮರಸವಾದವಾಗಿ ನಾನುನೀನೆಂಬುವದಕ್ಕೆ ಭಿನ್ನವಿಲ್ಲವಯ್ಯಾ ಅಖಂಡೇ

ಶ್ವರಾ ॥ ಅರಿದರಿದುಗುರುಭಕ್ತಿ ನೆಲೆಗೊಂಬುವದಯ್ಯಾ ಅರಿದರಿದು ಲಿಂಗಭಕ್ತಿ ನೆಲೆಗೊಂಬುವದಯ್ಯಾ ಅರಿದರಿದು ಜಂಗಮಭಕ್ತಿ ನೆಲೆಗೊಂಬುವದಯ್ಯಾ ಇಂತೀತ್ರಿವಿಧವು ನೆಲೆಗೊಂಡು ಭಿನ್ನಭಾವವಳಿದ ಸದ್ಭಕ್ತನಂ ಮೂರುಲೋಕದೊಳಗೆ ಅಪೂರ್ವವಯ್ಯಾ ॥ಅ॥ ೬೮ ॥ ಜಂಗಮದಲ್ಲಿರೂಪು ಕುರುಹನೋಟಲಾಗದಯ್ಯಾ ಜಂಗಮದಲ್ಲಿ ವೃತ್ತಮಮಧ್ಯಮವ ನೋಡಲಾಗದಯ್ಯಾ ಜಂಗಮದಲ್ಲಿ ಕುಲಛಲವ ನೋಡಲಾಗದಯ್ಯಾ ಜಂಗಮದಲ್ಲಿ ವ್ರಾಚುನೀಚು ಮಾಡಲಾಗದಯ್ಯಾ ಜಂಗಮದಲ್ಲಿ ಹಿರಿದುಕಿರಿದು ಮಾಡುವಭಕ್ತಂಗೆ ಭವಹಿಂಗದಯ್ಯಾ ॥ ಅ ॥ ೬೯ ॥ ಲಿಂಗಭಕ್ತನಾದಡೆ ತನ್ನಂಗದಲ್ಲಿ ಧರಿಸಿಪ್ಪಲಿಂಗವಲ್ಲದೆ ಅನ್ಯವನರಿಯದಿರಬೇಕು ಲಿಂಗದಲ್ಲಿ ನೈಷ್ಟಿಕಾಭಾವ ಇಂಬುಗೊಂಡಿರಬೇಕು ಶ್ರೀಲಿಂಗವೇಪತಿ ತಾನೆಸತಿಯೆಂಬದೃಢಬುದ್ಧಿ ನಿಶ್ಚಯವಾಗಿರಬೇಕು ಹೀಗಲ್ಲದೇ ತನ್ನದೇಹದಮ್ಯೇಲಿರ್ಪ ಲಿಂಗವಸಾಮಾನ್ಯವಮಾಡಿ ಕಂಡಡೇ ಕುಲದೊಳಗಣ ಕಲ್ಲಲಿಂಗವೇ ಅಹುದೆಂದುಪೂಜಿಸುವ ಗಾವಿಲಮೂಳ ಹೊಲೆಯರಮುಖವನೋಡಲಾಗದಯ್ಯಾ ॥ ಅ ॥ ೭೦ ॥ ಶ್ರೀಗುರುಸ್ವಾಮಿ ಕರುಣಿಸಿಕೊಟ್ಟಯಿಷ್ಟಲಿಂಗವನ್ನು ಮನದಲ್ಲಿಧರಿಸಿಕೊಂಡು ಅದುದೇವರೆಂದು ನಂಬದೆ ಧರೆಯಮೇಲೆ ಕಂಡಕಂಡದೇವರಕಂಡು ಕಲ್ಪಿಲಿಹರಿದಾಡುವ ಭಂಡಮಾದಿಗರ ಭಕ್ತರೆಂದರೆ ಅಘೋರನರಕ ತಪ್ಪದಯ್ಯಾ ಅಖಂಡೇಶ್ವರಾ ॥ ೭೧ ॥ ಸದ್ಭಕ್ತರಾದವಗು ಸ್ಥಾವರಲಿಂಗವಂ ಭಜನೆಯುಮಾಡಲಾಗದು ಮನದಲ್ಲಿ ಸ್ಥಾವರ ಘನವೆಂದುನೆನೆಯಲಾಗದು ಅದೇನುಕಾರಣವೆಂದರೆ ಆದಿ ಅನಾದಿಯಿಂದ ತತ್ತವಾದ ಮಹಾಘನವಸ್ತುವನ್ನು ಶ್ರೀಗುರುಸ್ವಾಮಿ ಭೇದಿಸಿತಂದು ಕೈಯಲ್ಲಿ ಇಷ್ಟಲಿಂಗವೆನಿಸಿ ಕರಸ್ಥಳಕ್ಕೆಕೊಟ್ಟಬಳಿಕ ಆಲಿಂಗದಲ್ಲಿ ಸಕಲಕ್ಷೇತ್ರಗಳುಂಟೆಂದು ಭಾವಿಸಿಮುಕ್ತಿಯು ಪಡೆಯಲರಿಯದೆ ಖಂಡಿತಬುದ್ಧಿಯಿಂದ ಬೇರೆಮುಕ್ತಿಯು ಪಡೆವೆನೆಂದು ಕಂಡತೀರ್ಥ ಕ್ಷೇತ್ರಂಗಳಿಗೆಡೆಯಾಗಿ

ತೊಳಲಿಬಳಲುವ ಭ್ರಷ್ಟಭವಿಗಳಿಗೆ ನರಕವೇಪ್ರಾಪ್ತಿಯಯ್ಯಾ ॥ಅ॥ ೭೦ ॥ ಪರದೈವವ ಪೂಜಿಸುವಾತನು ಸದ್ಭಕ್ತನೇ ಅಲ್ಲಲ್ಲಾ ಪರಸ ಮಯವ ಬಳಸುವಾತಸದ್ಭಕ್ತನೇ ಅಲ್ಲಲ್ಲಾ ಪರಸ್ತ್ರೀಯರುಗಳ ನಪ್ಪುವಾತ ಸದ್ಭಕ್ತನೇ ಅಲ್ಲಲ್ಲಾ ಪರದೊಡವೆಯ ಅಪಹರಿಸಿಕೊಂ ಬಾತ ಸದ್ಭಕ್ತನೇ ಅಲ್ಲಲ್ಲಾ ಇಂತೀ ದುರಾಚಾರದಲ್ಲಿ ನಡೆದುದದುಃ ಖಕ್ಕೆಯೊಡಾಗಿ ಹೋಗುವಕತ್ತೆಮೂಳ ಹೊಲೆಯರೆ ಸದ್ಭಕ್ತರೆಂ ದರೆ ಭವಹಿಂಗದಯ್ಯಾ ॥ ಅ ॥ ೭೩ ॥ ಅನಂತಕೋಟ ಹೀನಭವ ಜನ್ಮವನೀಗಿ ಶಿವಜನ್ಮಕ್ಕೆಬಂದು ಶ್ರೀಗುರು ಕಾರುಣ್ಯವಪಡುವದು ಅದೇನುಕಾರುಣ್ಯವೆಂದಡೆ ಹಿಂದಣ ಕ್ರಿಮಿಕೀಟಕ ಶುನಿಸೂಕರ ಜ ನ್ಮವಪ್ಪದಾಗಿ ಮುಂದೆಯಚ್ಚರದಲ್ಲಿ ನಡೆಯಬೇಕು ಯಚ್ಚರತಪ್ಪಿ ಅರುಹುಮರಹಿನಿಂದೆ ಭವಸಂಗವಮಾಡುವಭಕ್ತನ ವಿಧಿಯಂತಾಯಿ ತೆಂದಡೆ ದೇವರಿಗೆಂತಾ ನೇಮಿಸಿಮಾಡಿದ ಮೊಸಲೋಗರವ ಶ್ವಾನ ಮುಟ್ಟದ ವಿಧಿಯಂತಾಯಿತಯ್ಯಾ ॥ ಅ ॥ ೭೪ ॥ ಮಾಡಲಾಗದು ಭವಿಯಸ್ಪಂಸ್ಪರ್ಶವೆ ನೋಡಲಾಗದು ಭವಿದೃಷ್ಟಿಯಲ್ಲಿ ಪ್ರೀತ ವಾಗಿ ನಡೆಯಲಾಗದು ಭವಿಯಸಂಗಡಭಜಿಯಲ್ಲಿ ಕುಳ್ಳಿರಲಾಗದು ಭವಿಯಸಹಿತ ಕದ್ದುಗೆಯಲ್ಲಿ ಶಯನಮಾಡಲಾಗದು ಭವಿಯಿರ್ದ ಹಾಸಿಗೆಯಲ್ಲಿ ಭೋಜನವಮಾಡಲಾಗದು ಭವಿಯಕಾಣುವಂತೆ ಅದೆಂತೆಂದಡೆ, ಶ್ಲೋ ॥ ಆಸನೇಶಯನೇಯೊನೆ ಸಂಪರ್ಕೆ ।ಸಹಭೋ ಜನೆ ಸಂಚರಂತಿಮಹಾಘೋರನರಕೆ ಕಾಲಮಕ್ಷಯಂ ॥ ೧ ॥ ಎಂಬು ದಾಗಿ ಇಂಥಾಭವಿಯ ಮಿಶ್ರವಮಾಡಿದಭಕ್ತನು ಚಂದ್ರಸೂರ್ಯರುಳ್ಳ ಪರಿಯಂತರ ಮಹಾಘೋರನರಕದ ಕುಳಿಯಲ್ಲಿಬಿದ್ದು ಮುಳುಗಿ ತೇಲುತ್ತ ತಡಿಯಶೇರಲರಿಯದೆ ಬಾಧಪಡುತ್ತಾಯಿರ್ದರಯ್ಯಾ ಅ ॥ ೭೫ ॥ ನೆರೆಹೊಲ್ಲದುರ್ರಾಚಾರಿಗಳ ನೆರೆಹೊಲ್ಲ ಜಾರಚೋರರ ನೆರೆಹೊಲ್ಲ ಬ್ರಹ್ಮಹತ್ಯಕಾತರ ನೆರೆಹೆಲ್ಲ ಸರಿಯಭುಜಂಗರ ನೆರೆಹೊಲ್ಲ ಗುರುತಲ್ಪಕರ ನೆರೆಹೊಲ್ಲ ಹುಸಿಯಡಂಬಕರ ಅನೇನುಕಾರಣವೆಂ

ದರೆ ಬಿರುಗಾಳಿಯಸಂಗದಿಂದ ಜ್ಯೋತಿಯು ಅಳಿದುಪೋಗುವಂತೆ ಇಂತಪ್ಪ ಪಂಚಮಹಾಪಾತಕರ ನೋಡಲಾಗದಯ್ಯಾ ॥ ಅ ॥ ೭೬ ॥ ಮಾಡಬಾರದು ಮಾಡಬಾರದು ಗುಣಹೀನ ಮತಿಭ್ರಷ್ಟರ ಸಂಗವ ಮಾಡಬಾರದು ಮಾಡಬಾರದು ಪಾಶಬದ್ಧಕ್ಲೇಶ ಜೀವರಸಂಗವಮಾಡಬಾರದು ಮಾಡಬಾರದು ಹುಸಿಡಂಬಕರ ಹುಸಿಪುಂಡರಸಂಗವಮಾಡಿದರೆ ಭವದಲ್ಲಿ ಘಾಸಿಯಲ್ಲದೆ ಮುಕ್ತಿಯಡೆದೊರಿಯದಯ್ಯಾ ॥ ಅ ॥ ೭೭ ॥ ಒಬ್ಬರ ನೊಬ್ಬರು ಬಯಸಿ ತಿರ್ಪರು ಸೀವುಕೇಳಿರೊ ಮನ ತಾರ್ಕಣ್ಯವಾಗದವರ ಸಂಗವದ್ಯಾತರಸಂಗಾ ಬುದ್ಧಿಬುದ್ಧಿ ಕೂಟಸ್ಥರಾಗದವರಸಂಗ ವದ್ಯಾತರಸಂಗ ಸೀಲಸೀಲವಂದಾಗದವರ ಸಂಗವದ್ಯಾತರಸಂಗ ಭಾವಭಾವವಂದಾಗದವರ ಸಂಗವದ್ಯಾತರಸಂಗ ದುಃಸಂಗವಲ್ಲದೆ ಯಿಂತಪ್ಪ ದುಃಸಂಗಿಗಳ ಸಂದೋಹಕ್ಕೆಯಿಡು ಮುಕ್ತಿಯಕೇಡು ಕಂಡ್ಯಾ ಅಯ್ಯಾ ॥ ಅ ॥ ೭೮ ॥ ತನ್ನತಾನರಿಯದೆ ಅನ್ಯರಗುಣಾವ ಗುಣಂಗಳೆಂತೆಣಿಸದೇನಕ್ಕರ ಶಿವಶರಣನೆಂತಪ್ಪನಯ್ಯಾ ಸಜೀನಸದ್ಭಾವಿ ಸತ್ಪುರುಷರುಗಳಮನ ನೋಯಮಂತೆಹಳಿದು ಹಾಸ್ಯವಮಾಡಿ ದೂಷಿಸುವನಕ್ಕರ ಶಿವಶರಣನೆಂತಪ್ಪನಯ್ಯಾ ಗರ್ವಅಹಂಕಾರವೆಂಬ ಹಿರಿಯಪರ್ವತನೇರಿ ಮರವೆಯಿಂದ ಮುಂದುಗಾಣದೆ ಮನವಪ್ರಪಂಚದಲ್ಲಿನಡದು ಜನನಮರಣಗಳೆಂಬ ಭವಜಾಲದಲ್ಲಿಸಿಲ್ಕಿ ದುಃಖಪಡುವನಕ್ಕರ ಶಿವಶರಣನೆಂತಪ್ಪನಯ್ಯಾ ಅ ॥ ೭೯ ॥ ತನ್ನಯಡದಲ್ಲಿ ನೊಣವನರಸುವ ಮರುಮಾನವನುತೆ ತನ್ನಂಗಥಮನುದ ಅವಗುಣಂಗಳ ತೊಲಗ ನೂಕಲರಿಯದೆ ಅನ್ಯರಲ್ಲಿಯವಗುಣಂಗಳ ಸಂಪಾದನೆಯಮಾಡುವ ಕುನ್ನಿಗಳಯನಗೊಮ್ಮೆ ತೋರಿದರಯ್ಯಾ ॥ ಅ ॥ ೮೦ ॥ ತಮ್ಮೊಳಗೆತಾವು ತಿಳಿಯರು ಪರವಾದಿಗಳು ಹೇಳಿದರುಗ್ರಹಿಸರು ದ್ದುರ್ಬುದ್ಧಿಯಿಂದನಡೆವ ದುರಾಚಾರಿಗಳ ಯನಗೊಮ್ಮೆ ತೋರದಿರಯ್ಯಾ ॥ ಅ ॥ ೮೧ ॥ ಸಲ್ಲರುಸಲ್ಲರಯ್ಯಾ ಶಿವಪಥಕ್ಕೆ ದುರ್ನೀತಿದುರ್ಗುಣಿಗಳು ಸಲ್ಲರುಸಲ್ಲ

ರಯ್ಯಾ ಶಿವಪಥಕ್ಕೆ ದುರ್ಬುದ್ಧಿ ದುರ್ಭಾವಿಗಳು ॥ ಅ ॥ ೮೨ ॥ ದ
ಯವಿರಬೇಕು ಸಕಲಪ್ರಾಣಿಗಳಲ್ಲಿ ಭಯವಿರಬೇಕು ಗುರುಲಿಂಗಜಂ
ಗಮದಲ್ಲಿ ಸ್ವಯವಿರಬೇಕು ಸಕಲಗುಣಗಳಲ್ಲಿ ನಯವಿರಬೇಕು
ನುಡಿಗಢಣದಲ್ಲಿ ಇಂತೀಗುಣವಿಲ್ಲದವರ ಕಂಡಡೆಸೊಗಸದಯ್ಯಾಯು
ನಗೆ ॥ ಅ ॥ ೮೩ ॥ ಬಲ್ಲವರರಚಿಸಗೊಂಡರೆ ಮೆಲ್ಲನಾರೈದು ಮೆಲ್ಲ
ನೆನುಡಿಯಬೇಕು ಕಲ್ಲುಕಲ್ಲುತಾಕಿದಂತೆ ಸೊಲ್ಲುಬಿರಿಯೊದಡೆ ನಿಲ್ಲ
ನಿಲ್ಲವಯ್ಯಾ ॥ ಅ ॥ ಬಲ್ಲರೆ ಬಲ್ಲರೆಂಬೆನು ಗುರುಲಿಂಗ ಜಂಗಮವ
ನೊಂದೆಯೆಂದು ತಿಳಿದುನಡೆಯಬಲ್ಲಡೆ ಬಲ್ಲರೆಂಬೆನು ಲಿಂಗಅಂಗದ
ಕೀಲವನರಿದು ಕೂಡಬಲ್ಲರೆ ಬಲ್ಲರೆಂಬೆನು ಸುಜ್ಞಾನನನ ನೆಲೆಯ
ಬಲ್ಲರೆ ಬಲ್ಲರೆಂಬೆನು ನಿತ್ಯಾನಿತ್ಯವಬೇರ್ಪಡಿಸಿ ನಿತ್ಯವಹಿಡಿಯಬಲ್ಲರೆ
ಬಲ್ಲರೆಂಬೆನು ಇಂತೀಬಲ್ಲ ವಿವೇಕಯಬಗೆಯ ನರಿಯದಸೊಲ್ಲುಸೊ
ಲ್ಲಿಗೆಮತ್ಸರಿಸಿ ಕರಣಮಥನಕರ್ಕಶದಿಂದ ಹೋರುವವರು ಸಲ್ಲರ
ಯನಿಜಪಥಕ್ಕೆ ಅಖಂಡೇಶ್ವರಾ ॥ ೮೪ ॥ ಅಲ್ಲದದು ಹಿಡಿವನಲ್ಲಶರಣ
ಇಲ್ಲದದುನುಡಿವನಲ್ಲಶರಣ ಗೆಲ್ಲುಸೋಲುವಿಗೆ ಹೋರುವನಲ್ಲಶರಣ
ಬಲ್ಲೆನೆಂದುತನ್ನಬಲ್ಲಿವತನವ ಯೆಲ್ಲರೊಡನೆ ಬೀರುವನಲ್ಲ ಶರಣ
ಅಖಂಡೇಶ್ವರಾ ॥ ೮೬ ॥ ಸತ್ಯವಚನವ ನುಡಿಯಬಲ್ಲರೆ ಶರಣನಂಬೆ
ನು ಸದಾಚಾರದಲ್ಲಿ ನಡೆಯಬಲ್ಲರೆ ಶರಣನಂಬೆನು ವೃತ್ತಿಜ್ಞಾನವ
ಳಿದು ಚಿತ್ತದಕೊನೆಯಲ್ಲಿ ನಿತ್ಯಲಿಂಗದನೆನಹು ತುಂಬಿಸುಳಿಯಬಲ್ಲ
ರೆ ಆತನು ಶರಣನಂಬೆನಯ್ಯಾ ಅಖಂಡೇಶ್ವರಾ ॥ ೮೬ ॥ ಹಾಲಹರವಿ
ಯಮೇಲೆ ಮಜ್ಜಿಗೆಯತುಂಬಿ ಇರಿಸಿಪಡೇನು ಹೆಪ್ಪಾಗಬಲ್ಲದೇನ
ಯ್ಯಾ ಸಂಮಿಶ್ರದಿಂದಲ್ಲದೆ ಅಂಗದಮೇಲೆ ಲಿಂಗಧಾರಣವಮೂಡಿದರೆ
ಸಂಗಸಮರಸವಾಗಬಲ್ಲದೇನಯ್ಯಾ ಶಿವಜ್ಞಾನವಿಲ್ಲ ಅಖಂಡೇಶ್ವರಾ
॥ ೮೮ ॥ ಕ್ರಿಯದಲ್ಲಿ ಬಲ್ಲಿವರು ಜ್ಞಾನದಲ್ಲಿಸಂಪನ್ನರೆಂದು ಹೇಳ
ಲ್ಯಾತಕೊ ನಡನುಡಿಯಲ್ಲಿ ಕಾಣಬಹುದುನಡೆನುಡಿ ಶುದ್ಧವಿಲ್ಲದವ
ರಲ್ಲಿ ಯಿರಲೊಲ್ಲನ ನೋಡಾ ಅಖಂಡೇಶ್ವರ ॥ ಕಟ್ಟಿದಬುತ್ತಿ ಯೆ

ಷ್ಟುದಿನ ಇರಲಾಪುದು ಬಿತ್ತಿನಡೆಯದಲ್ಲಿ ಅಮೃತವ ತುಂಬಿಯಿರಿಸಿ ದರೆ ಯಷ್ಟೊತ್ತುಯಿರಲಾಪುದು ಖ್ಯಾತಿಯಭಕ್ತಿ ಕಲಿಕೆಯವಿರಕ್ತಿ ಅದರಂತೆ ಕಂಡ್ಯಾಅಯ್ಯಾ ಸದ್ಗುರುನಾಥ ವುದ್ಯೋಗಿಸಿಕೊಟ್ಟದ್ದು ನಿಜವಲ್ಲದೆ ವುಳಿದದ್ದೆಲ್ಲ ಅಬದ್ಧವೆಂಬೆನಯ್ಯಾ ॥ ಅ ॥ ೯೦ ॥ ವಲ್ಲೆ ವಲ್ಲೆನಯ್ಯಾ ಶಿವನಶಿವಾಚಾರವಿಲ್ಲದಭವಿಗಳ ಶಿವಭಕ್ತಿಯಿಲ್ಲದವರ ವಲ್ಲೆನಯ್ಯಾ ಶಿವನಶಿವಾಚಾರವಿಲ್ಲದವರ ಭವಪಾತಕರ ಶಿವಭಕ್ತಿ ಯಿಲ್ಲದವರ ವಲ್ಲೆನಯ್ಯಾ ಶಿವಜ್ಞಾನವಿಲ್ಲದವರ ವಲ್ಲೆವಲ್ಲೆನಯ್ಯಾ ಶಿವಭಾವವಿಲ್ಲದವರ ವಲ್ಲೆವಲ್ಲೆನಯ್ಯಾ ಶಿವಚಿಂತೆಯಿಲ್ಲದವರ ವಲ್ಲೆ ನಯ್ಯಾ ನಮ್ಮ ಅಖಂಡೇಶ್ವರಾ ಶಿವಾಚಾರವಿಲ್ಲದ ಭವಪಾತಕರಾ ಯೆಚ್ಚರವಿರಬೇಕು ನಡನುಡಿಯಲ್ಲಿ ಮತ್ಸರವಿರಬೇಕು ಭವಸಂಸಾ ರದಲ್ಲಿ ಹುಚ್ಚನಾಗಿರಬೇಕು ಜಗದಕಣ್ಣಿಗೆ ಮದವು ಅಚೊತ್ತಿದಂ ತೆಯಿರಬೇಕು ಲಿಂಗದಲ್ಲಿ ಇಂತೀಗುಣಗಳುಳ್ಳಾತನೇ ಅಚ್ಚ ಶರಣರು ನೋಡಾ ಅಖಂಡೇಶ್ವರಾ ॥ ೯೧ ॥ ಇಂದುನಮ್ಮ ಮನೆಯಲ್ಲಿದೆ ವ ರಹಬೀಚನವಾಯಿತು ನಿಮಗೆಹೊಗಲಡಿಯಿಲ್ಲ ಯಾಲೆ ಕಾಮುಕಲಾ ದಿಗಳಿರ್ರ್ಯಾ ಮುಂಬಾಗಿಲಲ್ಲಿ ಕಾಲಾಂತಕನೆಂಬದೇವರ ಕುಳ್ಳಿರಿಸಿಪ್ರೊ ಜಿಸುತಿರ್ಪರು ಯಮ್ಮವರು ಇಂತಿದನರಿಯದ ನೀವು ನಿಮ್ಮಕಳೆ ಯ ವಿಶ್ವಾಸದಿಂದ ಯಮ್ಮನೆಯಕಡಿಗೆ ಸುಳಿಯದಿರಿ ಸುಳಿವಿರಿ ಯೆಂದರೆ ನಮ್ಮನಾಳ್ದ ಅಖಂಡೇಶ್ವರ ಕಂಡಡೆಶೀಳಿ ಬಿಸಾಡುವನು ಹೋಗಿರಿ ನಿಮ್ಮಬಾಳುವೆಯ ನುಳುಹಿಕೊಂಡು ॥ ೯೨ ॥ ಹೊನ್ನಿ ನಾಶೆಯುಳ್ಳನಕಾ ಪ್ರಾರಬ್ಧಕರ್ಮಬಿಡದು ಹೆಣ್ಣಿನಾಶೆಯುಳ್ಳನಕಾ ಸಂ ಚಿತಕರ್ಮಬಿಡದು ಮಣ್ಣಿನಾಶೆಯುಳ್ಳನಕಾ ಆಗಾಮಿಕರ್ಮಬಿಡದು ಇಂತೀ ತ್ರಿವಿಧಆಶೆಯುಳ್ಳನಕಾ ಭಕ್ತನಲ್ಲಾ ಮಹೇಶ್ವರನಲ್ಲಾ ಪ್ರ ಸಾದಿಯಲ್ಲಾ ಪ್ರಾಣಲಿಂಗಯಲ್ಲ ಶರಣನಲ್ಲ ಐಕ್ಯನಲ್ಲ ಅವನಿಗೆ ಮುಕ್ತಿಯೆಂಬುದು ಯೆಂದಿಗೂಯಿಲ್ಲ ಅದೇನುಕಾರಣವೆಂದಡೆ ಆತ್ರಿ ವಿಧವು ತ್ರಿಮೂರ್ತಿಗಳ ಹಂಗಾದಕಾರಣ ಆ ತ್ರಿವಿಧ ಮಲಗಳ ಬ

ಲೆಯುಹರಿದು ಆ ತ್ರಿವಿಧಗಳ ಹಂಗಹರಿದು ಲಿಂಗವೇ ಗೂಡಾಗಿರ್ಪ ಮಹಾಶರಣರ ತೋರಿಸಿ ಬದುಕಿಸಯ್ಯಾ ಅಖಂಡೇಶ್ವರಾ ॥ ೪೯ ॥ ಶಿವಶಿವಾ ಮಹಾಪ್ರಸಾದವು ಯುನ್ನ ಮನದಾಳಾಪವ ಅವಧರಿಸಯ್ಯಾ ಸ್ವಾಮಿಯುನಗೆಹೊನ್ನು ಬೇಡ ಯುನಗೆಮಣ್ಣು ಬೇಡ ಯುನಗೆ ಹೆಣ್ಣು ಬೇಡ ಯುನಗೆಯಿಹಲೋಕದ ಭೋಗಬೇಡ ಯುನಗೆ ಪರಲೋಕದ ಮೋಕ್ಷಬೇಡ ಯುನಗೆ ಅವಫಲಪದವುಬೇಡ ನಿಮ್ಮ ಶ್ರೀಚರಣವ ನೊಡಗೂಡುವ ಅವಿರಳ ಸಮರಸ ಭಕ್ತಿ ಪದವ ಕರುಣಿಸಿ ಮರ್ತ್ಯದತ್ತ ಮರಳಿ ಬಾರದಂತೆಮಾಡಯ್ಯಾ ಅಖಂಡೇಶ್ವರಾ॥ ೫೦ ॥ ನಿಮ್ಮನಿಂತು ಬೇಡಿಕೊಂಬೆನು ಕುಚಿತ್ತವಳಿದು ಸುಚಿತ್ತ ಆಚಾರಲಿಂಗದಲ್ಲಿ ಅವಿರಳ ಸಮರಸಸೌಖ್ಯವ ನರಿಯುಬಲ್ಲನೆ ಭಕ್ತನೆಂಬೆನು ಕುಚಿತ್ತ ಕುಬುದ್ಧಿ ಯುಳಿದು ಸುಬುದ್ಧಿನೆಲೆಗೊಂಡು ಗುರುಲಿಂಗದಲಿ ಅವಿರಳ ಸಮರಸ ಸೌಖ್ಯವನರಿಯುಬಲ್ಲಡೆ ಮಾಹೇಶ್ವರನೆಂಬೆನು ಅಹಂಕಾರವನಳಿದು ನಿರಹಂಕಾರವ ನೆಲೆಗೊಂಡು ಶಿವ ಪ್ರಸಾದಿಯೆಂಬುವೆನು ಕಾಮನವಳಿದು ಸುಮನವ ನೆಲೆಗೊಂಡು ಜಂಗಮಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯುಬಲ್ಲಡೆ ಪ್ರಾಣಲಿಂಗಯೆಂಬೆನು ಅಜ್ಞಾನವಳಿದು ಸುಜ್ಞಾನನೆಲೆಗೊಂಡು ಪ್ರಸಾದಲಿಂಗದಲ್ಲಿ ಅಳಿರಳ ಸಮರಸ ಸೌಖ್ಯವ ನರಿಯುಬಲ್ಲಡೆ ಶರಣನೆಂಬೆನು ದುರ್ಭಾವ ವಳಿದು ಸದ್ಭಾವ ನೆಲೆಗೊಂಡು ಮಹಾಲಿಂಗದಲ್ಲಿ ಅವಿರಳ ಸಮರಸ ಸೌಖ್ಯವ ನಯುಬಲ್ಲಡೆ ಐಶ್ವರ್ಯನೆಂಬೆನು ಐಕ್ಯನೆಂಬೆನು ಯಿಂತೀಷಡ್ವಿಧ ಬ್ರಹ್ಮವ ನೊಡ ಕೂಡಿದ ಮಹಾಶರಣರ ಪಾದಕ್ಕೆ ನಮೋ ನಮೋ ಯುಂಬೆನಯ್ಯಾ ಅಖಂಡೇಶ್ವರಾ ॥ ಗುರುವಿಗಾದರು ಆಚಾರ ಸ್ರಕ್ರಿಯುವೇಬೇಕು । ಜಂಗಮಕ್ಕಾದರು ಅರುಹುಆಚಾರ ಸ್ರಕ್ರಿಯುವೇಬೇಕು, ಅದೇನುಕಾರಣವೆಂದರೆ । ಅರುಹು ಆಚಾರಸ್ರಕ್ರಿಯೂಸಂನಹಿತಶಿವನಾಗಿರ್ಪನು । ಅರುಹುಗೆಟ್ಟುಆಚಾರತಪ್ಪಿಸ್ರಕ್ರಿಯೂಹೀನರಾಗಿ

ರ್ಪವರುಸಲ್ಲರಯ್ಯಾ ಶಿವಪಾದಕ್ಕೆ ಅಖಂಡೇಶ್ವರಾ॥ ೯೮ ॥ ಆಣವಮ
ಲ। ಮಾಯಾಮಲ । ಕಾರ್ಮಿಕಮಲವೆಂಬಮಲತ್ರಯಂಗಳಬಲೆ
ಯಲ್ಲಿಬಿದ್ದು ಹೊಡ್ಯಾಡುವಾತಗುರುವಲ್ಲಾ । ಅಂಗಮನಪ್ರಾಣೇಂ
ದ್ರಿಯಗಳಲ್ಲಿ ಮುಸುಕಿದಜ್ಞಾನಅಹಂಕಾರದಲ್ಲಿ । ಮುಂದುಗಾಣದೆ
ನಡೆಯುವಾತಜಂಗಮವಲ್ಲಾ । ಇವರಿಗೆದೇವರೆಂದು ಪೂಜಿಸುವಾತ
ಭಕ್ತನಲ್ಲಾ । ಅರುಹುಆಚಾರಹೀನರಾದ । ಗುರುಲಿಂಗಜಂಗಮರ
ದೇವರೆಂದು ಪೂಜಿಸುವಭಕ್ತರಿಗೆ । ಭವರಾಟಿಡಲಿಸತ್ತುಸತ್ತು ಹು
ಟ್ಟಿಹುಟ್ಟಿಸುತ್ತಿಸುತ್ತಿಯಿರ್ಪದು ತಪ್ಪದುನೋಡಾ ॥ಅಖ॥ ೯೮ ॥
ಇಷ್ಟಲಿಂಗದಲ್ಲಿ ತನುವಸವಿಯದೆ ಪ್ರಾಣಲಿಂಗದಲ್ಲಿ ಮನವಸವೆಯ
ದೆ ಭಾವಲಿಂಗದಲ್ಲಿ ಧನವಸವೆಯದಬರಿದೆ ನಾನುಜಂಗಮ ತಾನು
ಜಂಗಮವೆಂದು ತಮ್ಮಅಗಮ್ಯವನುಡಿದುಕೊಂಡು । ಭಕ್ತಿಯುಮರ
ತು ಮುಕ್ತಿಶೂನ್ಯರಾಗಿ । ಮುಕ್ತಿಹೊಲಬುತಪ್ಪಿ ಅಣವಮಲಮಾ
ಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಕಚ್ಚಿ ಮೂತ್ರದ
ಕುಳಿಯಲ್ಲಿ ಮುಳಿಗ್ಯಾಡುತಿರ್ಪರಪ್ಪಾ ಮೂಳಹೊಲೆಯರನೋಡ
ಲಾಗದಯ್ಯಾ ॥ಅಖ॥ ೯೯ ॥ ಜಡೆಬೋಳುಲೋಚು ದಿಗಂಬರವಧ
ರಿಸಿಕೊಂಡು ನಟಿಸುವ ಅಣ್ಣಗಳಿರಾ ನಿಮ್ಮಜಡೆಯಾವದು । ಬೋ
ಳಾವುದುಲೋಚಾವುದು ದಿಗಂಬರವಾವುದು ನೀವುಬಲ್ಲರೆಹೇಳಿರೋ
ಅರಿಯದಿದ್ದರೆನೀವುಕೇಳಿರೊ । ಭಕ್ತಿಜನವೈರಾಗ್ಯದ ಪುಂಜವೇಜ
ಡೆ। ತನುವಿನಾಶಮನದವಾಸನಾ ಧರ್ಮವನಳಿದುದೇಬೋಳು ಸಚ
ರಾಚರಪ್ರಾಣಿಗಳಮೇಲಣ ಕರುಣವೇಲೋಚು । ಸೃಷ್ಟಿಸ್ಥಿತಿಪ್ರಳ
ಯನಷ್ಟವಾದುದೇದಿಗಂಬರ । ಇಂತೀಬೇದವನರಿಯದೆ ತನುವಿನವೇ
ಷವಧರಿಸಿ ಮನದಪ್ರಕೃತಿಯಲ್ಲಿ । ಹರಿದಾಡುವಬಿನಗುಜೀವಿಗಳಾ
ದವರ ಯೆನಗೊಮ್ಮೆ ತೋರಿಸಿರಯ್ಯಾ ॥ಅಖ॥ ೧೦೦ ॥ ಷಡ್ವರ್ಗಂ
ಗಳಸಡಲಿಸಿವಡಲುಪಾಧಿಕೆಯ ನುರುಹಿ । ಷಡುಸ್ಥಲದೆನುವನರಿದು
ಷಡ್ವಾಂಹದ ಸಂಯೋಗವನರಿಯದೆ ಪೊಡವಿಪ್ರಪಂಚದಲಿ ಸಿಕ್ಕು

ಹೊಡದಾಡಿಹೊತ್ತುಗಳೆದು ಮಡದಿಹೋಗುವ ಕಡುಪಾಪಕರ ವಿರಕರೆನ್ನಬಹುದೇ ಅಯ್ಯಾ ||ಅಖ|| ೧೦೧ || ಬಳೆಗೆಬೋಳಾಗಲರಿಯದಹೊರಗೆ ವೇಷದಬೋಳಿನಲ್ಲಿ ಸುಳಿವಅಣ್ಣಗಳಕಂಡು ಬೆರಗಾದೆನಯ್ಯಾ ಅದೇನುಕಾರಣವೆಂದರೆ ಕನುಕರಣೇಂದ್ರಿಯ ವಿಷಯೂವಿಗಳ ಘನಮಹಾಲಿಂಗದಲಿ ತರಹರವಾಗಿರಬಲ್ಲರೇಬೋಳು ಹಂಮುಬಿಂಮುಗರ್ವ ಅಹಂಕಾರವನಳಿದು ದೇಬೋಳು ಅನಂತಕೋಟಿ ಬ್ರಂಹ್ಮಾಡಗಳೊಳಹೊರಗೆ ತುಂಬಿತೊಳಗಿಬೆಳಗುವ ಅಖಂಡಪರಿಪೂರ್ಣವಾದ ಪರಬ್ರಹ್ಮದಲ್ಲಿ ಬಾವತುಂಬಿರಬಲ್ಲಡೇ ಬೋಳು ಇಂತೀ ಬೋಳಿನಘನವನರಿಯದ ಗಂಡುದೋತಿದಂತೆ ಮಂಡೆಯ ಬೋಳಿಸಿಕೊಂಡು ದಿಂಡೆಯತನದಿಂದ ಕಂಡಕಂಡವರಕೂಡ ಕಲದಾಡುತಾ ಮದಮತ್ಸರುಗಳು ಮುಂದುಗೊಂಡು ಚರಿಸುತ್ತಾ ಬಂಡಭವದಲ್ಲಿ ಮುಳುಗ್ಯಾಡುತಿರ್ಪವರೇ ಬೋಳುಗಳಲ್ಲಾ ಜಾಳುಬೋಳುನೋಡಾ ||ಅಖ|| ೧೦೨ || ವಿರಕ್ತವಿರಕ್ತರೆಂದು ನುಡಿದುಕೊಂಬ ಅಣ್ಣಗಳೇ ನಿಂಮವಿರಕ್ತಿಯ ಪರಿಯೆಂತುಂಟು ಹೇಳಿರೋ ಅರಿಯದಿದ್ದರೆ ಕೇಳಿರೋ ವಿರಕ್ತನಾದಬಳಿಕ ಅಶನವ್ಯಸನ ವಿಷಯವಿಕಾರಕ್ಕೆ ದೂರನಾಗಿರಬೇಕು ವಿರಕ್ತನಾದಬಳಿಕ ಮುಂನಹೇರಿಸಿಬಿಟ್ಟು ಹೊಂಣುಹೆಂಣುಮಂಣು ಯೆಂಬಿವಮರಳಿಮುಟ್ಟದಿರಬೇಕು ವಿರಕ್ತನಾದ ಬಳಿಕ ಆಶಾಪಾಶತಾಮಸವ ತೊಲಗಿಸಬೇಕು ವಿರಕ್ತನಾದಬಳಿಕ ಅಷ್ಟಮದ ಅರಿಷಡ್ವರ್ಗಂಗಳ ನಷ್ಟಮಾಡಬೇಕು ವಿರಕ್ತನಾದಬಳಿಕ ಹಂಮುಬಿಂಮು ಗರ್ವಅಹಂಕಾರವ ಕೆಡಮೆಟ್ಟಿರಬೇಕು ವಿರಕ್ತನಾದಬಳಿಕ ಅಂಗಮನಪ್ರಾಣೇಂದ್ರಿಯಗಳಲ್ಲಿ ಅಜ್ಞಾನಕತ್ತಲೆಯ ಕಳೆದು ಸರ್ವಾವಸ್ಥೆಯಲ್ಲಿ ಲಿಂಗವರ್ಪಿಸಬೇಕು ವಿರಕ್ತದಾದಬಳಿಕ ಸಂಕಲ್ಪವಿಕಲ್ಪವನಳಿದು ಮನವುಮಹಾಲಿಂಗದಲ್ಲಿ ನಿಕ್ಷೇಪವಾಗಿರಬೇಕು ವಿರಕ್ತನಾದಬಳಿಕ ಚಿಂತೆಭ್ರಾಂತಿಗಳಳಿದು ಭಾವನಿರ್ಭಾವವಾಗಿ ಮಹಾಭಾವವು ನಿಜವಾಸವಾಗಿರಬೇಕು ಇಷ್ಟುಳ್ಳರೆಪರಮವಿ

ರಕ್ತನೆಂಬೆನು ಪಾಶವಿರಹಿತನೆಂಬೆನು ವೀರಮಾಹೇಶ್ವರನೆಂಬೆನು ಹೀಗಲ್ಲದೆ ಭ್ರಾಂತಬುದ್ಧಿಯಿಂದ ಪರರೊಡವೆ ಪರಸ್ತ್ರೀಪರದಾರಗ ಮನೆಗಳಲ್ಲಿ ಹರಿದಾಡುವಂಥಾ ಸೂಳೆಯಮಕ್ಕಳವಿರಕ್ತರೆಂದರೆ ಸಮವರಯ್ಯಾ ನಾಮಶರಣರು ||ಅಖ|| ೧೦೩ || ನಡವೆಗತಿಯಲ್ಲಿಲಿಂಗದನಡೆಯುತುಂಬಿನಡೆಯಬಲ್ಲಡೆವಿರಕ್ತರೆಂಬನು ನುಡಿಯಕೊನೆಯಲ್ಲಿ ಲಿಂಗವತುಂಬಿ ನುಡಿಯಬಲ್ಲರೆವಿರಕ್ತನೆಂಬೆನು ಮನದಕೊನೆಯಲ್ಲಿ ಲಿಂಗದನೆನಹುತುಂಬಿ ನೆನೆಯಬಲರೆವಿರಕ್ತನೆಂಬೆನು | ಭಾವದಕೊನೆಯಲ್ಲಿ ಲಿಂಗದಬೆಳಗುತುಂಬಿ ಸುಳಿಯಬಲ್ಲರೆ ವಿರಕ್ತನೆಂಬೆನು ಇಂತೀಲಿಂಗಾಂಗಸಮರಸದ ಪರಮಸುಖವನರಿಯದೆ ಅರುಹುಹೀನರಾಗಿ ಮರುವರು ಮುಂದೆಗೊಂಡು ದುರಾಚಾರಗಳಲ್ಲಿ ನಡೆವ ಭವಭಾರಿಗಳಮುಖವ ನೋಡಲಾಗದಯ್ಯಾ || ಅಖ || ೧೦೪ || ಈಶನಮರೆಯಲ್ಲಿ ವೇಷವಕೊಟ್ಟಾಡುವರೆಲ್ಲಾ ಜಂಗಮವೇ ಅಲ್ಲಲ್ಲಾ ಅದೇನುಕಾರಣವೆಂದರೆ ತಮ್ಮನಿಲವು ತಾವುಕಾಣರು ಮುಂನ ಹೋದಪುರಾತನರ ಬಟ್ಟೆಯನರಿಯರು ಭಿನ್ನಪ್ರಭೆಯಲ್ಲಿ ಮನಮಗ್ನರಾಗಿರ್ಪ ಭಿನ್ನಜೀವಿಗಳಂತಿರಲಿ ಇನ್ನು ನಿಜಜಂಗಮದ ನಿಲವುಯೆಂತೆಂದಡ ತಥ್ಯಮಿಥ್ಯರಾಗದ್ವೇಷವನಳಿದು ಸ್ತುತಿನಿಂದಾ ಸಮನಾಗಿ ಯಿಹಪರದಗತಿಗೆಡಿಸಿ ದ್ವೈತಾದ್ವೈತಂಗಳನೀಗಿ ಸತ್ಯಸದಾಚಾರವೇಅಂಗವಾಗಿ ಭಕ್ತಿಜ್ಞಾನವೈರಾಗ್ಯವೇ ಭೂಷಣಗಳಾಗಿ ಅಂಗಮನಪ್ರಾಣಾದಿ ಸಕಲಕರಣೇಂದ್ರಿಯಂಗಳೆಲ್ಲಾ ಲಿಂಗದಲ್ಲಿ ನಿಕ್ಷೇಪವಾಗಿ ಸ್ಫಟಿಕದ ಘಟದಲ್ಲಿ ಜ್ಯೋತಿಯನಿಸಿದಂತೆ ತನ್ನವಳಹೊರಗೆ ಮಹಾಜ್ಞಾನವೇತುಂಬಿ ತೊಳಗಿಬೆಳಗುತ್ತಾ ಸಕಲೋಪಾಧಿಕೆಯನುರುಹಿ ಭಕ್ತಿಭಿಕ್ಷಾಂದೇಹಿಯೆಂದು ಸುಳಿವ ಪರಮಜಂಗಮದ ಜಗತ್ಪಾವನ ಆತನನುಡಿಗಡಣವೆಲ್ಲಾ ಪರಮಬೋಧೆ ಆತನಧರ್ಮನಸ್ಪರ್ಶನವೆಲ್ಲಾ ಮಹಾಪುಣ್ಯವು ಆತನಕೃಪೆಯಿಂದ ನೋಡಿದನೋಟವೆಲ್ಲಾ ಸಕಲ ಪ್ರಾಣಿಗಳಿಗೆ ಸಾಲೋಕ್ಯಪದವು ಇಂತಪ್ಪಮಹಾಘನ ಪರಾತ್ಪರವಾ

ದ ಪರಮಜಂಗಮದ ಶ್ರೀಪಾದಕ್ಕೆ ನಮೋನಮೋ ಯೆಂಬೆನಯ್ಯಾ ಅಖಂಡೇಶ್ವರಾ ||೧೦೫|| ಯೆನ್ನ ಗರ್ವಾಹಂಕಾರವ ಕೆಡಿಸಯ್ಯಾ ಯೆನ್ನ ಅಂಗಮನಪ್ರಾಣಗಳ ಸುತ್ತಿದ ಆಶಾಪಾಶವೆಂಬ ತೊಡಕಿನಗಂಟು ಬಿಡಿಸಯ್ಯಾ ಯೆನ್ನ ಸದಾಚಾರದಲ್ಲಿ ನಡಿಸಯ್ಯಾ ಯೆನ್ನ ಪರಮ ಜೀವಾನುಭಾವ ನುಡಿಸಯ್ಯಾ ಯೆನಗೆ ಭಕ್ತಿಜ್ಞಾನವೈರಾಗ್ಯದ ಭೂಷಣವ ತೊಡಿಸ ನಿಮ್ಮ ಕರುಣದ ಕಂದನೆಂದು ಸಲಹವಯ್ಯಾ ||ಅಖ|| ||೧೦೬|| ನಿತ್ಯಲಿಂಗಾರ್ಚನೆಯ ಮಾಡಿಕೊಂಡು ಸದ್ಭಕ್ತರ ನರಸುತ್ತಾ ಭಕ್ತಿಭಿಕ್ಷೆವ ಬೇಡುವೆನೆಂದು ಬರುವಾಗ ಗ್ರಾಮದ ಬಾಗಿಲಲ್ಲಿ ತಡಿಯುವಂತೆ ಮಾಡವಯ್ಯಾ ಯೆನ್ನ ಆರಾರು ತಡೆಯದಿದ್ದರೆ ಆಗ್ರಾಮವ ಪ್ರೊಕ್ಕು ಮನೆಮನೆಯ ತಿರಗುವಂತೆ ಮಾಡಯ್ಯಾ ಯೆನ್ನ ಮನೆಮನೆಯ ತಿರುಗಿದರೆ ಯೆನ್ನ ಕಂಡು ಸರ್ವರು ಅತ್ತ ಪೋರೆಯೆನ್ನಿಕ್ಕುವಂತೆ ಮಾಡಯ್ಯಾ ಯೆನ್ನ ಆಗ್ರಾಮವನುಳಿದು ಮತ್ತೊಂದು ಗ್ರಾಮವ ನರಿಸಿಕೊಂಡು ಬರುವ ಬಟ್ಟೆಯಲ್ಲಿ ಝಳತಗಲಿ ತಲೆಗುಂದಿ ಮುಖಬಾಡಿ ವಡಲೊಳಗಃ ಕ್ಷುದಾಗ್ನಿ ಭಡಾಳಿಸಿ ತನುವಸುಟ್ಟು ನಡವಗತಿಗೆಟ್ಟು ದ್ರವಗುಂದಿ ಧರೆಗೆ ಬೀಳುವಂತೆ ಮಾಡಯ್ಯಾ ಯೆನ್ನ ಆ ಸಮಯದಲ್ಲಿ ನಿಮ್ಮ ನೆನಹು ಮರದು ಜಗದ ಭೋಗವ ನಾಶಮಾಡು ಅಖಂಡೇಶ್ವರಾ ನಿಮ್ಮ ಚರಣಕ್ಕೆ ದುರಸ್ತನ ಮಾಡಯ್ಯಾ ನನ್ನ ದೇವಾದಿದೇವ ||೧೦೭|| ವಲ್ಲೆನು ವಲ್ಲೆನಯ್ಯಾ ಜಗದ ಭೋಗೋಪಭೋಗವನು ಅದೇನು ಕಾರಣವೆಂದರೆ ಹಿಂದೆ ಅರಿಯದೆ ಮರತು ಜಗದ ಭೋಗವನಾಶ ಮಾಡಿ ಮರ್ತ್ಯಲೋಕದಲ್ಲಿ ಹುಟ್ಟಿ ನೊಂದು ಬೆಂದು ಕಂದಿ ಕುಂದಿದೆನಯ್ಯಾ ಯಿದು ಕಾರಣ ಯಿಂನ ಮುಂದೆ ಬಯಸಿದೆನಾದಡೆ ಯಖಂಡೇಶ್ವರಾ ನಿಂಮಾಣೆ ನಿಂಮ ಪಾದದಾಣೆ ನಿತ್ಯಲಿಂಗಾರ್ಚನೆಯ ಮಾಡುವೆ ಸತ್ಯಸದಾಚಾರವುಳ್ಳ ಸದ್ಭಕ್ತರ ಮಠಮಾನ್ಯವನರಿಸಿಕೊಂಡು ಹೋಗಿ ಲಿಂಗಮಂತ ಭಿಕ್ಷ ಬೇಡುವ ಅವರಿಕ್ಕಿದ ಪದಾರ್ಥವ ಚಿತ್ತಶುದ್ಧವಾಗಿ ಕೊಂಡು ಯೆನ್ನೊಡೆಯ ಅಖಂಡೇಶ್ವರ

ಲಿಂಗಸಹಿತವಾಗಿಸಲಿಸುವೆ ||೧೦೮|| ಅಂಜುವೆ ಅಂಜುವೆನಯ್ಯಾ ಗುರು ವಿನಾಣೆ ಯಿಡಲಮ್ಮದೆ ಅಂಜುವೆ ಅಂಜುವೆನಯ್ಯಾ ಲಿಂಗದಾಣೆಯನಿ ಡಲಂವದೆ ಅಂಜುವೆ ಅಂಜುವೆನಯ್ಯಾ ಜಂಗಮದಾಣೆಯ ಯಿಡಲಂ ಮದೆ ಅಂಜುವೆ ಅಂಜುವೆನಯ್ಯಾ ಅಡಿಗಡಿಗೆ ನಿಮ್ಮಶರಣರಾಣೆಯನಿ ಡಲಂಮದ ||ಅಖ|| ೧೦೯ || ಜಗವೆಲ್ಲಾ ಮುನಿದಡಂಜೆ ಆಧಿವ್ಯಾಧಿಗ ಳುಬಂದು ತನುವನಂಡಲಿಸಿದಡಂಜೆರಾಬ ಭಯಚೋರಭಯಮೃಗ ಭಯಗ್ರಹಭಯಂಗಳುಬಂದು ನಾಲ್ಕುದೆಸೆಯಲ್ಲನಿಂತು ಮುಸುಕಿ ದಡಂತೆ ಮತ್ತೊಂದಕ್ಕೆ ಅಂಜಿಅಳಕುವೆನಯ್ಯಾ ಪರರೂಡವೆ ಪರಧ ನ ಪರಸ್ತ್ರೀಯರ ಮುಟ್ಟಲಂಮದೆ ನೀಸಾಕ್ಷಿಯಾಗಿ ಅಖಂಡೇ ಶ್ವರಾ ||೧೧೦|| ಮನದೊಡೆಯಮನವನೋಡಿಹನೆಂದು ನಾಲುವಿಶೆ ಯಲ್ಲಿ ಭಯವನ್ನೊಡ್ಡಿದರೆ ಹೆದರಿ ಹಿಮ್ಮೆಟ್ಟಿದಿರ ಮನವೇಕಳವಳ ಗೊಳದೆ ಸಂಚಳವೆನಳಿದು ಅತಿಕಲವಂತವಾದೆಯಾದರೆ ಅಘಹರ ಅಖಂಡೇಶ್ವರನು ನಸುನಗುತಬಂದು ಯತ್ತಿಕೊಂಡುಮುದ್ದಾಡಿ ತಂ ನೊಳಗಿಂಬಿಟ್ಟುಕೊಂಬನುಕೇಳಾಯಲೆಮನವೆ||೧೧೧|| ವೀರಶೈವದ ಮಾಹೇಶ್ವರನು ಅಂಗಲಿಂಗದೊಳಗಡಗುವನು ಯಿದುಶೀಲವು ನೇ ಮಂಗಳಶೀಮೆಯಕಟ್ಟಿ ನಡೆಯಬೇಕೆಂದು ನುಡಿವುತಿರ್ಪದುಯನ ಗೆಸಲ್ಲಲದು ನೇಮಂಗಳು ಆವಾವಂದಡೆ ಪರಧನ ಪರಸ್ತ್ರೀಯರ ಮುಟ್ಟನೆಂಬದನ್ನ ಶೀಲ ವಡಲುಪಾಧಿಕೆಯವಿಡಿದು ಅನ್ಯರ ಅನ್ನವ ಸ್ತ್ರಗಳ ಬೇಡೆನೆಂಬುದೆ ಯನ್ನವ್ರತಾ ಸಕಲಪದಾರ್ಥಗಳು ಲಿಂ ಗಕ್ಕಕೊಡದೆ ಯನ್ನಂಗದಿಚ್ಛೆಗೆ ಕೊಳ್ಳೆನೆಂಬುದೆಯನ್ನನೇಮ ಯಿಂತೀವೆಲ್ಲಿವು ಆನೇಮಂಗಳನಳವಡಿಸಿಕೊಂಡು ಯಂನೊಡಯ ಅಖಂಡೇಶ್ವರ ಲಿಂಗವನೊಡಗೂಡಿ ಮರಳಿಬಾರನೆಂಬುದೇಯನ್ನ ಅರುಹಿನಗೊತ್ತು ||೧೧೨|| ನಡಯೊಳಗೆನುಡಿಯತುಂಬಿ ನುಡಿಯೊ ಳಗೆ ನಡೆಯತುಂಬಿ ನಡೆನುಡಿಯರಡು ಪರಿಪೂರ್ಣದಲ್ಲಿತುಂಬಿ ಲಿಂಗವ ಕೊಡಬಲ್ಲಾತನೇ ಶರಣನೋಡಾ ಅಖಂಡೇಶ್ವರಾ ನಡೆದತಪ್ಪುವರ

ಲ್ಲಾ ಶರಣರು ನುಡಿದುಹುಸಿವರೆಲ್ಲಾ ಶರಣರು ವಡಲುಪಾಧಿಕೆಯ
ಹೊದ್ದುವರಲ್ಲಶರಣರು ಅಖಂಡೇಶ್ವರ.ನಿಂಮಶರಣರಪರಿಯನೀಬಲ್ಲಲೆ
ಬಲ್ಲಿವರಲ್ಲದೆ ನಾನೆತ್ತಬಲ್ಲೆನಯ್ಯಾ ಅಖಂಡೇಶ್ವರ ॥ ೧೧೪ ॥ ಗಂಡ
ಸತ್ತನೆಂದು ಗಂಡನೊಡನೆ ಕೊಂಡವ ಬೀಳುವ ನೆಂದು ಪುಂಡ
ತಾನು ದಂಡೆಯಕಟ್ಟಿಕೊಂಡು ಹೆದರಿ ಹಿಮ್ಮೆಟ್ಟಿದರೆ ಅವಳಿಗಾ
ದ ಭಂಗವಲ್ಲದೆ ಖಂಡೆಯವಪಿಡಿದು ಕಂತಕಂಡಜನರಮುಂದೆ ಮೆರ
ದುಕೊಂಡಬಂದು ಕಿಚ್ಚಿನಕೆಂಡವಕಂಡು ಹೆದರಿಹಿಂಮೆಟ್ಟಿದರೆ ಅವಳಿ
ಗದೇಭಂಗವಲ್ಲದೆ ಶೃಂಗಾರವೆರವುದೇಅಯ್ಯಾ ಪತಿಲಿಂಗಸತಿಶರಣ ತ
ನ್ನಪತಿವ್ರತಾಭಾಷೆಯನಂಡೆನಡೆಯಲ್ಲಿತಪ್ಪಿದಡೆ ಅವನಭಂಗಕ್ಕೆ ತು
ದಿಮೊದಲಿಲ್ಲನೋಡಾ ಅಖಂಡೇಶ್ವರಾ॥ ನುಡಿಯಂತೆನಡೆಯಿಲ್ಲವ
ಯ್ಯಾಯನ್ನಲ್ಲಿ ನಡೆಯಂತೆನುಡಿಯಿಲವಯ್ಯಾಯನ್ನಲ್ಲಿ ನುಡಿಹೀನ
ಕಡುಪಾಪಿಯಯ್ಯಾನಾನು ಮಾನಹೀನ ಮಹಾಪರಾಧಿಯಯ್ಯಾ
ನಾನು ಯನ್ನೊಳಗೆಮಹಾಪರಾಧವ ನರಸಿದಡೇನು ಹುರಳಿಲ್ಲವ
ಯ್ಯಾ ನೀವೇಕರುಣಿಸಿಪಾಲಿಪುದಯ್ಯಾ ಯನ್ನ ಅಖಂಡೇಶ್ವರಾ ॥
॥೧೧೬॥ ಯನ್ನಮಾನಾಪಮಾನಗಳೆಲ್ಲಾ ನಿಮ್ಮವಯ್ಯಾ ಯನ್ನ
ಹಾನಿವೃದ್ಧಿಗಳೆಲ್ಲಾ ನಿಮ್ಮವಯ್ಯಾ ಅಖಂಡೇಶ್ವರ ನೀವುಭಕ್ತದೇ
ಹಿಕವಾಗಿ ಯನ್ನಸರ್ವಸುಖಪರಿಣಾಮವೆಲ್ಲಾ ನಿಮ್ಮವೆಂದರಿವಿವ
ಯ್ಯಾ ॥೧೧೭॥ ಶಿವಶಿವಮಹಾಪ್ರಸಾದಯನ್ನಮನವು ನಿಮ್ಮಲ್ಲಿ
ವ್ರೊಂಡುಬಯಸಿಬಡವಾಗುತಿರ್ಪದು ಅವಧರಿಸಯ್ಯಾಸ್ವಾಮಿ ಶಿವ
ನಡೆಶಿವನುಡಿಶಿವಭಾವಶಿವಾಚಾರ ಶಿವಭಕ್ತಿಶಿವಜ್ಞಾನ ಶಿವಾನುಭವ
ಶಿವಶರಣರಸಂಗ ಯಿವನ್ನೇಕರುಣಿಸಿ ಬದುಕಿಸಯ್ಯಾಯನ್ನ ಅಖಂ
ಡೇಶ್ವರಾ ॥ ೧೧೮ ॥ ಅಂತರಂಗದಲ್ಲಿ ಅಖಂಡಪರಿಪೂರ್ಣಸಜ್ಞಾನದ
ನಿಲವನರಿದು ಬಹಿರಂಗದಲ್ಲಿ ಸತ್ಯಸದಾಚಾರವನಳವಡಿಸಿಕೊಂಡು
ಹಿಂದುಮುಂದಣಭಯಲೆಹರಿದು ಆನಂದವೇಪಥವಾಗಿ ಅಭೇದ್ಯಲಿಂ
ಗವಾಗಿ ಬೆಳಕಿನಲಿಸುಳಿದು ಅಷ್ಟಾವರಣವತೋರಿಸಿ ಬದುಕಿಸ

ಯ್ಯಾಯನ್ನ ಅಖಂಡೇಶ್ವರಾ ||೧೯|| ಸೃಷ್ಟಿಸ್ಥಿತಿಪ್ರಳಯಗಳಂನೆ ಮೀರಿ ಕಾಯಜೀವದಕಷ್ಟಗುಣಂಗಳನ್ನು ನಷ್ಟವಾಗಿ ಯಿಷ್ಟಲಿಂಗ ದಲ್ಲಿ ನೆಟ್ಟನೆಮನವಡಗಿ ತೊಟ್ಟಬಿಟ್ಟಹಂಣಿನಂತೆಸುಳಿವ ಶ್ರೇಷ್ಟಶರ ಣಸಪಾದಕ್ಕೆ ನಮೋನಮೋ ಯಂಬನಯ್ಯಾ ಅಖಂಡೇಶ್ವರಾ || ||೧೦|| ಯಂಲೆಶಿವನೆಭಕ್ತದೇಹಿಕದೇಹಿಕದೇವ ನೆಂಬುದೇಯನಗೆ ನಿಶ್ಚಯವಾಗಿ ಕಾಣಬಂದತು ಅದೇನುಕಾರಣವೆಂದರೆ ಯನ್ನತನು ವೆನಿಮ್ಮತನುವಾಯಿತ್ತಾಗಿ ಯಿತನುವಿಡಿದು ಗುರುವಿನಕಂಡೆ ಯಿ ತನುವಿಡಿದುಲಿಂಗವಕಂಡೆ ಯಿತನುವಿಡಿದು ಜಂಗಮವಕಂಡೆ ಯಿತ ನುವಿಡಿದು ಪಾದತೀರ್ಥಪ್ರಸಾದವಕಂಡೆ ಯಿತನುವಿಡಿದು ನೀನೇ ನಾನಾದಪರಿಯಂಕಂಡು ಬೆರಗಾದೆನಯ್ಯಾ ||ಅಖ|| ೧೧ || ಹತ್ತು ದಿಕ್ಕಿನವಳಹೊರಗಸುತ್ತಿಸುತ್ತಿ ಸುಳಿದಾಡುವ ಯೆನಮನವು ನಿ ಲುವದಕ್ಕೆ ನೀವೇಗೊತ್ತಲ್ಲದೆ ಬೇರೆಮತ್ತ್ಯಾವಸ್ಥಾನವುಂಟೇನಯ್ಯಾ ಗಾಳಿಗಂಧವನಪ್ಪಿದಂತೆ ನಿಂಮಮುಟ್ಟಿದ ಚಿತ್ತುಯೆಂತೆತ್ತಹರಿದಾಡೆ ಯೇನುಭಯವಿಲ್ಲ ಅತ್ತತ್ತನೀವೆಯಲ್ಲದೆಬೇರೆ ಮತ್ತೇನುಯಿಲ್ಲ ವಯ್ಯಾ ಅಖಂಡೇಶ್ವರಾ ||೧೨|| ಮೂಡಿದಮೂಟವಮರದೆನಯ್ಯಾ ನಿಂಮೊಳಗೆ ನೋಡಿದನೋಟವಮರದೆನಯ್ಯಾ ನಿಂಮೊಳಗೆ ಕೂ ಡಿದಕೂಟವಮರದೆನಯ್ಯಾ ನಿಮ್ಮೊಳಗೆ ಕರ್ಪೂರದಗಿರಿಪ್ರರಿದಂತಾ ದೆನಯ್ಯಾ ನಿಂಮೊಳಗೆ ||ಅಖ||

ಪ್ರ ಸಾ ದಿ ಯ ಸ್ಥ ಳ ವು.

ಲಿಂಗಕ್ಕೆಸಮರ್ಪಿಸಿದ ಸಕಲದ್ರವ್ಯಂಗಳನ್ನು ಲಿಂಗಸಹಿತವಾಗಿ ಭೋಗಿಸಬೇಕು ಅನರ್ಪಿತವಮುಟ್ಟದಿರಬೇಕು ಅಂಗದಲ್ಲಿಅತಿಸಾವ ಧಾನಭಕ್ತಿನೆಲೆಗೊಂಡಿರಬೇಕು ಅದಂತೆದೊಡೆ ||ಶ್ಲೋ|| ಲಿಂಗಾರ್ಪಿ ತಪ್ರಸಾದಂಚಸುಭೋಗೀಲಿಂಗಸಂಯುತಂ ಅನುರ್ಪಿತವಿಸರ್ಜಂಚ ಪ್ರಸಾದೀಸ್ಥಲಮುತ್ತಮಂ || ೧ || ಯೆಂದುದಾಗಿ ಯಿಂತಪ್ಪಪರಮ

ಪ್ರಸಾದಿಗಳ ಶ್ರೀಪಾದಕ್ಕೆ ನಮೋನಮೋ ಯೆಂಬೆನಯ್ಯಾ ||ಅಖ|| || ೧ || ತ್ರಿಕರಣಂಗಳಶುದ್ಧವಾಗಿ ತ್ರಿಪದಾರ್ಥಗಳ ತ್ರಿವಿಧಲಿಂಗಕ್ಕೆ ಅರ್ಪಿಸಿತ್ರಿವಿಧಪ್ರಸಾದವನೆ ಗ್ರಹಿಕನಾಗಿರ್ಪಾತನೇ ತ್ರಿಜಗದೊಡೆಯನಯ್ಯಾ ||ಅಖ|| ೨ || ಗುರುಪ್ರಸಾದಿಯಾದರೆ ಗುರುಭಕ್ತಿಯಿಂದ ಗುರುವಿಂಗೆ ತನುವಸಮರ್ಪಿಸಬೇಕು ಲಿಂಗಪ್ರಸಾದಿಯಾದರೆ ಲಿಂಗಭಕ್ತಿಯಿಂದೇ ಲಿಂಗಕ್ಕೆಮನವಸಮರ್ಪಿಸಬೇಕು ಜಂಗಮಪ್ರಸಾದಿಯಾದರೆ ಜಂಗಮಭಕ್ತಿಯಿಂದೇ ಜಂಗಮಕ್ಕೆಧನವೆ ಸಮರ್ಪಿಸಬೇಕು ಇಂತೀತ್ರಿವಿಧಭಕ್ತಿಯಿಲ್ಲದೆ ಕಂಡವರಕಂಡು ಕಾದಿಲುಕ್ಕಿಸಿಕೊಂಡು ಅವಿಶ್ವಾಸದಿಂದಕೊಂಡರೆ ಕಂಡನಂತಿರ್ಪುದಯ್ಯಾ ಅಖಂಡೇಶ್ವರಾ || ೩ || ಗುರುಪ್ರಸಾದಿಯಾದರೆ ಗುರುವು ಹರನಿಗಿಂದಧಿಕನೆಂದು ಗುರುವಾಕ್ಯವ ಮೀರದಿರಬೇಕು ಲಿಂಗಪ್ರಸಾದಿಯಾದರೆ ತನ್ನಂಗದಮೇಲಿರ್ಪ ಲಿಂಗವಲ್ಲದೆ ಅನ್ಯದೈವಂಗಳಿಗೆರಗದಿರಬೇಕು ಜಂಗಮಪ್ರಸಾದಿಯಾದಡೆ ತಾನುತನ್ನದೆಂಬ ಅಹಂಮಮತೆಗೆಟ್ಟು ತಾನೆತಾನಾಗಿರಬೇಕು ಇಂತೀತ್ರಿವಿಧಪ್ರಸಾದವ ಕೊಂಬನವಳಿಯನರಿಯದ ಪಂಕ್ತಿಯಲ್ಲಿಕುಳಿತು ಕಂಡವರ ಕಂಡುಮಂತಿಗೆ ಕೈವಡ್ಡಿಯಿಕ್ಕಿಸಿಕೊಂಡು ಅಂತರಂಗದಲ್ಲಿ ವಿಶ್ವಾಸವಿಲ್ಲದೆ ಮನಸಿಗೆಬಂದಂತೆಮುಗಿಸುವಂತೆ ಸೂಳೆಯ ಮಕ್ಕಳಿಗೆ ಶಿವಪ್ರಸಾದದವಲುಮೆ ಯಿನ್ನೆಲ್ಲಿಯದಯ್ಯಾ ಅಖಂಡೇಶ್ವರಾ || ೪ || ಗುರುಪ್ರಸಾದವಕೊಂಬ ನೇಮವಿದ್ದಬಳಿಕಾ ಗುರುನಿಂದ್ಯವಕೇಳಲಾಗದು ಲಿಂಗಪ್ರಸಾದವಕೊಂಬ ನೇಮವಿದ್ದಬಳಿಕಾ ಲಿಂಗನಿಂದ್ಯಯ ಕೇಳದಿರಬೇಕು ಜಂಗಮಪ್ರಸಾದಿಯಾದರೆ ಜಂಗಮನಿಂಧೆಯ ಕೇಳದಿರಬೇಕು ಇಂತೀನೇಮವುಳ್ಳ ಅತ್ಯಂತಭಕ್ತನು ಅನ್ಯರಿಂದಬಂದ ಕುಂದುನಿಂದೆಯಕೇಳಿ ಸುಮ್ಮನಿರ್ದಡೆ ತಾನುಹಿಂದೆಕೊಂಡ ಪ್ರಸಾದವೆಲ್ಲಾ ಕಾಳಕೂಟವಿಷವ ಕೊಂಡಹಾಗಾಯಿತು ನೋಡಾ ಅಖಂಡೇಶ್ವರಾ || ೫ || ನೇಮವಿರಬೇಕು ಗುರುಪ್ರಸಾದವಲ್ಲದೆ ಅನ್ಯವಮುಟ್ಟೆನೆಂಬ ನೇಮವಿ-

ಬೇಕು ಲಿಂಗಪ್ರಸಾದವಲ್ಲದೆ ಅನ್ಯವಮುಟ್ಟೆನೆಂಬ ನೇಮವಿರಬೇಕು ಲಿಂಗಪ್ರಸಾದವಲ್ಲದೆ ಅನ್ಯವಮುಟ್ಟೆನೆಂಬ ನೇಮವಿರಬೇಕು ಜಂಗಮಪ್ರಸಾದವಲ್ಲದೆ ಅನ್ಯಪ್ರಸಾದವಮುಟ್ಟೆನೆಂಬ ನೇಮವಿರಬೇಕು ಇಂತೀನೇಮವುಳ್ಳ ಭಕ್ತರಿಗೆ ಗುರುಲಿಂಗ ಜಂಗಮವುಂಟು ಜಂಗಮ ಪಾದೋದಕ ಪ್ರಸಾದವುಂಟು ಭಕ್ತಿ ಮುಕ್ತಿಯುಂಟು ಇಂತೀ ನೇಮದ ಕಟ್ಟಳೆಯಿಲ್ಲದೇ ಬಾಯಿಗೆಬಂದಂತೆತಿಂದು ಮನಸಿಗೆಬಂದಂತೆ ಪರಿಣಮಿಸುವಾತಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪಾದೋದಕವಿಲ್ಲ ಪ್ರಸಾದವಿಲ್ಲ ಭಕ್ತಿಮುಕ್ತಿಯೆಂಬುವದು ಯೆಂದಿಗೂಇಲ್ಲ ನೋಡಾ ಅಖಂಡೇಶ್ವರಾ ॥ ೯ ॥ ಕಾಯದಕೈಯಮುಟ್ಟಿ ಯಿಷ್ಟ ಲಿಂಗಕ್ಕೆರೂಪವನ್ನು ಸಮರ್ಪಿಸಿದಲ್ಲಿ ಸಿದ್ಧಪ್ರಸಾದವೆನಿಸಿತ್ತು ಮನದ ಕೈಮುಟ್ಟಿ ಪ್ರಾಣಲಿಂಗಕ್ಕೆ ರುಚಿಯನರ್ಪಿಸಿದಲ್ಲಿ ಸಿದ್ಧಪ್ರಸಾದವೆನಿಸಿತು ಇಂತೀ ಶುದ್ಧಪ್ರಸಾದ ಗ್ರಹಿಕರತೋರಿಸಿ ಬದುಕಿಸಯ್ಯಾ ಅಖಂಡೇಶ್ವರಾ ॥ ೭ ॥ ಒಂದುವೇಳ್ಯ ಲಿಂಗಕ್ಕೆಕೊಟ್ಟ ಮತ್ತೊಂದುವೇಳ್ಯ ಲಿಂಗವಬಿಗಿಬಿಗಿದು ಕಟ್ಟಿಕೊಂಡು ಬಂಡಬನ್ನಿಪದಾರ್ಥವ ತನ್ನವಡಲಿಚ್ಛೆಗೆಕೊಂಡಡೆ ಅಮೇಧ್ಯವನ್ನು ಕಿಲ್ಬಿಷವನ್ನುಕೂಡಿಸಿ ತಿಂದಂತಾಯಿತು ಒಂದುವೇಳ್ಯ ಪ್ರಸಾದವೆಂದುಕೊಂಡು ಮತ್ತೊಂದುವೇಳ್ಯ ಯೆಂಜಲೆಂದು ಚಲ್ಲಿದರೆ ಪ್ರಸಾದದ್ರೋಹಿ ಅದೆಂತೆಂದೊಡೆ, " ಅಂಗಭೋಗ ಅನರ್ಪಿತಂ । ಲಿಂಗಭೋಗಪ್ರಸಾದವೆಂದು " ಗುರುವಚನವು ಅಧುಕಾರಣ ಅಂತಪ್ಪ ಪಂಚಮಹಾಪಾತಕ ಉಭಯಭ್ರಷ್ಟರ ಯೆನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ ॥ ೮ ॥ ಗುರುಪ್ರಸಾದವ ನರಿಯದವರಿಗೆ ಲಿಂಗಪ್ರಸಾದವಿಲ್ಲ ಲಿಂಗಪ್ರಸಾದವ ನರಿಯದವರಿಗೆ ಜಂಗಮಪ್ರಸಾದವಿಲ್ಲ ಜಂಗಮಪ್ರಸಾದವ ನರಿಯದವರಿಗೆ ಅರಹು ಆಚಾರವಿಲ್ಲ ಇಹಪರವ ನರಿಯದವರಿಗೆ ಭವಭಂಧದಲ್ಲಿ ಬಪ್ಪುದುನೋಡಾ ಅಖಂಡೇಶ್ವರಾ ॥೯॥ ಒಳಗೆತ್ತಿಳಿಯದೆ ಹೊರಗೆಮಾಡುವ ಮಾಟವೆಲ್ಲಾ ಅಜ್ಞಾನಗಡಣ

ದೊಳಗುವಳಗು ಗುರುಲಿಂಗಜಂಗವು ಪಾದೋದಕಪ್ರಸಾದವ ಕೊಂ
ಡೆವೆಂದು ಹೊರಗೆವೂಡುವ ಭಕ್ತಿಯುಬಿಟ್ಟರೇ ಮುಂದೆವದಗುವ
ಮುಕ್ತಿಯುಕೇಡು ಅದೆಂತೆಂದರೆ ಅಸಲುಕಳೆದಬಳಿಕ ಲಾಭವುಂಟೇ
ಇಲ್ಲ ನಿಲ್ಲುವೂಣುಷವಳಗನಕೂಟ ವ್ರೊಳಗನವೂಟವನರಿಯುದೆ ಕೆ
ಟ್ಟರುನೋಡಾಹಿರಿಯುರು ಯೆಲ್ಲಾ ಅಖಂಡೇಶ್ವರಾ ॥ ೧೦ ॥ ಆಧಾರ
ವಲ್ಲಿ ಗುರುಸಂಬಂಧವು ಸ್ವಾಧಿಷ್ಟಾನದಲ್ಲಿ ಲಿಂಗಸಮ್ಮಂಧವು ಅನಹಾ
ತೆಸಲ್ಲಿ ಪಾದೋದಕಸಮ್ಮಂಧವು ಆರುಹಿಡಿದು ಗುರುವಕೇಡರು ಲಿಂ
ಗವನೋಡಿ ಜಂಗಮುಕೂಡಿ ಪಾದೋದಕಪ್ರಸಾದ ಘನವಕಾಂಬು
ವದೇ ಅಂತರಂಗವೆನಿಸುವದು ಈ ಅಂತರಂಗವಸ್ತು ಭಕ್ತಿಹಿತಾ
ರ್ಥವಾಗಿ ಬಹಿರಂಗಕ್ಕೆಬಂದಲ್ಲಿ ಗುರುಭಕ್ತಿಲಿಂಗಪೂಜೆ ಜಂಗಮಾರಾ
ಧನೆ ಪಾದೋದಕ ಪ್ರಸಾದಸೇವನೆಯಲ್ಲಿ ಪ್ರೇಮವುಳ್ಳಡೆ ಬಹಿರಂಗ
ವೆನಿಸುವದು ಇಂತೀ ಅಂತರಂಗ ಬಹಿರಂಗದ ಮೂಟಕೂಟವ ಬೆರಸಿ
ರ್ಪ ಪರಮಪ್ರಸಾದಿಗಳ ವಳಹೊರಗೆ ಭರಿತನಾಗಿರ್ಪ ನಮ್ಮ ಅ
ಖಂಡೇಶ್ವರಾ ॥ ೧೧ ॥ ಶಿವನೆಗುರುವೆಂದುತಿಳಿದು ವಿಶ್ವಾಸಭಾವ
ತುಂಬಿರಬೇಕು ಪಾದೋದಕ ಪ್ರಸಾದದಲ್ಲಿ ಯಿಂತಪ್ಪವರಲೆ, ವಿಶ್ವಾ
ಸಭಾವವಿಲ್ಲದವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋ
ದಕವಿಲ್ಲ, ಪ್ರಸಾದವಿಲ್ಲ, ಮುಕ್ತಿಯುಂಬುವದು ಯೆಂದೆಂದಿಗೂಯಿ
ಲ್ಲ ಅವನೆಷ್ಟುದಿನವಿದ್ದರೂ ವ್ಯರ್ಥಕಾಯುನಯ್ಯಾ ಅಖಂಡೇಶ್ವರಾ
॥ ೧೨ ॥ ವಿಶ್ವಾಸನೋಟ ಜಾರಿದಡೆ ಜಾರುವನಯ್ಯ ಶ್ರೀಗುರು ವಿ
ಶ್ವಾಸನೋಟವ ಜಾರಿದಡೆ ಜಾರುವನಯ್ಯಾ ಶಿವಲಿಂಗವು ವಿಶ್ವಾಸ
ನೋಟವು ಜಾರಿದಡೆ ಜಾರುವನಯ್ಯಾ ಪರಮಜಂಗಮು ವಿಶ್ವಾಸ
ನೋಟವು ಜಾರಿದಡೆ ಜಾರುವನಯ್ಯಾ ಪಾದೋದಕ ಪ್ರಸಾದಗಳು
ಇಂತೀ ಪಂಚವಿಧವು ಪರಬ್ರಹ್ಮವೆಂದುನಂಬಿದ ಭಕ್ತರಹೃದಯದಲ್ಲಿ
ಇರನಮ್ಮ ಅಖಂಡೇಶ್ವರಾ ॥ ೧೩ ॥ ಶುದ್ಧಸುಯಿಧಾನದಲ್ಲಿ ಭಯವಿ
ಶ್ವಾಸವಿರಬೇಕು ಗುರುವಿನಲ್ಲಿಶುದ್ಧಸುಯಿಧಾನ ಭಯವಿಶ್ವಾಸವಿರ

ಬೇಕು ಲಿಂಗದಲ್ಲಿ ಶುದ್ಧಸುಯಿಧಾನೆ ಭಯವಿಶ್ವಾಸ ವಿರಬೇಕು ಜಂ
ಗಮದಲ್ಲಿ ಯಿಂತಿವರಲ್ಲಿ ಶುದ್ಧಸುಯಿಧಾನ ಭಯವಿಶ್ವಾಸವಿಲ್ಲದವ
ರು ಸಲ್ಲರಯ್ಯಾ ನಿಮ್ಮನಿಜಪದಕ್ಕೆ ಅಖಂಡೇಶ್ವರಾ ॥ ೧೪ ॥ ಭಕ್ತ
ನಾದಡೆ ಭಕ್ತಿಚಿತ್ತನಿಶ್ಚಲವಾಗಿ ಭಕ್ತಿನೆಲೆಗೊಂಡಿರಬೇಕು ಮಹೇಶ
ನಾದಡೆ ಸಕಲಧರ್ಮವು ಕ್ಷಯವಾಗಿರಬೇಕು ಪ್ರಸಾದಿಯೊದಡೆ ಶಿವ
ಜ್ಞಾನಪರಾಯಣನಾಗಿರಬೇಕು ಪ್ರಾಣಲಿಂಗಯೊದರೆ ನಿತ್ಯಾನಿತ್ಯ
ವಿಚಾರವನರಿಯಬೇಕು ಶರಣನಾದೊಡೆ ಸರ್ವಅಹಂಕಾರದ ಮೊಳೆ
ಯಮುರಿಯಬೇಕು ಐಕ್ಯನಾದಡೆ ಭಿನ್ನಭಾವವನಳಿದು ಸಮ್ಯ
ಜ್ಞಾನದೊಳಗೆ ಪ್ರೊಲ್ಯಾಡಬೇಕು ಅದೆಂತೆಂದಡೆ, ಶ್ಲೋಕ ॥ ಭಕ್ತಿ
ಕರ್ಮಕ್ಷಯೋಬುದ್ಧಿ ಆಚಾರೋಧರ್ಮಸಂಕ್ಷಯಃ । ಸಮ್ಯಜ್ಞಾನ
ಮಿಶೀಲೋಲಂ ಸ್ಥಲಷಟ್ಕರ್ಮಿದಂತಿಕಂ ॥ ೧ ॥ ಯೆಂಬುದಾಗಿ ಯಿಂತ
ಪ್ಪ ಷಡುಸ್ಥಲವೇದ್ಯರಾದ ಮಹಾಶರಣರ ವಕ್ತ್ರಮಿಕ್ಕ ಪ್ರಸಾದವ
ನನಗೆ ಕರುಣಿಸಿ ಬದುಕಿಸಯ್ಯಾ ಅಖಂಡೇಶ್ವರಾ ॥ ೧೫ ॥ ಧರ್ಮಾ
ರ್ಥಕಾಮಮೋಕ್ಷವೆಂಬ ಚತುರ್ವಿದಫಲ ಪುರುಷಾರ್ಥಂಗಳ ನಾನೊ
ಲ್ಲೆನಯ್ಯಾ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ,
ವೆಂಬ ಚತುರ್ವಿಧಫಲಂಗಳ ನಾನೊಲ್ಲೆನಯ್ಯಾ ಅಣಿಮಾದಿ ಅಷ್ಟಸಿ
ದ್ಧಿಗಳ ನಾನೊಲ್ಲೆನಯ್ಯಾ ಎಲೆಶಿವನೆ ನಿಮ್ಮಶರಣರು ವುಂಡುವುಳಿದು
ವುಗುಳಿದ ವಕ್ತ್ರದಕೊಂಡು ಮಿಕ್ಕಪ್ರಸಾದಕ್ಕೆ ಯೋಗ್ಯನಮಾಡಿ
ಬದುಕಿಸಯ್ಯಾ ಯನ್ನ ಅಖಂಡೇಶ್ವರಾ ॥ ೧೬ ॥ ಜೀವಭಾವನ
ದಿಂದ ಜೀವಜೀವನ್ನತಿಂದು ಜೀವನಜನನಮರಣಂಗಳಿಂದೆ ದುಃಖ
ಪಡುತಿರ್ಪವುನೋಡಾ ಸಕಲಪ್ರಾಣಿಗಳು ಅದೆಂತೆಂದೊಡೆ, ಶ್ಲೋ ॥
ಪೃಥ್ವೀಬೀಜತಥಾಮಾಂಸಂ ಅಪ್ಪುದ್ರವ್ಯಸುರಾಮಯಂ । ಆತ್ಮಜೀ
ವಸಮಾಯುಕ್ತಂ ಜೀವಂಜೀವೇನಭಕ್ಷಯೇತ್ ॥ ಯೆಂಬುದಾಗಿ
ಇಂತಪ್ಪ ಜೀವಮಯವಾದ ಪದಾರ್ಥವನ್ನು ಶುದ್ಧಸಂಸ್ಕಾರವಮಾ
ಡಿ ಲಿಂಗ ಜಂಗಮ ಮುಖದಲ್ಲಿ ಪದಗಿ ಪರಮಪ್ರಸಾದವನ್ನು ಭೋ

ಗಿಸುವಂಥಾ ಸದ್ಭಕ್ತಂಗೆ ಜನನಮರಣಂಗಳು ರೂಪವಾಗಿರ್ಪವ ಯ್ಯಾ ಅಖಂಡೇಶ್ವರಾ ॥ ೧೭ ॥ ಪರಿಪಾಕವಾದ ಸಕಲಪದಾರ್ಥಂ ಗಳ ಹಸ್ತಸ್ಪರ್ಶವಿಂದ ಶುದ್ಧಸಂಸ್ಕಾರವ ಮಾಡಿದಲ್ಲದೆ ಲಿಂಗಕ್ಕೆ ಸ ಮರ್ಪಿಸಲಾಗದು ಅದೇನುಕಾರಣವೆಂದಡೆ, ಹಸ್ತಸ್ಪರ್ಶನವಿಲ್ಲದಪ ದಾರ್ಥ ಉಚ್ಛಿಷ್ಟವೆನಿಸಿತು ಹಸ್ತಸ್ಪರ್ಶನವಿಲ್ಲದ ಪದಾರ್ಥವು ಪಂ ಚಭೂತಪ್ರಕೃತಿ ಜೀವಮಯವೆನಿಸಿತು ಹಸ್ತಸ್ಪರ್ಶನವಿಲ್ಲದ ಪ ದಾರ್ಥವು ಜೀರ್ಣಗೋಮಾಂಸವೆನಿಸಿತು । ಹಸ್ತಸ್ಪರ್ಶವಿಲ್ಲದ ಪ ದಾರ್ಥವು ಅಶುದ್ಧಕಿಲ್ಬಿಷವೆನಿಶಿತು ಇದಕ್ಕೆಸಾಕ್ಷಿ, ಶ್ಲೋಕ ॥ ಜಂಗ ಮಂಹಸ್ತಸ್ಪರ್ಶಂಚ ಸರ್ವದ್ರವ್ಯರಸಶುದ್ಧತೆ । ತ್ರಿಸಪಾಕನಾಸಿಸ್ಪ ರ್ಶಂ । ಪಾಪಕಿಲ್ಬಿಷಭುಂಜಯೇತ್ ॥ ೧ ॥ ಯೆಂಬುದಾಗಿ ಯಿಂತ ಪ್ಪ ಪದಾರ್ಥದ ಪೂರ್ವಾಶಯವನ್ನು ಶಿವಮಂತ್ರ ಶ್ರೀ ವಿಭೂತಿ ಯಿಂದ ಕಳೆದು ಶುದ್ಧಸಂಸ್ಕಾರವೆನಿಸಿ ಶಿವನೇತ್ರದಿಂದನೋಡಿ ಶಿವ ಹಸ್ತದಿಂದಮುಟ್ಟಿ ಶಿವಲಿಂಗಕ್ಕೆ ಅರ್ಪಿಸಿದಲ್ಲಿ ಶಿವಪ್ರಸಾದವೆನಿಶಿತು ಆ ಶಿವಪ್ರಸಾದವನ್ನು ಶಿವಲಿಂಗ ಸಂಸಹಿತನಾಗಿ ಶಿವಜಿಹ್ವೆಯಲ್ಲಿ ಭೋಗಿಸಬಲ್ಲಾತನೇ ಶಿವಶರಣನು ಆತನೇ ಶಿವಪ್ರಸಾದಿ ಆತನೇ ಶಿವಾನುಭಾವಿ ಇಂತೀ ಭೇದವನರಿಯದ ಮಾಡುವ ಮಾಟವೆಲ್ಲವು ಜೀವಗಡಣದೊಳಗಯ್ಯಾ ಅಖಂಡೇಶ್ವರಾ ॥ ೧೮ ॥ ಇಷ್ಟಲಿಂಗಕ್ಕೆ ರೂಪಪದಾರ್ಥವನರ್ಪಿಸಿ ಯಿಷ್ಟಲಿಂಗದ ಮುಖದಲ್ಲಿಯೇ ರೂಪು ಪ್ರಸಾದವ ಪಡೆಯಬಲ್ಲಡೆ ಶಿವಪ್ರಸಾದಿಯೆಂಬೆನು ಪ್ರಾಣಲಿಂಗಕ್ಕೆ ರುಚಿಪದಾರ್ಥವನರ್ಪಿಸಿ ಪ್ರಾಣಲಿಂಗದಮುಖದಲ್ಲಿಯೇ ರುಚಿಪ್ರ ಸಾದವ ಪಡೆಯಬಲ್ಲಡೆ ಶಿವಪ್ರಸಾದಿಯೆಂಬೆನು ಭಾವಲಿಂಗಕ್ಕೆ ತೃ ಪ್ತಿಪದಾರ್ಥವನರ್ಪಿಸಿ ಆಭಾವಲಿಂಗದಲ್ಲಿಯೇ ತೃಪ್ತಿಪ್ರಸಾದವ ಪ ಡೆಯಬಲ್ಲ ಶಿವಪ್ರಸಾದಿಯೆಂಬೆನು ಇಂತೀಭೇದವನರಿಯದ ಮಡಲ ಕಕ್ಕುಲಾತಿಗೆ ಮಗುವಿಕ್ಕಲಾಗಿ ಮಟ್ಟೆಸಿಕೊಂಡು ಬಾಯಿಗೆಬಂದಂತೆ ಶಿಂದು ತನುಮಕೆಡಹಿ ಮನಹೇಸಿ ರಣಭೂತನಂತೆ ಕಂಡಕಂಡತ್ತ ಚ

ಲ್ಯಾಡುವದಿಂಡೆ ಮೂಳಭಂಡ ಹೊಲೆಯರಿಗೆ ಶಿವಪ್ರಸಾದದವಲು ಮೆ ಯಿನ್ನೆಲ್ಲಿಯದಯ್ಯಾ ಅಖಂಡೇಶ್ವರಾ ॥ ೯ ॥ ಸಿಂಗದವೊಲೆವಾ ಲು ಶೀಳುಗಲ್ಲದೆ ಶೀಲುನಾಯಿಗೆ ಯೋಗ್ಯವೇಅಯ್ಯ ಶಿವಪ್ರಸಾದದ ವಲುಮೆ ಶಿವಶರಣಂಗಲ್ಲದೆ ವುಳಿದಾದ ಭವಭಾರಿಗಳಿಗಳ ವಡವುದೇ ಅಯ್ಯಾ ಅಖಂಡೇಶ್ವರಾ ॥ ೧೦ ॥ ಶಿವಪ್ರಸಾದವ ನಾರೋಗಣೆಯು ಮಾಡುವಲ್ಲಿ ಕರಣಂಗಳು ಕಡಿಗೆ ನೂಕದಿರಬೇಕು ಚಿತ್ತವು ಅತ್ತಿತ್ತ ಲು ಹರಿಯದಿರ ಬೇಕು ಶಿವಧ್ಯಾನ ಪರಾಯಣನಾಗಿರಬೇಕು ಶಿವ ಪ್ರಸಾದದಲ್ಲಿ ಮನವುಲೀಯವಾಗಿರಬೇಕು ಪ್ರಸಾದವೇ ಪರಬ್ರಹ್ಮ ವೆಂದು ಭಾವಬಲಿದಿರಬೇಕು ಭೋಜಭೋಜಿಗೆ ಶಿವಮಂತ್ರವನ್ನು ಭಜಿಸಬೇಕು ಶಿವಪ್ರಸಾದದ ಮನವಕಂಡು ಮನಹಿಗ್ಗಿ ಪರಮ ಪರಿ ಣಾಮದೊಳಗೋಲ್ಯಾಡಬೇಕು ಇಂತೀಭೇದವ ಬಲ್ಲಾತನೇ ಅಚ್ಚ ಪ್ರಸಾದಿಯಯ್ಯಾ ಅಖಂ ॥ ೧೧ ॥ ದೇವದೇವ ಮಹಾಪ್ರಸಾದ ತ್ರಿಕರಣಶುದ್ಧವಾಗಿ ಯನ್ನಭಾವದ ನಂಬುಗೆಯು ಭಾಷೆಯೆ ಬಂಣಿ ಸುತಿರ್ಪೆನು ಅವಧರಿಸಯ್ಯಾಸ್ವಾಮಿ ಗುರುಲಿಂಗಜಂಗಮಪ್ರಸಾದ ವನ್ನು ಪರಬ್ರಹ್ಮವೆಂದು ಹರುಷಾನಂದದಿಂದ ಕೈಕೊಂಡು ಪರಮಾ ನತುಂಬಿ ಆರೋಗಣೆಯಮೂಡುವ ಆ ಪ್ರಸಾದದಲ್ಲಿ ವುಪ್ಪು, ಸೊ ಪ್ಪು, ಹುಳಿ, ಕಹಿ, ವಳಿತುಹೊಲ್ಲೆ, ಪ್ರೋಚನೀಚವ ನರಸಿದನಾದಡೆ ಆಣೆನಿಮ್ಮಾಣೆಯ್ಯಾ ॥ ೧೨ ॥ ಮುಂದಿದ್ದ ಶಿವಪ್ರಸಾದದ ಘನವ ಮರದು ಯೆನ್ನವಡಲ ಕಕ್ಕುಲಾತಿಗೆ ಮತ್ತೊಂದುಪದಾರ್ಥಕ್ಕೆಮ ನವೆಳಸಿದನಾದೊಡೆ ಅಖಂ ॥ ೧೩ ॥ ಆಣೆನಿಮ್ಮಾಣೆಅಯ್ಯಾ ಜಂಗ ಮದದರ್ಶನಸ್ಪರ್ಶನದಿಂದೆನ್ನ ತನುವುಶುದ್ಧವಾಯಿತು ಜಂಗಮದ ಪಾದೋದಕ ಪ್ರಸಾದದಿಂದೆನ್ನ ಪ್ರಾಣಶುದ್ಧವಾಯಿತು ಜಂಗಮದ ಜ್ಞಾನಾನುಭವದಿಂದೆನ್ನ ಮನಶುದ್ಧಿಯಾಯಿತು ಜಂಗಮವೆನ್ನ ಪ್ರಾಣವೆಂದರಿದೆನಾಗಿ ಯನ್ನ ಸರ್ವಾಂಗಶುದ್ಧ ವಾಯಿತಯ್ಯಾ ಅಖಂಡೇಶ್ವರಾ ॥ ೧೪ ॥ ಜಂಗಮ ಜಂಗಮವೆಂದು ನುಡಿಯುತಿರ್ಪ

ರಲ್ಲಾ ಜಂಗಮದಘನವ ನಾರು ಅರಿಯರಲ್ಲಾ ಜಂಗಮವೆಂದರೆ ನಿರ್ನಾಮವು ನಿದ್ರೋಹಿ ಜಂಗಮವೆಂದರೆ ನಿರ್ಜಡನಿರಾವರಣ ಜಂಗಮವೆಂದಡೆ ನಿಸ್ಸೀಮನಿರ್ಜಾತ ಜಂಗವೆಂದಡೆ ನಿರುಪಮನಿರ್ಭೇದ್ಯ ಜಂಗಮವೆಂದಡೆ ನಿರಾಳನಿರಾಲಂಬ ಜಂಗಮವೆಂದಡೆ ನಿರಂಜನನಿರವಯವು ಇಂತಪ್ಪ ಸಚ್ಚಿದಾನಂದ ನಿತ್ಯಪರಿಪೂರ್ಣಜಂಗಮದ ಪ್ರಸಾದವಕೊಂಡು ಜನನಮರಣಂಗಳ ತೊಡಕುಹರಿದೆನಯ್ಯಾ ಅಖಂಡೇಶ್ವರಾ ॥ ೨೫ ॥ ಗುರುವೇ ಲಿಂಗವೆಂದರಿದೆನಾಗಿ ಲಿಂಗದಲ್ಲಿ ಗುರುವಿನಸಿಲುವುಕಂಡೆ ಲಿಂಗವೇ ಜಂಗಮವೆಂದರಿದೆನಾ ಜಂಗಮದಲ್ಲಿ ಲಿಂಗದ ನಿಲುವಕಂಡೆ ಜಂಗಮವೇ ನೀವೆಂದರಿದೆನಾಗಿ ನಿಮ್ಮಲ್ಲಿ ಲಿಂಗಜಂಗಮದ ನಿಲುವಕಂಡೆ ನೀವೆಪ್ರಸಾದವೆಂದರಿದೆನಾಗಿ ಪ್ರಸಾದದಲ್ಲಿ ನಿಮ್ಮನಿಲುವಕಂಡೆ ಪ್ರಸಾದವೇ ನಾನೆಂದರಿದೆನಾಗಿ ಯೆನ್ನೊಳಗೆ ನಿಮ್ಮ ಮಹಾಪ್ರಸಾದವ ನಿಲುವಕಂಡೆನಯ್ಯಾ ಅಖಂಡೇಶ್ವರಾ ॥ ೨೬ ॥ ವಮ್ಮ ನೀವೇದೇವನಾದಲ್ಲಿ ಭಕ್ತನಾಗಿರ್ಪೆನು ಮತ್ತೊಮ್ಮೆ ನಾದೇವನಾದಲ್ಲಿ ನೀವುಭಕ್ತರಾಗಿರ್ಪಿರಿ ಅದೆಂತೆಂದೊಡೆ ಯನ್ನತನುಮನ ಪ್ರಾಣೇಂದ್ರಿಯಗಳು ನಿಮಗರ್ಪಿತವಾಗಿ ನಿಮ್ಮೊಳಗೆರವು ನಿಮ್ಮಮಹಾಪ್ರಸಾದವು ಯೆನ್ನೊಳಗೆಯಿತ್ತಾಗಿ ಅಖಂಡೇಶ್ವರಾ ನೀವೇಪ್ರಸಾದಿ ನಾನೇಪ್ರಸಾದವಯ್ಯಾ ॥ ೨೭ ॥ ಗುರುಭಕ್ತಿಯಮಾಡಿದರು ಮಾಡಬಹುದು ಲಿಂಗಭಕ್ತಿಯ ಮಾಡಬಾರದಯ್ಯಾ ಅವರಿಗೆಯು ಲಿಂಗಭಕ್ತಿಯಮಾಡಿದರೂ ಮಾಡಬಹುದು ಜಂಗಮಭಕ್ತಿಯ ಮಾಡಬಾರದು ಅವರಿಗೆಯು ಇಂತೀಚತುರ್ವಿಧ ಭಕ್ತಿಯ ಭೇದವನರಿದು ಇಂಬುಗೊಂಡು ಸಂಗನ ಬಸವಣ್ಣನೆಂಬ ಸದ್ಭಕ್ತಂಗೆ ನಮೋ ನಮೋ ಯೆಂಬೆನಯ್ಯಾ ಅಖಂ ॥ ೨೮ ॥ ತನುವಿನಲ್ಲಿ ಗುರುಭಕ್ತಿನೆಲೆಗೊಂಡು ಪ್ರಾಣದಲ್ಲಿ ಪ್ರಸಾದಭಕ್ತಿ ನೆಲೆಗೊಂಡು ಆತ್ಮದಲ್ಲಿ ಜಂಗಮಭಕ್ತಿ ನೆಲೆಗೊಂಡು ಇಂತೀ ಚತುರ್ವಿಧ ಸ್ಥಾನಂಗಳಲ್ಲಿ ಚತುರ್ವಿದ ಭಕ್ತಿ ನೆಲೆಗೊಂಡು ಬಕ್ತರ ತೋ

ರಿಸಿ ಬದುಕಿಸಯ್ಯಾ ಯನ್ನ ||ಅಖ|| ೬೯ || ಕ್ರಿಯಾದೀಕ್ಷೆಯಿಂದ ಯಿಷ್ಟಲಿಂಗದಲ್ಲಿ ಯನ್ನ ತನುವನವ ಸಂಯೋಗ ಮಾಡಿದನಯ್ಯಾ ಶ್ರೀಗುರುವು ಮಂತ್ರದೀಕ್ಷೆಯಿಂದ ಪ್ರಾಣಲಿಂಗದಲ್ಲಿ ಯನ್ನ ಮನವ ಸಂಯೋಗವ ಮಾಡಿದನಯ್ಯಾ ಶ್ರೀಗುರುವು ವೇದದೀಕ್ಷೆಯಿಂದ ಭಾವಲಿಂಗದಲ್ಲಿ ಯನ್ನ ಜೀವಸಂಯೋಗವ ಮಾಡಿದನಯ್ಯಾ ಶ್ರೀಗುರುವು ಈ ತ್ರಿವಿಧಲಿಂಗದ ಪ್ರಸನ್ನ ಪ್ರಸಾದದಲ್ಲಿ ಯೆನ್ನ ಪ್ರಾಣಸಂಯೋಗವ ಮಾಡಿದ ಶ್ರೀಗುರುವಿಗೆ ನಮೋನಮೋಯೆಂಬೆನಯ್ಯಾ ||ಅಖ|| |೭೦|| ಶ್ರೀಗುರುವಿಗಿಂದಧಿಕರು ಆವಲೋಕದೊಳಗಿಲ್ಲವಯ್ಯಾ ಶ್ರೀಗುರುವಿಗಿಂದ ಪರೋಪಕಾರಿಗಳು ಮತ್ತಾರನೂ ಕಾಣೆನಯ್ಯಾ ಅದೆಂತೆಂದೊಡೆ ಯೆನ್ನ ಕಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮಶಿವಲಿಂಗಕ್ಕೆ ಯೆನ್ನ ಕಿವಿಗಳ ಭಕ್ತರೆ ಮಾಡಿದನಯ್ಯಾ ಶ್ರೀಗುರು ಪರಮಶಿವಲಿಂಗಕ್ಕೆ ಯನ್ನ ನಾಸಿಕ ನಾಲಿಗೆಯ ಭಕ್ತರ ಮಾಡಿದನಯ್ಯಾ। ಶ್ರೀಗುರು ಪರಮಶಿವಲಿಂಗಕ್ಕೆ ಯೆನ್ನ ಕರಚರಣಂಗಳ ಭಕ್ತರ ಮಾಡಿದನಯ್ಯಾ। ಶ್ರೀಗುರುವು ಪರಮಶಿವಲಿಂಗಕ್ಕೆ ಯನ್ನ ತನುವ ಸಪ್ತಣಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರುವು ಪರಮಶಿವಲಿಂಗಕ್ಕೆ ಇಂತಿವು ಮೊದಲಾಗಿ ಯನ್ನ ಸರ್ವ್ವಾವಯವಗಳೆಲ್ಲಾ ಲಿಂಗಾರ್ಪಿತಕ್ಕನುಗೊಳಿಸಿದ। ಶ್ರೀಗುರುವಿನ ಮಹಾನಿಲುವಿಂಗೆ ನಮೋನಮೋಯೆಂಬೆನಯ್ಯಾ ಅ|| ೭೧ || ತಾರಕಾಕೃತಿ ನಕಾರಪ್ರಣವ ಆಧಾರಚಕ್ರ ಸದ್ಭಕ್ತನೇ ಅಂಗ ಸುಚಿತ್ತವೆಂಬ ಹಸ್ತ ಆಚಾರಲಿಂಗ ಪ್ರಾಣವೆಂಬ ಮುಖ ಕ್ರಿಯಾಶಕ್ತಿ ಶ್ರದ್ಧಾಭಕ್ತಿ ಸುಗಂಧಪದಾರ್ಥ ಗಂಧಪ್ರಸಾದ ನಿವೃತ್ತಿಕಲೆ ಕರ್ಮಸಾದಾಖ್ಯ ಸತ್ತುವೆಂಬ ಲಕ್ಷಣ। ಪರಮವೆಂಬ ಸಾಜ್ಞಿರುಗ್ವೇದ ಯಿಂತಿವೆಲ್ಲವು। ಇಷ್ಟಲಿಂಗದ ವೃತ್ತದಲ್ಲಿ ಸಂಬಂಧವು। ದಂಡಕಾಕೃತಿ ಮಕಾರಪ್ರಣವ। ಸ್ವಾಧಿಷ್ಠಾನಚಕ್ರ ಮಹೇಶ್ವರನೆ ಅಂಗ ಸುಬುದ್ಧಿಯೇ ಹಸ್ತ ಗುರುಲಿಂಗ ಜಿಂಹೆಯೆಂಬ ಮುಖ ಜ್ಞಾನಶಕ್ತಿ ನೈಷ್ಠಿಕಾಭಕ್ತಿ। ಸುರಸಪದಾರ್ಥ ರಸಪ್ರಸಾದ ಪ್ರತಿಷ್ಠಾಕಲೆ ಕರ್ತೃ

ಸಾದಾಖ್ಯ। ಚಿತ್ತುವೆಂಬಲಕ್ಷಣ। ಗೂಢನೆಂಬಸಾಕ್ಷಿ ಯಜುರ್ವೇದ । ಇಂತಿವೆಲ್ಲವುಯಿಷ್ಟಲಿಂಗದಕಟಿಯಲ್ಲಿಸಂಮಂಧವು । ಕುಂಡ್ಲಾಕೃತಿಶಿಕಾರಪ್ರಣವು । ಮಣಿಪೂರಕಚಕ್ರಪ್ರಸಾಧಿಯು ಅಂಗನಿರಹಂಕಾರರಹಸ್ತ । ಶಿವಲಿಂಗನೇತ್ರವೆಂಬಮುಖ ಇಚ್ಛಾಶಕ್ತಿ ಸಾವಧಾನಭಕ್ತಿ ಸುರೂಪಪದಾರ್ಥ ರೂಪುಪ್ರಸಾದ ವಿದ್ಯಾಕಲೆಮೂರ್ತಿ ಸಾದಾಖ್ಯ ಕನಂದವೆಂಬಲಕ್ಷಣ । ಶರೀರಸಂಜ್ಞೆ ।ಸಾಮವೇದ। ಇಂತಿವೆಲ್ಲವುಇಷ್ಟಲಿಂಗದವರ್ತುಳದಲ್ಲಿಸಂಮಂಧವು । ಅರ್ಧಚಂದ್ರಾಕೃತಿವಕಾರಪ್ರಣವು । ಅನಹಾತಚಕ್ರಪ್ರಾಣಲಿಂಗಿಯೇ ಅಂಗಸುಮನವೆಂಬ ಹಸ್ತ ಜಂಗಮಲಿಂಗತ್ವಕ್ಕು ವೆಂಬಮುಖ ಆದಿಶಕ್ತಿ । ಅನುಭಾವಭಕ್ತಿ ಸ್ಪರ್ಶನಪದಾರ್ಥ ಸ್ಪರ್ಶನಪ್ರಸಾದ ಶಾಂತಿಕಲೆ ಅಮೂರ್ತಿಸಾದಾಖ್ಯ ನಿತ್ಯವೆಂಬಲಕ್ಷಣ ಜಂಗಮ ಲಿಂಗಕ್ಷೇತ್ರಸಾಗ್ನೆ ಅಥರ್ವಣವೇದ ಇಂತಿವೆಲ್ಲವು ಯಿಷ್ಟಲಿಂಗದ ಗೋಮುಖದಲ್ಲಿ ಸಂಮಂಧವು ದರ್ಪಣಾಕೃತಿಯೆಕಾರಪ್ರಣವು ವಿಶುದ್ಧಿಚಕ್ರಶರಣನೇ ಅಂಗಸುಜ್ಞಾನವೇ ಹಸ್ತಪ್ರಸಾದಲಿಂಗ ಶೋತ್ರವೆಂಬಮುಖ ಇಂತಿವೆಲ್ಲವು ಇಷ್ಟಲಿಂಗದನಾಳದಲ್ಲಿ ಸಮ್ಮಂಧವು ಜ್ಯೋತಿರಾಕೃತಿ ಓಂಕಾರ ಪ್ರಣವು ಅಗ್ನಚಕ್ರನಿತ್ಯನೆ ಅಂಗಸದ್ಭಾವಹಸ್ತ ಮಹಾಂಗಹೃದಯವೆಂಬ ಮುಖಸಂತೃಪ್ತಿಯೆಂಬ ಪದಾರ್ಥ ತೃಪ್ತಿಸಾದಚಿಚ್ಛಕ್ತಿ ಸಮರಸಭಕ್ತಿಶಾಂತತೀತಕಲೆ ಮಹಾಸಾದಾಖ್ಯ ಅಖಂಡವೆಂಬಲಕ್ಷಣವು ಹಾಸಾಕ್ಷಿಗಾಯತ್ರಿವೇದ ಇಂತಿವೆಲ್ಲವು ಇಷ್ಟಲಿಂಗದಲ್ಲಿಸಮ್ಮಂಧವು ಇಂತೀತೊಂಭತ್ತಾರು ಸಕೀಲಂಗಳನೊಳಕೊಂಡ ಮಹಾಘನ ಪರಾತ್ಪರವಾದ ಇಷ್ಟಲಿಂಗವನ್ನು ಕರಮನಭಾವದೊಳಗೆಕುಳ್ಳಿರಿಸಿ ಪೂಜಿಸಿ ಅರ್ಚಿಸಿಧ್ಯಾನಿಸಿಕೂಡಿ ಯರಡಳಿದ ಮಹಾಶರಣರ ಶ್ರೀಚರಣಕ್ಕೆ ನಮೋನಮೋಯೆಂಬೆನಯ್ಯ ॥ಅಖ॥ ೩೦ ॥ ಕೇಳುವ ಸುಗೀತವ ನೋಡುವಸುರೂಪುಗಳ ಲಿಂಗಾರ್ಪಿತವಮಾಡಬಲ್ಲರೆ ಪರಮಪ್ರಸಾದಯೆಂಬೆನು ವಾಸಿಸುವಗಂಧರು ಚಿಸುವಸುರ ಸಂಗಳಲಿ

ಗಾರ್ಪಿತವಮಾಡಬಲ್ಲರೆ ಪರಮಪ್ರಸಾದಿಯೆಂಬನಯ್ಯ ತಪ್ಪುವು ಟ್ಟುತಾಗುನಿರೋಧ ಸೋಂಕುಸಮ್ಮಂಧಗಳ ಲಿಂಗಾರ್ಪಿತವಮಾಡ ಬಲ್ಲರೆ ಪರಮಪ್ರಸಾದಿಯೆಂಬೆನು ಕಲ್ಲುಕಡ್ಡಿಮುಳ್ಳು ಮೊದಲಾದ ಎಲ್ಲಾಪದಾರ್ಥಂಗಳ ಲಿಂಗಾರ್ಪಿತವಮಾಡಬಲ್ಲರೆ ಪರಮಪ್ರಸಾದಿ ಯೆಂಬೆನಯ್ಯ ಛಳಿ ಮಳೆಘಾಳಿ ಬಿಸಲುಸಿಡಿಲುಮಿಂಚು ನೀರುಮೊ ದಲಾದನೆರಳುಗಳ ಲಿಂಗಾರ್ಪಿತವಮಾಡಬಲ್ಲರೆ ಪರಮಪ್ರಸಾದಿಯೆಂ ಬೆನು ಪೃಥ್ವಿಗಗನತೋರಿಕೆ ಸೂರ್ಯಚಂದ್ರಾಗ್ನಿ ತಾರಕಾಪ್ರಕಾಶಂ ಗಳ ಲಿಂಗಾರ್ಪಿತವಮಾಡಬಲ್ಲರೆ ಪರಮಪ್ರಸಾದಿಯೆಂಬೆನು ಇಂತೀ ಲಿಂಗಾರ್ಪಿತವಕೀಲವ ನರಿಯದೆ ಬರಿಡೆಪ್ರಸಾದಿಯೆಂದು ನುಡಿದು ಕೊಂಬನುಡಿಜಾಣರಕಂಡು ನಾಚಿದೆನಯ್ಯಾ ||ಅಖ|| ೩೩ || ಪೃಥ್ವಿ ಅಂಗವಾದಭಕ್ತರಿಗೆ ಸುಚಿತ್ತವೆಂಬ ಹಸ್ತ ಆಹಸ್ತಕ್ಕೆ ಕ್ರಿಯಾಶಕ್ತಿ ಆಶಕ್ತಿಗೆ ಆಚಾರಲಿಂಗ ಅದಕ್ಕೆ ಘ್ರಾಣೇಂದ್ರಿಯೇಮುಖ ಆಮುಖ ಕ್ಕೆ ಸುಗಂಧಪದಾರ್ಥವನ್ನು ಘ್ರಾಣದಲ್ಲಿಹ ಆಚಾರಲಿಂಗಕ್ಕೆ ಭಕ್ತಿ ಯಿಂದರ್ಪಿಸಿ ಸುಗಂಧಪ್ರಸಾದವನ್ನು ಪಡೆದು ಸುಖಿಸುವಾತನೇ ಸದ್ಭಕ್ತನು ಅಪ್ಪು ಅಂಗವಾದಮಹೇಶ್ವರಗೆ ಸುಬುದ್ಧಿಯೇಹಸ್ತ ಆಹಸ್ತಕ್ಕೆ ಜ್ಞಾನಶಕ್ತಿ ಆಶಕ್ತಿಗೆ ಗುರುಲಿಂಗ ಆಲಿಂಗಕ್ಕೆ ಜಿಹ್ವೇಂ ದ್ರಿಯೇಮುಖ ಆಮುಖಕ್ಕೆ ಸುರಸಪದಾರ್ಥವನ್ನು ಜಿಹ್ವೆಯಲ್ಲಿ ಹಗುರುಲಿಂಗಕ್ಕೆ ನೈಷ್ಟಿಕಾಭಕ್ತಿಯಿಂದರ್ಪಿಸಿ ಆಸುರಸಪ್ರಸಾದವನ್ನು ಪಡೆದು ಸುಖಿವಾತನೇ ಮಹೇಶ್ವರನು ಅಗ್ನಿಅಂಗವಾದ ಪ್ರಸಾದ ವನ್ನುಪಡೆದು ಸುಖಿಸುವಾತನೇ ಮಹೇಶ್ವರನು ಅಗ್ನಿಅಂಗವಾದ ಪ್ರಸಾದಿಗೆ ನಿರಹಂಕಾರವೆಂಬ ಹಸ್ತಕ್ಕೆ ಇಚ್ಛಾಶಕ್ತಿ ಆಶಕ್ತಿಗೆಶಿವ ಲಿಂಗ ಆಲಿಂಗಕ್ಕೆ ನಯನೇಂದ್ರಿಯೇಮುಖ ಅದಕ್ಕೆ ಸುರೂಪಪದಾ ರ್ಥ ಆಪದಾರ್ಥವನ್ನು ನೇತ್ರದಲ್ಲಿಹ ಶಿವಲಿಂಗಕ್ಕೆ ಸಾವಧಾನಭ ಕ್ತಿಯಿಂದರ್ಪಿಸಿ ಆಸುರೂಪುಪ್ರಸಾದವಪಡೆದು ಸುಖಿಸುವಾತನೇ ಪ್ರಸಾದಿಪವನಾಂಗವಾದ ಪ್ರಾಣಲಿಂಗಗೆ ಮುಮನವೆಂಬ ಹಸ್ತ ಅಹ

ಸ್ತಕ್ಕೆ ಆದಿಶಕ್ತಿ ಆದಿಶಕ್ತಿಗೆ ಜಂಗುವುಲಿಂಗ ಆಲಿಂಗಕ್ಕೆ ತ್ವಗೇಂದ್ರಿಯೇ ಮುಖ ಆಮುಖಕ್ಕೆ ಸುಸ್ಪರ್ಶಪಥಾರ್ಥ ಆಪದಾರ್ಥವನ್ನು ತ್ವಕ್ಕಿನಲ್ಲಿಹ ಜಂಗಮಲಿಂಗಕ್ಕೆ ಅನುಭಾವಭಕ್ತಿಯಿಂದರ್ಪಿಸಿ ಆಸುಸ್ಪರ್ಶಪದಾರ್ಥವಪಡೆದು ಸುಖಿಸುವಾತನೇ ಘ್ರಾಣಲಿಂಗ ಗಗನಾಂಗವಾದಶರಣಂಗೆ ಸುಜ್ಞಾನವೆಂಬ ಹಸ್ತ ಆಹಸ್ತಕ್ಕೆ ಪರಶಕ್ತಿಆಶಕ್ತಿಗೆ ಪ್ರಸಾದಲಿಂಗ ಆಲಿಂಗಕ್ಕೆ ಶ್ರವಣೇಂದ್ರಿಯುಮುಖ ಆಮುಖಕ್ಕೆ ಸುಶಬ್ದಪದಾರ್ಧ ಆಪದಾರ್ಥವನ್ನು ಕರ್ನದಲ್ಲಿಹ ಪ್ರಸಾದಲಿಂಗಕ್ಕೆ ಆನಂದಭಕ್ತಿಯಿಂದರ್ಪಿಸಿ ಆಸುಶಬ್ದ ಪ್ರಸಾದವಪಡೆದು ಸುಖಿಸುವಾತನೇ ಶರಣನು ಆತ್ಮನೇ ಅಂಗವಾಧೆ ಐಕ್ಯಂಗೆ ಸದ್ಭಾವವೆಂಬಹಸ್ತ ಅಹಸ್ತಕ್ಕೆ ಚಿಚ್ಛಕ್ತಿ ಆಚಿಚ್ಛಕ್ತಿಗೆ ಮಹಾಲಿಂಗ ಆಲಿಂಗಕ್ಕೆ ಹೃದಯೇಂದ್ರಿಯೇ ಮುಖ ಆಮುಖಕ್ಕೆ ಸುತೃಪ್ತಿಪದಾರ್ಥ ಆಪದಾರ್ಥವನ್ನು ಹೃದಯದಲ್ಲಿಹ ಮಹಾಲಿಂಗಕ್ಕೆ ಸಮರಸಭಕ್ತಿಯಿಂದರ್ಪಿಸಿ ಆತೃಪ್ತಿಪ್ರಸಾದವಪಡೆದು ಸುಖಿಸುವಾತನೇ ಐಕ್ಯನು ಇಂತೀ ಆರುವಿಧ ಸಕೀಲಸಂಮಂಧದರ್ಪಿತ ಅವಧಾನವನರಿದು ಆನಂದಿಸುವ ಮಹಾಪ್ರಸಾದಿಗಳ ತೋರಿಸಿ ಬದುಕಿಸಯ್ಯಾ ||ಅಖ|| ಪೃಥ್ವಿಯೆಂಬ ಭೂತಾಂಗದ ಪ್ರಕೃತಿ ವಿಕಾರವಾದ ಗುಣವಳಿದು ಭಿನ್ನಗಂಧದಹಂಗ ಆಚಾರಲಿಂಗಕ್ಕೆ ವದನವಾಗಿರ್ಪುದಯ್ಯಾ ಯನ್ನಪ್ರಾಣವು ಅಪ್ಪುವೆಂಬ ಭೂತಾಂಗದ ಪ್ರಕೃತಿವಿಕಾರವಾದ ಗುಣವಳಿದು ಭಿನ್ನರುಚಿಯ ಹಂಗನ್ನ ಹರಿದುನುಹರಿದು ಗುರುಲಿಂಗಕ್ಕೆ ವದನವಾಗಿರ್ಪುದಯ್ಯಾ ಯನ್ನಜಿಂಹ್ವೆಯು ಅಗ್ನಿಯೆಂಬ ಭೂತಾಂಗದ ಪ್ರಕೃತಿವಿಕಾರವಾದ ಗುಣವಳಿದು ಭಿನ್ನರೂಪಿನ ಹಂಗನುಹರಿದು ಶಿವಲಿಂಗಕ್ಕೆ ವದನವಾಗಿರ್ಪುದಯ್ಯಾ ಯನ್ನನೇತ್ರ ಪವನವೆಂಬ ಭೂತಾಂಗದ ಪ್ರಕೃತಿವಿಕಾರವಾದ ಗುಣವಳಿದು ಭಿನ್ನಸ್ಪರ್ಶನದ ಹಂಗನುಹರದು ಜಂಗಮಲಿಂಗಕ್ಕೆ ವದನಾಗಿರ್ಪದಯ್ಯಾ ಯುನ್ನಸರ್ವಾಂಗವು ಆಕಾಶವೆಂಬ ಭೂತಾಂಗಪ್ರಕೃತಿ ವಿಕಾರವಾದ ಗುಣವಳಿದು

ಭಿನ್ನಶಬ್ದದ ಹಂಗನ್ನು ಹರಿದು ಪ್ರಸಾದಲಿಂಗಕ್ಕೆ ವದನವಾಗಿರ್ಪು ದಯ್ಯಾ ಯನ್ನಶೋತ್ರ ಇಂತೀ ಷಡ್ವಿಧಭೂತಾಂಗದ ಪ್ರಕೃತಿವಿ ಕಾರವಾದ ಗುಣವಳಿದು ಷಡ್ವಿಧ ಭಿನ್ನಪದಾರ್ಥದ ಹಂಗನರಿದು ಷಡ್ವಿಧೇಂದ್ರಿಯಂಗಳ ಷಡ್ವಿಧಲಿಂಗಕ್ಕೆ ವದನವಾಗಿ ನಾನೇನೀನಾದೆ ನಯಾ ||ಅಖ|| ೩೫ || ಯನ್ನತನುವಿನೊಳಗೆ ನಿಮ್ಮತನವು ಅಡಗಿ ರ್ಪುದಯ್ಯಾ ನಿಮ್ಮ ತನುವಿನೊಳಗೆ ಯೆನ್ನತನವು ಅಡಗಿರ್ಪುದಯ್ಯಾ ಯನ್ನ ಮನದೊಳಗೆ ನಿಮ್ಮಮನವು ಅಡಗಿರ್ಪುದಯ್ಯಾ ನಿಮ್ಮಮನ ದೊಳಗೆ ಯೆನ್ನಮನ ಅಡಗಿರ್ಪುದಯ್ಯಾ ಯನ್ನಪ್ರಾಣದೊಳಗೆ ನಿಮ್ಮಪ್ರಾಣ ಅಡಗಿರ್ಪುದಯ್ಯಾ ನಿಮ್ಮಪ್ರಾಣದೊಳಗೆ ಯೆನ್ನಪ್ರಾ ಣ ಅಡಗಿರ್ಪುದಯ್ಯಾ ಯೆನ್ನ ಜೀವದೊಳಗೆ ನಿಮ್ಮಜೀವ ಅಡಗಿ ರ್ಪುದಯ್ಯಾ ನಿಮ್ಮಜೀವದೊಳಗೆ ಯೆನ್ನಜೀವ ಅಡಗಿರ್ಪುದಯ್ಯಾ ಯೆನ್ನ ಕರಣೇಂದ್ರಿಯಂಗಳೊಳಗೆ ನಿಮ್ಮಕರಣಂಗಳು ಅಡಗಿರ್ಪು ದಯ್ಯಾ ಯನ್ನಿಂದ್ರಿಯಂಗಳೊಳಗೆ ನಿಮ್ಮಯಿಂದ್ರಿಯಂಗಳು ಅಡಗಿ ರ್ಪುದಯ್ಯಾ ನಿಮ್ಮಿಂದ್ರಿಯಂಗಳೊಳಗೆ ಯೆನ್ನಿಂದ್ರಿಯಂಗಳು ಅಡಗಿ ರ್ಪುದಯ್ಯಾ ಯನ್ನವಿಷಯಂಗಳೊಳಗೆ ಯೆನ್ನವಿಷಯಂಗಳು ಅಡ ಗಿರ್ಪುವಯ್ಯಾ ನಿಮ್ಮವಿಷಯಂಗಳೊಳಗೆ ನಿಮ್ಮವಿಷಯಂಗಳು ಅಡಗಿರ್ಪುವಯ್ಯಾ ನಾನು ನೀನೆಂಬ ಭಿನ್ನಭಾವವಳಿದು ಪುಷ್ಪಪರಿ ಮಳದಂತೆ ರೂಪರುಚಿಯಂತೆ ಅವಿರಳಸಮರಸವಾಗಿರ್ದೆನಯ್ಯಾ ನಿಮ್ಮೊಳಗೆ ||ಅಖ|| ೩೬ || ಯನ್ನಚಿತ್ತು ಸು ಚಿತ್ತವಾಯಿತಯ್ಯಾ ಯೆನ್ನಬುದ್ಧಿಸುಬುದ್ಧಿಆಯಿತಯ್ಯಾ ಯನ್ನ ಅಹಂಕಾರ ನಿರಹಂಕಾ ರ ವಾಯಿತಯ್ಯಾ ಯನ್ನಮನಸು ಮನವಾಯಿತಯ್ಯಾ ಯೆನ್ನ ಜ್ಞಾನ ಸುಜ್ಞಾನವಾಯಿತಯ್ಯಾ ನಿಮ್ಮಮಹಾಜ್ಞಾನಸಂಗದಿಂದ ಯೆನ್ನಸಕಲಕರಣಂಗಳು ನಿಮ್ಮಲ್ಲಿ ತರಹರವಾದವಾಗಿ ||ಅಖ|| ಹಾ ಡಿದರೆ ಹಾಡುವೆನಯ್ಯಾ ನಿಮ್ಮಪರಮ ಪ್ರಸಾದವನ್ನೇ ಬೇಡಿದರೆ ಬೇಡುವೆನಯ್ಯಾ ನಿಮ್ಮಪರಮಪ್ರಸಾದವನೆ ||ಅಖ||೩೮|| ಆನಿಮ್ಮ

ಪ್ರಸಾದವೇ ಯೆನಗೆತನುವಾಯಿತು ನಿಮ್ಮಪ್ರಸಾದವೇ ಯೆನಗೆ ಮನವಾಯಿತು ನಿಮ್ಮಪ್ರಸಾದವೇ ಯೆನಗೆ. ಪ್ರಾಣವಾಯಿತು ನಿಮ್ಮಪ್ರಸಾದವೇ ಯೆನಗೆ ಜೀವವಾಯಿತು ನಿಮ್ಮಪ್ರಸಾದವೇ ಯೆನಗೆ ಕರುಣೇಂದ್ರಿಯ ವಿಷಯಂಗಳಾದವು ಇದುಕಾರಣ ಅಕಂಡೇಶ್ವರಾ ನಿಮ್ಮಮಹಾ ಪ್ರಸಾದದ ನಿಲುವಿನೊಳಗೆ ಯೆರಡಳಿದು ಪರಮಸುಖಿಯಾಗಿರ್ದೆನಯ್ಯಾ ಯೆನ್ನ ಕರಸ್ಥಲದಲಿಂಗವನ್ನು ಮನಸ್ಥಲದಲ್ಲಿ ಕುಳ್ಳಿರಿಸಿ ಘ್ರಾಣವೆಂಬ ಭೋಜನದಲ್ಲಿ ಸುಗಂಧಪದಾರ್ಥವನಡಣಿಸಿ ಸುಚಿತ್ತವೆಂಬ ಹಸ್ತದಿಂದರ್ಪಿಸಿ ಆಸುಗಂಧಪ್ರಸಾದವ ಗ್ರಹಿಸಬಲ್ಲಾತನೇ ಪ್ರಸಾದಿಜಿಹ್ವೆಯೆಂಬ ಭಾವನದಲ್ಲಿ ಸರಸಪದಾರ್ಥವಗಡಣಿಸಿ ಸುಬುದ್ಧಿಯೆಂಬ ಹಸ್ತದಿಂದರ್ಪಿಸಿ ಅಸುರಸ ಪ್ರಸಾದವ ಗ್ರಹಿಸಬಲ್ಲಾತನೇ ಪ್ರಸಾದಿ ನೇತ್ರವೆಂಬ ಭಾಜನದಲ್ಲಿ ಸುರೂಪುಪಧಾರ್ಥವ ಗಡಣಿಶಿ ನಿರಹಂಕಾರವೆಂಬ ಹಸ್ತದಿಂದರ್ಪಿಸಿ ಆಸುರೂಪು ಪ್ರಸಾದವ ಗ್ರಹಿಸಬಲ್ಲಾತನೇ ಪ್ರಸಾದಿ ತ್ವಕ್ಕೆಂಬಭಾಜನದಲ್ಲಿ ಸ್ಪರ್ಶನಪದಾರ್ಥವ ಗಡೆಣಿಸಿ ಸುಮುದವೆಂಬ ಹಸ್ತದಿಂದರ್ಪಿಸಿ ಆಸುಸ್ಪರ್ಶನ ಪ್ರಸಾದವ ಗ್ರಹಿಸಬಲ್ಲಾತನೇ ಪ್ರಸಾದಿಶೋತ್ರವೆಂಬ ಭಾಜನದಲ್ಲಿ ಸುಶಬ್ದಪದಾರ್ಥವಗಡಣಿಸಿ ಸುಗ್ನಾನವೆಂಬ ಹಸ್ತದಿಂದರ್ಪಿಸಿ ಆಸುಶಬ್ದ ಪ್ರಸಾದಗ್ರಹಿಸಬಲ್ಲಾತನೇ ಪ್ರಸಾದಿ ಹೃದಯವೆಂಬ ಭಾಜನದಲ್ಲಿ ಸುತೃಪ್ತಿಪದಾರ್ಥವಗಡಣಿಸಿ ಸದ್ಭಾವವೆಂಬ ಹಸ್ತದಿಂದರ್ಪಿಸಿ ಆಸುತೃಪ್ತಿಪ್ರಸಾದವ ಗ್ರಹಿಸಬಲ್ಲಾತನೇ ಪ್ರಸಾದಿ ಇಂತೀಷಡೇಂದ್ರಿಯಂಗಳೆಂಬ ಭಾಜನದಲ್ಲಿ ಷಡ್ವಿಧಪದಾರ್ಥವಗಡಣಿಸಿ ಷಡ್ವಿಧಹಸ್ತದಿಂದರ್ಪಿಸಿ ಷಡ್ವಿದಪ್ರಸಾದವ ಗ್ರಹಿಸಲರಿಯಬಲ್ಲಿದೆ ಪ್ರಸಾದಿಗಳೆಂದರನಗುವನಯ್ಯಾ ನಮ್ಮಅಖಂಡೇಶ್ವರಾ ||೮೧|| ಲಿಂಗಪ್ರಾಣದಲಿಂಗಕ್ಕೆ ಲಿಂಗಗಂಧವನರ್ಪಿಸಿ ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮಪ್ರಸಾದಿ ಲಿಂಗಜಿಹ್ವೆಯಲ್ಲಿ ಲಿಂಗಕ್ಕೆ ಲಿಂಗರುಚಿಯನರ್ಪಿಸಿ ಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾ ನಿಮ್ಮಪ್ರಸಾದ

ಲಿಂಗತ್ವಕ್ಕಿನಲ್ಲಿ ಲಿಂಗಕ್ಕೆ ಸ್ಪರ್ಶನವನರ್ಪಿಸಿ ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮಪ್ರಸಾದಿ ಲಿಂಗಶ್ರೋತ್ರನಲ್ಲಿ ಲಿಂಗಕ್ಕೆ ಲಿಂಗಶಬ್ದವನರ್ಪಿಸಿ ಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾ ನಿಮ್ಮಪ್ರಸಾದ ಲಿಂಗನೇತ್ರದಲ್ಲಿ ಲಿಂಗಕ್ಕೆಲಿಂಗರೂಪವನರ್ಪಿಸಿ ಲಿಂಗಪ್ರಸಾದವ ಗ್ರಹಿಸುತಿರ್ಪ ನಿಮ್ಮಪ್ರಸಾದಿ ಇಂತೀವಳಹೊರಗೆ ತೆರಹಿಲ್ಲದಲಿಂಗಕ್ಕೆ ಲಿಂಗವ ನರ್ಪಿಸಿ ಪ್ರಸಾದವ ಗ್ರಹಿಸಿ ಘನಲಿಂಗವಾಗಿರ್ಪ ಮಹಾಪ್ರಸಾದಿಗಳ ಶ್ರೀಪಾದಕ್ಕೆ ನಮೋನಮೋಯೆಂಬನಯ್ಯಾ ಅಖಂಡೇಶ್ವರಾ ||೭೧|| ಯೆನ್ನ ಘ್ರಾಣದ ಪರಿಣಾಮವ ನಿಮಗರ್ಪಿತವಯ್ಯಾ ಯೆನ್ನನೇತ್ರದ ಪರಿಣಾಮ ನಿಮಗರ್ಪಿತವಯ್ಯಾ ಯೆನ್ನಸತ್ವಕ್ಕಿನ ಪರಿಣಾಮನಿಮಗರ್ಪಿತವಯ್ಯಾ ಯೆನ್ನಶ್ರೋತ್ರದಪರಿಣಾಮ ನಿಮಗರ್ಪಿತವಯ್ಯಾ ಯೆನ್ನಹೃದಯದ ಪರಿಣಾಮ ನಿಮಗರ್ಪಿತವಯ್ಯಾ। ಯೆನ್ನ ಸರ್ವಾಂಗದ ಪರಿಣಾಮ ನಿಮಗರ್ಪಿತವಯ್ಯಾ ಅಖಂಡೇಶ್ವರಾ ||೭೨|| ಯೆನ್ನ ಘ್ರಾಣದ ಕೊನೆಯಲ್ಲಿ ಕುಳ್ಳಿರ್ದ ಷಡ್ವಿಧಗಂಧವೆಂಬ ಭಕ್ತಿಪದಾರ್ಥವಕೈಕೊಂಡು ಯೆನಗೆ ಮುಕ್ತಿಯ ಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ ಯೆನ್ನಜಿಂಹ್ವೆಯ ಕೊನೆಯಲ್ಲಿ ಕುಳ್ಳಿರ್ದ ಷಡ್ವಿಧರಸವೆಂಬ ಭಕ್ತಿಯ ಪದಾರ್ಥವಕೈಕೊಂಡುಯೆನಗೆ ಮುಕ್ತಿಯಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ ಯೆನ್ನನೇತ್ರಂಗಳ ಕೊನೆಯಲ್ಲಿ ಕುಳ್ಳಿರ್ದ ಷಡ್ವಿಧರೂಪುವೆಂಬ ಭಕ್ತಿಯಪದಾರ್ಥವ ಕೈಕೊಂಡು ಯೆನಗೆ ಮುಕ್ತಿಯಪ್ರಸಾದವನ್ನು ಕರುಣಿಸುವಾತನು ನೀನೆಯಯ್ಯಾ ಯೆನ್ನತ್ವಕ್ಕಿನ ಕೊನೆಯಲ್ಲಿ ಕುಳ್ಳಿರ್ದ ಷಡ್ವಿಧಸ್ಪರ್ಶನವೆಂಬ ಭಕ್ತಿಪದಾರ್ಥವ ಕೈಕೊಂಡು ಯೆನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಯಯ್ಯಾ ಯೆನ್ನಶ್ರೋತ್ರಗಳ ಕೊನೆಯಲ್ಲಿ ಕುಳ್ಳಿರ್ದ ಷಡ್ವಿಧಶಬ್ದವೆಂಬ ಭಕ್ತಿಪದಾರ್ಥವ ಕೈಕೊಂಡು ಯೆನಗೆಮುಕ್ತಿಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ

ನನ್ನ ಹೃದಯದ ಕೊನೆಯಲ್ಲಿ ಕುಳ್ಳಿರ್ದು ಷಡ್ವಿಧ ತೃಪ್ತಿಯೆಂಬ ಭಕ್ತಿಪದಾರ್ಥವನ್ನು ಕೈಕೊಂಡುಯೆನಗೆ ಮುಕ್ತಿಪ್ರಸಾದವನ್ನು ಕರುಣಿಸು ವಾತನು ನೀನೇಯಯ್ಯಾ ಅಖಂಡೇಶ್ವರಾ ॥ ೪೩ ॥ ಯೆನ್ನ ಶ್ರೋತ್ರಂಗಳು ಶಬ್ದವಗ್ರಹಿಸುವದಕ್ಕೆ ಮೊದಲೇ ನಿಮಗರ್ಪಿತವಯ್ಯಾ ಯೆನ್ನ ನೇತ್ರಗಳು ರೂಪಗ್ರಹಿಸುವದಕ್ಕೆ ಮೊದಲೇ ನಿಮಗರ್ಪಿತವಯ್ಯಾ ಯೆನ್ನ ಘ್ರಾಣವು ಗಂಧವಗ್ರಹಿಸುವದಕ್ಕೆ ಮೊದಲೇ ನಿಮಗರ್ಪಿತವಯ್ಯಾ ಯೆನ್ನ ಜಿಹ್ವೆಯು ರುಚಿಯಗ್ರಹಿಸುವದಕ್ಕೆ ಮೊದಲೇ ನಿಮಗರ್ಪಿತವಯ್ಯಾ ಯೆನ್ನ ತ್ವಕ್ಕು ಸ್ಪರ್ಶನವ ಗ್ರಹಿಸುವದಕ್ಕೆ ಮೊದಲೇ ನಿಮಗರ್ಪಿತವಯ್ಯಾ ಇದುಕಾರಣ ಅಖಂಡೇಶ್ವರನೇ ನಿಮಗರಿಬುಕೊಡಬೇಕೆಂಬ ಖಂಡಿತಭಾವವು ಅಖಂಡಮಯ ವಾಯಿತಯ್ಯಾ ಅಖಂಡೇಶ್ವರಾ ॥ ೪೪ ॥ ಯೆನ್ನ ಘ್ರಾಣ ಸಮರಸವಾಯಿತಯ್ಯಾ ನಿಮ್ಮ ಗಂಧಪ್ರಸಾದವಗ್ರಹಿಸಿ ನಿಮ್ಮೊಳಗೆ ಯೆನ್ನ ಜಿಹ್ವೆ ಸಮರಸವಾಯಿತಯ್ಯಾ ನಿಮ್ಮ ರುಚಿಯಪ್ರಸಾದವ ಗ್ರಹಿಸಿ ನಿಮ್ಮೊಳಗೆ ಯೆನ್ನ ನೇತ್ರ ಸಮರಸವಾದವಯ್ಯಾ ನಿಮ್ಮ ರೂಪಪ್ರಸಾದವ ಗ್ರಹಿಸಿ ನಿಮ್ಮೊಳಗೆ ಯೆನ್ನ ತ್ವಕ್ಕು ಸಮರಸ ವಾಯಿತಯ್ಯಾ ನಿಮ್ಮ ಸ್ಪರ್ಶನ ಪ್ರಸಾದವಗ್ರಹಿಸಿ ನಿಮ್ಮೊಳಗೆಯೆನ್ನ ಶ್ರೋತ್ರ ಸಮರಸವಾದವಯ್ಯಾ ನಿಮ್ಮ ಶಬ್ದಪ್ರಸಾದವ ಗ್ರಹಿಸಿ ನಿಮ್ಮೊಳಗೆ ಯೆನ್ನ ಹೃದಯ ಸಮರಸ ವಾಯಿತಯ್ಯಾ ನಿಮ್ಮ ತೃಪ್ತಿಪ್ರಸಾದವಗ್ರಹಿಸಿ ನಿಮ್ಮೊಳಗೆ ಯೆನ್ನ ಸರ್ವಾಂಗವು ಸಮರಸವಾಯಿತಯ್ಯಾ ನಿಮ್ಮ ಮಹಾಪ್ರಸಾದವಗ್ರಹಿಸಿ ನಿಮ್ಮೊಳಗೆ ಅ॥ ೪೫ ॥ ಯೆನ್ನ ತನುವು ನಿಮ್ಮ ತೃಪ್ತಿಪ್ರಸಾದವನೆ ಸೋಂಕುತಿರ್ಪುದಯ್ಯಾ ಎನ್ನ ಮನವು ನಿಮ್ಮ ಪ್ರಸಾದವನೆ ಹಾರೈಸುತಿರ್ಪುದಯ್ಯಾ ಯೆನ್ನ ಪ್ರಾಣವು ನಿಮ್ಮ ಪ್ರಸಾದವನೆ ಹಾರೈಸುತಿರ್ಪುದಯ್ಯಾ ಯೆನ್ನ ಭಾವವು ನಿಮ್ಮ ಪ್ರಸಾದವನೆ ಹಾರೈಸುತಿರ್ಪುದಯ್ಯಾ ಯೆನ್ನ ಕರಣೇಂದ್ರಿಯಗಳು ನಿಮ್ಮ ಪ್ರಸಾದವನೆ ಗ್ರಹಿಸುತಿರ್ಪವಯ್ಯಾ ಅ॥

೪೬ ॥ ಯನ್ನ ನೇತ್ರಪ್ರಸಾದವಯ್ಯಾ ಯೆನ್ನ ಶೂತ್ರಪ್ರಸಾದವಯಾ ಯೆನ್ನ ಘ್ರಾಣಪ್ರಸಾದವಯ್ಯಾ ಯೆನ್ನ ಶೋತ್ರ ಪ್ರಸಾದವಯ್ಯಾ ಯನ್ನ ಘ್ರಾಣ ಪ್ರಸಾದವಾಯಿತಯ್ಯಾ ಯನ್ನ ಜಿಹ್ವೆ ಪ್ರಸಾದವಾಯಿತಯ್ಯಾ ಯನ್ನ ತನುಪ್ರಸಾದ ವಾಯಿತಯ್ಯಾ ಯನ್ನ ಮನವು ಪ್ರಸಾದವಾಯಿತಯ್ಯಾ ಯೆನ್ನ ಪ್ರಾಣವು ಪ್ರಸಾದವಾಯಿತಯ್ಯಾ ಯನ್ನ ಭಾವವು ಪ್ರಸಾದವಾಯಿತಯ್ಯಾ ಯನ್ನ ಜೀವವು ಪ್ರಸಾದ ವಾಯಿತಯ್ಯಾ ಯನ್ನ ಸಕಲಕರಣೇಂದ್ರಿಯಂಗಳೆಲ್ಲಾ ಪ್ರಸಾದವಯ್ಯಾ ॥ಅ॥ ನಿಮ್ಮ ಮಹಾಪ್ರಸಾದದ ಬೆಳಗಿನೊಳು ಗೋಲ್ಯಾಡುತಿರ್ಪೆನಯ್ಯಾ ॥ ೪೭ ॥ ಯನ್ನ ಆದಿವ್ಯಾಧಿಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಆಗುಹೋಗುಗಳೆಲ್ಲಾ ಪ್ರಸಾದವಯ್ಯಾ ಯನ್ನ ನಿರೋಧಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಅರುಹುಮರುಹುಗಳೆಲ್ಲಾ ಪ್ರಸಾದವಯ್ಯಾ ಯನ್ನ ಸುಖದುಃಖಗಳೆಲ್ಲಾ ಪ್ರಸಾದವಯ್ಯಾ ಯನ್ನ ಮಾನಾಪಮಾನಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಚಿತ್ತುಸುಚಿತ್ತುಗಳೆಲ್ಲಾ ಪ್ರಸಾದವಯ್ಯಾ ಯನ್ನ ಬುದ್ಧಿಸುಬುದ್ಧಿಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಸುಮನವ್ಯಾಕುಲಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಸಜ್ಜನಮಮತೆಗಳೆಲ್ಲಾ ಪ್ರಸಾದವಯ್ಯಾ ಯನ್ನ ಸುಳುಹುಸಂಚಾರಗಳೆಲ್ಲಾ ಪ್ರಸಾದವಯ್ಯಾ ಯನ್ನ ಹಾನಿವೃದ್ಧಿಗಳೆಲ್ಲಾ ಪ್ರಸಾದವಯ್ಯಾ ಯನ್ನ ಭಯಭೀತಿಗಳೆಲ್ಲ ಪ್ರಸಾದವಯ್ಯಾ ಯೆನ್ನ ಹಾನಿವೃದ್ಧಿಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಭಯಭೀತಿಗಳೆಲ್ಲ ಪ್ರಸಾದವಯ್ಯಾ ಯೆನ್ನ ಲಜ್ಜೆಮೋಹಗಳೆಲ್ಲ ಪ್ರಸಾದವಯ್ಯಾ ಯೆನ್ನ ಜ್ಞಾನಾಜ್ಞಾನಿಗಳೆಲ್ಲ ಪ್ರಸಾದವಯ್ಯಾ ಯೆನ್ನ ಭಾವ ಸದ್ಭಾವಗಳೆಲ್ಲ ಪ್ರಸಾದವಯ್ಯಾ ಯೆನ್ನ ತತ್ವತೋರಿಕೆಗಳೆಲ್ಲ ಪ್ರಸಾದವಯ್ಯಾ ಯೆನ್ನ ಒಳಹೊರಗೆ ಪ್ರಸಾದವಯ್ಯಾ ಯೆನ್ನ ಕೀಳುಮೇಲುಗಳೆಲ್ಲಾ ಪ್ರಸಾದವಯ್ಯಾ ಯೆನ್ನ ಯೆಡಬಲವೆಲ್ಲಾ ಪ್ರಸಾದವಯ್ಯಾ ಇಂತಾಗಿ ಅಖಂಡೇಶ್ವರನೆಂಬಪ್ರಸಾದ ಶರಧಿಯೊಳಗೆ ನಾನೆಂಬುದು

ಮುಳಿಗಿ ನೆಲೆದಪ್ಪಿಹೋದೆನಯ್ಯಾ ಪೃಥ್ವೀ ಆಕಾಶದೊಳಗೆಲ್ಲಾ ನಿಮ್ಮಪ್ರಸಾದದಬೆಳಗು ತುಂಬಿರ್ಪುದಯ್ಯಾ ಇಲ್ಲ್ಯಂಟುಅಲ್ಲಿಲ್ಲ ವೇಂಬುವಪಕ್ಕೆ ತೆರಯಿಲ್ಲವಯ್ಯಾ ||ಅಖ|| ೪೯ || ಕಾಯುವಿಲ್ಲದ ಪುರುಷನು ಕಸವಲ್ಲದಭೂಮಿಯಲ್ಲಿ ಕಾಮಿತವಿಲ್ಲದೆ ಬೀಜವಬಿತ್ತಲು ಅದು ಅಂಕುರಿಸಿ ಯೆಲೆಯೆರಡಾಯಿತು ಶಾಖೆಮೂರಾಯಿತು ಕೊಂಬೆಆರಾಯಿತು ಕುಸುಮ ಮುವ್ವತ್ತಾರಾಯಿತು ಕಾಯಿ ಯಿನ್ನೂರಾಹದಿನಾರಾಯಿತು ಹಣ್ಣುವಿಶ್ವಪರಿಪೂರ್ಣವಾಯಿತು ಅದು ಅಜಾಂಡದಸುತುಂಬಿ ಬಟ್ಟಬಯಲಲ್ಲಿ ತೆಟ್ಟುಬಿತ್ತು ಆಹಣ್ಣುನಾನು ಕಣ್ಣಿಲ್ಲದೆನೋಡಿದೆ ಕೈಯಿಲ್ಲದೆ ಮುಟ್ಟಿದೆ ಬಾಯಿಯಿಲ್ಲದಸವಿದು ಮನವಿಲ್ಲದೆ ಪರಿಣಾಮಿಸಿದೆನಾಗಿ ಅಖಂಡೇಶ್ವರನು ತನ್ನೊಳಗೆ ಯಿಂಬಿಟ್ಟುಕೊಂಡನು ||೫೦|| ಅಡಿಮುಡಿಯಿಲ್ಲದ ಪ್ರಸಾದ ನಡುಂಡೆಯಿಲ್ಲದಪ್ರಸಾದ ಯೆಡಬಿಡವಿಲ್ಲದಪ್ರಶಾದ ಅಖಂಡೇಶ್ವರಾ ನೀವೆಂಬ ಮಹಾಘನಪರಾತ್ಪರ ಪರಿಪೂರ್ಣ ಪ್ರಶಾದದೊಳಗೆ ಮನವಡಗಿ ನೆನಹುನಿಷ್ಪತ್ತಿಯಾಗಿಯೇನು ಅರಿಯದಿರ್ದನಯ್ಯಾ ||ಅಖ|| ೫೧ ||

ಪ್ರಾಣಲಿಂಗಿಯ ಸ್ಥಲವು.

ಪ್ರಾಣವಾಯುಗಳ ಸಂಚಳಗುಣವಳಿದಿರಬೇಕು ಮುಂಚುವ ಕರಣಂಗಳ ವರ್ತನೆಯನತಿಗಳೆದಿರಬೇಕು ಲಿಂಗದಲ್ಲಿ ಅಚ್ಚೊತ್ತಿದಂತಿರಬೇಕು ಪ್ರಾಣವು ಲಿಂಗದಲ್ಲಿಕೂಡಿ ಲಿಂಗ ಪ್ರಾಣಲ್ಲಿಕೂಡಿ ಭಿನ್ನವಿಲ್ಲದೇ ಕಸಮರಸವಾಗಿರಬೇಕು ಸುಖದುಃಖನಾಸ್ತಿಯಾಗಿರಬೇಕು ಇಷ್ಟುವುಳ್ಳಾತನೇ ಪ್ರಾಣಲಿಂಗ ಅದೆಂತೆಂದೊಡೆ ||ಶ್ಲೋ|| ವಾಯುಃ ಪ್ರಾಣಗುಣಾಲಿಂಗ ಲಿಂಗಪ್ರಾಣಸಮೋಹಿತಃ ಸುಖದುಃಖಭವಂನಾಸ್ತಿ ಪ್ರಾಣಲಿಂಗಸ್ಥಲಂಭವೇತ್ ||೧|| ಯೆಂದದಾಗಿ ಯಿಂತಪ್ಪ ಪ್ರಾಣಲಿಂಗಗಳ ಶ್ರೀಪಾದಕ್ಕೆ ನಮೋನಮೋಯೆಂಬೆನಯ್ಯಾ ||ಅಖ|| ಪ್ರಾಣಲಿಂಗಿಯೆಂದು ಪ್ರಾಣಲಿಂಗದನುಡಿಗಡಣವ ಕಲಿತು ನುಡಿಯುವರಲ್ಲಾ ಪ್ರಾಣಲಿಂಗದ ಹೊಲಬುನರಿಯದೆ ಪ್ರಾಣಲಿಂಗದ ಸ್ಥಲವ

ನರಿಯದೆ ಪ್ರಾಣಲಿಂಗದ ಬೆಳಗನರಿಯದೆ ಪ್ರಾಣಲಿಂಗದಕಳೆಯನರಿಯರು ಪ್ರಾಣಲಿಂಗದ ಮನವನಿಮ್ಮ ಅನಾದನಾದ ಪ್ರಾಣಲಿಂಗಯೇ ಬಲ್ಲನಲ್ಲದೆ ಪುಳಿದಾದ ಪ್ರಪಂಚದೇಹಿಗಳೆಂತುಬಲರಯ್ಯಾ ||ಅಖ|| ೧ || ಕ್ಷೀರದರುಚಿಯ ಹಂಸಬಲ್ಲದಲ್ಲದೆ ನೀರೊಳಗಿರ್ಪ ನೀರಕೋಳಿತ್ತ ಬಲ್ಲದಯ್ಯಾ ಕಬ್ಬಿನಸ್ವಾದವಮದಗಜ ಬಲ್ಲದಲ್ಲದ ಸೋಗೆಯ ತೆಂಬಕುರಿಯೆತ್ತ ಬಲ್ಲದಯ್ಯಾ ಪುಷ್ಪದಪರಿಮಳವ ಭ್ರಮರಬಲ್ಲದಲ್ಲದೆ ಮರವಕಡಿವಹುಳವೆತ್ತಬಲ್ಲದಯ್ಯಾ ಆದಿಯಸ್ಥಳಕುಲವನಿರ್ನಯಿಪ ಅನಾದಿ ಶರಣಬಲ್ಲನಲ್ಲದೆ ಈಲೋಕದ ಗಾದೆಯಮನುಜರುಯೆತ್ತಬಲ್ಲರಯ್ಯಾ ||೩|| ಪಿಂಡದೊಳಗೆ ಪ್ರಾಣವಿರ್ಪುದನೆಲ್ಲರು ಬಲ್ಲರಲ್ಲದೆ ಪ್ರಾಣದೊಳಗೆ ಶಬ್ದವಿರ್ಪುದನ್ಯಾರು ಅರಿಯರಲ್ಲ ಪ್ರಾಣದೊಳಗೆ ಶಬ್ದಯಿರ್ಪುದನೆಲ್ಲರು ಬಲ್ಲರಲ್ಲದೆ ಶಬ್ದದೊಳು ನಾದಯಿರ್ಪುದನ್ಯಾರು ಅರಿಯರಲ್ಲ ಶಬ್ದದೊಳಗೆನಾದ ಯಿರ್ಪುದು ಬಲ್ಲರಲ್ಲದೆನಾದದೊಳಗೆ ಮಂತ್ರಯಿರ್ಪುದನ್ಯಾರು ಅರಿಯರಲ್ಲ ಅನರೊಳಗೆ ಮಂತ್ರಯಿರ್ಪುದನೆಲ್ಲರು ಬಲ್ಲರಲ್ಲದೆ ಮಂತ್ರದೊಳಗೆ ಶಿವನಿಪ್ಪುದನ್ಯಾರು ಅರಿಯರಲ್ಲ ಮಂತ್ರದೊಳಗೆ ಶಿವನಿರ್ಪುದನೆಲರು ಬಲ್ಲರಲ್ಲದೆ ಆ ಶಿವನಕೂಡುವ ಅವಿರಳ ಸಮರಸಮಂ ಯಾರು ಅರಿಯರಲ್ಲ || ಅಖಂಡೇಶ್ವರಾ || ೪ || ವೇದಶಾಸ್ತ್ರ ಅಗಮ ಪುರಾಣತರ್ಕ ವ್ಯಾಕರಣ ಯಿತಿಹಾಸಗಳನೋದಿ ಕೇಳಿಹೇಳು ವಾತಜಾಣನೆ ಅಲ್ಲಲ್ಲಾ ಜಾತಿಗೊಂದು ಮಾತುಕಲಿತು ಸರ್ವರಿಗು ಹೇಳಲಾತಜಾಜಾಣನೆ ಅಲ್ಲಲ್ಲಾ ಮತ್ತಾವನು ಜಾಣನೆಂದರೆ ಮಂದಮತಿಯೆಂಬ ಕತ್ತಲೆಯಕಳೆದು ತಥ್ಯಮಿಥ್ಯರಾಗ ದ್ವೇಷಗಳ ನುಳಿದು ನಿತ್ಯಲಿಂಗದಲ್ಲಿ ಚಿತ್ತವಡಗಿರ್ಪಚಿನ್ಮಯ ಶರಣನೇ ಜಾಣನಯ್ಯಾ ||ಅಖ|| ೫ || ವೇದವನೋದಿದವೇದಜ್ಞರು ಸರಿಯಲ್ಲ ಶಾಸ್ತ್ರವನೋದಿ ದಶಾಸ್ತ್ರಗಳು ಸರಿಅಲ್ಲ ಅಗಮವನೋದಿದ ಅಗಮಜ್ಞರು ಸರಿಯಲ್ಲಾ

ಆದಿಅನಾದಿಯಿಂದತ್ತತ್ತವಾದ ಮಹಾಘನವಸ್ತುವನೊಡಗೂಡಿದ ಶರಣಂಗೆ ಇವರಾರು ಸರಿಯಿಲ್ಲವಯ್ಯಾ ||ಅಖ|| ೬ || ವೇದಂಗಳು ನಿಮ್ಮಭೇದಿಸಿ ಕಂಡಿಹವೆಂದರೆ ಕಾಣಲರಿಯದಬಳಲಿಬೆಂಡಾಗಿ ಹೋದವು ಶಾಸ್ತ್ರಂಗಳು ಶಾಧಿಸಿ ಕಂಡಿಹವೆಂದರೆ ಕಾಣಲರಿಯದೆ ಸಂದೇಹಕ್ಕೊಳಗಾಗಿ ಹೋದವು ಅಗಮಂಗಳು ಅರಸಿಕಂಡಿಹವೆಂದರೆ ಕಾಣಲರಿಯದೆ ಮೂಗಾಗಿಹೋದವು ಯಿಂತೀ ವೇದಶಾಸ್ತ್ರ ಆಗಮಂಗಳನೋಡಿ ನಿಮ್ಮ ಕಂಡಿಹವೆಂಬರೆಲಾ ಯಿಂನತ್ತಕಂಡಿಹರಯ್ಯಾ ||ಅಖ|| ೭ || ವೇದಂಗಳಿಗೆ ಅಭೇದ್ಯವಾದ ಶಿವನಭೇದಿಸಿ ಕಂಡರು ನೋಡಾ ಶರಣಶರಣರು ಶಾಸ್ತ್ರಂಗಳಿಗಶಾಧ್ಯವಾದ ಶಿವನಸೋಧಿಸಿ ಕಂಡರುನೋಡಾ ಶರಣರು ಆಗಮಂಗಳು ಯಿತಿಹಾಸತರ್ಕ ಸಾದ್ಯವಾದ ಶಿವನಅರಸಿಕಂಡರು ನೋಡಾ ಶರಣರು ಆಗಮ್ಯ ಅಪ್ರಮಾಣವಾದ ಪರಶಿವನ ಪ್ರಮಾಣಿಸಿ ಕಂಡು ವಳಹೊಕ್ಕು ಬೆರಸಿದರುನೋಡಾ ನಿಮ್ಮಶರಣರು ||ಅಖ|| ೮ || ಯಿತರಹಳಿದು ತನ್ನ ಬಣ್ಣಿಸುವನ್ನಕ್ಕರಶಿವಜ್ಞಾನಿಯೆಂತಪ್ಪನಯ್ಯಾಹಮ್ಮುಬಿಮ್ಮುಹೆಮ್ಮೆಹಿರಿಯತನವುಳ್ಳನಕ್ಕಾ ಶಿವಜ್ಞಾನಿಯೆಂತಪ್ಪನಯ್ಯಾ ಆಶೆ ವೇಷಕ್ಲೇಶತಾಮಸವುಳ್ಳನಕ್ಕಾ ಶಿವಾನುಭಾವಿಯೆಂತಪ್ಪನಯಾ ||ಅಖ|| ೯ || ಅನುಭಾವ ಅನುಭಾವವೆಂದು ನುಡಿವುತಿರ್ಪರೆಲ್ಲರು ಅನುಭಾವದ ಕೀಲವನ್ಯಾರು ಅರಿಯರಲಾ ಅನುಭಾವವೆಂದರೆ ಅಂತರಂಗದ ಹೃದಯಕಮಲದಷ್ಟದಳಂಗಳ ಮೆಟ್ಟಿಚರಿಸುವಜೀವಹಂಸನಕೊಂದು ಇಂದ್ರದಿಕ್ಕಿನಲ್ಲಿ ತೋರುವ ಭಿನ್ನಶಕ್ತಿಯನಳಿದು ಅಗ್ನಿದಿಕ್ಕಿನಯೆಸಳಿನಲ್ಲಿ ತೋರುವ ವೈಶ್ಯವಿಕಾರವ ಮುಸಿಳಿಸಿ ನೈರುತ್ಯದಿಕ್ಕಿನ ಯೆಸಳಿನಲ್ಲಿ ತೋರುವ ಪಾಪದುಷ್ಕೃತ ಪಲ್ಲಟಿಸಿ ವರುಣದಿಕ್ಕಿನಯೆಸಳಿನಲ್ಲಿ ತೋರುವ ಮಂದಗಮನವ ಪರಿಹರಿಸಿ ವಾಯುವ್ಯದಿಕ್ಕಿನಯೆ ಸಳಿನಲ್ಲಿತೋರುವ ದುಸ್ಸಂಚಾರವ ದೂರಮಾಡಿ ಕುಬೇರದಿಕ್ಕಿನಯೆಸಳಿನಲ್ಲಿ ತೋರುವ ದ್ರವ್ಯದಾಶೆಯಂಥಿಕ್ಕರಿಸಿ ಈಶಾನ್ಯದಿಕ್ಕಿನಯೆ

ಸಳಿನಲ್ಲಿ ತೋರುವ ವನಿತಾದಿ ವಿಷಯಗಳ ಪ್ರಪಂಚವನೀಡಾಡಿ ನೂಂಕಿ ಇಂತೀ ಅಷ್ಟದಳಂಗಳ ಹಿಡಿದು ತೋರುವ ಪ್ರಕೃತಿಗುಣಗಳ ನಷ್ಟವಮಾಡಿ ನಟ್ಟನಡು ಚೌದಳದ ಮಧ್ಯದಲ್ಲಿದ್ದ ಪರಬ್ರಹ್ಮವ ನೆಟ್ಟಗೆನೋಡಿಕೂಡ ಅಷ್ಟಾವಧಾನಿಯಾಗಿ ಅಚಲಿತಜ್ಞಾನದಲ್ಲಿ ಸುಳಿಯಬಲಾತನೆ ನಿಜಾನುಭಾವಿ ಆತನೇ ನಿತ್ಯಮುಕ್ತನು ಆತನೇ ನಿರ್ಭೇದ್ಯನು ಇಂತೀಭೇದವನರಿಯದೆ ಮಾತುಕಲಿತ ಭೂತನಂತೆ ಆಮಾತು ಯೀಮಾತು ಹೊಸಮಾತುಗಳಕಲಿತು ಕಂಡಕಂಡಲ್ಲಿ ನಿಂದನಿಂದಲ್ಲಿ ಹರಟೆಗುಟ್ಟುವ ವಣಹರಟೆ ಕಾರರಶಿವಾನುಭಾವಿ ಯೆಂಬರೇನಯ್ಯಾ ||೧೦|| ತನುವಿನಮಧ್ಯದಲ್ಲಿ ಹೊಳಿರ್ದ ಯಿಷ್ಟಲಿಂಗದಲ್ಲಿ ತನುವನಿಕ್ಷೇಪವಮಾಡಬಲ್ಲರೆ ಅನುಭಾವಿಯೆಂಬೆನು ಇಂತೀಅನುಭಾವದಅಭೇನುವನರಿಯದೆತನುವಿನಕೈಯ್ಯಲ್ಲಿ ಘನಲಿಂಗವಹಿಡಿವಿರ್ದರೇನು ಅದುಹುಟ್ಟುಕುರುಡನ ಕಯ್ಯಲ್ಲಿ ಕನ್ನಡಿಯಕೊಟ್ಟಂತೆ ಕಾಣಾ ||ಅಖ|| ೧೧ || ಅನುಭಾವಿಯಾದಡೆ ತಿರುಳುಕರಗಿದಹುರಿದ ಬೀಜದಂತಿರಬೇಕು ಅನುಭಾವಿಯಾದರೆ ಸುಟ್ಟಸರವೆಯಿದ್ದಹಾಗೆ ಯಿರಬೇಕು ಅನುಭಾವಿಯಾದರೆ ದಗ್ಧಪಟನ್ಯಾಯದಂತಿರಬೇಕ ಅನುಭಾವಿಯಾದರೆ ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು ಅನುಭಾವಿಯಾದರೆ ಕರಡಳದ ಕರ್ಪುರತಂದಿರಬೇಕು ಯಿಂತಮಹಾಗ್ನಾನಿಗಳು ಅವಲೋಕದೊಳು ಅಪೂರ್ವವಯ್ಯಾ ||೧೨|| ಲಿಂಗದನಡೆ ಲಿಂಗದ ನುಡಿಲಿಂಗದನೋಟ ಲಿಂಗದಬೇಟ ಲಿಂಗದಲ್ಲಿ ಮನವಡಗಿರ್ಪ ಲಿಂಗಾನುಭಾವಿಗಳ ಸಂಗದಲ್ಲಿರಿಸಿ ಸಲಹುಯನ್ನ ||೧೩|| ಕಾಯಜೀವದ ಕೀಲನರಿದು ಜನನಮರಣಂಗಳಾಯಾಸವಳಿದು ಅಂಗಲಿಂಗದೊಳಗೇಕಾರ್ಥವ ಮಾಡುವಭೇದವೆಂತೆಂದಡೆ ಪಂಚಭೂತಂಗಳ ಪೂರ್ವಾಶಯವನಳಿದು ಪಂಚಕರಣಂಗಳ ಹಂಚುಹರಿಯಮಾಡಿ ಕರ್ಮಬುದ್ಧೀಂದ್ರಿಯಂಗಳ ಮರ್ದಿಸಿ ದಶವಾಯುಗಳ ಕಡಿಸಿ ಕರಣಚತುಷ್ಟಯಗಳ ಕಾಲಮುರಿದಾ ಪಂಚವಿಷಯ ತತ್ವಂಗಳ ವಂಚನೆಯ

ನಳಿದು ಹಸ್ತನಾಡಿಗಳವ್ಯತಿಕರಿಸಿ ಅಷ್ಟತನು ಅಷ್ಟಾತ್ಮಗಳ ನಷ್ಟ ಮಾಡಿ ಅಂತರಂಗದ ಅಷ್ಟಮದಂಗಳನ್ನು ತರಿದು ಬಹಿರಂಗದ ಮದಂಗಳ ಬಾಯಟಿಣದು ಅಷ್ಟಮೂರ್ತಿಮದಂಗಳಹೊಟ್ಟುಗುಟ್ಟಿ ಸಪ್ತವ್ಯಸನಂಗಳ ಬಾಸಣಿಸಿ ಷಡೂರ್ಮಿಷಡ್ವರ್ಗಂಗಳ ಕಡೆಮೆಟ್ಟಿ ಷಡ್ಭ್ರಮೆಷಡ್ಭಾವದೆ ವಿಕಾರಂಗಳಗೆಂಟು ಸಡಲಿಸಿ ಪಂಚಕ್ಲೇಶಂಗಳ ಪರಿಹರಿಸಿಅಂಗಚತುಷ್ಟಯಂಗಳಶೃಂಗಾರವನಳಿದುಗುಣತ್ರಯಂಗೂಡಮುಚ್ಚಿ ಅಹಂಕಾರತ್ರಯಗಳಶಂಕೆಗೊಳಗುಮಾಡಿತಾಪತ್ರಯಂಗಳ ಭಿನ್ನ ಮಾಡಿ ತಲ್ಲಣಗೊಳಿಸಿತನು ತ್ರಯಂಗಳತರಹರಮಾಡಿ ಜೀವತ್ರಯಂಗಳಆತ್ಮತ್ರಯಂಗಳಧಾತುಗಡಿಸಿಅವಸ್ಥಾತ್ರಯಂಗಳ ಅವಗುಣವಳಿದುಶ್ರೀದೋಷಂಗಳು ಪಲ್ಲಟವಾಗಿಭಾವತ್ರಯಂಗಳ ಬಣ್ಣಗೆಡಿಸಿ ದುರ್ಭಾವತ್ರ ಯಂಗಳದೂರಮಾಡಿ ಮಲತ್ರಯಂಗಳ ಮರ್ದನಮಾಡಿ ಕರಣಗಳ ಛಿದ್ರಗೊಳಿಸಿ ಪಂಚಾಗ್ನಿಗಳ ಸಂಚಲವನತಿಗಳದು ಇಂತೀ ಅಂಗ ಪ್ರಕೃತಿಗುಣಗಳೆಲ್ಲಾ ನಷ್ಟವಾಗಿ ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು ಬಹಿರಂಗದಮೇಲಿರ್ಪ ಯಿಷ್ಟಲಿಂಗದಲ್ಲಿ ನೈಷ್ಟಿಕಾಭಾವ ವಿಂದ ಯಿಂಬುಗೊಂಡು ಅನಿಮಿಷದೃಷ್ಟಿ ಅಚಲಿತವಾಗಿಬಲೆಸಿರಲು ಆಲಿಂಗವು ಅಂತರಂಗಕ್ಕೆ ವೇದಿಸಿ ಪ್ರಾಣಲಿಂಗ ವೆನಿಸಿಕೊಂಡು ಷಡಾಚಾರಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಕೊಂಬುದು ಅಷಡ್ವಿಧರ ಲಿಂಗಕ್ಕೆ ಷಡೇಂದ್ರಿಯಂಗಳನೆ ಷಡ್ವಿಧಮುಖಂಗಳೆಂದೆನಿಸಿ ಆಷಡ್ವಿಧ ಮುಖಂಗಳಿಗೆ ಷಡ್ವಿಧವಿಷಯಂಗಳನೆ ಷಡ್ವಿಧದ್ರವ್ಯಪದಾರ್ಥಂಗಳೆಂದೆನಿಸಿ ಷಡ್ವಿಧದ್ರವ್ಯ ಪದಾರ್ಥಂಗಳನ್ನು ಷಡ್ವಿದಲಿಂಗಕ್ಕೆ ಷಡ್ವಿಧಭಕ್ತಿಯಿಂದ ಸಮರ್ಪಿತವಾಗಲು ಅಂಗವೆಂಬಕರುಹಡಗಿ ವಳಹೊರಗೆಲ್ಲಾ ಮಹಾಲಿಂಗದ ದಿವ್ಯಪ್ರಕಾಶವೇತುಂಬಿ ತೊಳಗಿ ಬೆಳಗುತಿರ್ಪದು ಇಂತಪ್ಪಘನಲಿಂಗದ ಬೆಳಗನೊಳಕೊಂಡಿರ್ಪ ಭೇದಾಂಗವೇ ಚಿತ್ಪಿಂಡವೆನಿಸುವದು ಇಂತಪ್ಪ ಅತಿಸೂಕ್ಷ್ಮವಾದ ಚಿತ್ಪಂಡದ ವಿ

ಸ್ತ್ರರವನು ಚಿದ್ಬ್ರಹಾಂಡದಲ್ಲಿ ವೇದಿಸುವದು ಆ ಚಿದ್ಬ್ರಹ್ಮಾಂ ಡೆದ ಅತಿಬಾಹುಲ್ಯವನ್ನು ಅಚಿತ್ಪಂಡದಲ್ಲಿ ವೇದಿಸಿಕೊಂಡು ಪಿಂಡ ಬ್ರಹ್ಮಾಂಡಯೋರೈಕ್ಯವೆರಬಶ್ರುತಿ ಪ್ರಮಾಣದಿಂದ ಆಪಿಂಡ ಬ್ರಹ್ಮಾಂ ಡಗಳು ಮಂದೇಯೆಂದು ಕಂಡು ಆಪಿಂಡ ಬ್ರಹ್ಮಾಂಡಗಳಿಗೆ ತಾನೇ ಆಧಾರವೇದು ತಿಳಿದು ಆಪಿಂಡ ಬ್ರಹ್ಮಾಂಡದ ಮರದಕೊನಯಲ್ಲಿ ಅಡಗಿಸಿ ಜ್ಞಾನವ ಮಹಾಜ್ಞಾನದಲ್ಯಡಗಿಸಿ ಮಹಾಗ್ನಾನವನ್ನು ಪರಾತ್ಪರವಾದ ಪರಿಪೂರ್ಣಪರಬ್ರಹ್ಮದಲ್ಲಿ ಅಡಗಿಸಿ ಆಪರಬ್ರಹ್ಮ ವೇತಾನಾದ ಶರಣಂಗೆ ದೇಹಭಾವವಿಲ್ಲದೆಹೋಗಿ ಭಾವಿಲ್ಲವಾಗಿ ಜೀವಭಾವವಿಲ್ಲವಾಗಿ ಫಲಪದದಹಂಗಿಲ್ಲವಾಗಿ ಭವಬಂಧನಂಗಳು ಮುನ್ನವೇ ಯಿಲ್ಲವಾಗಿ ಅಶರಣತಾನು ಯಂತಿರ್ದಂತೆ ಪರಬ್ರಹ್ಮವ್ ಯೂಗಿ ಆತನಹೃದಯೂಕಾಶವು ಬಟ್ಟಬಯಲಬರಿಯಟ್ಟ ಬಯಲ ನೈದಿರ್ಪುದು ಇದುಕಾರಣ ಆಶರಣನು ದೇಹವಿರ್ದುಸುಟ್ಟಗವಿಯಂತೆ ನಿರ್ದೇಹಿಯೂದಕಾರಣ ಉಪಮಾತೀತ ವಾಙ್ಮಾನಕ ಗೋಚರವಾ ಗಿರ್ಪರಯೂ ||೧೪|| ಪರಾತ್ಪರವಸ್ತುವಿನ ವೊಡಗೂಡಿದ ಪ್ರಾಣಲಿಂಗಿ ಯವಡಲ ಬೆಳಗಿನ ಗಡಣವೆಂತರ್ಪುದೆಂದಡೆ ಸ್ಫಟಿಕದಘಟದೊಳಗೆ ಜ್ಯೋತಿಯನಿರಿಸಿದಂದಿ ಕತ್ತಲೆಯಮನೆಯಲ್ಲಿ ರತ್ನವ ಹರಹಿದಂತೆ ರನ್ನದಗಿರಿಗೆರವಿಕೋಟಿ ಕಿರಣಗಳುಮುಸಿಕಿದಂತೆ ಬೆಳಬೆಳಗು ಹ ಳಚಿ ಮಹಾಬೆಳಗಿನೊಬ್ಬುಳಿಯ ನೊಳಕೊಂಡ ಘನಗಂಭೀರವಾದ ಪ್ರಾಣಲಿಂಗಿಗಳ ಪಾದಕಮಲದಲ್ಲಿ ಸಮತೆತುಂಬಿರಸಯ್ಯಯನ್ನ ||ಅಖ|| ೧೫ || ಚಿತ್ತನಿರ್ಮಲವಾದಾತನು ಭಕ್ತಿಯಿಂದೆ ಸತ್ಯಸರಣಿನಲ್ಲಿ ತತ್ವಾನುಭಾವವ ನೊಳಕೊಂಡ ನಿತ್ಯಶಿವನಪದವ ಪುಟ್ಟಸ ವದಕ್ಕೆ ತಡವಿಲ್ಲವಯ್ಯ ||೧೬|| ಸರ್ವಜ್ಞನುನೀನಯ್ಯಾ ಸರ್ವೇಶ್ವರನು ನೀ ನಯೂ ಸರ್ವಾಂತರಾನೀನಯ್ಯಾ ಸರ್ವಾತ್ಮನು ನೀನಯ್ಯಾ ಸರ್ವ ಕಳಾಭರಿತನು ನೀನಯ್ಯಾ ಸರ್ವಗುಣಸಂಪನ್ನನು ನೀನಯ್ಯಾ ||ಅಖ|| ೧೭ || ವೇದಂಗಳಿಗೆ ಅಬೇದ್ಯನಾದ ಶಿವನಭೇದಿಸಿ ಕಂಡರು

ನೋಡಾ ಶರಣರು ಶಾಸ್ತ್ರಂಗಳಿಗೆ ಅಸಾಧ್ಯವಾದ ಶಿವನ ಶಾಧಿಸಿಕಂಡ
ರುನೋಡಾ ಶರಣರು ಆಗಮಂಗಳಿಗೆ ಅತಿರಹಸ್ಯವಾದ ಶಿವನ ಅರಸಿ
ಕಂಡರುನೋಡಾ ಶರಣರು ಅಗಮ್ಯ ಅಪ್ರಮಾಣವಾದ ಪರಶಿವನ
ಪ್ರಮಾಣಿಸಿವಂಡು ವಳಹೊಕ್ಕು ಬೆರಸಿದರುನೋಡಾ ||ಅಖ|| ೧೮ ||
ಇತರ ಹಳಿದು ತನ್ನ ಬಣ್ಣಿಸುವನಕ್ಕೆ ಶಿವಜ್ಞಾನಿ ಯೆಂತಪ್ಪನಯ್ಯಾ
ಹಮ್ಮು ಬಿಮ್ಮು ಹೆಮ್ಮೆ ಹಿರಿಯತನವುಳ್ಳ ನಕ್ಕೆ ಶಿವಜ್ಞಾನಿಯೆಂ
ತಪ್ಪನಯ್ಯಾ ಅಷ್ಟಮದಗರ್ವ ಹಂಕಾರ ಮಮಕಾರವುಳ್ಳನ ಶಿ
ವಜ್ಞಾನಿ ಯೆಂತಪ್ಪನಯ್ಯಾ ಆಶೆಯುಳ್ಳೇಶವು ಪಾಶಾತಾಮಸವುಳ್ಳ
ನ್ನಕ್ಕೆ ಶಿವಜ್ಞಾನಿಯೆಂತಪ್ಪನಯ್ಯಾ ಕುಂಭಸಹಸ್ರವುದಕದೊಳಗೆ ಬಿ
ಂಬಿಸಿತೋರುವಸೂರ್ಯನೊಬ್ಬನಲ್ಲದೆ ಮತ್ತೆ ಹಲಬರುಂಟೇನಯ್ಯಾ
ಸಕಲದೇಹಗಳೊಳಗೆ ಭ್ರಮಿಸಿ ತುಂಬಿಪ್ಪ ಪರವಸ್ತು ನೀನೊಬ್ಬನಲ್ಲದೆ
ಮತ್ತ್ಯಾನು ಕಾಣೆನಯ್ಯಾ || ೨೦ || ವಿಶ್ವದೊಳಗೆಲ್ಲಾ ನೀನೇದೇವಾ
ವಿಶ್ವಭರಿತನು ನೀನೇದೇವಾ ವಿಶ್ವರೂಪನು ನೀನೇದೇವಾ ವಿಶ್ವಪತಿ
ನೀನೇದೇವಾ ವಿಶ್ವಾತೀತನು ನೀನೇದೇವಾ ||೨೧|| ಸಕಲಸ್ತ್ರರದ
ರೂಪುನಿಮ್ಮೊಳಗಡಗಿರ್ಪುದು ಎನ್ನ ಮನದಲ್ಲಿ ಅಡಗಿರ್ಪಿರಿ ಅದಂತೆಂದಡೆ
ಕರಿಕನ್ನಡಿಯೊಳಗಿರ್ಪಂತೆ ನೀನು ಭಕ್ತಜನಮನೋವಲ್ಲಭನಾದಕಾ
ರಣ ಯೆನ್ನ ಮನದಕೊನೆಯಲ್ಲಿ ಅಡಗಿರ್ತರಯ್ಯಾ ||೨೨|| ಪಶ್ಚಿಮ
ಗರಿಯಲ್ಲಿ ಚಿತ್ಸೂರ್ಯ ವುದಯವಾದುದು ಕಂಡೆ ಸುತ್ತುಮುತ್ತಿದ ಕತ್ತ
ಲೆಯಲ್ಲಾ ಅತ್ತಿತ್ತ ಹರಿದುಹೋಹದು ಕಂಡೆ ಹತ್ತುದಿಕ್ಕಿನ ವಳಹೊರ
ಗೆಲ್ಲಾ ಬೆಳಗಿನ ಮೊತ್ತ ಮೇತುಂಬಿ ತುಂಬಿದ್ದು ಕಂಡು ಮುಜ್ಜಿ ಅರಳಿ
ಲಾಗಿ ಅಚ್ಚ ಹೊಸಗಂಧವು ದೆಸದೆಸಗೆಯಸದು ಕಂಡೆ ಇಂಗಿದರ ಕುಶ
ಲವಕಂಡು ಬೆರಗಾದನಯ್ಯಾ ||ಅಖ|| ೨೩ || ಅಂಬರದೊಳಗಿನ ಅ
ಮೃತದಕೊಣನುಕ್ಕಿ ಕುಂಭಿನಿಯಮೇಲೆ ಸೂಸಲು ಅಲ್ಲಿರ್ದ ಸಕ
ಲಬನವೆಲಾ ಅಮೃತವ ಕಂಡುದಣಿಯಲುಂಡು ಅನಿತ್ಯದ ಭೋಗವ
ಮರದು ಅಸತ್ಯದಹಂಗು ಹರಿದು ನಿತ್ಯಮುಕ್ತರಾಗಿದ್ದರಯ್ಯಾ||೨೪

ಕಪ್ಪೆಯಶಿರದಮೇಲೆ ಯಪ್ಪತ್ತೆರಡು ಪುರವಿಪ್ಪವು ಅಪುರದೊಳ
ಗೊಬ್ಬ ನಾರಿಯಿರ್ಪ್ಪಳು ಆನಾರಿಯಕಯ್ಯಲ್ಲೊಂದು ಹಾರಿವಾಣವೆ
ಸಸಿಯುಮೂಲದಲ್ಲಿ ಮೂರುಲೋಕಂಗಳು ಅಲ್ಲಾಗಿರ್ಪವು ಇಂತ
ಪ್ಪ ಬೆಡಗಿನಕೀಲಬಲ್ಲಾತನೇ ಪ್ರಾಣಲಿಂಗ ಸಮ್ಮಂಧಿಯಯ್ಯಾ॥೨೫॥
ನವಖಂಡಮಂಡಲದೊಳಗೊಂದು ಪುಂಡರೀಕವೆಂಬ ಹುತ್ತದೊಳ
ಗೊಂದು ಚಿತ್ರಸರ್ಪವಿರ್ಪುದು ಆಸರ್ಪನ ಬಾಯೆಲ್ಲಿಪ್ಪೊಂದು ಬೆಲೆ
ಯಿಲ್ಲದರತ್ನ ವಿಪ್ಪುದು ಆರತ್ನದ ಬೆಳಗಿನೊಳಗೆ ಈರೇಳುಲೋಕ
ಧ ಸುಳಿಯಿರ್ಪುದು ಇದನ್ಯಾರು ಅರಿಯರಲಾ ಹುತ್ತವ ಕೆಡಿಸಿಸ
ರ್ಪನಕೊಂದು ರತ್ನವಶಾಧ್ಯವಕೊಂಡಾತನೇ ಮುಕ್ತಿರಾಜ್ಯಕ್ಕೆ ಅರ
ಸನಾಗಿರ್ಪನಯ್ಯಾ ॥ಅಖ॥ ೨೬ ॥ ಅಜನಗರಿಯಲ್ಲಿ ಅರ್ಕನುದಯ
ವಾದದುಕಂಡೆ ಸಂಜೆಮಬ್ಬು ಅಂಜಿಪ್ಪೋಡಿದುಕಂಡೆ ಮಂಜಿನ ಮನೆ
ಕರಗಿ ಕುರುಹಿಲ್ಲದೆ ನಿಪ್ಪತ್ತಿಯೊದುದುಕಂಡೆ ಬಂಜೆಯುಬಸುರಿನಲ್ಲಿ
ನಂಜುಗೊರಲನೆಂಬಶಿಶುಹುಟ್ಟಿ ಅಂಜದ ಅರವತ್ತಾರು ಕೋಟಿಸೈತ್ಯರ
ಕೊಂದುದುಕಂಡೆ ಕುಂಜರದಮರಿಯು ಕೋಳಿನುಂಗಿದ್ದು ಕಂಡುಬೆರ
ಗಾದನಯ್ಯಾ ॥ಅಖಂಡೇ॥ ೨೭ ॥ ಆಕಾಶಮಂಡಲದೊಳಗೆಲೋಕೇಶ
ನಯ್ಯಾ ಅಖಂಡೇಶ್ವರಾ ॥ ೨೭ ॥ ಆಕಾಶಮಂಡಲದೊಳಗೆ ಲೋ
ಕೇಶಪಟ್ಟಣವಿರ್ಪುದುನೋಡಾ ಆಪಟ್ಟಣಕ್ಕೆ ನಾಲ್ಕುಬಾಗಿಲು ಯೆಂ
ಟುಬೀದಿ ಹದಿನಾರು ಚದುರಂಗಚಾವಡಿ ಮುವ್ವತ್ತೆರಡು ಕೇರಿಕೇ
ರಿಗಳೊಳಹರಿಹ ಹರಿವಕಾರೆಕಟ್ಟಳೆನೋಡಾ ಆಕಾಶಮಂಡಲ ವಡರಿ
ಲೋಕೇಶನ ಕಂಡಂಥಾತಗಲ್ಲದೆ ಆಪಟ್ಟಣವುಅರೆಗೂ ಸಾಧ್ಯವ್ವುನೋ
ಡಾ ॥ ೨೮ ॥ ಕಂಡಪುಟಮೂಡಿವುದ್ದಂಡ ವಿಕಾರದವುಪಟಳ ನುರುಹಿ
ತಂಡತಂಡದನೆಲೆಗಳದಾಂಟಿದಾತ ಪ್ರೋಕ್ಕು ಮಂಡಲತ್ರಯುದಮೇಲೆ
ಚಂಡಕರಕೋಟಿ ।ಪ್ರಭೆಯಿಂದಬೆಳಗು ಅಖಂಡಮೂರ್ತಿಯುಕಂಡು
ತೊಡಬಲ್ಲಾತನೇ ನಿಪ್ಪ್ರಪಂಚ ಪ್ರಾಣಲಿಂಗಿ ಎಂಬೆನಯ್ಯಾ ॥೨೯॥
ಅನಗಳೆಂಟನು ಪೊಂದುಮೌನದಚಿಕಾಂಡುನುಂಗಿತು । ಕಾನನದೆರಳೆ

ಯೆನ್ನ ಕಪ್ಪನುಂಗಿತುನೋಡಾ । ಮೂನಿನಿಯ ಮಸ್ತಕದಲ್ಲಿ ಭಾನುಶತಕೋಟಿ ತೇಜದಕಳೆ ಮೊಳೆದೋರಿತು ಅದೇನು ಸೋಜಗಹೇಳಾ ॥ ಅ ॥ ೩೦ ॥ ಕಡಲಮಧ್ಯದಲ್ಲಿ ವಡಬಾಗ್ನಿಹುಟ್ಟಿ । ಆಕಡಲು ಸುಡುವದುಕಂಡೆ । ನಡುರಂಗದಜ್ಯೋತಿ ಸೋದರಳಿದು ಯೆಡಲವಲ್ಲಿನುಡಿವರೆಂದು ಬೆಳಗುತಿರ್ಪುದುಕಂಡೆನಯ್ಯಾ ॥ ೩೧ ॥ ಬಣ್ಣವಿಲ್ಲದಪಕ್ಷಿ ಕಂಣಿನಕೊನೆಯಲ್ಲಿ ಸಂಣಗೂಡನಿಕ್ಕಿ ಸುಳಿವುದುಕಂಡೆ । ಬಂಣಮುವ್ವತ್ತಾರುನುಂಗಿತುಕಂಡೆ । ಬಯಲಶೀಮವಾಸವಾಗಿರ್ಪಕ್ಷಿಯುಹೆಂಣೊ (ಗಂಡೋ) । ಯೆಂದುಕುರುಹಿಡಿವ ಅಂಣಗಳನಾಸುಕಾಣೆನಯ್ಯಾ ॥ ೩೨ ॥ ನೀರವಂಟವದೊಳಗೊಂದು ನಿರಾಳ ಕಮಲವಿರ್ಪುದುಕಂಡೆ । ಆ ಸಿಂಹಾಸನದಮೇಲೆ ಮೂರ್ತಗೊಂಡು ಬೆಳಗುವನಮ್ಮ ಅಖಂಡೇಶ್ವರನೆಂಬ ನಿರವಯಪರಬ್ರಹ್ಮವಕಂಡು ಪರಮಸುಖಿಯಾಗಿರ್ದೆನು । ನಳಿನಾಸವಲ್ಲಿಕುಳ್ಳಿರ್ದು ಅತ್ತಿತ್ತಕಳವಳಿಸದೆ । ತುಳುಕುವ ಯಿಂದ್ರಿಯಂಗಳಂ ಬಂಧಿಸಿ ನನ್ನುಳಿದಕರಣಂಗಳಬಲಿದು । ಪ್ರೊಬ್ಬಳಿಗೊಳಿಸಿವುನ್ಮನಿಯ ಮಂಟಪದಲ್ಲಿ ನಿರಂತರಬೆಳಗುವ ಪ್ರಾಣಲಿಂಗದಲ್ಲಿ ಘನಪವನಾಗ್ನಿಗಳೊಂದಾಗೆ । ಸಾವಿರಕಿರಣಸಹಿತವಡದು ಮೂಡಿದಪ್ರಭಾಕರನಂತೆಮಹಾಬೆಳಗಿನ ಪ್ರಭಾ ಪಟಲದಿಂದೆ ಥಳಥಳಿಸಿಬೆಳಗುವ ಪ್ರಾಣಲಿಂಗವನ್ನು ಕರಗಳೆತುಂಬನೋಡ । ಮನತುಂಬಿಸಂತೋಷಿಸಿ ಸರ್ವಾಂಗಗುಡಿಗಟ್ಟಿ ಪರಮಪರಿಣಾಮತಲೆದೋರಿ ಮಹಾಪರಿಣಾಮದೊಳಗೋಲ್ಯಾಡುಬಲ್ಲುದೇಅದೆ ಪ್ರಾಣಲಿಂಗಸಂಮ್ಮಂಧನೋಡಾ ॥ ೩೪ ॥ ದೇಹವಾಸನೆ ಹರಿದು ಆತ್ಮಭವಬಂಧನೆಗಳ ಕೀಲಮುರಿದು ಪರಾತ್ಪರವಾದಪ್ರಾಣಲಿಂಗವನೊಡಗೂಡುವದಕ್ಕೆ ಆವದುಸಾಧನವೆಂದರೆ ಯೆಲ್ಲಾಗುಣಂಗಳು ತಿಳಿವಂತೆಹೇಳುವೆ ಕೇಳಿರಯ್ಯಾ । ಎಂಬತ್ತೇಟು ಆಸನಗಳೊಳಗೆ ಮುಖ್ಯವಾಗಿರ್ಪುದು ಶುದ್ಧಾಸನವು ಆ ಶುದ್ಧಾಸನದ ವಿವರವೆಂತೆಂದೊಡೆ, ಗುದ, ಗುಹ್ಯ ।ಮಧ್ಯಸ್ಥಾನವಾದ ಯೋನಿಮಂಡಲ

ವೆಂಬದ್ವಾರ ಆ ದ್ವಾರಕ್ಕೆ ಯೆಡದಹಿಮ್ಮಡಿವನಿಕ್ಕಿ ಬಲಹಿಮ್ಮಡವ ವ್ಮೇಢ್ರಸ್ಥಾನದಲ್ಲಿರಿಸಿ ಅತ್ತಿತ್ತಲುಕದಬೆನ್ನಲುವ ಕೊಂಕಿಸದೆ ನೆಟ್ಟನೇಕುಳ್ಳಿರ್ದು ವುಭಯಲೋಚನವನೊಮ್ಮವೂಡಿ ವುನ್ಮನಯು ಸ್ಥಾನದಲ್ಲಿರಿಸಿ ತ್ವನೇತ್ರ ಜಿಹ್ವಸ್ರೋತ್ರಘ್ರಾಣ ಹೃದಯುವೆಂಬ ಆರುದ್ವಾರಂಗಳನ್ನು ಆರಂಗುಲವಿಂದೊತ್ತಲು ಮೂಲಾಧಾರದಲ್ಲಿ ಯಿರ್ದ ಮೂಲಾಗ್ನಿ ಪಟುತರವಾಗಿ ಪವನನೊಡಗೂಡಿ ವುನಸ್ಥಿರಗೊಂಡು ಊರ್ದ್ವಕ್ಕೆಹೋಗಿ ವಿಭೆಯಲಿಂಗದೊಳಗಿರ್ದ ಮಹಾಲಿಂಗವನೊಡಗೂಡೆ ಅನಂತಕೋಟಿ ಸೂರ್ಯಾಗ್ನಿ ಚಂದ್ರಪ್ರಕಾಶವನೊಳಕೊಂಡು ಅಲ್ಲಿ ಸೂಕ್ಷ್ಮವಾಗಿ ಅಂಗುಲಪ್ರಮಾಣವಾಗಿ ಶುದ್ಧತಾರೆಯೆಂತೆ ಕಂಗಳನೋಟಕ್ಕೆ ಕರತಲಾಮಲಕವಾಗಿ ಕಾಣಿಸುತಿರ್ಪ ಪ್ರಾಣಲಿಂಗದಲ್ಲಿ ಪ್ರಾಣಸಯೋಗ ಮಾಡಬಲ್ಲಾತನೇ ಪ್ರಾಣಲಿಂಗ ಸಮ್ಮಂಧಿ ಆತನೇ ಪ್ರಣಯೂವಿರಹಿತನಯ್ಯಾ ॥ ೩೫ ॥ ಶುದ್ಧಪದ್ಮಾಸನದ ಕುಳ್ಳಿರ್ದು ಊರ್ಧ್ವಲೋಚನನಾಗಿ ವುಳಿದಕರಣಂಗಳನ್ನೆಲ್ಲ ವುನ್ಮನೆಯ ಕರಸ್ಥಾನದಲ್ಲಡಗಿಸಿ ಮನವ ನೊಂಮನವಮಾಡಿ ಅನಾಹತ ಕರ್ಣದಲ್ಲಿಲಾಲಿಸಲು ಸಹಸ್ರದಳ ಕಮಲಮಧ್ಯದಲ್ಲಿ ವುದ್ಯೋಗಿಸುತಿರ್ಪ ಸುಯಿಧಾನ ಬ್ರಹ್ಮವು ಅಂತಪ್ಪ ಸುಯಿಧಾನ ಬ್ರಹ್ಮದಲ್ಲಿ ಮನವಡಗಿ ವ್ಮೈಮರದಿರ್ಪಾತನೇ ಘನಲಿಂಗ ಯೋಗಿಯಯ್ಯಾ ॥ ೩೬ ॥ ಕಮಲಸಾಲಗಳೊಳಗೆ ಭ್ರಮರಹಿಂಡು ಝೇಂಕರಿಸುತಿರ್ಪವುನೋಡಾ ವಿಮಲಚಿತ್ತುವಿನಿಂದ ಲಾಲಿಸಲು ಅದುತನ್ನ ಸುಮನಸುಜ್ಞಾನದ ನಿಲುವುನೋಡಾ ॥ ೩೭ ॥ ಗಗನಮಂಟಪದಲ್ಲಿ ಅಘಹರನಪೂಜೆ ವಗುವಿಗುಲಾಗುತಿರ್ಪದುನೋಡಾ ಅಲ್ಲಿ ಧಿಗಿಭುಗಿಲೆಂಬ ಶಬ್ದದಸೊಗಸುನೋಡಾ ॥ ೩೮ ॥ ಉತ್ತರಗಿರಿಯ ಚಿತ್ರಮಂಟಪದೊಳಗೆ ರತ್ನತೋರಣ ಪರಿಪರಿಯನೋಡಾ ಮುತ್ತಿನಗದ್ದುಗೆಯಮೇಲೆ ಛತ್ತಿಸಿಕೋಟಿ ಚಂದ್ರ ಸೂರ್ಯರಬೆಳಗೆ ನೊಳಕೊಂಡು ನಿತ್ಯಪರಿಪೂರ್ಣವಸ್ತುವ ಕೂಡಬಲ್ಲಾತನೇ ಈಗಕರ್ತು

ಶಿವತಾನೋಡಾ ॥ ೩೯ ॥ ತ್ರಿಕೂಟಗಿರಿಯಲ್ಲಿ ತ್ರಿಣಿಯನಕುಳ್ಳಿರಿಸಿ
ತ್ರಿಕಾಲಪೂಜೆಯ ಮಾಡಬಲ್ಲಾತನೇ ತ್ರಿಲೋಕದವೊಡೆಯನಯ್ಯಾ
॥ ೪೦ ॥ ಚಂದ್ರಶಿಲೆಯ ಮಂಟಪದಲ್ಲಿ ಯಿಂದುಧರನ ವಿಸ್ತಾರವ
ನೋಡಿಬಂದು ನೆರದಿರ್ಪರು ಸಕಲಜನಂಗಳು ಚಂದ್ರಜ್ಯೋತಿಯ
ಶಾಲುಶಾಲಿನ ಬೆಳಗುನೋಡಾ ಅಲ್ಲಿ ಚಂದಚಂದದ ದುಂದುಭಿನಾದ
ಇದರರಸವ ಏನು ಹೇಳುವೆನಯ್ಯಾ ॥ ೪೧ ॥ ಶಾಸಿರದಳ ಕಮಲ
ಮಂಟಪದೊಳಗೆ ಈಶ್ವರನವಾಲಗದ ಸೊಬಗನೇನು ಹೇಳುವೆನ
ಯ್ಯಾ ಮೂಜಗದವರೆಲ್ಲ ನೈಮರದಿರ್ಪರು ಭಾಸುರಕೋಟಿ ಬೆಳ
ಗುಕಂಗಳು ತುಂಬಿತುನೋಡಾ ॥ ೪೨ ॥ ಅಂಬರದೇಶದ ಕುಂಚ
ಕೋಣಿಯೊಳಗೆ ಶಂಭುಲಿಂಗದಪೂಜೆಯ ಸಂಭ್ರಮವನೋಡಾ ಅಂ
ಬುಜಮುಖಿಯರು ಆರತಿಯನೆತ್ತಿ ಶಂಭು ಶಿವಶಿವ ಹರಹರ ಯೆನು
ತಿರ್ಪರುನೋಡಾ ತುಂಬಿದಕಣ್ಣಿವೆಯ ಬೆಳದಿಂಗಳ ಒಂಭತ್ತುಬಾ
ಗಿಲಲ್ಲಿ ತುಂಬಿಹೊರಸೂಸುತಿರ್ದದುನೋಡಾ ಈ ಸಂಭ್ರಮವನೇ
ನ ಹೇಳುವೆನಯ್ಯಾ ॥ ೪೩ ॥ ದೇಹವೆಂಬದೇಗುಲದೊಳಗೆ ಭಾವ
ಸಿಹ್ಮಾಸನವನ್ನು ಮಾಡಿ ಜೀವದೊಡೆಯನ ಪೂಜಿಸಬಲ್ಲಡೆ ದೇವರಿ
ಗೆದೇವನೆಂಬೆನಯ್ಯಾ ॥ ೪೪ ॥ ತನುವೆಂಬಗುಡಿಯೊಳಗೆ ಮನವೆಂಬ
ಸಿಹ್ಮಾಸನನಿಕ್ಕಿ ಘನಮಹಾಲಿಂಗವ ಮೂರ್ತಿಗೊಳಿಸಿ ಸಕಲಕರ
ಣಂಗಳಿಗೆ ಪೂಜೋಪಚಾರಗಳ ಶೃಂಗರಿಸಬಲ್ಲರೆ ಘನಕ್ಕೆ ಘನಮಹಿ
ಮನೆಂಬೆನಯ್ಯಾ ॥ ೪೫ ॥ ಮೇರುವಿನ ಮಂದಿರದಲ್ಲಿ ಆರೈದುನೋ
ಡಿದರೆ ಭೇರಿಮೃದಂಗಧ್ವನಿಯು ಭೋರಿಡುತಿರ್ಪವುನೋಡಾ ಮಾ
ರಾರಿಯುಮಂಗಳ ಸಭೆಕಂಗಳುತುಂಬಿತ್ತುನೋಡಾ ॥ ೪೬ ॥ ಹೊರ
ಗಣ ಒಂಭತ್ತುಬಾಗಿಲುಮುಚ್ಚಿ ಒಳಗೆ ಅಂಬರಬಾಗಿಲ ಬೀಗವತೆಗ
ದು ಒಳಪೊಕ್ಕುನೋಡಲು ಗಂಗೆ, ಸರಸ್ವತಿ, ಯುಮುನೆ, ಯೆಂಬ
ತ್ರಿನದಿಗಳು ಕೂಡಿದಠಾವಿನಲ್ಲಿ ಸಂಗಮಕ್ಷೇತ್ರವೆಂಬ ರಂಗಮಂಟಪ
ವುಂಟು ಆ ರಂಗಮಂಟಪದೊಳಗೆ ರವಿಕೋಟಿಪ್ರಭೆಯಂತೆ ರಾಜಿಸು

ವ ಮಹಾಲಿಂಗವನುಕಂಡು ಆ ಮಹಾಲಿಂಗಕ್ಕೆ ತನ್ನಾತ್ಮಸಂಬಂಧ ವಾದ ದ್ರವ್ಯಗಳಿಂದರ್ಚಿಸಿ ಆ ಮಹಾಲಿಂಗದ ಬೆಳಗನ್ನು ಕಂಗಳು ತುಂಬಿನೋಡಿ ಮನಸ್ಸಂತೋಷಗೊಂಡು ಅಲ್ಲಿಂದತ್ತ ಪಶ್ಚಿಮದಿಕ್ಕಿ ನಲ್ಲಿ ಮಹಾಕೈಲಾಸವಿರ್ಪುದನು ತನ್ನಸ್ವಾತ್ಮಜ್ಞಾನದಿಂದ ತಿಳಿದು ನೋಡಿ ಯಡಬಲದ ಬಟ್ಟೆಯ ಮೆಟ್ಟದೆ ನಟ್ಟನಡುಮಾರ್ಗವಿಡಿದು ಕೈಲಾಸದ ಪೂರ್ವದಿಕ್ಕಿನ ಹೆಬ್ಬಾಗಿಲು ಪುಷ್ಪರ ಗೋಪುರವಕಂಡು ವಳಹೊಕ್ಕುಹೋಗಿ ಕಂಗಳಿಗೆ ಮಂಗಳವಾದ ಶಿವನಸಭೆಯಕಂಡು ಅಲ್ಲಿಹೊಡೆಯಭೇರೀನಾದ ತುಡುಮತಾಳೆ ಮೃದ್ದಳೆ ಗಡಬಡ ಝು ಲ್ಲಿಂಬಸಮೇಳ ಕೌಂಸಾಳದ ನಾದವನುಡಿಸುವ ವೀಣೆ ಕಿನ್ನರಿಸ್ವರ ರಮಂಡಲ ತಂಬೂರಿ ಕಾಮಾಕ್ಷಿಯನಾದ ಭೋರಡುವ ಶಂಖಘಂಟೆ ಯನಾದ ಸ್ವರಗೈವನಾಗಸ್ವರ ಕೋಕಿಲಸುನಾದದ ಕೂಗಿಡುವ ಕಹಳೆ ಹೆಗ್ಗಹಳೆ ಚಿನಿಕಹಳೆ ಕರ್ನೆಯನಾದ ಇಂತಿವುಮೊದಲಾದನಾ ನಾನಾತೆರದ ಪ್ರಮಥಗಣಂಗಳಕಂಡು ಅಲ್ಲಿಂದ ಮುಂದಕ್ಕೆಹೋಗಿ ಅ ನಲವೀಧಿಯಹೊಕ್ಕು ಅಲ್ಲಿ ಅಷ್ಟದಿಕ್ಕುಗಳಲ್ಲಿ ನಿಂದುವಾಲಗಂಗೊ ಡುವ ಚತುರ್ಭಕ್ತಿ ಸಮ್ಮೇಳವಕಂಡು ಅಲ್ಲಿಂದ ಮುಂದಕ್ಕೆ ಹೋಗಿ ನಟ್ಟನಡುವಿರ್ದ ನಿಷ್ಕಲ ಪರಶಿವನಕಂಡು ತನುವುಬ್ಬಿ ಮನಕರಗಿ ಕ ರಣಂಗಳಲ್ಲಿ ಪರಿಣಾಮಜಲವುಕ್ಕಿ ಕಡೆಗೋಡಿವರಿವುತ್ತ ಪುರಿಕಪೂರ್ ರಸಯೋಗದಂತೆ ಆನಿಷ್ಕಲಪರಶಿವನೊಡ ನೆರದಪರಿಪೂರ್ಣವಾದ ಮಹಾಶರಣರತೋರಿಸಿ ಬದುಕಿಸಯ್ಯಾ ಯನ್ನ ‖ ೪೭ ‖ ಯನ್ನಂ ತರಂಗದ ಆರುಭುವನದಮೇಲೆ ತೋರುತಿರ್ಪ ಮಹಾಕೈಲಾಸದ ಮೂರುಮಂಡಲದಲ್ಲಿ ಯೆಂಟು ಹದಿನಾರು ಮುವ್ವತ್ತೆರಡು ತಂಡದ ಲ್ಲಿ ನಿಂದುವಾಲಗಂ ಗೊಡುತಿರ್ಪ ಸಕಲಗಣಂಗಳು ನಿಮಗೆಯೆನ್ನ ಮನಬುದ್ಧಿ ಚಿತ್ತ ಅಹಂಕಾರಂಗಳೇ ನಿಮ್ಮ ಮಂತ್ರಿಗಳಾಗಿರ್ಪವು ಯನ್ನದಶವಾಯುಗಳೇ ನಿಮ್ಮಗಾಳಿಗಳಾಗಿ ನಿಮ್ಮಮಂತ್ರಿ ನಾಮ ಗಳ ಕೊಂಡಾಡುತಿರ್ಪವು ಯನ್ನಚರಣಂಗಳು ನಿಮ್ಮ ಪ್ರದಕ್ಷಿಣೆಯ

ಮಾಡುತಿರ್ಪವು ಯನ್ನ ಹಸ್ತಗಳು ಯನ್ನ ನಿಮಗೆ ವಿಸರ್ಜನೆಯು ಕೃತ್ಯಕ್ಕೆ ಅನುವಾಗಿರ್ಪವು ಯನ್ನತ್ವಕ್ಕು ನಿಮಗೆ ಜ್ಞಾನಕೇಳಿಸುತಿರ್ಪದು ಯನ್ನಕಂಗಳು ನಿಮಗೆ ವಿಚಿತ್ರರೂಪುತೋರುತಿರ್ಪವು ಯನ್ನಪ್ರಾಣವು ನಿಮಗೆ ಗಂಧಪರಿಮಳವು ಮಾಡಿಸುತಿರ್ಪದು ಯನ್ನಜಿಹ್ವೆಯು ನಿಮ್ಮಭೋಜನಕ್ಕೆ ಷಡುರಸದ ಪ್ರಪಂಚಕಜ್ಞಾಯುಗಳ ಯಡೆಮಾಡುತಿರ್ಪದು ಯನ್ನ ಸಕಲಕರಣಂಗಳು ನಿಮ್ಮನಿಜಸೇವೆಯನ್ನೆ ಮಾಡುತಿರ್ಪವು ಯಿಂತೀ ನಾನಾತೆರವಲ್ಲಿ ಆಗುವ ನಿಮ್ಮಾಲಗದ ವಡ್ಡವಣೆಯಂಕಂಡು ಹೋದದು ಬಂದದು ಬರಿದೆ ಸಂಪಿಗೆಯ ಪುಷ್ಪಕ್ಕೆರಗಿದ ಭ್ರಮರದಂತೆ ನಿಮ್ಮೊಳಗೆ ಪರವಶವಾಗಿದ್ದೆನಯ್ಯಾ ॥ ೪೮ ॥ ಮುಕ್ತಿಗೆನಾದ ಸಂಧಾನವಾದ ಮಹಾಜ್ಞಾನ ಶಿವಕ್ಷೇತ್ರವೆಂಬಿ ಶಾಂಭವಿ ಚಕ್ರದ ವಿವರವೆಂತೆಂದಡೆ ಅಗ್ನಿಮಂಡಲದ ಪೂರ್ವದಿಕ್ಕಿನ ಸಕಾರವೇಮಾಯ ಚಕಾರವೇಚೇಷ್ಟಾ ಷಕಾರವೇ ರೌದ್ರ ವಕಾರವೇಕಾಳಿ ಅಗ್ನಿಮಂಡಲದ ನೈರುತಿದಳಕ್ಕೆ ಆಧಾರಚಕ್ರ ಸಮ್ಮಂಧವು ಅದರಮುಂದಿನ ಆಕಾರವೇಬಾಲೆ ಆಕಾರವೇ ಬಲಪ್ರಮಥಿನಿಯು ಕಾರವೇ ಸರ್ವಭೂತದಮನಿ ಮಕಾರವೇ ಮನೋನ್ಮನಿ ಇನ್ನು ಸೂರ್ಯಮಂಡಲದ ಬಕಾರಭಕಾರಂಗಳೆರಡು ಕೂಡಿ ಅಗ್ನಿಮಂಡಲದ ಈಶಾನ್ಯದಳಕ್ಕೆ ಸ್ವಾಧಿಷ್ಠಾನಚಕ್ರ ಸಂಮಂಧವು ಮುಂದೆ ಚಂದ್ರಮಂಡಲದ ವಿವರವೆಂತೆಂದಡೆ ಅಃ ಎಂಬುದೇ ಷಣ್ಮುಖಿ ಅಹಂಯೆಂಬುದೇಭಾವ ಓಂಕಾರವೇಸರ್ವ ಓಂಕಾರವೇರುದ್ರ ಎಕಾರವೇಮಹಾದೇವ ಏಕಾರವೇಸಮನ ಇಕಾರವೇಭೀಮ ಈಕಾರವೆವುಗ ಉಕಾರವೇಪಶುಪತಿ ಊಕಾರವೇ ಮಹೇಶ್ವರಾ ಎಕಾರವೇ ಚಂಡೇಶ್ವರ ಏಕಾರವೇ ನಂದೀಶ್ವರಾ ಇಕಾರವೇ ಮಹಾಕಾಳ ಈಕಾವೇ ಭೃಂಗಿರಿಟಿ ಸಿಕಾರವೇ ಗಣೇಶ್ವರ ಸೀಕಾರವೇ ವೃಷ್ಟಿಭೇಶ್ವರ ಚಂದ್ರಮಂಡಲದಲ್ಲಿ ವಿಶುದ್ಧಿಚಕ್ರಸಮ್ಮಂಧವು ಇನ್ನೂ ಸೂರ್ಯಮಂಡಲದ ವಿವರವೆಂತೆಂದಡೆ ಪೂರ್ವದಳದ ಕಕಾರವೇ

ಅನಂತ ಖಕಾರವೇಸೂಕ್ಷ್ಮ ಗಕಾರವೇ ಶಿವೋತ್ತಮ ಘಕಾರವೇ ಏಕನೇತ್ರ ಙಂಕಾರವೇ ಏಕರುದ್ರ ಚಕಾರವೇ ತ್ರೈಮೂರ್ತಿ ಛಕಾರವೇ ಶ್ರೀಕಂಠ ಜಕಾರವೇ ಶಿಖಂಡಿ ಝಕಾರವೇಇಂದ್ರ ಞಕಾರವೇಅಗ್ನಿ ಟಕಾರವೇಯಮ ಠಕಾರವೇನೈರುತ್ಯ ಸೂರ್ಯಮಂಡಲದ ನೈರುತ್ಯದಳಕ್ಕೆ ಅನಹಾತಚಕ್ರಸಂಮಂಧವು ಡಕಾರದ ಮುಂದಣ ಢಕಾರವೇವರುಣ ಣಕಾರವೇ ವಾಯುವ್ಯ ತಕಾರವೇ ಕುಬೇರ ಥಕಾರವೇ ಈಶಾನ್ಯ ಧಕಾರವೇಧೃವ ಧಕಾರವೇಸೋಮ ನಕಾರವೇ ಆಪ ಪಕಾರವೇಅನಿಲ ಫಕಾರವೇ ಆನಲ ಸೂರ್ಯಮಂಡಲದ ವರುಣದಳದಿಂದ ಈಶಾನ್ಯದಳಕೆ ಮಣಿಪೂರಕಚಕ್ರ ಸಂಮಂಧವು ಈಶಾನ್ಯಇಂದ್ರ ಮಧ್ಯದಬಕಾರ ಭಕಾರಂಗಳಪೆಸರು ಬಕಾರವೇಪ್ರತ್ಯೂಷ ಭಕಾರವೇಪ್ರಭಾವ ಇವು ಎರಡು ಸ್ವಾಧಿಷ್ಟಾನಚಕ್ರವು ಇನ್ನು ಹಕಾರ ಹಾಕಾರಂಗಳಿಗೆ ಭೇದಾಕಾರ ಚಂದ್ರಮಂಡಲದ ಅಂ ಯೆಂಬುವ ಅಕ್ಷರವು ಅಗ್ನಿಮಂಡಲದ ಸಾ ಯೆಂಬಕ್ಷರವು ಈ ಯೆರಡು ಅಗ್ನಿಚಕ್ರವು ಈ ಷಟ್ಚಕ್ರಂಗಳು ಶಾಂಬವಿಚಕ್ರದಲ್ಲಿ ಸಂಮಂಧವಾಗಿಹವು ಇನ್ನು ಅಷ್ಟದಳಂಗಳಿಗೆ ಹಂಚಿಹಾಕುವ ವಿವರವೆಂತೆಂದಡೆ, ವಾಮಗಣೇಶ್ವರ ವೃಷಭೇಶ್ವರ, ಅನಂತ, ಸೂಕ್ಷ್ಮಶಿವೋತ್ತಮ, ಇಂದ್ರ, ಸತ್ಯಭೃಂಗಿ, ಅಂತರ್ಲಕ್ಷ, ಇವರು ಹತ್ತು ಇಂದ್ರದಳದಲ್ಲಿ ಸಮ್ಮಂಧವು ಜ್ಯೇಷ್ಟಮಹಾಕಾಳ ಭೃಂಗಿರಿಟಿ ಏಕನೇತ್ರ, ಏಕರುದ್ರ, ತ್ರಿಮೂರ್ತಿ ಅಗ್ನಿವೃಷವಿಧಿ ದಮ, ಇವರು ಹತ್ತು ಅಗ್ನಿದಳದಲ್ಲಿ ಸಮ್ಮಂಧವು ರೌದ್ರ, ನಂದೀಶ್ವರ, ಚನ್ಡೇಶ್ವರ ಶ್ರೀಕಂಠ, ಶಿಖಂಡಿ, ಇಂದ್ರಯಮ, ಭಾಸೆರ, ಪುಷ್ಪದತ್ತ, ಬಾಲಟ, ಇವರು ಹತ್ತು ಯಮದಳದಲ್ಲಿ ಸಮ್ಮಂಧವು, ಕಾಳಿ ಉಮೇಶ್ವರ ಪಶುಪತಿ, ಅಗ್ನಿಯಮ, ನೈರುತ್ಯ, ವಾಲ್ಮೀಕ, ಸುಗ್ರೀವ ವರುಣ ಇವು ಹತ್ತು ನೈರುತ್ಯದಲ್ಲಿ ಸಂಮಂಧವು, ಬಾಲಿ, ಉಗಭೀಮ, ವರುಣಿ, ಏಕನೇತ್ರ, ಕುಭೇರ, ಅರಸು ಗಂಹರಹಾದೇವ, ಈಶಾನ್ಯಧರಾ, ಧೃ

ಪವಾಯು, ನಾಗಮುಖ, ಸೋಮ, ಅಪಾಲನಿಲ, ಕುಭೇರ, ಅನ್ನ ರವಿತಿ, ಅವಿಕಿ, ಇವರು ಹತ್ತು ಕುಬೇರದಳದಲ್ಲಿ ಸಮ್ಮಂಧವು ಮ ನೋನ್ಮನಿ, ಭಾವ, ಷಣ್ಮುಕಿ, ಪ್ರದ್ಯುಶ, ಪ್ರಭವ, ಈಶಾನ್ಯ, ಪ ರ್ಜನ್ಯ, ಜಯಂತ, ಶಂಕರ, ಇವರು ಹತ್ತು ಈಶಾನ್ಯದಳದಲ್ಲಿ ಸಂ ಮಂಧವು, ಇಲ್ಲಿಗೆ ಅಷ್ಟದಳಂಗಳವಿವರ ಮುಗಿಯಿತು ಮುಂದೆ ಚ ತುರ್ದಶ ವಿವರವೆಂತೆಂದರೆ ಇಂತಪ್ಪ ಅಷ್ಟದಳಂಗಳ ನೊಳಕೊಂಡು ಅಂಬಿಕೆ, ಗಣಾನಿ, ಈಶ್ವರಿ, ಮನೋನ್ಮಣಿ, ಎಂಬ ಚತುರ್ವಿಧಶಕ್ತಿ ಯರಿರ್ಪರು ಪೂರ್ವದಳದ ಸಕಾರವೇ. ಅಂಬಿಕೆ, ದಕ್ಷಣದಳದ ಅಕಾ ರವೇಗಣಾನಿ, ಪಶ್ಚಿಮದಳದ ಯಕಾರವೇ ಈಶ್ವರಿ, ಉತ್ತರದಳದ ಕ್ಷಕಾರವೇ ;ಮನೋನ್ಮನಿ, ಇಂತೀಚತುರ್ವಿಧಶಕ್ತಿಯರ ನೊಳ ಕೊಂಡಿರ್ಪ ಹ್ರೀಂಕಾರವೇಶಕ್ತಿ ಹ್ರೀಂಕಾರವೇ ಭಕ್ತಿಯೆಂದಡುಮಾ ಲಜ್ಞಾನ ಚಿತ್ತುವೆಂದಡು ಚಿದಾತ್ಮವೆಂದಡು, ಪರಿಯೂಯನಾಮ, ಇಂತಪ್ಪ ಹ್ರೀಂಕಾರಶಕ್ತಿಗೆ ಆಶ್ರಯವಾಗಿರ್ಪುದು ನಿಷ್ಕಲಲಿಂಗವೆಂ ಬದು ಶುದ್ಧಪ್ರಸಾದಿಯೆಂದಡು ಹಕಾರಪ್ರಣಮವೆಂದಡೆ ಪರಿಯೂ ಯನಾಮಂಗಳೊಳಕೊಂಡ ಪಿಂಡಬ್ರಹ್ಮಾಂಡದ ವಳಹೊರಗೆ ಪರಿ ಪೂರ್ಣವಾಗಿರ್ಪತುಂಬಿ ತೊಳ ಬೆಳಗುವ ಅನಾದಿ ನಿಷ್ಕಲಪರಶಿವ ಬ್ರಹ್ಮದ ನಿಜದನಿಲುವನ್ನು ಶೃತಿಗುರುವಚನಂಗಳ ಸ್ವಾನುಭಾವಂ ಗಳಿಂದರಿದು ತನ್ನೊಳಗೆ ಗರ್ಭೀಕರಿಸಿ ಸುಳಿವಮಹಾಶರಣರ ಶ್ರೀ ಚರಣಕ್ಕೆ ನಮೋನಮೋ ಯೆಂಬೆನಯ್ಯಾ ;ಅಖಂಡೇಶ್ವರ ॥ ೪೯ ॥ ಆ ಉನ್ಮನಿಯ ಮಂಟಪದಲ್ಲಿ ಪ್ರಮೆಯಜ್ಞಾನ ಪ್ರಗ್ನಡನೋಡಾ ಪ ರಿಪರಿಯಗುಣಂಗಳು ತರತರದಲ್ಲಿನೆರದು ಉಘಟಘೋಟಿಸುತಿರ್ಪರ ನೋ ಡಾ ಅಖಂಡೇಶ್ವರಾ ॥ ೫೦ ॥ ಸೂರ್ಯಮಂಡಲದಲ್ಲಿ ವೀರಗಣಂಗಳವಿ ಪರೀತವೇನು ಚಂದ್ರಮಂದ್ರಮಂಡಲವಲ್ಲಿ ನಂದಿವಾಹನನ ಸಂದಣಿ ಯೇನು ಅಗ್ನಿಮಂಡಲದಲ್ಲಿ ಗಣಂಗಳಸಾಜ್ಞೆಯಿದೇನು ಇಂತೀಮಂ ಡಲತ್ರಯಂಗಳ ಮಧ್ಯದಲ್ಲಿ ಮೂರ್ದಗೊಂಡ ಅಖಂಡೇಶ್ವರಾ॥೫೧॥

ಅಖಂಡದ್ವಯ ಅವಿರಳ ಪರಶಿವನಬೆಳಕಿನೊಳಗೆ ನಾ ನಿನವುರದು ಪರವಶನಾಗಿರ್ದೆನಯ್ಯಾ ಅಖಂಡೇಶ್ವರಾ ॥ ೩೦ ॥ ಸಹಸ್ರದಳಕಮಲಮಧ್ಯದಲ್ಲಿ ಪಂಚಪತ್ರ ಆಪತ್ರಮಧ್ಯದಲ್ಲಿ ಮಂಡಲತ್ರಯ ಆ ಮಂಡಲತ್ರಯದಮಧ್ಯದಲ್ಲಿ ಪ್ರಣವಪೀಠ ಆ ಪ್ರಣವಪೀಠದಮಧ್ಯದಲ್ಲಿ ಮುಹೂರ್ತಗೊಂಡು ಬೆಳಗುವನಿಮ್ಮದಿವ್ಯ ಶ್ರೀಮೂರ್ತಿಯಕಂಡು ಹರುಷಿತನಾದೆನಯ್ಯಾ ॥ ಅ ॥ ೩೧ ॥ ಯೋಗಯೋಗವೆಂದು ನುಡಿವುತಿರ್ಪರೆಲ್ಲರು ಯೋಗದೊಳಗಣ ಯೋಗವನಾರು ಅರಿಯರಲ್ಲ ಮಂತ್ರಯೋಗ ಲಯಯೋಗ, ಹಟಯೋಗ, ರಾಜಯೋಗವೆಂದು ಯೋಗಚತುರ್ವಿಧದೊಳಗೆ ಮೊದಲುಮಂತ್ರಯೋಗದಭೇದವೆಂತೆಂದಡೆ ಆವನಾನೊಬ್ಬ ಯೋಗಸಿದ್ಧಿಯಪಡೆವಾತ ಪಕ್ಷಿಗಳುಲಿಯದಮುನ್ನ ಪಶುಗಳುಕೂಡದಮುನ್ನ ಪ್ರಕೃತಿಗಳ ಆತ್ಮರುಸುಕಿಯದಮುನ್ನ ಶುಭಮುಹೂರ್ತದಲ್ಲಿ ಶಿವಧ್ಯಾನವಮಾಡುತ್ತಿದ್ದು ಶೌಚಾಚಮನದಂತ ಧಾವನಾದಿದಳಮಾಡಿ ಜಲಸ್ನಾನಂಗೈದು ಏಕಾಂತಸ್ಥಾನದಲ್ಲಿ ಕಂಬಲಾಸನಾವಿ ಗದ್ದುಗೆಯಲ್ಲಿಕುಳಿತು ಪೂರ್ವಮುಖವಾಗಲಿ ಉತ್ತರಮುಖವಾಗಲಿ ಸಿದ್ಧಾಸನವಿಕ್ಕುಳ್ಳಿರ್ದ್ದು ಭಸ್ಮಶ್ನಾನಗಳನಾಚರಿಸಿ ಆಗಮಯುಕ್ತದಿಂದ ಈಶ್ವರಾರ್ಚನೆಯನುಮಾಡಿದಬಳಿಕ ಅಂತರಾಳ ಹೃದಯಕಮಲ ಕರ್ಣಿಕೆಯಲ್ಲಿ ಹಕಾರವೆಂಬ ಬೀಜಾಕ್ಷರಮಧ್ಯದಲ್ಲಿ ಮೂರ್ತಿಧ್ಯಾನವಂ ಮಾಡುವಂತವೆ ಶುದ್ಧಪದ್ಮಾಸನನಾಗಿ ಚಂದ್ರಕಲಾಧರನಾದ ಪಂಚಮುಖ ತ್ರಿನೇತ್ರಂಗಳುಳ್ಳ ಶೂಲವಜ್ರಖಡ್ಗ ಪರಶು ಅಭಯ ಅಭಯಗಳನಾಂತ ಪಂಚದಕ್ಷಣ ಹಸ್ತಗಳ ಸುಳ್ಳನಾಗಪಾಶ ಘಂಟಾನಲಲಂಕುಶಗಳನಾಂತ ಪಂಚನಾಮಕರಣಂಗಳುಳ್ಳ ಪಿರಿದಾಬರಣಂಗಳಿಂ ದಲಂಕೃತವಾದ ಸ್ಫಟಿಕರತ್ನದ ಕಾಂತಿಯುಳ್ಳಾತನಾದ ಶಿವಮೂರ್ತಿಯಧ್ಯಾನಿಸುತ್ತ ಕರಶಿನಾದಿ ಷಡಂಗನ್ಯಾಸಗಳಮಾಡಿ ನಿತ್ಯಜಪಾನುಷ್ಠಾನಂಗಳ ಮಾಡಿ ಮೋಕ್ಷಾದಿಯರ್ಥನು ರುದ್ರಾಕ್ಷಿಯ ನೂರೆಂಟರಿಂದಾದರು

ಇಷ್ಟತ್ರ್ಯದರಿಂದಾದರೂ ಆಗಮೋಕ್ತಮಾರ್ಗದಿಂದ ಜಪಮಾಲಿಕೆಯಿಂದ ಅಂಗುಷ್ಟಮಧ್ಯಮಗಳಿಂದಲು ಉಪಾಂಶುರೂಪದಿಂದ ಧ್ಯಾನಪೂರ್ವಕ ॥ ಅ ॥ ೫೭ ॥ ಇಡಾಪಿಂಗಳಲ್ಲಿತುಂಬಿ ಸೂಸುವಮಾಂಸರೂಪವ ಪ್ರಕೃತಿ ಪ್ರಾಣವಾಯುಗಳನ್ನು ಸೋಹಂವೆಂಬ ಮಂತ್ರದಿಂದ ಪೈಕೃತ್ಯಧ್ಯಾನವಮಾಡಿ ಧ್ಯಾನಮೂರ್ತಿಯಲ್ಯಾದರು ಲಕ್ಷಗಳಲ್ಯಾದರು ಪ್ರಾಣಾತ್ಮವಾದ ಸುನಾದದಲ್ಯಾದರೂ ಮನೋಮಾರುತಂಗಳೊಡಗೂಡಿ ಧ್ಯಾನಿಸುವದೇ ಲಯಯೋಗ ನೋಡಾ ಅಖಂಡೇಶ್ವರಾ ॥ ೫೮ ॥ ಇಂನು ಹಟಯೋಗಕ್ಕೆ ಧ್ಯಾನವಮಾಡೋ ಬಂಧತ್ರಯಂಗಳ ಬೇದವೆಂತೆಂದಡೆ ವಾಮಪಾದದ ಹಿಮ್ಮಡದಿಂ ಯೋನಿಸ್ಥಾನವನೊತ್ತಿ ಬಲದಪಾದವಂನೀಡಿ ಯರಡುಹಸ್ತಗಳಿಂ ಅಂಗುಷ್ಟಪಿಡಿದು ಕಂಠಸ್ಥಾನದಲ್ಲಿ ಚುಬುಕವನಿಸಿ ವಾಯುಃಧಾರಣಮಾಡುವದೇ ಜಾಲಿಂದ್ರಬಂದವೆನಿಸುವದು ವಾಮಪಾದದ ಹಿಮ್ಮಡದಿಂದಾಧಾಠವನೊತ್ತಿ ಯಡಪಾದ ತೊಡೆಯಮೇಲೆ ಬಲದಪಾದವನಿರಿಸಿ ವಾಯುಪೂರಣವಂಮಾಡಿ ಜಾಲಿಂದ್ರವಂ ಬಂಧಿಸುವದೇ ಮಹಾಬಿಂಬವೆನಿಸುವದು ನಾಭಿಯ ಪೂರ್ಧ್ವಭಾಗಂಗಳಲ್ಲಿ ಅಧೋಭಾಗಂಗಳೇ ಬಲೋತಟದಿಂ ಬಂಧಿಪುದೇ ವಡ್ಯಾಡಣಬಂದವೆನಿಸುವದು ಈ ಬಂದನತ್ರಯಂಗಳಿಂದ ಛೇದನ, ಚಾಲನ, ಮೋಹನಾದಿಕ್ರಿಯಗಳಿಂದೆ ಪೇರ್ಚಿ ಜಿಹ್ವೆಯನ್ನು ಭ್ರೂಮಧ್ಯಸ್ಥಾನಕ್ಕೇರಿಸಿ ಸ್ಥಿರದೃಷ್ಟಿಯಾಗಿಹುದೇ ಹಟಯೋಗನೋಡಾ ಅಖಂಡೇಶ್ವರಾ ॥ ೫೫ ॥ ಹಟಯೋಗಕ್ಕೆ ನಿಜದಂಗವಾಗಿರ್ಪ ಯಮ, ನಿಯಮ, ಆಸನ, ಪ್ರಾಣಾಯಾಮ ಪ್ರತಾಹಾರ ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗದೊಳಗೆ ಮೊದಲು ಯಮಯೋಗದ ಲಕ್ಷಣವೆಂತೆಂದೊಡೆ ಪರಸ್ತ್ರೀಸಂಗ ವಿರಹಿತನಾಗಿರ್ಪುದು ಪರದ್ರವ್ಯವ ನಪಹರಿಸದಿರಬೇಕು ಪರಹಿಂಸೆಯ ಮಾಡದಿಹುದು ದುಃಖಿತರ್ಗೆ ಹಿತವಚಿಂತಿಸುವದು ಚೋರಭೀತಿಗಳಿಲ್ಲದಿಹುದು ಅಲ್ಪ ಆಹಾರವಾಗಿರ್ಪುದು ಕುಟಿಲತ್ವ

ಯಿಲ್ಲದಿಹುದು ಕಾರ್ಪಣ್ಯ ಸತ್ಯವಚನವನುಡಿವುದು ಜಲಸ್ನಾನ ಭಸ್ಮಸ್ನಾನ ಮೊದಲಾದವಂ ನಾಚರಿಸುವದೇ ಯಮಯೋಗವೆನಿಸುವದು ಅಖಂಡೇಶ್ವರಾ ॥ ೫೬ ॥ ಬಳಿಕ ನಿಯಮದಲಕ್ಷಣವೆಂತೆಂದಡೆ, ಸಕಲವಿಷಯಂಗಳಲ್ಲಿ ವುದಾಸೀನವು ಶ್ರೀ ಮಾಗವೋಕ್ತಂಗಳಲ್ಲಿ ವಿಶ್ವಾಸವು ಸತ್ಕ್ರಿಯದಲ್ಲಿ ಯಿರಕತೆಯು ದೇಹಶೋಷಣವಾದರು ಪಾದತಪವು ನಾನಾರು ಮೋಕ್ಷವೆಂತಿರ್ಪುದೋಯೆಂಬ ಆಲೋಚನೆಯು ಭಸ್ಮನಿಷ್ಠಾದಿವ್ರತವು ಶಿವಲಿಂಗಾರ್ಚನೆಯು ಪ್ರಣಮಪಂಚಾಕ್ಷರಮಂತ್ರವು ಸರ್ವಶಾಸ್ತ್ರಗಳಲ್ಲಿ ಶಿವಸ್ಮರಣೆಯು ನಾನಾರೋಯೆಂಬೆಚ್ಚರವು ಲೋಕದ ವಿಶುದ್ಧ ವೇದ ವಿರುದ್ಧ ಮನಮಾರ್ಗಂಗಳ ಮನವೆರಸದಿಹುದು ಶಾಸ್ತ್ರಂಗಳ ಕೇಳೋದು ಸತ್ಪಾತ್ರ ಯುಕ್ತದಾನವಾಗಿಹುದೇ ನಿಯಮಯೋಗನೋಡಾ ಅಖಂಡೇಶ್ವರಾ ॥ ೫೭ ॥ ಇನ್ನು ಆಸನ ಭೇದವೆಂತೆಂದೊಡೆ ಒಂದು ಹಿಮ್ಮಡದಿಂದ ಯೋನಿಸ್ಥಾನವನೊತ್ತಿ ಮತ್ತೊಂದುಹಿಮ್ಮಡದಿಂ ಮೇಢ್ರದಮೇಲಿರಿಸಿ ಏಕಚಿತ್ತನಾಗಿ ರುಜುಕಾಯನಾಗಿ ಭ್ರೂಮಧ್ಯದಲ್ಲಿ ದೃಷ್ಟಿಯುಳ್ಳಾತನಾಗಿರುವದೇ ಸಿದ್ಧಾಸನವೆನಿಸಿತು ಎರಡುತೊಡೆಗಳಮೇಲೆ ಯರಡುಪಾದಂಗಳಮೇಲು ಮುಖವಾಗಿರಿಸಿ ಎರಡುಕಂಗಳನಡುವೆ ಮೇಲುಮುಖವಾಗಿರಿಸಿ ರಾಜದಂತಗಳನಡುವೆ ರಸನಾಗ್ರವನಟ್ಟು ನಾಸಾಗ್ರದೃಷ್ಟಿಯಿಂದಿಹುದೇ ಪದ್ಮಾಸನವೆನಿಸುವದು ಎರಡು ಕಿರಿದೊಡೆಕಿಗಳ ಸಂಧಿಗಳಲ್ಲಿ ಯೆರಡುಪಾದಗಳಿರಿಸಿ ರುಜುಕಾಯನಾಗಿಹುದೇ ಸ್ವಸ್ತಿಕಾಮೇಲೆ ಬಲಹಿಮ್ಮಡವನಿರಿಸಿ ರುಜುಕಾಯನಾಗಿಹುದೇ ಮುಕ್ತಾಸನವೆನಿಸುವದು ಯಡದಹಿಮ್ಮಡವಂ ಬಲದಹಿಮ್ಮಡವಂ ಪೊದರೊಳಿರಿಸಿ ಜಾನುಗಳೆರಡನ್ನು ಗೋಮುಖಾಕಾರವಾಗಿ ಮಾಳ್ಪುದೇ ಗೋಮುಖಾಸನವೆನಿಸುವದು ಸಕಲಾಸನಂಗಳಿಂದ ಯೋಗವಂ ಸಾಧಿಸುವದೇ ಆಸನಯೋಗನೋಡಾ ॥ ೫೮ ॥ ಇನ್ನು ಪ್ರಾಣಾಯಾಮ ಲಕ್ಷಣ ವೆಂತೆಂದೊಡೆ ಪ್ರಾ

ಕೃತ ಪ್ರಾಣಾಯಾಮವೆಂದು ವೈಕೃತ ಪ್ರಾಣಾಯಾಮವೆಂದು ಆಯುಗಡರಿಂ ಪೂರಿಸಿದಾತ ಕೇವಲ ಕುಂಭವೆಂದು ಮೂರುಪ್ರಕಾರವಾಗಿರ್ಪುದೆಂತೆನೆ ಒಂದುದಿನಕ್ಕೆ ಇಪ್ಪತ್ತೊಂದುಸಾವಿರ ಐನೂರರಹಂಸವೆಂದು ಸ್ಮರಿಸುವ ಅಹಂಕಾರಾತ್ಮಕವಾದ ಜೀವಜಪವೇ ಪ್ರಾಕೃತಪ್ರಾಣಾಯಾಮ ವೆನಿಸುವದು ಮತ್ತು ಜೀವಜಪವನ್ನು ಗುರೋಪದೇಶದಿಂದ ಲೋಪಮಾಡಿ ಸೋಽಹಂ ಸೋಽಹಂ ವೆಂಬ ಮಂತ್ರವ ಸ್ಮರಿಸುವದೇ ವೈಕೃತ ಪ್ರಾಣಾಯಾಮ ವೆನಿಸುವದು ಇನ್ನೊಂದು ಪ್ರಕಾರವಾಗಿ ಹೇಳಲ್ಪಡುವದೆಂತೆನೆ ಕನಿಷ್ಟ ಅನಾಮಿಕಗಳಿಂದ ಈಡನಾಡಿಯೆಂಬಲಿದು ಪಿಂಗಳನಾಡಿಯಿಂದದೇಹಾಂತರ್ಗತವಾಯುವಂ ಅಕಾರೋಚ್ಛಾರಣದಿಂಪಂನೆರಡುಮಾತ್ರವಿರಚಿತಮಪ್ಪ । ಪಿಂಗಳನಾಡಿಯಂ ಅಂಗುಷ್ಟದಿಂಬಲಿದು ಈಡನಾಡಿಯಿಂದೆ । ಹನ್ನೆರಡುಮಾತ್ರೆ ಉಕಾರೋಚ್ಛಾರಣೆಯಿಂಪೂರಿಸಿ ನಾಭಿಹೃದಯಕಂಟವೆಂಬ ತ್ರಿಸ್ಥಾನದೊಳೊಂದರಲ್ಲಿಹನ್ನೆರಡುಮಾತ್ರೆ । ಮಕಾರೋಚ್ಛಾರಣದಿಂತುಂಬಿಸಿಪುದಿವುದು ಕನಿಷ್ಟಪ್ರಾಣಾಯಾಮವೆನಿಸುವದುಅದೆಂತೆಂದಡೆ।ಶೀಘ್ರವಿಲ್ಲದೆಲಂಬವಿಲ್ಲದೆಜಾನುವಂಪ್ರದಕ್ಷಿಣವಮ್ಮಾಡಿ। ಅಂಗುಲ್ಯಸ್ಫೊಟನಮಮ್ಮಾಡಿದರೆಮಂದುಮಾತ್ರೆಯೆನಿಸುವದುಇಂಥಾಮಾತ್ರೆಹನ್ನೆರಡುಆದರೆಕನಿಷ್ಟವೆನಿಸುವದುಮತ್ತಾಮಾತ್ರೆ ಇಪ್ಪತ್ತುನಾಲ್ಕಾದರೆ ಮಧ್ಯಮವೆನಿಸುವದು ಬಳಿಕಾಮಾತ್ರೆಮೂವ್ವತ್ತಾರಾದಡೆ ಉತ್ತಮವೆನಿಸುವದು। ಇಂತೀಮೂವ್ವತ್ತಾರುಸ್ಮರಣೆಧ್ಯಾನಸಹಿತಮಾಗಿಮಾಳ್ಪುದೇ। ಪ್ರಾಣಾಯಾಮದಲ್ಲಿಯೇ ಉತ್ತಮಪ್ರಾಣಾಯಾಮವೆನಿಸುವದು । ಇನ್ನು ಕೇವಲಕುಂಭಕವೆಂತೆನೆ। ಗಂಗಾನದಿಯೆಂದು ಹೇಳಲ್ಪಡುವದು ಭಾವಿಸೋ ಸುಷುಮ್ನವೆಂಬ ಮಧ್ಯನಾಡಿಯ ತ್ರಿವೇಣಿಯೆಂಬ ಯೋಗಸ್ಥಾನಕ್ಕೆ ತ್ರಿಕೂಟವೆಂದು ಮಧ್ಯಹೃದಯವೆಂದು ಕಾಶೀಕ್ಷೇತ್ರವೆಂದು ಕುರ್ಬದೆಂದು ಅಗ್ನಿಚಕ್ರವೆಂದು ಪರಿಯಾಯನಾಮವನುಳ್ಳ ಶಿವಧ್ಯಾನಕ್ಕೆ ರಹಸ್ಯವಾದ ಭ್ರೂಮಧ್ಯ

ದಸ್ಥಾನದಲ್ಲಿ ಮನೋಮಾರುತಂಗಳೈದಿಸಿ ಯೋಗಮಂಸಾಧಿಸಲು ಆ
ದೇಪ್ರಣಾಯಾಮಾಭ್ಯಾಸ ನೋಡಾ, ಇನ್ನು ಪ್ರತ್ಯಾಹಾರದ ಭೇ
ದವೆಂತೆಂದೊಡೆ ಯೋಗಾಭ್ಯಾಸವ ಮಾಡುವಲ್ಲಿ ಆಲಸ್ಯವಾದ ವಿನ
ಸ್ವರವಾದ ಅತಿಕೃಷ್ಣವಾದ ಅತಿನೀತವಾದ ಅತಿಕಟುವಾದ ಅತಿ
ಅಮ್ಲವಾದ ಅಪವಿತ್ರವಾದ ಅನ್ನಪಾನಂಗಳಂಬಿಟ್ಟು ಯೋಗೀಶ್ವರ
ರಿಗೆ ಸೇವಿಸಲು ಯೋಗ್ಯವಾದ ಗೋದಾವಿಶಾರಿ ಜವೇಹೆಸರು ಹಾ
ಲು ತುಪ್ಪ ಮುಂತಾದ ಪವಿತ್ರ ಅನ್ನಪಾನಂಗಳನ್ನು ಬಹುಬಹಳ
ವಲ್ಲದೆ ಬಹುಸೂಕ್ಷ್ಮವಲ್ಲದೆ ಸುಪ್ರಮಾಣದಲ್ಲಿ ಸ್ವೀಕರಿಸುವದೇ
ಪ್ರತ್ಯಾಹಾರವೆನಿಸುವದು ಇಂತುಮಲ್ಲದೆ ಭಾವಾರ್ಥಂಗಳಲ್ಲಿ ಮರ
ಗುವಚಿತ್ತಮಂ ಹೃದಯಾಕಾಶದಲ್ಲಿಯೋ ನಿಲ್ಲಿಸುವದೇ ಪ್ರತ್ಯಾಹಾ
ರವು ಮತ್ತು ಹೃದಯಸ್ಥಾನದಲ್ಲಿ ಚರಿಸುವಮನಮಂಮರಳಿಅಲ್ಲಲ್ಲಿ
ಯೇಸ್ಥಾಪಿಸುವದೇ ಪ್ರತ್ಯಾಹಾರವಯ್ಯಾ ॥ ಅ ॥ ೬೦ ॥ ಇನ್ನು
ಯೋಗೀಶ್ವರರಿಗೆ ಧ್ಯಾನಯೋಗ ಆ ಯೋಗಕ್ಕೆ ಸ್ಥಾನಗಳಾವಾ
ವೆಂದರೆ ಆಧಾರ, ಸ್ವಾಧಿಷ್ಟ, ಮಣಿಪೂರಕ, ಅನಾಹತವಿಶುದ್ಧಿ ಭ್ರೂ
ಮಧ್ಯವೆಂಬ ಷಡುಸ್ಥಾನಂಗಳಲ್ಲಿಯೂ ಬಂದಮುದ್ರೆಗಳಿಂದ ಧ್ಯಾನ
ಮಂಮಾಳ್ಪ ದೆಂತೆಂದೊಡೆ ಆಧಾರಚಕ್ರ ನಾಲ್ಕೆಸಳ ಬಂದಮುದ್ರೆಗ
ಳಿಂದ ಮಧ್ಯದಲ್ಲಿ ಯಿಷ್ಟಾರ್ಥಮಂ ಕೊಡುವ ಸುವರ್ಣಕಾಂತಿಯೆ
ತ್ತಳ ಆಧಾರಶಕ್ತಿ ಧ್ಯಾನಿಸುವದು ಸ್ವಾಧಿಷ್ಟಾನಚಕ್ರದ ಆರಸಳ
ಮಧ್ಯದಲ್ಲಿ ಸಕಲವರ್ಣಾಧಾರ ಲಿಂಗಸ್ವರೂಪವಾದ ಶಿವನಧ್ಯಾನಿಸು
ವದು ಮಣಿಪೂರಕಚಕ್ರ ಹತ್ತೆಸಳಮಧ್ಯದಲ್ಲಿ ಸಪ್ತಸರ್ಪಾಕಾರ
ಮಿಂಚಿನಸಮಾನ ದೀಪ್ತಿಯುನುಳ್ಳ ಸಕಲಸಿದ್ಧಿಗಳ ಕೊಡುವ ಕುಂ
ಡಲಶಕ್ತಿಯ ಧ್ಯಾನಿಸುವದು ಅನಾಹತಚಕ್ರ ಹನ್ನೆರಡೆಸಲ ಮಧ್ಯ
ದಲ್ಲಿ ಜ್ಯೋತಿರ್ಮಯಲಿಂಗಮಂ ಧ್ಯಾನಿಸುವದು ವಿಶುದ್ಧಿಚಕ್ರ ಷೋ
ಡಶದಲಮಧ್ಯದಲ್ಲಿ ಸುಸ್ಥಿರವಾದ ಆನಂದಸ್ವರೂಪವಾದ ಸುಷು
ಮ್ನೆಯು ಧ್ಯಾನಿಸುವದು ಆಗ್ನೆಚಕ್ರದ್ವಿದಳ ಮಧ್ಯದಲ್ಲಿ ವಾಕ್ಸಿ
ದ್ಧಿಯ ಕೊಡುವದು ದೀಪದಜ್ಯೋತಿಗೆ ಸಮಾನವಾದ ಜ್ಞಾನನೇ

ತ್ರವೆನಿಸುವ ಶುದ ಪ್ರಸಾದವ ಧ್ಯಾನಿಸುವದೇ ಧ್ಯಾನಯೋಗನೋ
ಡಾ ॥ ಅ ॥ ೬೧ ॥ ಯಿನ್ನು ಧಾರಣಾಯೋಗ ವೆಂತೆಂದೊಡೆ ಸಂಕಲ್ಪ
ವಿಕಲ್ಪಾತ್ಮಕವಾದ ಮನಸುಖಕ್ಕೆಳೆಸದಂತೆ ಬಾಹ್ಯಾತಂಗಳಿಗೆ ತಾ
ನೇಕಾರಣವಪ್ಪುದರಿಂದ ಆ ಮೂಲನಾಮವುಂ ಮೂಡುತ್ತಿರಲು ಧ್ಯಾ
ನಾಕಾರದಿಂ ಕರಿಕೊಂಡು ವಸ್ತುವನುಳ್ಳ ಮೂಲವು ನಿಶ್ಚಲವಾಗಲ
ದೇ ಧಾರಣಾಯೋಗನೋಡಾ ॥ ಅ ॥ ೬೨ ॥ ಬಳಿಕಾಪ್ರಕಾರವಾದ
ಘಟಾಯೋಗ ರೂಪಮಪ್ಪ ಅಷ್ಟಾಂಗಗಳೆ ನಿರಾಲಸ್ಯದಿಂದ ಯೆಡೆ
ವಿಡವಿಲ್ಲದೆ ಮಾಡಿದಾತಂಗಾಗುವ ಸಿದ್ಧಿಪ್ರಕಾರಗಳೆಂತೆನೆ ಮೊದಲು
ವರುಷದಲ್ಲಿ ನಿರೋಗಿಯಾಗಿ ಸಕಲಜನ ಪ್ರೀತನಾಗುವನು ಎರಡ
ನೇವರುಷದಲ್ಲಿ ಸಂಸ್ಕೃತಭಾಷೆಯಿಂದ ಕವಿತ್ವವಂ ಮಾಡುವನು
ಮೂರನೆಯುವರುಷದಲ್ಲಿಸರ್ಪಾದಿ ದುಷ್ಟಪ್ರಾಣಿಗಳಿಂದಭಾಧಿಸಿಕೊಳೆ
ನು ನಾಲ್ಕನೆಯುವರುಷದಲ್ಲಿ ಹಸಿವೆ ತೃಷಿಶೋಕ ನಿದ್ರೆಮೋಹಾದಿ
ಗಳ ಬಿಡುವನು ಐದನೆಯು ವರುಷದಲ್ಲಿ ಖೇಚರಗಮನನಾಗುವನು
ಎಂಟನೇವರುಷದಲ್ಲಿ ಅಣಿಮಾದ್ಯಷ ಸಿದ್ಧಿಸಂಪನ್ನನಾಗುವನು ಒಂ
ಭತ್ತನೆಯುವರುಷದಲ್ಲಿ ಶಿವನಸಮಾನವಾಗಿ ಸೃಷ್ಟಿಸ್ಥಿತಿ ಸಹ್ಮಾರಂ
ಗಳ ನೂಡುತಿಪ್ಪದೇ ಹಠಯೋಗವಾದದರಸಿದ್ಧಿನೋಡಾ ॥ ೬೩ ॥
ಇನ್ನು ರಾಜಯೋಗದ ಲಕ್ಷಣ ವೆಂತೆಂದೊಡೆ, ಮಂತ್ರಯೋಗ ಲ
ಯುಯೋಗಕ್ಕೆ ಉತ್ತರೋತ್ತರ ವಿಶೇಷವಾದ ವಾಗಾದಿ ಕರ್ಮೆಂದ್ರಿ
ಯಳೈದು ಶೋತ್ರಾದಿ ಜ್ಞಾನೇಂದ್ರಿಯಗಳೈದು ಪ್ರಾಣಾದಿವಾಯು
ಗಳೈದು ಶಬ್ದಾದಿವಿಷಯಗಳೈದು ಜೀವನಗೂಡಿ ಮನಸಾದಿ ಅಂ
ತಃಕರಣಗಳೈದು ಇಂತೀ ಪಂಚತತ್ವಂಗಳು ನಾನಲ್ಲ ನನ್ನವಲ್ಲವೆಂ
ದು ಭಾವಿಸಿಕಳದ ಪರಾತ್ಪರವಾದ ಪರಶಿವಬ್ರಹ್ಮವೇ ನಾನೆಂದುತಿ
ಳಿವುದೇ ಸಾಂಖ್ಯಯೋಗನೋಡಾ ॥ ೬೪ ॥ ಇನ್ನು ತಾರಕಯೋಗ
ದ ಲಕ್ಷಣ ವೆಂತೆಂದೊಡೆ ವೇದಶಾಸ್ತ್ರಾಗಮ ಪುರಾಣ ಕವಿತ್ವಂಗ
ಳೆಂಬ ನುಡಿಗಳಿಂದ ವಾಚಾಳಕರಾದವರಿಗೆ ತಾರಕಬ್ರಹ್ಮವು ಸಾಕ್ಷಾ
ತ್ಕಾಗವಾಗಲರಿಯದಯ್ಯಾ ॥ ೬೫ ॥ ಸದ್ಗುರು ಪ್ರಸಾದದಿಂದ ಪ್ರೊ

ದಗಿದ ತಾರಕಬ್ರಹ್ಮದ ಆಶವೆಂತೆನೆ ಆ ತಾರಕಬ್ರಹ್ಮವೇ ಕಲೆ ಯು ಮ್ಮನಾದವೆಂದು, ಬಿಂದುವೆಂದು, ಮೂರುಪ್ರಕಾರ ಮಪ್ಪದವರೊಳಗೆ ಆಕಲೆಯೇ ಕಮಲತಂತುವಿನಿಂವೆ ಪರಮಸೂಕ್ಷ್ಮವಾಗಿ ಹರಿಹಂಚಿಲ್ಲದೆ ಬ್ರಹ್ಮರಂಧ್ರಸ್ಥಾನದಲ್ಲಿ ದಿವ್ಯಪ್ರಕಾಶ ರೂಪದಿಂದಿಹುದು ಮತ್ತಾಕಲೆಯೇ ಬಲಿದು ಅಂಗುಷ್ಟಮಾತ್ರವಾದ ದ್ವೀಪಜ್ವಾಲೆ ಅಕಾರದಿಂ ಭ್ರೂಮಧ್ಯಸ್ಥಾನದಲ್ಲಿ ಕಾಣಿಸಿತಲ್ಲದೆ ನಾದವೆನಿಸುವದು ಬಳಿಕಾನಾದವೇಬಳಿದು ಚಂದ್ರಸೂರ್ಯಪ್ರಭಾ ಮಂಡಲಗಳ ನೊಳಕೊಂಡು ನೇತ್ರಮಧ್ಯದೊಳಿರುವದೇ ಬಿಂದುವೆನಿಸುವದಯ್ಯ॥೬೬॥ ಚಂದ್ರಸೂರ್ಯ ರೆನಿಸುವ ನಾಮದಕ್ಷಿಣ ನೇತ್ರಗಳ ಮಧ್ಯೆ ತಾರಕಂಗಳಾಗಿರ್ಪ ಊರ್ಧ್ವಮುಖ ವಪ್ಪವದರಿಂದ ಚಲಿಸದೇ ದೀಪಿಸುತಿರ್ದ ಜೀವ ಚೈತನ್ಯಸೂತ್ರಕ್ಕೆ ಮುಖ್ಯವಾದ ಪರಮಸೂಕ್ಷ್ಮದ್ವಾರಂಗಳಿಂ ಕೂಡಿರ್ದ ನೀಲಬಿಂದುಗ ಳೆರಡನ್ನು ಶ್ರೀ ಗುರೂಪದೇಶದಿಂದಲೇ ಸಾಗಿಳಿದು ತಾರಕಬ್ರಹ್ಮವ ನಭ್ಯಾಸಂಗೈವಾತನೇ ರಾಜಯೋಗಿ ನೋಡಾ ಅಖಂಡೇಶ್ವರಾ ॥ ೬೭ ॥ ದಕ್ಷಿಣಜ್ಯೋತಿರ್ಮಂಡಲ ಮಧ್ಯದಲ್ಲಿ ಬೆಳಗುತಿರ್ಪ ಪ್ರತ್ಯಕ್ಷವಾಗಿ ಪರಮಾತ್ಮನೆಪತಿ ವಾಮಜ್ಯೋತಿರ್ಮಂಡಲ ಮಧ್ಯದಲ್ಲಿ ಬೆಳಗುತಿರ್ಪ ಜೀವಾತ್ಮನೇಪತಿ ಈ ಮಂಡಲಂಗಳ ಯೋಗವೇ ತತ್ವಮಸಿಯೆಂಬೀ ಮಹಾವಾಕ್ಯಾರ್ಥವಾದ ಜೀವಪರಮ ರೈಕ್ಯವದೇ ಲಿಂಗಾಂಗಸಂಯೋಗವವೆ ಶಿವಾತ್ಮರ ಸಾಮರಸ್ಯವದೇ ನೋಡಾ ॥ ೬೮ ॥ ಪರತರ ಪರಮ ಸಮರಸ ಸ್ವರೂಪವಾದ ತಾರಕಬ್ರಹ್ಮವು ಅಂತರ್ಲಕ್ಷವೆಂದು ಬಾಹ್ಯಲಕ್ಷವೆಂದು ಮಧ್ಯಲ್ಲಕ್ಷವೆಂದು ತ್ರಿವಿಧಮಪ್ಪದವರಲ್ಲಿ ಮೊದಲು ಅಂತರ್ಲಕ್ಷವೆಂತೆನೆ ಮೂಲಾಧಾರದಿಂದ ಬ್ರಹ್ಮರಂಧ್ರಪರಿಯಂತರವಾಗಿ ಕೋಟಿಮಿಂಚುಗಳಿಗೆ ಸಾದೃಶ್ಯವಾದ ಬಿಂದುವನ್ನು ಮನಸ್ಸಿನಿಂದ ಸಾಧಿಸುವನು ಮತಿ ಗೋಮಂಡಲವೆನಿಸುವ ಲಲಾಟಪರಿ ಭಾಗದಲ್ಲಿ ಮಿನುಗುತಿರ್ದ ನಕ್ಷತ್ರಾಕಾರವನ್ನು ಮನಸ್ಸಿನಿಂದ ಸ್ಮರಿಸುವದೇ

ಮತ್ತಾ ಸ್ವರೂಪದ ಪ್ರಣವಘೋಷವನಾಲಿಪುದು ಮತ್ತಂ ಲೋಚನಂಗಳ ಮಧ್ಯದಲ್ಲಿ ಕಿರಿಯ ನಕ್ಷತ್ರಮಂಡಲವ ಲಕ್ಷಿಪುದೇ ಅಂತರ್ಲಕ್ಷವಯ್ಯಾ ॥ಅ॥ ೬೯ ॥ ನಾಸಿಕಾಗ್ರದಿಂದ ಮುಂದೆ ನಾಲ್ಕು ಅಂಗುಲದ ಪ್ರಮಾಣದಲ್ಲಿ ನೀಲವರ್ಣದ ಮಹದಾಕಾಶವನ್ನು ಆರಂಗುಲದಲ್ಲಿ ಧೂಮವರ್ಣವಾದ ವಾಯುವನ್ನು ಎಂಟಂಗುಲದಲ್ಲಿ ರಕ್ತವರ್ಣವಾದ ಅಗ್ನಿಯನ್ನು ಹತ್ತಂಗುಲದಲ್ಲಿ ಧರವರ್ಣವಾದ ಅಪ್ಪುವನ್ನು ಹನ್ನೆರಡಂಗುಲದ ಪ್ರಮಾಣದಲ್ಲಿ ಹೊಂಬಣ್ಣವಾದ ಪೃಥ್ವಿಯನ್ನು ಲಕ್ಷಿಪುದು ಬಹಿರ್ಲಕ್ಷನೋಡಾ ಅಖಂಡೇಶ್ವರಾ ॥ ೨೦ ॥ ಮತ್ತಂ ಶಿರಸ್ಸಿನಮೇಲುಭಾಗ ಹನ್ನೆರಡಂಗುಲ ಪ್ರಮಾಣದಲ್ಲಿ ಪೀತರಕ್ತಾದಿ ಸಕಲವರ್ಣಾಕಾರವಿಲ್ಲದ ಶುದ್ಧಸಾತ್ವಿಕವಾದ ಬೆಳಗಿನೊಬ್ಬುಳಿಯನ್ನೇ ಲಕ್ಷಿಪುದು ಬಹಿರ್ಲಕ್ಷವಯ್ಯಾ ॥ ೨೧ ॥ ಚತುರ್ಭೂತಂಗಳ ನೊಳಕೊಂಡು ನೀಲಲೋಹಿತಾದಿ ವರ್ಣಂಗಳಿಲ್ಲದುದೇ ಭೂತಾಕಾಶ ವೆನಿಸುವದು ಅದನೊಳಕೊಂಡದು ನೀಲವರ್ಣವಾದ ಸ್ಥೂಲಾಕಾಶ ವೆನಿಸುವದು ಅದನೊಳಕೊಂಡು ಅರುಣವಾದ ಮಹದಾಕಾಶವೆನಿಸುವದು ಅದನೊಳಕೊಂಡು ಶ್ವೇತವರ್ಣವಾದ ತದಾಕಾಶವೆನಿಸುವದು ಈ ಚತುರ್ವಿದ ದತಿಶಯವನೊಳಕೊಂಡು ಕೋಟಿಸೂರ್ಯಪ್ರಕಾಶವಾದ ಬಿಂದ್ವಾಕಾಶವೆನಿಸುವದಾಗಿ ಕಂಣುಮುಂದಣ ಬಯಲಿನೊಳಗೆ ಕ್ರಮದಿಂದ ಯೊಕಾಶಗಳನ್ನು ಕಾಣ್ಬುದೇ ಮಧ್ಯಲಕ್ಷನೋಡಾ ಅಖಂಡೇಶ್ವರಾ ॥ ೨೨ ॥ ಈ ಕ್ಷಳತ್ರಯಂಗಳನರಿದ ಯೋಗೀಶ್ವರನು ಮುಂದೆ ಮುದ್ರಾತ್ರಯಲಂಗನರಿಯುದೆಂತೆಂಡನೆ ಶಿವಧ್ಯಾನದಲ್ಲಿ ಕುಳ್ಳಿರ್ದು ನವದ್ವಾರಂಗಳಂಬಲಿವುದೇ ಷಣ್ಮುಖಿಮುದ್ರೆಯನಿಸುವದು ಈ ಷಣ್ಮುಖಿಮುದ್ರೆಯಿಂದ ವಳಗೆ ನಾದಾನು ಸಂಧಾನದಲ್ಲಿ ಮನೋಮಾರುತಂಗಳೆಲ್ಲಾ ನಿಶ್ಚಲವಾಗಿರ್ಪುದೇ ಖೇಚರಿಮುದ್ರೆಯನಿಸುವದು ನೇತ್ರಂಗಳತುದಿಯ ಸೂಕ್ಷ್ಮರಂಧ್ರವನುಳ್ಳ ಅಷ್ಟತಾರಾಮಂಡಲ ಮಧ್ಯದಲ್ಲಿ ಶುದ್ಧಚಿತ್ತ

ವಿಂದ ನಿಶ್ಚಲವೂದ ಪರಮಾತ್ಮ ಜ್ಯೋತಿಸ್ವರೂಪವಪ್ಪ ದಿವ್ಯಾಂಗ ಮುಕಾಣ್ಬುದೇ ಶಾಂಭವಿಮುದ್ರೆ ಯೆನಿಸುವದಯ್ಯಾ ಅಖಂಡೇಶ್ವರಾ ॥ ೭೩ ॥ ರಾಗಯೋಗಾನುಸಂಧಾನದಿಂದ ಕಾಣಿಸುವ ವಿಚಿತ್ರ ಪ್ರಭಾಮಂಡಲಕ್ಕೆ ದಿವ್ಯಾನಂದನಿಧಿ ನಿಕ್ಷೇಪಭೂಮಿಯಪ್ಪ ಪರಮಹೃದಯವೆನಿಸುವ ಲೋಚನಂಗಳೇ ಮುಖ್ಯವಾಗಿರ್ಪವು ಆ ಲೋಚನಂಗಳ ಮಧ್ಯದಲ್ಲಿ ಅಭೇದ್ಯಪರವಸ್ತುವ ನರಿವುದೇ ತಾರಕ ಯೋಗನೋಡಾ ॥ ೭೪ ॥ ಸಕಲಸಾಧನಂಗಳು ಯಿಲ್ಲದೆ ಬಹುಪ್ರಯಾಸವಿಲ್ಲದೆ ಅತಿಸುಲಭದಲ್ಲಿಯೇ ಜೀವನ್ಮುಕ್ತವೆನಿಸುವಂಥಾ ಅಮನಸ್ಕಯೋಗವೆಂತೆನೆ ಅಂತರಂಗದ ಮನ್ನೆನಿಯದಂತೆ ಮುಪ್ಪಿಸಿ ನಿರ್ಲಕ್ಷ್ಯದೊಳು ನಿಲುವದೇ ಅಮನಸ್ಕ ರಾಜಯೋಗನೋಡಾ ॥ ಅ ॥ ೭೫ ॥ ತ್ರಿಕೂಟವೆಂಬ ಭ್ರೂಮಧ್ಯಸ್ಥಾನದಲ್ಲಿ ರಾಜಯೋಗದಲ್ಲಿ ನಿಶ್ಚಿತರಾಜಯೋಗೀಶ್ವರನ ಸಹಜವರ್ತನೇಧರ್ಮವೆಂತೆನೆ ಅರ್ಧಾವಲೋಕನವೆನಿಸುವ ಅರೆಮುಗಿದ ನೇತ್ರವುಳ್ಳವನಾಗಿ ಸಕಲ ಸಂಶಯಮಬಿಟ್ಟು ಯಿರುವ ಮನವುಳ್ಳಾತನಾಗಿರುವನು ಮತ್ತೆ ಮನವು ಸುಷುಪ್ತಿಯಲ್ಲಿ ಮರೆಯದಂತೆ ನಿರಂತರಬೆಳಗುವ ಪರಂಜ್ಯೋತಿಯೊಳು ಟನವು ನಿಶ್ಚಲವಾಗಿರ್ಪುದೇ ಅಮನಸ್ಕ ರಾಜ ಯೋಗನೋಡಾ ಅಖಂಡೇಶ್ವರಾ ॥ ೭೬ ॥ ಮತ್ತಾ ಮನವು ಸುಷುಪ್ತಿಯಲ್ಲಿ ಮರೆಯದಂತೆ ಜಾಗ್ರದಲ್ಲಿ ಕೆಪರದಂತೆ ನಿಶ್ಚಲಮಂಮಾಡಿ ಭ್ರೂಮಧ್ಯದ ಲಕ್ಷ್ಯದಲ್ಲಿಯಿರಡೇ ಉನ್ಮನಿಸ್ಥಲವುಅದ ಪರಮಾಪದವದೆ ಜ್ಞಾನವದೆ ಮೋಕ್ಷವದೆ ಪರಮರಹಸ್ಯವದೆ ಶಿವಯೋಗವದೆ ಆದದರಿಂದನ್ಯವೂದರ್ಥಮಂ ಪೇಳ್ವ ಗ್ರಂಥವಿಸ್ತಾರವೆಲ್ಲವು ವ್ಯಥವಪ್ಪುದಾಗಿ ಈವುನ್ಮನಿಯ ಸಾದಿಸುವಾತನೇ ಜೀವನ್ಮುಕ್ತನಯ್ಯಾ ॥ ೭೭ ॥ ಕಾಯದೊಳಗಣ ಮನಸ್ಸುಕಂಗೆಟ್ಟು ಬಿದ್ದು ಕರಣೇಂದ್ರಿಯಗಳನೆ ಕೂಡಿ ಆಯಾಸಗೊಂಡು ಧಾವತಿಯಿಂದ ಸಾವುತಿರ್ಪುದುನೋಡಾಜಗವೆಲ್ಲಾ ಅಕಾಯದಕಳವಳಹಿಂಗಿ ಮನವು

ಹಾಘನದಲ್ಲಿಅಡಗಲು ಸೊವುತಪ್ಪಿತ್ತುನೋಡಾ ||೭೮|| ಯನ್ನಾಧಾರ ಚಕ್ರವೇ ಶ್ರೀಶೈಲಕ್ಷೇತ್ರ ಅಲ್ಲಿರ್ಪ ಆಚಾರಲಿಂಗವೇ ಮಲ್ಲಿಕಾರ್ಜುನದೇವರು ಇನ್ನು ಸ್ವಾಧಿಷ್ಠಾನಚಕ್ರವೇಸೇತುಬಂಧಕ್ಷೇತ್ರವು ಅಲ್ಲಿರ್ಪ ಗುರುಲಿಂಗವೇ ರಾಮೇಶ್ವರನು ಯನ್ನ ಮಣಿಪೂರಕಚಕ್ರವೆಪಂಪಾಕ್ಷೇತ್ರ ಅಲ್ಲಿರ್ಪ ಶಿವಲಿಂಗವೇ ವಿರೂಪಾಕ್ಷೇಶ್ವರನು ಯನ್ನ ಅನಾಹತಚಕ್ರವೆಂ ಹಿಮಕೇದಾರಕ್ಷೇತ್ರ ಅಲ್ಲಿರ್ಪಜಂಗಮಲಿಂಗವೇ ಹಿಮಗಿರೀಶ್ವರನು ಎನ್ನ ವಿಶುದ್ಧಿಚಕ್ರವೇ ವಿಮುಕ್ತಿಕ್ಷೇತ್ರ ಅಲ್ಲಿರ್ಪಪ್ರಸಾದಲಿಂಗವೇ ವಿಶ್ವೇಶ್ವರನು ಯನ್ನ ಆಗ್ನೇಯ ಚಕ್ರವೇ ಸಂಗಮಕ್ಷೇತ್ರ ಅಲ್ಲಿರ್ಪಮಹಾಲಿಂಗವೇ ಸಂಗಮೇಶ್ವರನು ಇಂತೀವು ಮೊದಲಾದ ಸಕಲಕ್ಷೇತ್ರಂಗಳನೊಳಕೊಂಡು ಯನ್ನ ಬ್ರಹ್ಮಚಕ್ರವೇ ಮಹಾಕೈಲಾಸದಲ್ಲಿರ್ಪ ನಿಷ್ಕಲಲಿಂಗವೆ ಅನಾದಿಪರಶಿವನುನೀನೆಯ್ಯಾ ||೭೯|| ಯನ್ನಾರುಚಕ್ರಂಗಲ್ಲಿಪೂರೈಸಿ ತುಂಬಿರ್ಪ ಪರಮಾತ್ಮನು ನೀನೇಯಯ್ಯಾ ಯನ್ನಾರುನವನಾಳಂಗಳಲ್ಲಿ ಹೊಳೆದುಸುಳಿವ ಪರವಸ್ತುವುನೀನೆಯಯ್ಯಾ ಯೆನ್ನಕರಮನ ಭಾವಂಗಳಲ್ಲಿ ಒಳಹೊರಗೆತೊಳಗಿಬೆಳಗುವ ಪರಬ್ರಹ್ಮವುನೀನೆಯಯ್ಯಾ ಯನ್ನ ಬ್ರಹ್ಮರಂಧ್ರಸಹಸ್ರದಳ ಕಮಲದಮಧ್ಯದಲ್ಲಿ ನಿರುತರಬೆಳಗುವ ಪರಂಜ್ಯೋತಿನೀನೆಯಯ್ಯಾ ||ಖ|| ೮೦ || ಪ್ರಾಣಲಿಂಗಸಮ್ಮಂಧಿಳಿದುನುಡಿದವರು ಅನೇಕರುಂಟು ಪ್ರಾಣಲಿಂಗದ ಕಳೆಯೆಂದರೆ ಆಧಾರದಲ್ಲಿ ಯುಳಿಯಸೂರ್ಯನಂತೆ ಬೆಳಗುತಿರ್ಪದುನೋಡಾ ಸ್ವಾಧಿಷ್ಠಾನದಲ್ಲಿ ಪೌರ್ಣಮಿಯ ಚಂದ್ರನಂತೆ ಬೆಳಗುತಿರ್ಪದುನೋಡಾ ಪ್ರಾಣಲಿಂಗವು ಮಣಿಪೂರಕದಲ್ಲ ಮಿಂಚಿನಲತೆಯಂತೆ ಬೆಳಗುತಿರ್ಪದುನೋಡಾ ಪ್ರಾಣಲಿಂಗವು ಅನಾಹತದಲ್ಲಿ ಸ್ಫಟಿಕದಶಲಾಕೆಯಂತೆ ಬೆಳಗುತಿರ್ಪದುನೋಡಾ ಪ್ರಾಣಲಿಂಗವು ವಿಶುದ್ಧಿಯಲ್ಲಿ ಮೌಕ್ತಿಕದಗೊಂಚಲದಂತೆ ಬೆಳಗುತಿರ್ಪದುನೋಡಾ ಪ್ರಾಣಲಿಂಗವು ಆಗ್ನೇಯದಲ್ಲಿ ರತ್ನದೀಪ್ತಿಯಂತೆ ಬೆಳಗುತಿರ್ಪದುನೋಡಾ

ಪ್ರಾಣಲಿಂಗವು ಬ್ರಹ್ಮರಂಧ್ರದಲ್ಲಿ ಸ್ವಯಂಜ್ಯೋತಿಯಂತೆ ಬೆಳಗು ತಿರ್ಪುದುನೋಡಾ ಪ್ರಾಣಲಿಂಗವು ಶಿಖೆಯಲ್ಲಿ ಶುದ್ಧತಾರೆಯಂತೆ ಬೆಳಗುತಿರ್ಪದುನೋಡಾ ಪ್ರಾಣಲಿಂಗವು ಪಶ್ಚಿಮದಲಿ ವುಳನಕ್ಷತ್ರದಂತೆ ಬೆಳಗುತಿಪ್ಪದುನೋಡಾ ಪ್ರಾಣಲಿಂಗವು ಇಂತಪ್ಪ ಪ್ರಾಣಲಿಂಗದ ಕಳೆಯೆನರಿದು ಪ್ರಾಣವಸಂಯೋಗಿಸಿ ಪ್ರಪ್ರಳಯುವಗುಲರಿಯದೆ ಮಾತಿನಮಾತಿ ನೀತಿಯಶಾಸ್ತ್ರಘಾತಕಥೆಗಳ ಕಲಿತು ವೋದು ಯೆಲ್ಲವರೊಡನೆಹೇಳಿ ಚಾತುರ್ಯನೆನಿಸಿಕೊಂಡು ವಡಲಕೂರವಘಾತಕರ ಪ್ರಾಣಲಿಂಗ ಸಮ್ಮಂಧಿಗಳೆಂತೆಂಬೆನಯ್ಯಾ ||ಅಖ||೮೦||

ಯೆನ್ನ ಆಧಾರದಲ್ಲಿ ಅರವತ್ತುಕೋಟಿಸೂರ್ಯ ಚಂದ್ರ ಅಗ್ನಿಪ್ರಕಾಶವನೊಳಕೊಂಡು ಬೆಳಗುತಿರ್ಪರಯ್ಯಾ ನೀವು ಯೆನ್ನ ಅನಾಹತದಲ್ಲಿ ಸ್ವಾಧಿಷ್ಠಾನದಲ್ಲಿ ನೋಡಾಪ್ರಾಣಲಿಂಗವು ಪಶ್ಚಿಮದಲ್ಲಿ ಯೆಪ್ಪತ್ತುಕೋಟಿಸೂರ್ಯಚಂದ್ರ ಅಗ್ನಿಯನೊಳಕೊಂಡು ಬೆಳಗುತಿರ್ಪರಯ್ಯಾ ನೀವು ಯೆನ್ನ ಅನಾಹತದಲ್ಲಿ ತೊಂಬತ್ತುಕೋಟಿ ಸೂರ್ಯಚಂದ್ರ ಅಗ್ನಿಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾನೀವು ಯೆನ್ನವಿಶುದ್ಧಿಯಲ್ಲಿ ನೂರುಕೋಟಿಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ಯೆನ್ನಅಗ್ನೇಯದಲ್ಲಿಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು ಯೆನ್ನ ಬ್ರಹ್ಮರಂಧ್ರದಲ್ಲಿ ಅಗಣಿತಕೋಟಿ ಬೆಳಗನೊಳಕೊಂಡು ಬೆಳಗುತಿರ್ಪಿರಯ್ಯಾನೀವು ಇಂತು ಯೆನ್ನೊಳಗ ಥಳಥಳಿಸಿ ಬೆಳಗುತಿರ್ಪ ಬೆಳಗಿನಬೆಳಗು ನಿಮ್ಮ ಮಹಾಬೆಳಗಿನೊಳಗೆ ಮುಳಿಗಿ ಯೆನ್ನಂಗವಕಳೆಯುಲ್ಕೆ ಐವಿರ್ದನಯ್ಯಾ ||ಅಖ|| ೮೧ ||

ನವನಾಳವಬೆಳದು ಶಿವಧ್ಯಾನದಲ್ಲಿ ಕುಳ್ಳಿರ್ದು ಭವದದುಃಖವಿಂದ ನವಲಿಂಗವನೋಟಿ ಪೂಜಿಸಿಕೊಡುವ ಬೇದವೆಂತೆಂದಡೆ ಆಧಾರಚಕ್ರವೆಂಬ ರಂಗಮಂಟಪದಲ್ಲಿ ಮೂರ್ತಿಗೊಂಡಿರ್ಪ ಆಚಾರಲಿಂಗಕ್ಕೆ ಶಿವಾನಂದಫಲವಿಂದ ಮಜ್ಜನಕ್ಕೆರದು ಪೃಥ್ವೀನಿವೃತ್ತಿಯೊದ ಗಂ.

ಘವಧರಿಸಿ ಚಿತ್ತಸುಚಿತ್ತವಾದ ಅಕ್ಷತೆಯನಿಟ್ಟು ಅಲ್ಲಿಹಚತುರ್ದ
ಳಂಗಳನೆ ಪುಷ್ಪಮಾಲೆಯೆಂದುದರಿಸಿ ಅಲ್ಲಿ ಕಮಲಸಿದ್ಧಾಸನೆಯು
ಧೂಪವಬೀಸಿ ಅಲ್ಲಿರ್ದ ಪೀತಿರ್ವವನೆ ಕರ್ಪೂರದ ಜ್ಯೋತಿಯೆಂದು
ಬೆಳಗಿ ಅಲ್ಲಿ ಜಾಗ್ರದವಸ್ಥೆಯೆಂಬ ನವೀನವಸ್ತ್ರವ ಹೊದ್ದಿಸಿ ನಿ
ಷ್ಠಾಕಾಮವೆಂಬ ಆಭರಣವತೊಡಿಸಿ ಸುಗಂಧವೆಂಬ ನೈವೇದ್ಯವನರ್ಪಿ
ಸಿ ಶ್ರದ್ಧೆಯೆಂಬತಾಂಬೂಲನಿತ್ತು ಇಂತು ಆಚಾರಲಿಂಗದಷ್ಟ ವಿಧಾ
ರ್ಚನೆಯ ಮಾಡಿ ಕೋಟಿಸೂರ್ಯ ಪ್ರಭೆಯಂತೆ ಬೆಳಗುವ ಆಚಾರ
ಲಿಂಗವನ್ನು ಕಂಗಳತುಂಬಿನೋಡಿ ಸಂತೋಷಪಟ್ಟು ಆಚಾರಲಿಂಗದ
ಪೂಜೆಯ ನಿರ್ಮಾಲ್ಯವಮಾಡದೆ ಬಕಾರಂ ನಾಂ ನಾಂ ನಾಂ ನಾಂ ನಾಂ
ನಾಂ ಯೆಂಬ ನಕಾರಷಡ್ವಿದ ಮಂತ್ರಂಗಳಿಂದ ನಮಸ್ಕರಿಸಿ ಆಚಾರ
ಲಿಂಗವಂನೆಕೂಡಿ ಯರಡಳಿದು ಆಲಿಂಗದಮೂಲಕ್ಕೆ ಸ್ವಾಧಿಷ್ಠಾನ
ವೆಂಬ ರಂಗಮಂಟಪದಲ್ಲಿ ಮೂರ್ತಗೊಂಡಿರ್ಪ ಗುರುಲಿಂಗಕ್ಕೆ ಪರಿ
ಣಾಮವೆಂಬ ಜಲದಿಂದ ಮಜ್ಜನಕ್ಕೆರದು ಅಪ್ಪುನಿವೃತ್ತಿಯೆಂಬ ಗಂ
ಧವಧರಿಸಿ ಬುದ್ಧಿಸುಬುದ್ಧಿಯಾದಾಕ್ಷತೆಯನಿಟ್ಟು ಅಲ್ಲಿಹ ಷಡ್ದ
ಳಂಗಳನೆ ಪುಷ್ಪಮಾಲೆಯಧರಿಸಿ ಅಲ್ಲಿಹಕಮಲ ಸದ್ವಾಸನೆಯು ಧೂ
ಪವಮಂಬೀಸಿ ಅಲ್ಲಿಹ ನೀಲವರ್ನವನ್ನೆ ಕರ್ಪೂರದಜ್ಯೋತಿಯೆಂದು
ಬೆಳಗಿ ಅಲ್ಲಿಹ ಸ್ವಪ್ನಾವಸ್ಥವೆಂಬ ವಸ್ತ್ರವಹೊದ್ದಿಸಿ ನಿಷ್ಠೆಯ
ಥವೆಂಬ ಆಭರಣವತೊಡಿಸಿ ಸುರುಚಿಯೆಂಬ ನೈವೇದನರ್ಪಿಸಿ ನೈ
ಷ್ಠೆ ಯೆಂಬ ತಾಂಬೂಲವನರ್ಪಿಸಿ ಇಂತೀ ಗುರುಲಿಂಗದಷ್ಟ ವಿಧಾರ್ಚ
ನೆಯ ಮಾಡಿಕೊಂಡು ಕೋಟಿಸೂರ್ಯ ಪ್ರಭೆಯಂತೆ ಬೆಳಗುವ
ಗುರುಲಿಂಗವನ್ನು ಕಂಗಳತುಂಬಿನೋಡಿ ಮನಸ್ಸಂತೋಷಗೊಂಡು
ಆಗುರುಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ ಓಂ ಮಾಂ
ಮಾಂ ಮಾಂ ಮಾಂ ಮಾಂ ಯೆಂಬ ಮಕಾರಷಡ್ವಿದ ಮಂತ್ರಂ
ಗಳಿಂದ ನಮಸ್ಕರಿಸಿ ಆಗುರುಲಿಂಗವನುಕೂಡಿ ಯರಡಳಿದು ಆಲಿಂಗ
ದ ಮುಂದಕ್ಕೆಹೋಗಿ ಮಣಿಪುರಚಕ್ರ ರಂಗಮಂಟಪದಲ್ಲಿ ಮೂರಿ

ಗೊಂಡಿರ್ದ ಶಿವಲಿಂಗಕ್ಕೆ ಪರಮಾನಂದ ವೆಂಬಜಲವ ಮಜ್ಜನಕ್ಕೆರದು ಅಗ್ನಿನಿವೃತ್ತಿಯಾದ ಗಂಧವಧರಿಸಿ ಅಹಂಕಾರವೆಂಬ ಅಕ್ಷತೆಯನ್ನಿಟ್ಟು ಅಲ್ಲಿಹದಶದಳಂಗಳನ್ನೆ ಪುಷ್ಪಮಾಲೆಯಧರಿಸಿ ಅಲ್ಲಿಹ ಕಮಲ ಸದ್ವಾಸನೆಯು ಧೂಪವಬೀಸಿ ಅಲ್ಲಿಹ ಕಪ್ಪು ವರ್ಣವೇ ಕರ್ಪೂರ ಜ್ಯೋತಿಯೆಂದು ಬೆಳಗಿ ಅಲ್ಲಿಹ ಸುಷುಪ್ತಾವಸ್ಥೆಯೆಂಬವ ವಸ್ತ್ರವ ಹೊದ್ದಿಸಿ ನಿರ್ಲೋಭ ವೆಂಬಾ ಭರಣವತೊಡಿಸಿ ಸುರೂಪವೆಂಬ ನೈವೇದ್ಯವಂ ಸಮರ್ಪಿಸಿ ಸಾವಧಾನವೆಂಬ ತಾಂಬೂಲವನಿತ್ತು ಶಿವಲಿಂಗದಷ್ಟವಿಧಾರ್ಚನೆಯಂಮಾಡಿ ಕೋಟಿಸೂರ್ಯರಪ್ರಭೆಯಂತೆ ಬೆಳಗುವ ಶಿವಲಿಂಗವ ಕಂಗಳತುಂಬಿನೋಡಿ ಮನದಲ್ಲಿ ಸಂತೋಷಗೊಂಡು ಶಿವಲಿಂಗಪೂಜೆಯ ನಿರ್ಮಾಲ್ಯವಮಾಡದೆ ಓಂ ಶೀಂ ಶೀಂ ಶೀಂ ಶೀಂ ಶೀಂ ಯೆಂಬ ಶಿಕಾರಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆಶಿವಲಿಂಗವನ್ನು ಕೊಡಿಯರಡಲಿದು ಅಲ್ಲಿಂದ ಮುಂದಕ್ಕೆಹೋಗಿ ಅನಾಹತಚಕ್ರವೆಂಬ ರಂಗಮಂಟಪಕ್ಕೆ ಹೋಗಿ ಮೂರ್ತಿಗೊಂಡಿರ್ದ ಆಜಂಗಮಲಿಂಗಕ್ಕೆ ಶಾಂತವೆಂಬ ಜಲದಿಂದ ಮಜ್ಜನಕ್ಕೆರದು ವಾಯುನಿವೃತ್ತಿಯಾದ ಗಂಧವಧರಿಸಿ ಅಲ್ಲಿಹಕಮಲಸದ್ವಾಸನೆಯ ಧೂಪವಬೀಸಿ ಅಲ್ಲಿಹಮಾಂಜಿಷ್ಟವರ್ಣವೆ ಕರ್ಪೂರದ ಜ್ಯೋತಿಯಂದುಬೆಳಗಿ ಅಲ್ಲಿಹ ತೂರ್ಯಾವಸ್ಥೆಯೆಂಬ ನೈವೇದ್ಯವಂ ಸಮರ್ಪಿಸಿ ಅನುಭಾವವೆಂಬ ತಾಂಬೂಲವನಿತ್ತು ಇಂತುಜಂಗಮಲಿಂಗದಷ್ಟ ವಿಧಾರ್ಚನೆಯಂಮಾಡಿ ಕೋಟಿಸೂರ್ಯಪ್ರಭೆಯೆಂತೆ ಬೆಳಗುವ ಜಂಗಮಲಿಂಗವನ್ನು ಕಂಗಳತುಂಬನೋಡಿ ಮನದಲ್ಲಿ ಸಂತೋಷಗೊಂಡುಆಜಂಗಮಲಿಂಗನ ಪೂಜೆಯ ನಿರ್ಮಾಲ್ಯವಮಾಡದೆ ಓಂ ವಂ ವಂ ವಂ ವಂ ವಂ ಎಂಬ ವಕಾರಷಡ್ವಿಧಮಂತ್ರಂಗಳಿಂದ ನಮಸ್ಕರಿಸಿ ಆಜಂಗಮ ಲಿಂಗವನ್ನು ಕೂಡಿಯರಡಲಿದು ಅಲ್ಲಿಂದ ಮುಂದಕ್ಕೆಹೋಗಿ ವಿಶುದ್ಧಿಚಕ್ರವೆಂಬ ರಂಗಮಂಟಪದಲ್ಲಿ ಮೂರ್ತಿಗೊಂಡಿರ್ದ ಪ್ರಸಾದಲಿಂಗಕ್ಕೆ ಕ್ಷಮೆಯೆಂಬ ಜಲದಿಂದ ಮಜ್ಜನಕ್ಕೆರದು ಗಗನನಿವೃತ್ತಿಯಾದ ಗಂಧವದರಿಸಿ

ಜ್ಞಾನಸುಜ್ಞಾನವಾದ ಅಕ್ಷತೆಯನಿಟ್ಟು ಅಲ್ಲಿಹಷೋಡಶದಳಂಗಳನೆ ಪುಷ್ಪದಮಾಲೆಯಧರಿಸಿ ಅಲ್ಲಿಹಕಮಲಸುವಾಸನೆಯ ಧೂಪವಬೀಸಿ ಅಲ್ಲಿಹ ಕೃಷ್ಣ ವರ್ಣವೇ ಕರ್ಪೂರಜ್ಯೋತಿಯ ಬೆಳಗಿ ಅಲ್ಲಿಹ ತೂರ್ಯಾವಸ್ಥೆಯೆಂಬ ನವೀನ ವಸ್ತ್ರವ ಧರಿಸಿ ನಿರ್ಮಲವೆಂಬ ಆಭರಣವನಿಟ್ಟು ಸುಶಬ್ದವೆಂಬನೈವೇದ್ಯನರ್ಪಿಸಿ ಆನಂದವೆಂಬ ತಾಂಬೂಲವನಿತ್ತು ಯಿತುಪ್ರಸಾದಲಿಂಗದಷ್ಟ ವಿಧಾರ್ಚನೆಯಂಮಾಡಿಕೊಂಡು ಕೋಟಿಸೂರ್ಯಪ್ರಭೆಯಂತೆ ಬೆಳಗುವ ಪ್ರಸಾದಲಿಂಗವನ್ನು ಕಂಗಳತುಂಬನೋಡಿ ಮನಸ್ಸಂತೋಷಗೊಂಡು ಆ ಪ್ರಸಾದಲಿಂಗದ ಪೂಜೆಯಂನಿರ್ಮಾಲ್ಯವ ಮಾಡದೆ ಓಂ ಯಂ ಯಂ ಯಂ ಯಂ ಯಂ ಯಂ ಎಂಬ ಯಕಾರಷಡ್ವಿಧದಿಂದ ಮಂತ್ರವ ಸ್ಮರಿಸಿ ಆಪ್ರಸಾದವಲಿಂಗವ ನೊಡಗೂಡಿಯುರಳಿದು ಅಲ್ಲಿಂದಮುಂದಕ್ಕೆಹೋಗಿ ಅಗ್ನಿಚಕ್ರವೆಂಬ ರಂಗಮಂಟಪಕ್ಕೆ ಹೋಗಿ ಅಲ್ಲಿಮೂರ್ತಿಗೊಂಡಿರ್ದ ಮಹಾಲಿಂಗಕ್ಕೆ ಸಂತೋಷವೆಂಬ ಜಲದಿಂದ ಮಜ್ಜನಕ್ಕೆರದು ಆತ್ಮನಿವೃತ್ತಿಯಾದ ಗಂಧವಧರಿಸಿ ಭಾವ ಸಧ್ಭಾವದಕ್ಷತೆಯನಿಟ್ಟು ಅಲ್ಲಿಹದ್ವಿದಳಗಳನೆ ಪುಷ್ಪಮಾಲೆಯಧರಿಸಿ ಅಲ್ಲಿಹ ಕಮಲಸದ್ವಾಸನೆಯ ಧೂಪಮಂಬೀಸಿ ಅಲ್ಲಿಹ ಮಾಣಿಕ್ಯವರ್ಣವೇ ಕರ್ಪೂರಜೋತಿ ಯಂದುಬೆಳಗಿ ಅಲಿಹನಿರವಸ್ಥೆಯೆಂಬ ವಸ್ತ್ರವಪೊದ್ದಿಸಿ ನಿರ್ಮಳವೆಂಬ ಆಭರಣವತೊಡಿಸಿ ಸುಷುಪ್ತಿಯೆಂಬ ನೈವೇದ್ಯವ ನರ್ಪಿಸಿ ಸಮರಸವೆಂಬ ತಾಂಬೂಲವನಿತ್ತು ಯಿಂತುಮಹಾಲಿಂಗ ದಷ್ಟವಿಧಾರ್ಚನೆಯಂ ಮಾಡಿ ಕೋಟಿಸೂರ್ಯಪ್ರಭೆಯಂತೆ ಬೆಳಗುವ ಮಹಾಲಿಂಗವ ಕಂಗಳತುಂಬಿನೋಡಿ ಮನಸ್ಸಂತೋಷಗೊಂಡು ಆಮಹಾಲಿಂಗದ ಪೂಜೆಯ ನಿರ್ಮಾಲ್ಯಮಾಡದೆ ಓಂ ಓಂ ಓಂ ಓಂ ಓಂ ಓಂ ಎಂಬ ಓಂಕಾರಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆಮಹಾಲಿಂಗವ ನೊಡಗೂಡಿ ಯರಡಳಿದು ಅಲ್ಲಿಂದ ಮುಂದಕ್ಕೆಹೋಗಿ ಬ್ರಹ್ಮರಂದ್ರವೆಂಬ ಸಹಸ್ರದಳ ಮಂಟಪದಲ್ಲಿ ಮೂರ್ತಿಗೊಂಡಿರ್ಪ ನಿಷ್ಕಳಂಕಲಿಂಗಕ್ಕೆ ಅನುಪಮವೆಂಬ ಜಲ

ದಿಂದ ಮಜ್ಜನಕ್ಕೆರದು ಅನಾದಿಯೆಂಬ ಗಂಧವಧರಿಸಿ ಅಗವ್ಯವೆಂಬ ಅಕ್ಷತೆಯನಿಟ್ಟು ಯವಿರಲವೆಂಬ ಪುಷ್ಪದವಾಲೆಯಂಧರಿಸಿ ಯು ಷಾವರಣವೆಂಬ ಧೂಪವಬೀಸಿ ಅಖಂಡವೆಂಬ ಜ್ಯೋತಿಯಬೆಳಗಿ ಸತ್ಯವೆಂಬವಸ್ತ್ರವಪೊದಿಸಿ ಸದಾನಂದವೆಂಭಾ ಭರಣತೊಡಿಸಿ ಸ ತ್ಯವೆಂಬ ನೈವೇದ್ಯವನರ್ಪಿಸಿ ನಿರುಪಮವೆಂಬ ತಾಂಬೂಲವನಿತ್ತು ಯಿಂತು ನಿಷ್ಕಳಲಿಂಗದಷ್ಟವಿಧಾರ್ಜನೆಯಂ ಮಾಡಿ ಅನಂತಕೋಟಿ ಸೂರ್ಯಪ್ರಭೆಯಂತೆ ಬೆಳಗುವ ನಿಷ್ಕಲಲಿಂಗದಪೂಜೆಯ ನಿರ್ಮಾಲ್ಯ ವಮಾಡದೆ ಅಗಣಿತವೆಂಬ ನಮಸ್ಕಾರವಂಮಾಡಿ ನಿಷ್ಕಳಲಿಂಗವನೊ ಡಗೂಡಿ ಯೆರಡಳಿದು ಅಲ್ಲಿಂದ ಮುಂದಕ್ಕೆಹೋಗಿ ಶಿಖಾಚಕ್ರವೆಂಬ ತ್ರಿದಳಮಂಟಪದಲ್ಲಿ ಮೂರ್ತಿಗೊಂಡಿರ್ದ ಶೂನ್ಯಲಿಂಗಕ್ಕೆ ನಿರ್ಭಾವ ವೆಂಬ ಜಲದಿಂದ ಮಜ್ಜಕ್ಕೆರದು ನಿಜಾನಂದವೆಂಬ ಗಂಧವಧರಿಸಿ ನಿ ರ್ಜಡವೆಂಬಾಕ್ಷತೆಯನಿಟ್ಟು ನಿರ್ದ್ವಂದ್ವವೆಂಬ ಪುಷ್ಪದವಾಲೆಯಂ ಧರಿಸಿ ನಿರ್ಲಜ್ಜವೆಂಬ ಧೂಪವಬೀಸಿ ನಿರಾಭಾರವೆಂಬ ಜ್ಯೋತಿಯ ಬೆಳಗಿ ನಿರಾಮಯವೆಂಬ ವಸ್ತ್ರವಪೊದಿಸಿ ನಿಸ್ಪೃಹವೆಂಬಾ ಭರ ಣತೊಡಿಸಿ ನಿರಾಳವೆಂಬ ತಾಂಬೂಲವನಿತ್ತು ಯಿಂತು ಶೂನ್ಯಲಿಂಗ ದಷ್ಟವಿಧಾರ್ಜನೆಯಂಮಾಡಿ ಅಗಣಿತಕೋಟಿ ಸೂರ್ಯಪ್ರಕಾಶವಂತೆ ಬೆಳಗುವ ಶೂನ್ಯಲಿಂಗವನ್ನು ಕಂಗಳತುಬಂನೋಡಿ ಮನಸ್ಸಂತೋ ಷಗೊಂಡು ಆಶೂನ್ಯಲಿಂಗದ ಪೂಜೆಯ ನಿರ್ಮಾಲ್ಯವಮಾಡದೆ ನಿರ್ಭೇ ದ್ಯವೆಂಬನಮಸ್ಕಾರವಂಮಾಡಿ ಆಶೂನ್ಯಲಿಂಗವ ನೊಡಗೂಡಿ ಯೆರ ಡಲಿದು ಅಲ್ಲಿಂದ ಮುಂದಕ್ಕೆಹೋಗಿ ಪಶ್ಚಿಮ ಚಕ್ರವೆಂಬ ಏಕದಳ ಮಂಟಪದಲ್ಲಿ ಮೂರ್ತಿಗೊಂಡಿರ್ದ ನಿರಂಜನ ಲಿಂಗಕ್ಕೆ ನಿರ್ನಾಮ ವೆಂಬ ಜಲದಿಂದ ಮಜ್ಜನಕ್ಕೆರದು ನಿಷ್ಕರುಣವೆಂಬ ಗಂಧವಾರಿಸಿ ನಿಸ್ಸಂಗವೆಂಬ ಅಕ್ಷತೆಯನಿಟ್ಟು ನಿಸ್ಸಾರವೆಂಬ ಪುಷ್ಪದವಾಲೆಯ ಧರಿಸಿ ನಿರುಪಾದಿಕವೆಂಬ ಧೂಪವಬೀಸಿ ನಿಷ್ಕಳವೆಂಬ ಜ್ಯೋತಿಯ ಬೆಳಗಿ ನಿಶ್ಚಲವೆಂಬ ವಸ್ತ್ರವಹೊದಿಸಿ ನಿರ್ವಾಸನೆಯೆಂಬ ಆಭರ

ಣವತೊಡಿಸಿ ನಿಃಶೂನ್ಯವೆಂಬ ನೈವೇದ್ಯವ ಸಮರ್ಪಿಸಿ ನಿರವಯ ತಾಂಬೂಲವನಿತ್ತು ಯಿಂತು ನಿರಂಜನ ಲಿಂಗದಷ್ಟವಿಧಾರ್ಚನೆಯ ಮ್ಮಾಡಿ ತೆರಹಿಲ್ಲದಬೆಳಗ್ಗಿನ ಬೆಳಗು ಮಹಾಬೆಳಗುನೊಳಕೊಂಡು ಬೆಳಗುವ ನಿರಂಜನ ಲಿಂಗವಕಂಗಳತುಂಬನೋಡಿ ಮನದಲ್ಲಿ ಸಂತೋಷದಿಂದ ಆನಿರಂಜನಲಿಂಗದ ಪೂಜೆಯ ನಿರ್ಮ್ಮಾಲ್ಯವಮಾಡದೆ ನಿಃಶಬ್ದವೆಂಬ ನಮಸ್ಕಾರವಮಾಡಿ ಆನಿರಂಜನ ಲಿಂಗವನೊಡಗೂಡಿ ಯರಡಲಿದು ಅಲ್ಲಿಂದ ಮುಂದೆನೋಡಲು ಬರಿಯಬಯಲುಯಿಪ್ಪದುಕಂಡು ಆಬಯಲೇ ತಂನ ನಿಜವಾಸವೆಂದುತಿಳಿದು ಆನಿಜವಾಸದಲ್ಲಿ ತಾನಿದ್ದು ತನ್ನಿಂದ ಕಳೆಗಳನವಚಕ್ರಂಗಳಲ್ಲಿರ್ದ್ದ ನವಲಿಂಗಗಳ ಪೂಜೆನಿರಂತರವಮಾಡುವ ಶಿವಯೋಗಿಗೆ ಭವಬಂಧನವಿಲ್ಲದಾಗಿ ಜೀವಕಲ್ಪಿತವುಮುನ್ನವೇಯಿಲ್ಲ ಜೀವನಕಲ್ಪಿತವುಮುನ್ನವೇಯಿಲ್ಲದಾಗಿ ಆತನುಪರಿಪೂರ್ಣ್ನವಾಗಿ ಪರಾಪರ ಶಿವಬ್ರಹ್ಮವೇಯಹುಗಿರ್ಪನಯ್ಯಾ ||ಅ||

||೮೩|| ಅಯ್ಯ್ಯಾ ನಿಮ್ಮ ಕರಸ್ಥಲದಲ್ಲಿನೋಡಿದರೆ ನೀವೆನ್ನ ಕಂಗಳ ಕೊನೆಯಲ್ಲಿತೋರುತಿರ್ಪ್ಪಿರಿ ಯಿದೇನು ನಿಮ್ಮ ಗಾರುಡವಯ್ಯಾ ನಿಮ್ಮನಕಂಗಳಕೊನೆಯಲ್ಲಿ ನೋಡಿದರೆ ನೀವೆನ್ನಮನದ ಕೊನೆಯಲ್ಲಿ ತೋರುತಿರ್ಪ್ಪಿರಿ ಇದೇನು ನಿಮ್ಮಗಾರುಡವಯ್ಯಾ ಅಯ್ಯ್ಯಾ ನಿಮ್ಮನ್ನಮನದ ಕೊನೆಯಲ್ಲಿ ನೋಡಿದರೆ ನೀವೆನ್ನಮುಖದಲ್ಲಿ ತೋರುತಿರ್ಪ್ಪಿರಿ ಇದೇನು ನಿಮ್ಮಗಾರುಡವಯ್ಯಾ ಅಯ್ಯಾ ನಿಮ್ಮಪಂಚದಲ್ಲಿ ನೋಡಿದರೆ ನೀವೆನ್ನ ಸರ್ವಾಂಗದಲ್ಲಿ ತುಂಬಿರ್ಪ್ಪಿರಿ ಇದೇನುನಿಮ್ಮಗಾರುಡವಯ್ಯಾ ||ಅಖ|| ೮೪ || ಎನ್ನೊಡಲೊಳುತೋರಿ ಅಡಗುವ ನಿಮ್ಮ ಬೆಡಗುಬಿನ್ನಣವೆನಗೆ ತಿಳಿಯಬಾರದು ಭಕ್ತಕಾಯ ಮಮ ಕಾಯ ಭಕ್ತಪ್ರಾಣ ಮಮಪ್ರಾಣವೆಂಬ ನಿಮ್ಮನುಡಿಸೂಚಿಸುತ್ತದೆ ಇದುಕಾರಣ ಎನ್ನತನುವೆಂಬ ಗುಡಿಯೊಳಗೆ ಮನೋಮೂರ್ತಿ ಲಿಂಗವಾಗಿ ಇನಕೋಟಿ ಪ್ರಭೆಯನೊಳಕೊಂಡು ಹೆರಹಿಂಗದೆ ನಿರಂತರ ಬೆಳಶಿರಬೇಕಯ್ಯಾ ||೮೫|| ಎನ್ನಸ್ಥೂಲತನವೆಂಬ ಕೈಲಾಸದ ಮೇಲೆ ಕಂಗಳಮಂಟಪದಲ್ಲಿ ಕುಳ್ಳಿರ್ದ್ದ ದೃಶ್ಯಾದೃಶ್ಯದಲೀಲೆಯ

ಡುವಾತನು ನೀನೆಅಯ್ಯಾ ಎನ್ನ ಸೂಕ್ಷ್ಮತನುವೆಂಬ ಕೈಲಾಸದಮೇಲೆ ಮನೋಮಂಟಪದಲ್ಲಿ ಕುಳ್ಳಿರ್ದು ದೃಶ್ಯಾದೃಶ್ಯಲೀಲೆ ಯಾಡುವಾತನು ನೀನೆಅಯ್ಯಾ ಎನ್ನ ಕಾರಣ ತನುವೆಂಬ ಕೈಲಾಸದಮೇಲೆ ಭಾವಮಂಟಪದಲ್ಲಿ ಕುಳ್ಳಿರ್ದು ಕೇವಲದೃಶ್ಯಾದೃಶ್ಯದಲೀಲೆ ಯಾಡುವಾತನು ನೀನೆಯಯ್ಯಾ ಎನ್ನ ಮಹಾಕಾರಣ ತನುವೆಂಬ ಕೈಲಾಸದಮೇಲೆ ಮಹಾಜ್ಞಾನ ಮಂಟಪದಲ್ಲಿ ಕುಳ್ಳಿರ್ದು ಅಖಂಡಪರಿಪೂರ್ಣ ನಿರವಯಲೀಲೆಯಾಡುವಾತನು ನೀನೇಅಯ್ಯಾ ||ಅಖ||೪೬||

ಕೇಳುಕೇಳಯ್ಯಾ ಪ್ರಾಣನಾಥನೆ ಯನ್ನ ಪ್ರಾಣಪೂಜೆಯುಬಂಣಿಸುತಿರ್ಪನು ಅವಧರಿಸಯ್ಯಾಸ್ವಾಮಿ ಯೆನ್ನ ಕಾಯವೇಕೈಲಾಸವಯ್ಯಾನಿಮಗೆ ಯೆನ್ನ ಮನವೇ ಶೃಂಗಾರಮಂಟಪವಯ್ಯಾ ನಿಮಗೆ ಯನ್ನ ಭಾವವೇ ಶೂನ್ಯಸಿಹಾಸನವಯ್ಯಾ ನಿಮಗೆ ಯೆನ್ನ ಪರಮಾನಂದವೇ ಮಜ್ಜನವಯ್ಯಾನಿಮಗೆ ಎನ್ನ ಪರಮಶಾಂತಿಯೇ ಗಂಧವಯ್ಯಾನಿಮಗೆ ಯೆನ್ನ ನಿರಹಂಕಾರವೇ ಅಕ್ಷತೆಯುಯ್ಯಾನಿಮಗೆ ಯೆನ್ನ ಅವಿರಳವೆ ಪುಷ್ಪದಮಾಲೆಯುಯ್ಯಾನಿಮಗೆ ಯೆನ್ನ ಸ್ವಾನುಭಾವವೇ ಧೂಪವಯ್ಯಾ ನಿಮಗೆ ಯೆನ್ನ ಸುಚಿತ್ತವೇ ಸರ್ವ್ವವಸ್ತ್ರವಯ್ಯಾನಿಮಗೆ ಯೆನ್ನ ವಿವೇಕವೇ ಸಕಲಾಭರಣವಯ್ಯಾ ನಿಮಗೆ ಯನ್ನ ಆತ್ಮವೆ ಪರಮಾಮೃತದ ನೈವೇದ್ಯವಯ್ಯಾನಿಮಗೆ ಯೆನ್ನ ಪರಿಣಾಮವೇ ಹಸ್ತೋದಕವಯ್ಯಾ ನಿಮಗೆ ಯೆನ್ನ ಸದ್ಭಕ್ತಿರಾಗರಸವೇ ತಾಂಬೂಲವಯ್ಯಾ ನಿಮಗೆ ಯೆನ್ನ ಸತ್ಯವೇ ಗಂಟೆಯುಯ್ಯಾನಿಮಗೆ ಯನ್ನ ಸದಾನಂದವೇ ಶಂಖನಾದವಯ್ಯಾ ನಿಮಗೆ ಯನ್ನ ಸುಮತಿಯೇ ಚಾಮರವಯ್ಯಾ ನಿಮಗೆ ಯನ್ನ ಕ್ಷಮೆಯೇ ಅಲವಟ್ಟವಯ್ಯಾ ನಿಮಗೆ ಯನ್ನ ಸುಮನವೇ ವಾಹನವಯ್ಯಾ ನಿಮಗೆ ಯೆನ್ನ ಸುಬುದ್ಧಿಯೇ ಜಗಜಂಪಯ್ಯಾ ನಿಮಗೆ ಯನ್ನ ಸುಚಿತ್ತವೇನಂದೀಧ್ವಜವಯ್ಯಾ ನಿಮಗೆ ಯನ್ನ ಸುಜ್ಞಾನವೇ ಶೃಂಗಾರಪಲ್ಲಕ್ಕಿಯುಯಾ ನಿಮಗೆ ಯನ್ನ ನುಡಿಗಡಣವೇ ಮಂ

ಗಳಸೊತ್ರೀತ್ರವಯ್ಯಾ ನಿಮಗೆ ಯನ್ನ ಸುಳುಹಿನ ಸಂಚಾರವೇ ಪ್ರದಕ್ಷಣೆಯಯ್ಯಾ ನಿಮಗೆ ಯನ್ನ ಮಂತ್ರೋಚ್ಚರಿಣೆಯು ನಮಸ್ಕಾರವಯ್ಯಾ ನಿಮಗೆ ಯನ್ನ ಸಕಲಕರಣಗಳಿಂದ ಮಾಡುವ ಸೇವೆಯೇ ನಾನಾವುಪಚಾರವಯ್ಯಾ ನಿಮಗೆ ಇಂತೀಪ್ರಾಣಪೂಜೆಯು ನಿಂರತರಹಿಲ್ಲದೆ ನಿಮಗಳವಡಿಸಿ ನಿಮ್ಮೊಳಗೆ ಅಡಗಿರ್ದೆನಯ್ಯಾ ||ಅಖ|| ೮೭ || ವಳಗನೋಡಿದರೆ ನಿಮ್ಮ ನೋಡುವೆನಯ್ಯಾ ವಳಗೆ ಪೂಜಿಸಿದರೆ ನಿಮ್ಮ ಪೂಜಿಸವೆನಯ್ಯಾ ಹೊರಗೆಪೂಜಿಸಿದರೆ ನಿಮ್ಮ ಪೂಜಿಸುವೆನಯ್ಯಾ ವಳಗೆ ಧ್ಯಾನಿಸಿದರೆ ನಿಮ್ಮ ಧ್ಯಾನಿಸುವೆನಯ್ಯ ನೀವು ಭಕ್ತ ಕಂಪಿತನಾದಕಾರಣ ಯನ್ನ ಭಾವದಲ್ಲಿ ನಿಂದಿಹುದು ಅಲ್ಲಿ ನಿಮ್ಮ ನಿಲುವೇ ತುಂಬಿರ್ಪುದಯ್ಯಾ ||ಅಖ|| ೮೮ || ವಳಗೆಕೂಡಿ ಹೊರಗೆಮರದಿರ್ಪೆನಯ್ಯಾ ಹೊರಗೆ ಕೂಡಿ ವಳಗೆಮರದಿರ್ಪೆನಯ್ಯಾ ವಳಹೊರಗೆಂಬ ಬಂಧಸಂಶಯವಳಿದು ತರಹಿಲ್ಲದೆ ನಿಮ್ಮೊಳಗೆ ಯೇನುಅರಿಯದಿರ್ದೆನಯ್ಯಾ ||ಅಖ|| ೮೯ || ನೇತ್ರಸೂತ್ರ ಸಕಲವಿಸ್ತಾರವಿರ್ಪುದನಾರುಬಲ್ಲರು ಅದನಾರುಅರಿಯರಲ್ಲ ಅಂಡತನಲು ನೇತ್ರದೇವನ ಚಂಪರಂ ಎಂಬಸಾಕ್ಷಿಯಾಗಿ ನೇತ್ರವೇಶಿವನೆಂದರಿದು ಈ ಶಿವನದಲ್ಲಿ ಕೈಲಾಸಮೇರು ಮಂದರಪಿರ್ಪುದು ಆಶಿವನಿರ್ಪಲ್ಲಿಯೇ ಸಕಲಕ್ಷೇತ್ರತೀರ್ಥಂಗಳಿರ್ಪವು ಇಂತೀಸಕಲವಿಸ್ತಾರವ ನೊಳಕೊಂಡು ನೇತ್ರದನೆಲುವೇ ನೀವೇಅಯ್ಯಾ ||೯೦|| ತನುವಿನ ಕೊನೆಯಲ್ಲಿ ನೇತ್ರದಅನುವಕಂಡೆನಯ್ಯಾ ಆನೇತ್ರದ ಕೊನೆಯಲ್ಲಿ ಮನದಸುಳುಹು ಕಂಡೆನಯ್ಯಾ ಆನೇತ್ರದ ಕೊನೆಯಲ್ಲಿ ಮನದಸುಳುಹುಕಂಡೆನಯ್ಯಾ ಆಮನದಕೊನೆಯಲ್ಲಿ ಘನಮಹಾಶಿವನ ಕಂಡೆನಯ್ಯಾ ಲಶಿವನೊಳಗೆ ಅನಂತಕೋಟಿ ಬ್ರಹ್ಮಾಂಡಗಳ ನೊಳಕೊಂಡಿರ್ಪುದುಕಂಡು ಬೆರಗಾದೆನಯ್ಯಾ ||ಅಖ|| ೯೧ || ನೇತ್ರವೆಂಬ ಸುವರ್ಣದ ಕೊಡದಲ್ಲಿ ಪರಿಣಾಮವೆಂಬ ವುದಕವಂತುಂಬಿ ಅಭಿಷೇಕವ ಮಾಡುವೆನಯ್ಯಾ ಕನಿಮಗೆ ನೇತ್ರವೆಂಬ ದಿವ್ಯಪುಷ್ಪದಮಾಲೆಯುದರಿಸುವೆನಯ್ಯಾ ನೆ

ತ್ರಸ್ನೇಹನೋಟದಿಂದೆ ಮನಕ್ಕೆ ಮನೋಹರವಮಾಡುವೆನಯ್ಯಾ ನಿಮ್ಮನೇತ್ರವೆಂಬ ಅರಮನೆಯಲ್ಲಿ ಪಟ್ಟಮಂಚದಮೇಲೆ ಸುಪ್ಪತ್ತಿಗೆಯ ಹಾಸಕೆಯಮೇಲೆ ಮಲಗಿಸುವೆನಯ್ಯಾ ನಿಮಗೆ ನೇತ್ರಸೂತ್ರದಿಂದ ಕೊಡುವೆನಯ್ಯಾ ನಿಮ್ಮ ||ಅಖ|| ೯೩ || ಭಾವವೆಂಬುವದೇ ಬ್ರಹ್ಮವಾದಬಳಿಕ ಇನ್ನಾವವೈಭವತೊಡರಲ್ಲಿ ತನಗೆತಾನು ಸ್ವಾಂತಜ್ಞಾನನ ವುದಯವಾ ಬಳಿಕ ಯಿನ್ನುಹಲವುಶಾಸ್ತ್ರವ ನೋಡಿ ತಿಳಿಯಬೇಕೆಂಬ ಸಂದೇಹವ್ಯಾತಕ್ಕೆ ವಳಗೆ ಹೊರಗೆ ಸರ್ವಾಂಗದಲ್ಲಿ ಮಹಾಜ್ಞಾನವೇ ತುಂಬಿದಬಳಿಕ ಮುಕ್ತಿಯಪಡಬೇಕೆಂಬದ್ಯಾತಕ್ಕೆ ಯಿದುಸತ್ಯದನಡೆಯಲ್ಲಾ ಶರಣರಮೆಚ್ಚಲ್ಲಾ ನಮ್ಮ ಅಖಂಡೇಶ್ವರ ಲಿಗಂದವಲುಮೆ ಮುನ್ನವೇಯಿಲ್ಲ ಕಾಲಲ್ಲಿವಾಡಿತು ಕಂಡೆ ನೆತ್ತಿಯಮೇಲೆ ಕಂಭವಡದು ಸುಧೆಸರ್ವಾಂಗದಲ್ಲಿ ತುಂಬಿತ್ತುಕಂಡೆ ಕತ್ತಲೆಬೆಳಗಾಯಿತು ಕಂಡುಬೆರಗಾದೆನಯ್ಯಾ ||೯೪|| ಕಾಲಿಲ್ಲದೆ ನಡೆಯಬಲ್ಲಿಯೊದರಿ ಶಿವಯೋಗಿಯೆಂಬೆನು ಕೈಯಿಲ್ಲದೆ ಮುಟ್ಟಬಲ್ಲೆಯೊದರೆ ಶಿವಯೋಗಿಯೆಂಬೆನು ಕಂಣಿಲ್ಲದೆನೋಡಬಲ್ಲರೆ ಶಿವಯೋಗಿಯೆಂಬೆನು ಕಿವಿಯಿಲ್ಲದೆ ಕೇಳಬಲ್ಲರೆ ಶಿವಯೋಗಿಯೆಂಬೆನ ನಾಸಿಕವಿಲ್ಲದೆ ವಾಸಿಸಬಲ್ಲರೆ ಶಿವಯೋಗಿಯೆಂಬೆನು ತಾನಿಲ್ಲದೆ ಕೂಡಬಲ್ಲರೆ ಶಿವಯೋಗಿಯೆಂಬೆನು ಇಂತೀ ಭೇದವನರಿಯದೆ ವೇಷವಧರಿಸಿ ತಿರುಗುವರನೆಲ್ಲಾ ಭವರೋಗಿಗಳೆಂಬೆನಯ||೯೫ ತನುವಿನಗುಣಂಗಳ ತರಿದೊಟ್ಟಿ ಮನದಮಾಯಾವಿಕಾರದ ಬಾಯಬೀಣದು ಕಕಗಳಕತ್ತಲೆಯಕಡಿಸಿ ಎಡಬಲಂಗಳತಡಹದೆ ನಡುವಮಧ್ಯ ಮಾರ್ಗವಹಿಡಿದು ಸಷುಮ್ನಗಿರಿಯನಡರೆಕಡೆ ಮೊದಲಿಲ್ಲದೆ ಬೆಳಗಿನೊಳಡಗಿ ದೆಳಗುತಿರ್ದ ನಾನುಪರಶಿವಯೋಗಿ ಯಾದನಯ್ಯಾ ೯೬|| ಕರ್ಮಸಾದಾಖ್ಯ ಸ್ವರೂಪವಮಾದ ಆಚಾರಲಿಂಗದಲ್ಲಿ ನಕಾರಮಂತ್ರ ಸ್ವರೂಪವಾದ ಘ್ರಾಣೇಂದ್ರಿಯ ಸಂಯೋಗವ ಮಾಡಬಲ್ಲರೆ ತಾನೆ ಪ್ರಾಣಲಿಂಗಿ ಕರ್ತುಸಾದಾಖ್ಯ ಸ್ವರೂಪವಾದ ಗುರು

ಲಿಂಗದಲ್ಲಿ ಮಕಾರಮಂತ್ರ ಸ್ವರೂಪವಾದ ಜಿಹ್ವೇಂದ್ರಿ ಸಂಯೋಗವಮಾಡಬಲ್ಲಾತನೇ ಪ್ರಾಣಲಿಂಗಿ ಮೂರ್ತಿಸಾದಾಖ್ಯಮೂರ್ತಿಸ್ವರೂಪವಾದ ಶಿವಲಿಂಗದಲ್ಲಿ ಶಿಕಾರಮಂತ್ರ ಸ್ವರೂಪವಾದ ನೇತ್ರೇಂದ್ರಿಯ ಸಂಯೋಗವ ಮಾಡಬಲ್ಲಾತನೇ ಪ್ರಾಣಲಿಂಗಿ ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗದಲ್ಲಿ ಶಿಕಾರಮಂತ್ರಸ್ವರೂಪವಾದ ಶ್ರವಣೇಂದ್ರಿಯ ಸಂಯೋಗವ ಮಾಡಬಲ್ಲಾತನೇ ಪ್ರಾಣಲಿಂಗಿ ಮಹಾಸಾದಾಖ್ಯಸ್ವರೂಪವಾದ ಮಹಾಲಿಂಗದಲ್ಲಿ ಓಂಕಾರಮಂತ್ರ ಸ್ವರೂಪವಾದ ಹೃದಯೇಂದ್ರಿಯ ಸಂಯೋಗವ ಮಾಡಬಲ್ಲಾತನೇ ಪ್ರಾಣಲಿಂಗಿ ಇಂತೀ ಷಡ್ವಿದಲಿಂಗ ಇಂತೀಷಡೇಂದ್ರಿಯಂಗಳ ಸಂಯೋಗವಮಾಡಿ ಆಷಡ್ವಿಧಲಿಂಗಗಳೊಂದಾದ ಮಹಾಘನವೇ ತಾನಾಗಿಸುಯಬಲ್ಲಾತನೇ ಪ್ರಾಣಲಿಂಗ ಸಮ್ಮಂಧಿಯಯ್ಯಾ ॥ ೯೬ ॥

ಯನ್ನ ಘ್ರಾಣದಕೊನೆಯಲ್ಲಿ ಗಂಧಪ್ರಸಾದವ ಗ್ರಹಿಸುತಿರ್ಪಿರಿ ನಿಮ್ಮಘ್ರಾಣದಕೊನೆಯಲ್ಲಿ ನಾನು ಗ್ರಂಥಪ್ರಸಾದವ ಗ್ರಹಿಸುತಿರ್ಪೆನಯ್ಯಾ ಯನ್ನ ಜಿಹ್ವೆಯಕೊನೆಯಲ್ಲಿ ನೀವು ರುಚಿಯಪ್ರಸಾದಗ್ರಹಿಸುತಿರ್ಪಿರಿ ನಿಮ್ಮಜಿಹ್ವೆಯಲ್ಲಿ ನಾನು ರುಚಿಪ್ರಸಾಧವಗ್ರಹಿಸುತಿರ್ಪೆನಯ್ಯಾ ಯನ್ನ ನೇತ್ರದ ಕೊನೆಯಲ್ಲಿ ನೀವು ರೂಪುಪ್ರಸಾದವ ಗ್ರಹಿಸುತ್ತಿರ್ಪಿರಿ ನಿಮ್ಮ ನೇತ್ರದಕೊನೆಯಲ್ಲಿ ನಾನು ರೂಪುಪ್ರಸಾದವ ಗ್ರಹಿಸುತಿರ್ಪೆನಯ್ಯಾ ಯನ್ನತ್ವಕ್ಕಿನ ಕೊನೆಯಲ್ಲಿ ನೀವು ಸ್ಪರ್ಶನ ಪ್ರಸಾದವ ಗ್ರಹಿಸುತಿರ್ಪಿರಿ ನಿಮ್ಮ ತ್ವಕ್ಕಿನಕೊನೆಯಲ್ಲಿ ನಾನು ಸ್ಪರ್ಶನ ಪ್ರಸಾದವ ಗ್ರಹಿಸುತಿರ್ಪೆನಯ್ಯಾ ಯೆನ್ನ ಸೋತ್ರದಕೊನೆಯಲ್ಲಿ ನೀವು ಶಬ್ದಪ್ರಸಾದವಗ್ರಹಿಸುತಿರ್ಪಿರಿ ನಿಮ್ಮ ಶೋತ್ರದಕೊನೆಯಲ್ಲಿ ನಾನು ಶಬ್ದಪ್ರಸಾದವ ಗ್ರಹಿಸುತಿರ್ಪನಯ್ಯಾ ಯನ್ನ ಹೃದಯಕೊನೆಯಲ್ಲಿ ನೀವು ತೃಪ್ತಿಪ್ರಸಾದವ ಗ್ರಹಿಸುತಿರ್ಪಿರಿ ನಿಮ್ಮ ಹೃದಯಕೊನೆಯಲ್ಲಿ ನಾನು ತೃಪ್ತಿಪ್ರಸಾದವ ಗ್ರಹಿಸುತಿರ್ಪೆನಯ್ಯಾ ಇಂತೆನ್ನ ಷಡೇಂದ್ರಿಯಗಳು ಸುಖವು ಯನಗರ್ಪಿತಪ್ರಸನ್ನವಾಯಿ

ತೆ ಪ್ರಸಾದವಾಯಿತ್ತಾಗಿ ಯೆನ್ನ ಜೀವಭಾವವುಶನಿಹಾಳಾಗಿಹೋ
ಯಿತಯ್ಯಾ ||೯೮|| ಗುರುಪಾದೋದಕಂಗೊಂಡು ಯೆನ್ನ ಸಂಚಿತ
ಕರ್ಮನಾಶವಾಯಿತು ಲಿಂಗಪಾದೋದಕಂಗೊಂಡು ಯೆನ್ನ ಪ್ರಾರಬ್ಧ
ಕರ್ಮನಾಸ್ತಿಯೂಯಿತು ಜಂಗಮಪಾದೋದಕಂಗೊಂಡು ಯೆನ್ನ ಆ
ಗಾಮಿಕ ಕರ್ಮನಾಸ್ತಿಯೂಯಿತು ಇಂತೀ ತ್ರೈಮೂರ್ತಿಗಳ ತ್ರಿವಿಧ
ಪಾದೋದಕವಕೊಂಡು ತ್ರಿಕರ್ಮಂಗಳು ನಾಸ್ತಿಯೂದವು ||೯೯||
ಯೆನ್ನ ಹುಟ್ಟುಹೊಂದುಗಳು ನಷ್ಟವಾದವಯ್ಯಾ ಪಾದತೀರ್ಥವೆಂ
ದಡೆ ನಿತ್ಯಪರಿಪೂರ್ಣ ಮಹಾಜ್ಞಾನವು ತಾನೇನೋಡಾ ಪಾದತೀ
ರ್ಥವೆಂದರೆ ನಿತ್ಯನಿರವಯ ನಿರಂಜನವು ತಾನೇನೋಡಾ ಪಾದತೀರ್ಥ
ವೆಂದರೆ ಮಹಾಘನಪರತರ ಪರಂಜ್ಯೋತಿ ತಾನೇನೋಡಾ ಪಾದ
ತೀರ್ಥವೆಂದರೆ ಸಾಕ್ಷಾತ್ಪರಶಿವ ತಾನೇನೋಡಾ ಇಂತಪ್ಪ ಪಾದತೀ
ರ್ಥದ ಘನವಕಂಡು ತನುಕರಗಿ ಮನಹಿಗ್ಗಿ ಹೃದಯವುಪಸರಿಸಿ ಅಂತ
ರಂಗದಲ್ಲಿ ವಿಶ್ವಾಸವುತುಂಬಿಸಿ ಬಹಿರಂಗದ ಬಕ್ತಿಯಿಂದ ಸಾಷ್ಟಾಂಗ
ದಿಂದೆ ನಮಸ್ಕರಿಸಿ ಮಹಾಘನಪವಿತ್ರವಾದ ಪಾದತೀರ್ಥವನ್ನು
ಹದುಳಚಿತ್ತನಾಗಿ ಹರುಷಾನಂದದಿ ಸೇವನೆಯಮಾಡಿ ಭವಸಾಗ
ರದಾಂಟ ಕಾಯಜೀವದ ಸಂಸಾರವನೀಗಿ ಪರಮಪವಿತ್ರ ಶಿವಮ
ಯಮಾತ ಯಿರ್ದನಯ್ಯಾ ||ಅಖ|| ೧೦೦|| ಜಂಗಮದ ಪಾದತೀರ್ಥವು
ಭವರೋಗವೈದ್ಯವಯ್ಯಾ ಜಂಗಮದ ಪಾದತಿರ್ಥವು ಶಿವಶಿವಾಸಾ
ಯುಜ್ಯವಯ್ಯಾ ಜಂಗಮದ ಪಾದತೀರ್ಥವು ಜೀವನ್ಮುಕ್ತಿಯಯ್ಯಾ
ಜಂಗಮದ ಪಾದತಿರ್ಥವು ಆಧಿವ್ಯಾಧಿವಿಪತ್ತು ರೋಗರುಜೆಯಂಗಳ
ಶೋಧಿಸಿ ಕಿತ್ತಿಬಿಸಾಟುವದಯ್ಯಾ ಜಂಗಮದ ಪಾದತಿರ್ಥವು ಅಂಗದ
ಗುಣವಕಳೆವುದಯ್ಯಾ ಜಂಗಮದ ಪಾದತಿರ್ಥವು ಲಿಂಗಕ್ಕೆ ಪರಮಕಳೆ
ಯಪ್ಪುದಯ್ಯಾ ಇಂತಿಪ್ಪ ಜಂಗಮದ ಪಾದತೀರ್ಥಕ್ಕೆ ಭಕ್ತನಾದರೂ
ಆಗಲಿ ಮಹೇಶ್ವರನಾದರೂ ಆಗಲಿ ಅಡಿಯಿಟ್ಟುನಡೆದು ಬಂದುಭಯ
ಭಕಿ ಯಿಂದಡ್ಡಬಿದ್ದು ಆಜಂಗಮದ ಪಾದತೀರ್ಥವನ್ನು ಶುದ್ಧಸಾವ

ಧಾನವಿಂದೆ ತನ್ನ ಲಿಂಗಕ್ಕೆ ಅರ್ಪಿಸಿ ಅದಕ್ಕೆಕೊಳ್ಳಬಲ್ಲದೆ ಆತನೆ ಆದಿ ಪುರಾತನನೆಂಬೆ ಅನಾದಿಶರಣನೆಂಬೆ ಅಭೇದ್ಯ ಭೇದಕನೆಂಬೆ ಹೀಗಲ್ಲ ದೆ ಭಕ್ತಿಹೀನರು ಸುಯುಕ್ತಿ ಶೂನ್ಯರಾಗಿ ಗರ್ವದ ಪರ್ವತವನೇರಿ ಹೆಂಮೆ ಹಿರಿಯತನವುಂದುಗೊಂಡು ಆಜಂಗಮದ ಪಾದತೀರ್ಥವ ನ್ನು ಕಾಲಿಲ್ಲದಹಳವನಂತೆ ತಾನಿದ್ದಲ್ಲಿಗೆ ತರಿಸಿಕೊಂಡು ಅವಿಶ್ವಾಸ ದಿಂದಕೊಂಬ ಜೀವಗಳ್ಗೆರಯನ ಗೊಂಮೆತೋರಿದರಯ್ಯಾ ||೧೦೧|| ನಿತ್ಯನಿರಂಜನ ಜಂಗಮದ ಭಕ್ತಿಯಿಂದ ಬಿಜಯಂಗೈಸಿ ಮುಕ್ತಿಸಿಂ ಹಾಸನದಮೇಲೆ ಕುಳ್ಳಿರಿಸಿ ತೋದಕವಿಂದ ಪಾದಪಕ್ಷಾಲನವಮಾಡಿ ಆಜಂಗಮದ ಕ್ರಿಯಗಳೆಂಬ ಶ್ರೀಚರಣಯುಗಳವನ್ನು ಸುಚಿತ್ತ ವೆಂಬ ಹಸ್ತದಲ್ಲಿ ಮೂರ್ತಿಗೊಳಿಸಿ ಸದ್ಭಾವವೆಂಬ ಹಸ್ತದಿಂದ ಚಿ ತ್ರ್ಪಕಾಶವೆಂಬ ವಿಭೂತಿಯಧರಿಸಿ ಚಿತ್ಕರಣಂಗಳೆಂಬ ಪುಷ್ಪವಂ ಶೃಂಗರಿಸಿ ಸ್ವಾನುಭಾವವೆಂಬ ಧೂಪವನರ್ಪಿಸಿ ಸಮ್ಯಜ್ಞಾನವೆಂಬ ದೀಪವಬೆಳಗಿ ನಿಶ್ಶೂನ್ಯವೆಂಬ ಕೋಣದಲ್ಲಿದ್ದ ನಿರ್ಮಾಯೋದಕವ ತೆಂದು ಅನಿರಂಜನ ಜಂಗಮದ ಪಾದಾಭಿಷೇಕವನ್ನುಮಾಡಿ ನಿರಾಳ ವೆಂಬ ಬಟ್ಟಲಲ್ಲಿಗಡನಿಸಿಕೊಂಡು ಪೂಜಿಸಂಪೂರ್ಣಂಗೈದಬಳಿಕಾ ತೀ ರ್ಥವನ್ನು ಜಂಗಮ ತಮ್ಮಲಿಂಗಕ್ಕೆ ಅರ್ಪಿಸಿ ಆಲಿಂಗಸಹಿತ ಭೋಗಿ ವುಳಿದ ಮಹಾಜ್ಞಾನ ತೀರ್ಥವನ್ನು ಅವಿರಳಭಕ್ತಿಯಿಂದ ಕೈಕೊಂ ಡು ತನ್ನಲಿಂಗಕ್ಕೆ ಅರ್ಪಿಸಿ ಆಲಿಂಗಸಹಿತ ಸುಖಿಸುವಾತನೇ ಅನಾದಿ ಭಕ್ತನು ಇಂತಪ್ಪ ಅನಾದಿಭಕ್ತನ ಘನಕ್ಕೆ ನಮೋನಮೋಯೆಂಬೆ ನಯ್ಯಾ ||೧೦೨|| ಕೇಳಿಕೇಳಿರಯ್ಯಾ ಶಿವಭಕ್ತಶರಣ ಜನಂಗಳು ನೀವೆಲ್ಲ ನೂರೊಂದು ಸ್ಥಲದ ನಿರ್ಣಯವನ್ನು ಆರುಸ್ಥಲದಲ್ಲಡಗಿಸಿ ಆರುಸ್ಥಲದ ನಿರ್ಣಯವನ್ನು ಮೂರುಸ್ಥಲದಲ್ಲಡಗಿಸಿ ಮೂರುಸ್ಥಲ ವೊಂದಾದ ಮೂಲಬ್ರಹ್ಮದ ಶರಣಲ್ಲಿ ಕುರುಹಡಗಿ ನಿರವಯಲಾದ ಭೇದವುಪೇಳ್ವೆನದೆಂತೆನೆ ಪಿಂಡಸ್ಥಲ ೧ ಪಿಂಡಜ್ಞಾನಸ್ಥಲ ೨ ಸಂ ಸಾರಹೇಹಸ್ಥಲ ೩ ಗುರುಕಾರುಣ್ಯಸ್ಥಲ ೪ ಲಿಂಗಧಾರಣಸ್ಥಲ ೫ ವಿ

ಭೂತಿಯಸ್ಥಲ ೬ ರುದ್ರಾಕ್ಷಿಯಸ್ಥಲ ೭ ಪಂಚಾಕ್ಷರಿಯಸ್ಥಲ ೮ ಭಕ್ತಿಸ್ಥಲ ೯ ಉಭಯಸ್ಥಲ ೧೦ ತ್ರಿವಿಧಸಪ್ತವಿಸ್ಥಲ ೧೧ ಚತುರ್ವಿಧ ಸಾರಾಯಸ್ಥಲ ೧೨ ಉಪಾದಿಯಕೂಟಸ್ಥಲ ೧೩ ನಿರುಪಾಧಿಯಮಾಟಸ್ಥಲ ೧೪ ಸಹಜಮಾಟಸ್ಥಲ ೧೫ ಈಹದಿನೈದು ಭಕ್ತಿಸ್ಥಲಂ ಇನ್ನು ದೀಕ್ಷಾಗುರುಸ್ಥಲ ೧೬ ಶಿಕ್ಷಾಗುರುಸ್ಥಲ ೧೭ ಜ್ಞಾನಗುರುಸ್ಥಲ ೧೮ ಕ್ರಿಯಾಲಿಂಗಸ್ಥಲ ೧೯ ಭಾವಲಿಂಗಸ್ಥಲ ೨೦ ಜ್ಞಾನಲಿಂಗಸ್ಥಲ ೨೧ ಸ್ವಯಸ್ಥಲ ೨೨ ಚರಸ್ಥಲ ೨೩ ಪರಸ್ಥಲ ೨೪ ಆಚಾರಸ್ಥಲ ೨೫ ಇಂತಿವುಯಸ್ಥಲಗಳು ಇಪ್ಪತ್ತೈದುಸ್ಥಲಗಳು ಆಧಾರಚಕ್ರದಲ್ಲಿ ಸಂಯೋಗವಾಗಿರ್ಪವು ಇನ್ನು ಮಹೇಶ್ವರಸ್ಥಲ ೧ ಲಿಂಗನೈಷ್ಠಿಕಸ್ಥಲ ೨ ಪೂರ್ವಾಶ್ರಯ ನಿರಸನಸ್ಥಲ ೩ ವಾಗ್ವಾದ ದ್ವೈತನಿರಸನಸ್ಥಲ ೪ ಬ್ರಹ್ಮನಿರಸನಸ್ಥಲ ೫ ಅಷ್ಟತನುಮೂರ್ತಿ ನಿರಸನಸ್ಥಲ ೬ ಗರ್ವಾಗತನಿರಸದಸ್ಥಲ ೭ ಶಿವಜಗನ್ಮಯನಿರಸನ ಸ್ಥಲ ೮ ಭಕ್ತದೇಹಿಕಸ್ಥಲ ೯ ಈ ಒಂಬತ್ತು ಮಹೇಶರಸ್ಥಲವು ಇನ್ನು ಕ್ರಿಯಾಗಮಸ್ಥಲ ೧೦ ಭಾವಾಗಮಸ್ಥಲ ೧೧ ಜ್ಞಾನಾಗಮ ಸ್ಥಲ ೧೨ ಸಕಾಯಸ್ಥಲ ೧೩ ಪರಕಾಯಸ್ಥಲ ೧೪ ಧರ್ಮಾಚಾರ ಸ್ಥಲ ೧೫ ಭಾವಾಚಾರಸ್ಥಲ ೧೬ ಜ್ಞಾನಾಚಾರಸ್ಥಲ ೧೭ ಗುರು ಸ್ಥಲ ೧೮ ಈ ಒಂಬತ್ತು ಉಭಯಸ್ಥಲಗಳುಕೂಡಿ ೧೮ ಸ್ಥಳಗಳಾಗಿ ಸ್ವಾಧಿಷ್ಠಾನಚಕ್ರದಲ್ಲಿ ಸಮಂಧವಾಗಿರ್ಪದು ಇನ್ನು ಪ್ರಸಾದಿ ಯಸ್ಥಲವು ೧ ಗರುಹತ್ಮಸ್ಥಲ ೨ ಲಿಂಗಹಾಮತ್ಮಸ್ಥಲ ೩ ಜಂಗಮಮಹಾತ್ಮಸ್ಥಲ ೫ ಭಕ್ತಮಹಾತ್ಮ್ಯಸ್ಥಲ ೬ ಶರಣಮಹಾತ್ಮ್ಯಸ್ಥಲ ೭ ಪ್ರಸಾದಮಹಾತ್ಮ್ಯಸ್ಥಲ ೮ ಈ ಏಳುಪ್ರಸಾದಿಯಸ್ಥಲವು ಇನ್ನು ಕಾಯಾನುಸ್ಥಲವು ೧ ಇಂದ್ರಿಯಾನುಸ್ಥಲ ೨ ಪ್ರಾಣಾನುಗ್ರಹಸ್ಥಲ ೩ ಕಾರವ್ಯರ್ಪಿತಸ್ಥಲ ೪ ಕರುಣಾರ್ಪಿತಸ್ಥಲ ೫ ಭಾರ್ಪಿತಸ್ಥಲ ೬ ಶಿಷ ಸ್ಥಲ ೭ ಶುಶ್ರೂಷಸ್ಥಲ ೮ ಸೇವಸ್ಥಲ ೯ ಈ ಒಂಬತ್ತು ಶಿವಲಿಂಗ ಸ್ಥಲವು ಉಭಯಸ್ಥಲಕೂಡಿ ಹದಿನಾರುಸ್ಥಲಗಳಾಗಿ ಮಣಿಪುರಚಕ್ರ

ದಲ್ಲಿ ಸಂಬಂಧವಾಗಿರ್ಪವು ಇನ್ನು ಪ್ರಾಣಲಿಂಗಸ್ಥಲವು ೧ ಪ್ರಾಣಲಿಂಗಾರ್ಚನೆಯಸ್ಥಲ ೨ ಶಿವಯೋಗಿಸಮಾಧಿಸ್ಥಲ ೩ ಲಿಂಗನಿಸ್ಥಲ ೪ ಅಂಗಲಿಂಗಸ್ಥಲ ೫ ಈ ಐದುಪ್ರಾಣಲಿಂಗಯಸ್ಥಳವು ಇನ್ನು ಜೀವಾತ್ಮಸ್ಥಲ ೧ ಅಂತರಾತ್ಮಸ್ಥಲ ೨ ಪರಮಾತ್ಮಸ್ಥಲ ೩ ನಿರ್ದೇಹಾತ್ಮಸ್ಥಲ ೪ ನಿರ್ಭಾವಾಗಮಸ್ಥಲ ೫ ನಷ್ಟಾಗಮಸ್ಥಲ ೬ ಆದಿಪ್ರಸಾದಿಯಸ್ಥಲ ೭ ಅಂತ್ಯಪ್ರಸಾದಿಯಸ್ಥಲ ೮ ಶೈವಪ್ರಸಾದಿಯಸ್ಥಲ ೯ ದೀಕ್ಷಾಪಾದೋದಕಸ್ಥಲ ೧೦ ಶಿಕ್ಷಾಪಾದೋದಕಸ್ಥಲ ೧೧ ಜ್ಞಾನಪಾದೋದಕಸ್ಥಲ ೧೨ ಜಂಗಮಲಿಂಗಸ್ಥಲವು ೧೩ ಇಂತೀ ಉಭಯಯಸ್ಥಲಕೂಡಿ ೧೮ ಸ್ಥಲಗಳಾಗಿ ಅನಾಹತಚಕ್ರದಲ್ಲಿ ಸಂಬಂಧವಾಗಿರ್ಪುದುಇನ್ನು ಶರಣಸ್ಥಲ೧ತಾಮಸನಿರಸನಸ್ಥಲ೨ ನಿರ್ದೇಶಸ್ಥಲ ಶಿವಸಂಪಾದನೆಯಸ್ಥಲಿ ೪ ಈನಾಲ್ಕುಶರಣಸ್ಥಲಇನ್ನು ನಿಷ್ಪತ್ತಿಸ್ಥಲ೧ಪಿಂಡಕಾಸ್ಥಲ ೨ ಬಿಂದುಕಾಸ್ಥಲ೩ಮಹದಕಾಸ್ಥಲ ೪ ಕ್ರಿಯಾಪ್ರಕಾಶಸ್ಥಲ ೫ ಭಾವಪ್ರಕಾಶಸ್ಥಲ ೬ ಜ್ಞಾನಪ್ರಕಾಶಸ್ಥಲ ೭ ಪ್ರಸಾದಿಅಂಗಸ್ಥಲ ೮ ಇಂತೀಉಭಯಸ್ಥಲ ಕೂಡಿ ೧೨ ಸ್ಥಲಗಳಾಗಿ ವಿಶುದ್ಧಿಚಕ್ರದಲ್ಲಿ ಸಂಬಂಧವು ಇನ್ನು ಐಕಸ್ಥಲ ೧ ಸರ್ವಾಚಾರಸಂಪನ್ನಸ್ಥಲ ೨ ಏಕಭಾವಸ್ಥಲ ೩ ಸಹಭೋಜನಸ್ಥಲ ೪ ಈ ನಾಲ್ಕು ಐಕಸ್ಥಲ ಇನ್ನುಕೊಂಡದು ಪ್ರಸಾದಿಯಸ್ಥಲ ೫ ನಿರುದ್ಯೋಗಸ್ಥಲ ೬ ಚರಾಚರ ನಾಸ್ತಿಸ್ಥಲ ೭ ಭಾಂಡಸ್ಥಲ ೮ ಭಾಜನಸ್ಥಲ ೯ ಲಿಂಗಲೇಪನಸ್ಥಲ ೧೦ ಸ್ವಯಪರಜ್ಞಾನಸ್ಥಲ ೧೧ ಭಾವಾಭಾವಾನಷ್ಟಸ್ಥಲ ೧೨ ಜ್ಞಾನಸೂನ್ಯದಲ್ಲಿ ೧೩ ಈ ವಂಬತ್ತು ಜ್ಞಾನ ಮಹಾಲಿಂಗಸ್ಥಲಇಂತೀವುಭಯಸ್ಥಲವ್ನುಕೂಡಿ೧೩ ಸ್ಥಲಗಳಾಗಿಆಗ್ನೆಚಕ್ರದಲ್ಲಿ ಸಂಬಂದವಾಗಿರ್ಪವುಇಂತೀನೂರೊಂದುಸ್ಥಲಗಳಆಧಾರಸ್ವಾಧಿಷ್ಠಾನ ಮಣಿಪೂರಕಅನಾಹತವಿಶುದ್ಧಿ ಅಗ್ನಿಯೆಂಬ ಆರುಚಕ್ರಗಳಲ್ಲಿಸಂಬಂಧಿಸಿ ಆರುಚಕ್ರಂಗಳನ್ನು ಕೇವಲ ನಿಶೂನ್ಯ ನಿರಂಜನವೆಂಬ ಮೂರುಚಕ್ರಗಳಲಡಗಿಸಿ ಆಮೂರುಚಕ್ರಗಳೆಂಬ ಮಂಟಪದಲ್ಲಿ ಗುರು

ಲಿಂಗಜಂಗಮವಕುಳ್ಳಿರಿಸಿಕೇವಲ ನಿರ್ಭೃಸ್ಯ ನಿರಂಜನ ಭಕ್ತಿಯಿಂದ ರ್ಚಿಸಿ ಆಗುರುಲಿಂಗಜಂಗಮದ ಘನಪ್ರಸಾಧವಪಡೆದು ಆಗುರುಲಿಂಗಜಂಗಮ ವ್ರೊಂದಾದ ಮಹಾಘನಪದ ಬ್ರಹ್ಮದಲ್ಲಿ ಮನವಡಗಿ ಭಾವನಿಷ್ಪತ್ತಿಯಾಗಿ ಶರಧಿಯಲ್ಲಿ ಮುಳುಗಿರ್ದ ಕುಂಭದಂತಿರ್ದ ಮಹಾಶರಣಪರಮಗುರು ಬಸವರಾಜದೇವರದಿವ್ಯ ಶ್ರೀಪಾದಕ್ಕೆ ನಮೋ ನಮೋ ಯೆಂಬನಯ್ಯಾ ||ಅಖ|| ೧೦೩ || ಆದಿ ಆಧಾರವಿಲ್ಲದಮುನ್ನ ನಾದಬಿಂದುಕಳೆಗಳಿಲ್ಲದಮುನ್ನ ಭೇದಭೇದ ಬ್ರಹ್ಮಾಂಡಕೋಟಿಗಳಿಲ್ಲದಮುನ್ನ ಬಸವನೆಂಬ ಬೀಜಮಧ್ಯದಲ್ಲಿ ಲಿಂಗವೆಂಬ ಅಂಕುರ ವುದಯವಾಗಿ ಆಲಿಂಕಾಂಕುರವೇ ಸಕಲತತ್ವತೋರಿಕೆಯೆಂಬ ಶಾಖೆವರ್ಣಂಗಳೆಂಪಸರಿಸಿ ವೃಕ್ಷಪಲ್ಲವಿಸಿತ್ತು ಇಂತೀ ಚಿದ್ಬ್ರಹ್ಮಾಂಡ ವೃಕ್ಷವೆಂಬ ಪರಮಗುರು ಸಂಗನಬಸವಣ್ಣನ ಶ್ರೀಪಾದಕಮಲದಲ್ಲಿ ಭ್ರಮರನಾಗಿರಿಸಯ್ಯಾ ||೧೦೪|| ನಿರುಪಮಬಸವಣ್ಣನ ನಿರಾಳಬೆಳಗಿನೊಳಗೆ ನಿರಂತರಬೆಳಗುತಿರ್ದನಯ್ಯಾ ಅದೆಂತೆಂದೆರೆ ಬಕಾರಸ್ಥೂಲತನ ಸಕಾರ ಸೂಕ್ಷ್ಮತನುವಕಾರವೇ ಯನ್ನಕಾರಣತನು ಮತ್ತಂ ಬಕಾರವೇ ಯನ್ನಜೀವಾತ್ಮನು ಸಕಾರವೇ ಯನ್ನಂತರಾತ್ಮನವಕಾವೇ ಯನ್ನಪರಮಾತ್ಮನು ಮತ್ತಂ ಬಕಾರವೇ ಯನ್ನಗುರುವಾಗಿ ಬಂದೆನ್ನಪ್ರಾಣವ ನೊಳಕೊಂಡು ಸಕಾರವೇ ಲಿಂಗವಾಗಿಬಂದೆನ್ನ ಮನವನೊಳಕೊಂಡಿತು ವಕಾರವೇ ಜಂಗಮವಾಗಿ ಬಂದೆನ್ನ ದನವನೊಳಕೊಂಡಿತು ಮತ್ತಂ ಬಕಾರವೇ ಯಿಷ್ಟಲಿಂಗವಾಗಿ ಬಂದೆನ್ನ ಸ್ಥೂಲತನುವನೊಳಕೊಂಡಿತು ವಕಾರವೇ ಭಾವಲಿಂಗವಾಗಿ ಬಂದೆನ್ನಕಾರಣ ತನುವನೊಳಕೊಂಡಿತು ಮತ್ತಂ ಬಕಾರವೆ ಶುದ್ಧ ಪ್ರಸಾದವಾಗಿ ಬಂದೆನ್ನ ಜೀವಾತ್ಮ ತೆನುವನೊಳಕೊಂಡಿತು ಸಕಾರವೇ ಸಿದ್ಧಪ್ರಸಾದವಾಗಿ ಬಂದೆನ್ನ ಪರಮಾತ್ಮವನೊಳಕೊಂಡಿತು ಮತ್ತಂ ಬಕಾರವೇ ಸತ್ಕ್ರಿಯವಾಗಿ ಬಂದೆನ್ನ ಬಹಿರಂಗವಗ್ರಹಿಸುತಿರ್ದುಸಕಾರವೆ ಸದ್ಭಕ್ತಿಯಾಗಿ ಯನ್ನ ತರಂಗವಗ್ರಹಿಸುತಿರ್ಪು

ದು ವಕಾರವೆ ಮಹಾಜ್ಞಾನವಾಗಿ ಬಂದೆನ್ನ ವಳಹೊರಗೆಲ್ಲವುಗ್ರಹಿ ಸುತಿರ್ಪುದು ಇಂತೀ ಬಸವಕ್ಷರತ್ರಯಂಗಳಲ್ಲಿ ನಾನು ನಿಕ್ಷೇಪವಾಗಿದ್ದು ಬಸವಬಸವಬಾಎಂದು ಬಸವನಾಮಾಮೃತವ ಯೆನ್ನ ಮನ ದಣಿಯುಲುಂಡು ಭವಸೂತ್ರವ ಹರಿದು ಶಿವಸ್ವರೂಪವಾಗಿರ್ದೆನಯ್ಯಾ ||ಅಖ|| ಬೀಜದೊಳಗಂಕುರವಿರ್ಪುದು ಅಂಕುರದೊಳಗೆ ಬೀಜವಿರ್ಪುದು ಅಂಕುರಬೀಜವೆಂದು ಹೆಸರು ಯೆರಡಾದರೇನು ವಳಗಿರ್ಪ ರಸವು ವೊಂದೆಯಾಗಿರ್ಪಂತೆ ಬಸವಣ್ಣನೆ ಶಿವನು ಶಿವನೆ ಬಸವಣ್ಣನೆಂಬ ಹೆಸರುಯರಡಾದರೇನು ಅಖಂಡವಸ್ತುವಂದೇ ಯೆಂದ ಕಾರಣ ನಿಮ್ಮ ಅಖಂಡೇಶ್ವರನೆಂದು ಕರೆದ ನಯ್ಯಾ ||ಅಖ|| ೧೦೬ || ಯೆನ್ನ ಪೃಥ್ವಿತತ್ವದಲ್ಲಿ ಆಧಾರಚಕ್ರವಿರ್ಪದು ಯೆನ್ನ ಆಧಾರವೆ ಭಕ್ತಿಸ್ಥಲ ಆಸ್ಥಲವನ್ನು ಬಸವನೆಂಬುಗೊಂಡನಾಗಿ ಯೆನಗಾಸ್ಥಲಬಯಲಾಯಿತು ಎನ್ನ ಅಪ್ಪು ತತ್ವದಲ್ಲಿ ಸ್ವಾಧಿಷ್ಟಾನ ಚಕ್ರವಿರ್ಪುದು ಆಚಕ್ರವೇ ಮಹೇಸ್ವರಸ್ಥಲವ ಮಡಿವಾಳ ಮಾಚಯ್ಯಗಳಿಂಬುಗೊಂಡೆಯ ನಗಾಸ್ಥಲ ಬಯಲಾಯಿತು ಎನ್ನ ಅಗ್ನಿತತ್ವದಲ್ಲಿ ಮಣಿಪೂರಕ ಚಕ್ರವಿರ್ಪುದು ಆಚಕ್ರವೇ ಪ್ರಸಾದಿಯಸ್ಥಲ ಆಸ್ಥಲವ ಚನ್ನಬಸವಣ್ಣನ ವರಿಬುಗೊಂಡು ಯೆನಗಾಸ್ಥಲಬಯಲ್ಲಾಯಿತು ಯೆನ್ನ ವಾಯುತತ್ವದಲ್ಲಿ ಅನಾಹತಚಕ್ರವಿರ್ಪುದು ಆ ಚಕ್ರವೇ ಪ್ರಾಣಲಿಂಗಿಯಸ್ಥಲ ಆಸ್ಥಲವ ಸಿದ್ಧಮಯ್ಯಗಳಿಂಬುಗೊಂಡವರಾಗಿ ಯೆನಗಾಸ್ಥಲಬಯಲಾಯಿತು ಯೆನ್ನ ವಾಯುತತ್ವದಲ್ಲಿ ಯೆನ್ನ ಗಗನತತ್ವದಲ್ಲಿ ವಿಶುದ್ಧಿಚಕ್ರವಿರ್ಪುದು ಆ ಚಕ್ರವೇ ಶರಣಸ್ಥಲ ಆಸ್ಥಲವ ಗುರುಲಿಂಗದೇವಯ್ಯಲಿಂಬುಗೊಂಡು ಯೆನಗಾಸ್ಥಲ ಬಯಲಾಯಿತು ಯೆನ್ನ ತತ್ವದಲ್ಲಿ ಆಗ್ನೆಚಕ್ರವಿರ್ಪುದು ಆ ಚಕ್ರವೇ ಐಕ್ಯಸ್ಥಲವ ಅಜಗಣ್ಣನಂತದೇಗಳಿಂಬುಗೊಂಡು ಯೆನಗಾಸ್ಥಲ ಬಯಲಾಯಿತು ಯೆನ್ನ ಬ್ರಹ್ಮಚಕ್ರವೇ ಪರಮಾರೂಢಸ್ಥಲ ಆಸ್ಥಲವ ನಿಜಗುಣಯೋಗಿಗಳಿಂಬುಗೊಂಡವರಾಗಿ ಯೆನಗಾಸ್ಥಲ

ಬಯಲಾಯಿತು ಯನ್ನ ಶಿಖಾಚಕ್ರವೇ ನಿರುಪಮಸ್ಥಲ ಆಸ್ಥಲವನ್ನು ಅಕ್ಕಮಹಾದೇವಿಯರ ಇಂಬುಗೊಂಡವರಾಗಿ ಯನಗಾಸ್ಥಲ ಬಯಲಾಯಿತು ಯನ್ನ ಪಶ್ಚಿಮಚಕ್ರವೇ ಪರಮನಿರಂಜನಸ್ಥಲ ಆಸ್ಥಲವ ಪ್ರಭುಸ್ವಾಮಿಗಳಿಂಬುಗೊಂಡವರಾಗಿ ಯನಗಾಸ್ಥಲ ಬಯಲಾಯಿ ಯನೊಳ ಹೊರಗೆಲ್ಲಾ ತೋರುವಸ್ಥಲ ಕುಳಂಗಳನು ಉಳಿದ ಸಕಲಗುಣಂಗಳಿಂಬುಗೊಂಡವರಾಗಿ ಯನಗೆ ಸ್ಥಲಂಗಳು ಬಯಲಾದವು ಅದುಕಾರಣ ಆದಿಅನಾದಿಯಿಂದುತಾದಘನವಾದಮಹಾತ್ಮಕ್ಕೆ ಮಹಾತ್ಮವಾದ ಮಹಾಸ್ಥಲವ ಯಿಂಬುಗೊಂಡ ಅಖಂಡೇಶ್ವರಾ ॥ ಮನವನಿಲ್ಲಿಸಿಹೆನೆಂದ ಅಣ್ಣಗಳ ಕಣ್ಣುಗೆಡಿಸಿ ಬಣ್ಣಗುಂದಿಸಿ ಬಂದನ ಕೊಳ್ಳಗು ಮಾಡಿ ಭವದಲ್ಲಿ ಶರೆಯಹಿಡಿದಿರ್ಪುದು ನೋಡಾ ಮನವು ಅ ದ ಂ ತೆ ಂ ದ ರೆ, ವ್ರತವನುಳ್ಳವರ ಬತಗೆಡಿಸಿತ್ತು ನೋಡಾಮನವು ಯತಿಗಳುಳ್ಳವರ ಮತಿಹೀನರಮಾಡಿತ್ತು ನೋಡಾಮನವು ಕಣ್ಣುಮುಚ್ಚಿ ಧ್ಯಾನಿಸುವಣ್ಣಗಳ ಕಳವಳಗೊಳಿಸಿತ್ತು ನೋಡಾಮನವು ಏಕಾಂತವಾಸಿಗಳನೆಲ್ಲಾ ಹಿಡಿತಂದು ಲೋಕದೊಳಗೆ ಮಧ್ಯದಲ್ಲಿರಿಸಿ ಕಾಕುತನದಲ್ಲಿ ಕಾಡಿಬೇಡಿಸಿತ್ತು ನೋಡಾ ಮನವು ಯೋಗಿಗಳೆಂಬುವರ ಭೋಗಕ್ಕೊಳಗುಮಾಡಿತ್ತು ನೋಡಾ ಮನವು ಇಂತೀಮನವನಿಲ್ಲಿಸಿಹೆನೆಂದು ನುಡಿದುವನುತಿಗೆಟ್ಟು ಮಣ್ಣುಮಸಿಯಾಗಿ ಮಡಿದುಹೋದರು ನೋಡಾಹಲಕೆಲಬರು ಅವರಂತಿರಲಿ ಇನ್ನು ಮನವನಿಲ್ಲಿಸುವ ಭೇದವಹೇಳುವೆ ಕೇಳಿರೊ ಆದಿ ಅನಾದಿ ಸುರಾಳ ನಿರಾಳ ಶೂನ್ಯ ನಿಃಶೂನ್ಯ ಸಾಕಾರ ನಿರಾಕಾರ ಸಗುಣ ನಿರ್ಗುಣಮೂರ್ತಿ ಆಮೂರ್ತಿ ಶಿವಭಕ್ತಿನಾಮರೂಪು ಕ್ರಿಯೂ ಸಕಲಬ್ರಹ್ಮಾಂಡ ಸಚರಾಚರಾದಿ ನಾನಾತೋರಿಕೆಯೆಲ್ಲಾ ತಾನೇಯೆಂದು ತಿಳಿಯಲು ಆ ತಿಳಿದಮಾತ್ರದಲ್ಲಿ ಮನದಕಲ್ಪಿತವಳಿದು ಕಾಯಿ ಹಣ್ಣಾದಂತೆ ಆ ಮನವು ಮಹಾಪರಬ್ರಹ್ಮವೇ ಯಪ್ಪುದು ಆ ಮನವು ಮಹಾಜ್ಞಾನವಾದಲ್ಲಿಯೇ ಶರಣನ

ಹುಟ್ಟು ಹೊಂದು ನಷ್ಟವಾದಲ್ಲಿಯೇ ಅಖಂಡೇಶ್ವರನೆಂಬ ಕುರುಹು ನಿರವಯಲು ನೋಡಾ ॥ ೧೦೮ ॥ ನಿಮ್ಮಸ್ವಲೀಲೆಯಿಂದ ನೀವು ಸ ಲವುನಾಮರೂಪು ಕ್ರಿಯದಿಂದ ಸಾಕಾರವೆನಿಸಿ ಆಚಾರಲಿಂಗವಾದಲ್ಲಿ ನಾನುಭಕ್ತನೆಂಬಂಗವಾಗಿ ನಾನು ನಿಮ್ಮೊಳಗೆ ಕೂಡಿರ್ದನಯ್ಯಾ ನೀವು ಗುರುಲಿಂಗವಾದಲ್ಲಿ ನಾನು ಮಹೇಶನೆಂಬಂಗವಾಗಿ ನಾನುನಿ ಮ್ಮೊಳಗೆ ಕೂಡಿರ್ದೆನಯ್ಯಾ ನೀವು ಶಿವಲಿಂಗವಾದಲ್ಲಿನಾನು ಪ್ರಸಾ ದಿಯೆಂಬಂಗವಾಗಿ ನಾನು ನಿಮ್ಮೊಳಗೆ ಕೂಡಿರ್ದೆನಯ್ಯಾ ನೀವುಜಂ ಗಮಲಿಂಗವಾದಲ್ಲಿ ನಾನು ಪ್ರಾಣಲಿಂಗಿ ಯೆಂಬಂಗವಾಗಿ ನಿಮ್ಮೊಳಗೆ ಕೂಡಿರ್ದೆನಯ್ಯಾ ನೀವು ಪ್ರಸಾದಲಿಂಗವಾದಲ್ಲಿ ನಾನುಶರಣನೆಂಬಂ ಗವಾಗಿ ನಿಮ್ಮೊಳಗೆಕೂಡಿರ್ದೆನಯ್ಯಾ ನೀವು ನಿಷ್ಕಳಲಿಂಗವಾದಲ್ಲಿ ನಾನು ಮೂಲಜ್ಞಾನಚಿತ್ತವೆಂಬಂಗವಾಗಿ ನಿಮ್ಮೊಳಗೆ ಕೂಡಿರ್ದೆ ನಯ್ಯಾ ನೀವು ನಿಃಶೂನ್ಯಲಿಂಗವಾದಲ್ಲಿ ನಾನು ಮಹಾಜ್ಞಾನಭಕ್ತಿ ಯೆಂಬಂಗವಾಗಿ ನಿಮ್ಮೊಳಗೆಕೂಡಿರ್ದೆನಯ್ಯಾ ನೀವು ನಿರಂಜನಲಿಂಗ ವಾದಲ್ಲಿ ನಾನು ಅಖಂಡಪರಿಪೂರ್ಣ ಮಹಾಕಳೆಯೆಂಬಂಗವಾಗಿ ನಿ ರಂತರ ನಿಮ್ಮೊಳಗೆಕೂಡಿರ್ದೆ ನಯ್ಯಾ ॥ ಅ ॥ ಬರಿಯ ಬಯಲೊ ಳಗೊಂದೆಚ್ಚ ಅಂಕುಲುಹುಟ್ಟೆ ಅಣುಚಕ್ರವೆಂನೆಣಿಸಿತ್ತು ಆ ಅಣು ಚಕ್ರದಿಂದಾಯಿತು ಪಶ್ಚಿಮಚಕ್ರ ಆ ಪಶ್ಚಿಮ ಚಕ್ರದಿಂದಾಯಿತು ಶಿಖಾಚಕ್ರ ಆ ಶಿಖಾಚಕ್ರದಿಂದಾಯಿತು ಬ್ರಹ್ಮಚಕ್ರ ಆ ಬ್ರಹ್ಮಚಕ್ರ ದಿಂದಾಯಿತು ಆಗ್ನೆಚಕ್ರ ಆ ಆಗ್ನೆಚಕ್ರದಿಂದಾಯಿತು ವಿಶುದ್ಧಚ ಕ್ರ ಆ ವಿಶುದ್ಧಿಚಕ್ರದಿಂದಾಯಿತು ಅನಾಹತಚಕ್ರ ಆ ಅನಾಹತಚ ಕ್ರದಿಂದಾಯಿತು ಮಣಿಪೂರಕಚಕ್ರ ಆ ಮಣಿಪೂರಕ ಚಕ್ರದಿಂದಾ ಯಿತು ಸ್ವಾಧಿಷ್ಟಾನಚಕ್ರ ಆ ಸ್ವಾಧಿಷ್ಟಾನಚಕ್ರದಿಂದಾಯಿತು ಆ ಧಾರಚಕ್ರ ಆ ಆಧಾರಚಕ್ರದಲ್ಲಿ ಚತುರ್ದಳ ಆ ಚತುರ್ದಳದಲ್ಲಿ ಚತುರಾಕ್ಷರಂಗಳು ಆ ಚತುರಾಕ್ಷರಂಗಳ ಮಧ್ಯದಲ್ಲಿರ್ಪ ಬೀಜಾಕ್ಷ ರವೇ ನಕಾರಪ್ರಣವು ಆ ನಕಾರ ಪ್ರಣವುಪೀಠದಮೇಲೆ ಬೆಳಗುತ್ತಿ

ರ್ಪುದು ಆಚಾರಲಿಂಗ ಅದರಿಂದ ಮೇಲೆ ಸ್ವಾಧಿಷ್ಠಾನಚಕ್ರವಿರ್ಪು ದು ಆ ಚಕ್ರವೇ ಷಡ್ದಳ ಷಡ್ದಳಂಗಳಲ್ಲಿ ಷಡಕ್ಷರಗಳು ಆ ಷಡಕ್ಷರ ಮಧ್ಯದೊಳು ಬೀಜಾಕ್ಷರವೇ ಆ ಸ್ವಾಧಿಷ್ಟಾನಚಕ್ರ ಮಕಾರಪ್ರ ಣವು ಆ ಮಕಾರಪ್ರಣವು ಪೀಠದಮೇಲೆ ಬೆಳಗುತಿರ್ಪುದು ಗುರು ಲಿಂಗ ಅದರಮೇಲೆ ಮಣಿಪೂರಕ ಚಕ್ರವಿರ್ಪುದು ಆಚಕ್ರಕ್ಕೆ ದಶ ದಳ ಆ ದಶದಳಂಗಳಲ್ಲಿ ದಶಾಕ್ಷರ ಆ ದಶಾಕ್ಷರಗಳ ಮಧ್ಯದಲ್ಲಿ ಬೀ ಜಾಕ್ಷರವೇ ಶಿಕಾರಪ್ರಣವು ಆ ಶಿಕಾರಪ್ರಣವು ಪೀಠದಮೇಲೆ ಬೆಳ ಗುತಿರ್ಪುದು ಶಿವಲಿಂಗ ಅದರಮೇಲೆ ಅನಾಹತ ಚಕ್ರವಿರ್ಪುದು ಆ ಅನಾಹತಚಕ್ರಕ್ಕೆ ದ್ವಾದಶಗಳ ಆ ದ್ವಾದಶದಳಂಗಳಲ್ಲಿ ದ್ವಾದಶಾ ಕ್ಷರಗಳು ಆ ದ್ವಾದಶಾಕ್ಷರಗಳ ಮಧ್ಯದಲ್ಲಿ ಬೀಜಾಕ್ಷರವೇ ವಕಾರ ಪ್ರಣವುಆವಕಾರಪ್ರಣವುಪೀಠದಮೇಲೆಬೆಳಗುತಿರ್ಪುದು ಜಂಮಲಿಂ ಗಅದರಿಂದಮೇಲೆವಿಶುದ್ಧಿಚಕ್ರಆವಿಶುದ್ಧಿಚಕ್ರಕ್ಕೆಶೋಡಶದಳಂಗಳಲ್ಲಿ ಶೋಡಶಕ್ಷರಂಗಳುಆಶೋಡಶಕ್ಷರಂಗಳಮಧ್ಯದಲ್ಲಿಬೀಜಾಕ್ಷರವೇಯ ಕಾರಪ್ರಣವುಆಯಕಾರಪ್ರಣವುಪೀಠದಮೇಲೆಬೆಳಗುತಿರ್ಪುದು ಪ್ರ ಸಾದಲಿಂಗ ಅದರಿಂದ ಮೇಲೆ ಆಗ್ನೆಚಕ್ರ ಆ ಆಗ್ನೆಚಕ್ರಕ್ಕೆ ದ್ವಿದ ಳಂಗಳಲ್ಲಿ ದ್ವಯಕ್ಷರ ಆ ದ್ವಯಕ್ಷರಂಗಳ ಮದ್ಯದಲ್ಲಿ ಬೀಜಾಕ್ಷರ ವೇ ಓಂಕಾರಪ್ರಣವು ಆ ಓಂಕಾರಪ್ರಣವು ಪೀಠದಮೇಲೆ ಬೆಳಗು ತಿರ್ಪುದು ಮಹಾಲಿಂಗ ಅದರಿಂದ ಮೇಲೆ ಬ್ರಹ್ಮಸ್ಥಾನಚಕ್ರಕ್ಕೆ ಸ ಹಸ್ರದಳ ಅಲ್ಲಿ ಸಹಸ್ರಾಕ್ಷರಗಳು ಆ ಸಹಸ್ರಾಕ್ಷರಗಳ ಮದ್ಯದಲ್ಲಿ ಬೀಜಾಕ್ಷರವೇ ನಿಷ್ಕಳಪ್ರಣವು ಅದರಿಂದ ಮೇಲೆ ಶಿಖಾಚಕ್ರ ಆಶಿ ಖಾಚಕ್ರಕ್ಕೆ ತ್ರಿದಳ ಆ ತ್ರಿದಳಂಗಳಲ್ಲಿ ತ್ರಯಾಕ್ಷರಂಗಳು ಆ ತ್ರಯಾ ಕ್ಷರಮಧ್ಯದಲ್ಲ ಬೀಜಾಕ್ಷರವೇ ಶೂನ್ಯಪ್ರಣವು ಆ ಶೂನ್ಯಪ್ರಣವು ಪೀಠದಮೇಲೆ ಬೆಳಗುತಿರ್ಪುದು ಶೂನ್ಯಲಿಂಗ ಅದರಿಂದ ಮೇಲೆ ಪಶ್ಚಿ ಮಚಕ್ರ ಆಚಕ್ರಕ್ಕೆ ಏಕದಳ ಆ ಏಕದಳದಲ್ಲಿ ಸರ್ವರಂಜನೆಯುನೊ ಳಕೊಂಡ ವಾಚಾತೀತವೆನಿಸುವದು ನಿರಂಜನ ಪ್ರಣವುಪೀಠದಮೇ

ಳಿಬೆಳಗುತಿರ್ಪುದು ನಿರಂಜನಲಿಂಗ ಇಂತಿ ತೆರುವಾಯುಪಿಂದ ಆಧಾರ ಸ್ವಾಧಿಷ್ಠಾನದಲ್ಲಿ ಲಯು ಸ್ವಾಧಿಷ್ಠಾನ ಮಣಿಪೂರಕದಲ್ಲಿಯು ಮಣಿಪೂರಕ ಅನಾಹಾಚಕ್ರದಲ್ಲಿ ಲಯು ಅನಾಹತ ವಿಶುದ್ಧಿಯಲ್ಲಿ ಲಯು ವಿಶುದ್ಧಿ ಆಗ್ನೆಯಲ್ಲಿ ಲಯು ಆಗ್ನೆಯುು ಬ್ರಹ್ಮಚಕ್ರದಲ್ಲಿ ಲಯು ಬ್ರಹ್ಮಚಕ್ರ ಶಿಖಾಚಕ್ರದಲ್ಲಿ ಲಯು ಶಿಖಾಚಕ್ರ ಪಶ್ಚಿಮಚಕ್ರದಲ್ಲಿಲಯು ಪಶ್ಚಿಮಚಕ್ರ ಅನುಚಕ್ರದಲ್ಲಿ ಲಯು ।ಅನುಚಕ್ರ ನಿರವಯಲಲ್ಲಿ ಲಲಯು ಆ ನಿರವಯಲು ನಿಜವಕೂಡಿ ಸಹಜವಾದಲ್ಲಿ ಅಖಂಡೇಶ್ವರನೆಂಬಶಬ್ದವುುಗ್ಧವಾಯಿತುಪಿಂಡದೊಳಗೊಂದುಜ್ಯೋತಿಥಳಥಳಿಸಿ ಬೆಳಗುತಿರ್ಪುದುನೋಡಾ ಅಖಂಡಜ್ಯೋತಿಯು ನೊಡಗೂಡಿ ಅವಿರಳ ಶಿವನಯೋಗಿಯೊಡ ಪಿಂಡದ ಆಕಂಡಿ ತೆವುಕಡೆಗಾಯಿತುನೋಡಾ॥ ೧೧೧॥ ದೀಪ ಯೆಳರೊಳಗೆ ವ್ಯಾಪಿಸಿಕೊಂಡಿರ್ಪುದು ಒಂದೇಜ್ಯೋತಿನೋಡಾ ಅದು ರೂಪವಲ್ಲಾ ನಿರೂಪವಲ್ಲ ಸರ್ವವ್ಯಾಪಾರವಹೊಂದಿದ ಸ್ವಯಂಜ್ಯೋತಿನೋಡಾ ಅದೇಯನ್ನ ಪ್ರಾಣಲಿಂಗವೆಂಬ ಪರತರಪರಮಾನಂದ ಪರಂಜ್ಯೋತಿನೋಡಾ॥೧॥ ಒಂಭತ್ತು ನಾಳಗಳೊಳಗೆ ತುಂಬಿಸೂಸುವಮುಸಪವನಂಗಳವಂದಗೂಡಿಒಂದುಮಾರ್ಗದಲ್ಲಿನಡಿಸಿ ಶೂನ್ಯನಾಳವನಡರಿ ಪಶ್ಚಿಮದ್ವಾರವ ಹೊಕ್ಕು ಬ್ರಹ್ಮರಂದನಳುಕಿ ಭೆಗೇಂದ್ರಿಯುವಡದು ನಿರಂಜನಪೀಠವಮೆಟ್ಟಿ ಮಹಾಬೆಳಗಿನ ಪ್ರಭಾಪುಂಜದಿಂದ ರಂಜನ ಸಮಾಧಿಯೊಳಗೆ ನಿರಂತರಬೆಳಗುತಿರ್ದನ್ನಯ್ಯೋ ॥ ೧೧೩ ॥ ನೀರಿಲ್ಲದಭೂಮಿಯಲ್ಲಿ ಬೇರಿಲ್ಲದ ವೃಕ್ಷಹುಟ್ಟಿತುಕಂಡೆ ಆವೃಕ್ಷವು ಯಡೆಯಿಲ್ಲದ ಹಣ್ಣು ತಳೆದಿರ್ಪುದುಕಂಡೆ ಆ ಹಣ್ಣನ್ನು ಒಂದುಕಾಲಿಲ್ಲದ ಯಿರುವೆಬಂದು ನುಂಗಿತ್ತುಕಂಡೆ ಆಯಿರುವೆಯು ಗರ್ಭದಲ್ಲಿ ಯಿಬ್ಬರುಸತ್ತರೆಕಂಡೆ ಈವಿಚಿತ್ರವ ಹೇಳುವ ನಾನು ಯಿಲ್ಲವಯ್ಯೋ ॥ ೪ ॥

ಶ ರ ಣ ಸ್ಥ ಲ ವು.

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ।ಅಖಂಡವೆಂಬ ಲಕ್ಷಣ ಯುಕ್ತವಾದ ಮಹಾಲಿಂಗವೇ ಪತಿತಾನೆ ಶರಣಸತಿಯುಂದು ದೃಢ

ಬುದ್ಧಿ ನಿಶ್ಚಲವಾಗಿರಬೇಕು ಮತ್ತು ತಾನೆ ಸರ್ವಾಧಾರ ಪರವುಸ್ವತಂತ್ರನೆಂಬ ಭಾವವು ಯಿರಬೂಗೊಂಡಿರಬೇಕು ಅಂಗಭೋಗೋಪಭೋಗಗಳೆಲ್ಲಾ ಹಿಂದುಳಿದು ಲಿಂಗೋಪಭೋಗಗಳೇ ಮುಂದಗೊಂಡಿರ್ಪನು ಶರಣನೋಡಾ ಅದೆಂತೆಂದೊಡೆ,

ಶ್ಲೋ॥ ಪತಿರ್ಲಿಂಗಸತಿರ್ಭಕ್ತ ಹೃದಯುಕ್ತ ಸ್ವಯಂಪ್ರಭುಃ। ಪ್ರಪಂಚಕಸುಖಂನಾಸ್ತಿ ಶರಣಸ್ಥಲಮುತ್ತಮಂ ॥ ೧ ॥ ಯೆಂಬುದಾಗಿ ಯಿಂತಪ್ಪ ಮಹಾಶರಣರ ಸಂಗದಲ್ಲಿಯಿರಿಸಿ ಸಲಹಯ್ಯ ಯೆನ್ನ ॥ ಅ ॥ ೧ ॥ ಕಾಯದ ಕಳವಳದಲ್ಲಿ ಕಂಗೆಡುವನಲ್ಲ ಶರಣ ಜೀವನೋಪಾಧಿಕೆಯಹೊದ್ದುವನಲ್ಲ ಶರಣ ಭಾವದಭ್ರಮೆಯಲ್ಲಿ ಸುಳಿವನಲ್ಲಶರಣ ಮನದಮರೆವೆಯಲ್ಲಿ ಮಗ್ನನಲ್ಲ ಶರಣ ಕಂಗಳಕತ್ತಲೆಯಲ್ಲಿ ಸುತ್ತಿಬೀಳುವನಲ್ಲ ಶರಣ ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವಲ್ಲ ಶರಣ ಪರತರಲಿಂಗದ ಬೆಳಗಿನೊಳಗೆ ಬೆರದುಕಿರಹಿಲ್ಲದೆ ಬೆಳೆಗುವ ಪರಮಗಂಭೀರ ಶರಣನ ನಿಲುವಿಗೆ ನಮೋನಮೋ ಯೆಂಬೆನಯ್ಯಾ ॥ ಅ ॥ ೨ ॥ ಸತ್ಯಸದಾಚಾರ ನೈಷ್ಠ ನಿಮ್ಮಶರಣ ನಿತ್ಯನಿರುಪಮನಯ್ಯಾ ನಿಮ್ಮಶರಣ ಮುಕ್ತಿವಿಚಾರನಯ್ಯಾ ನಿಮ್ಮಶರಣ ಮುಕ್ತಿಮೂಲಿಗನಯ್ಯಾ ನಿಮ್ಮಶರಣ ಅಖಂಡೇಶ್ವರನಿಮ್ಮಶರಣನಘನವ ನೀಬಲ್ಲಿರಲ್ಲದೆ ಈ ಲೋಕದ ಕುನ್ನಿಮಾನವತ್ತಬಲ್ಲರ॥೩॥ ಲಿಂಗದನಡೆಯಂತೆ ನಡವನಲ್ಲದೆ ಲೋಕದನಡೆಯಂತೆ ನಡೆವನಲ್ಲನೋಡಾ ಶರಣರ ಲಿಂಗದನುಡಿಯಂತೆ ನುಡಿವನಲ್ಲದೆ ಲೋಕದನುಡಿಯಂತೆ ನುಡಿವನಲ್ಲನೋಡಾ ಶರಣ ಲಿಂಗದಮಚ್ಚಿನಲ್ಲಿ ಸುಳಿವನಲ್ಲದೆ ಲೋಕದಮಚ್ಚಿನಲ್ಲಿ ಸುಳಿವನಲ್ಲನೋಡಾ ಶರಣ ಲಿಂಗದವ್ಯವಹಾರದಲ್ಲಿರುತ್ತಿಹನಲ್ಲದೆ ಲೋಕದ ವ್ಯವಹಾರದಲ್ಲಿರುತ್ತಿರಿನೋಡಾ ಶರಣ ಯಿಂತಿಷ್ಟಲಿಂಗಾಂಗ ಸಮರಸವಸರದ ಶಿವಶರಣರ ಶಿವನನ್ನಬೇಕಲ್ಲದೆ ಲೋಕದವನೆಂದು ನುಡಿವಸೂತಕದೇಹಿಗಳಿಗೆ ಪಾತಕತಪ್ಪದಯ್ಯಾ ॥ ಅ ॥ ೪ ॥ ಅಂತಿನಶರಣರಿಗೆ ಯಿಂದಿನಶರಣರು ಸರಿಮಿ

ಲ್ಲವೆಂದ ನುಡಿವಸಂದೇಹಸೂತಕ ಹೊಲೆಯರವೂತು ಕೇಳಲಾಗದು ಅದೆಂತೆಂದೊಡೆ, ಕಾಮುಕಾರಿಯನೆಂದರಿಯದೆ ಕನ್ನಡಿಗೆಮೂಗಿಲ್ಲೆಂಬಂತೆ ತಾಕಣಿಯಲಾದರೆ ಅಂಗಣಡೊಂಕೆಂಬಂತೆ ತನ್ನನಡೆನುಡಿಸಿದ್ಧಾಂತಸಲ್ಲದೆ ಇತರರಹಳಿವ ಅಧಮಮೂವಿಗರ ಸೇನೆಂಬೆನಯ್ಯಾ ಅಷ್ಟಾವರ್ನ ಪಂಚಾಚಾರವು ಅದೊಂದುಪರಿ ಇಂದೊಂದುಪರಿ ಷಡುಸ್ಥಲಸ್ವಾನುಭಾವ ಅದೊಂದ,ಪರಿ ಇದೊಂದುಪರಿಯೆ ಭಕ್ತಿವಿರಕ್ತುಪರತಿಜ್ಞಾನವೈರಾಗ್ಯ ಅದೊಂದುಪರಿ ಯಿಂದೊಂದುಪರಿಯೆ ನಡೆನುಡಿಸಿದ್ಧಾಂತವಾದ ಶರಣನಘನವು ಅದೊಂದುಪರಿ ಯಿಂದೊಂದುಪರಿಯೆ ಇಂತೀ ವಿಚಾರವನರಿಯದೆ ಪರಸಮಯದಾನಾದರು ಆಗಲಿ ಶಿವಸಮಯದವನಾದರು ಆಗಲಿ ಮರ್ಮಗೆಟ್ಟುನಡೆವ ಕರ್ಮಜೀವಿಗಳ ಬಾಯಲ್ಲಿ ಬಾಳ್ವಳಸುರಿಯದೆ ಮೂಣ್ಪವೆಹೇಳಾ ॥ ಅ ॥ ೫ ॥ ಶರಣಸ್ಥಲದ ಕುರುಹಿನಮಾರ್ಗವನರಿಯದೆ ನಾನುಶರಣ ತಾನುಶರಣನೆಂದುನುಡಿವ ಕರ್ಮಜೀವಿಗಳ ಮುಖವನೋಡಲಾಗದು ಅದೇನುಕಾರಣವೆಂದರೆ ತಾವುಶರಣರಾದಡೆ ತಮ್ಮಚಿತ್ತಿನಕೊನೆಯಲ್ಲಿ ಮುಸುಕಿದಕತ್ತಲೆಯನೆಲ್ಲಾ ಕಳೆಯಬೇಕು ತಾವು ಶರಣರಾದೊಡೆ ತಮ್ಮ ಆತ್ಮವಸ್ತುತ್ತಿದ ಅಷ್ಟಮದಳಂಗಳ ಕತ್ತಲೆಗಡಿಯಬೇಕು ತಾವುಶರಣರಾದೊಡೆ ತಮ್ಮಲಿಂಗದಲ್ಲಿ ಅತ್ತಿತ್ತಹರಿದಾಡುವ ಮನವಹಿಡಿತಂದು ನಿಕ್ಷೇಪವಮಾಡಬೇಕು ತಾವು ಶರಣರಾದೊಡೆ ನಿತ್ಯಾನಿತ್ಯವನರಿದು ತತ್ವಾತತ್ವಗಳ ವ್ಯತಿಕರಿಸಿ ಮಹಾಜ್ಞಾನ ವೊತ್ತದಲ್ಲಿ ಸುಳಿಯಬೇಕು ಇಂತೀ ಬೇದವನರಿಯದೆ ತುತ್ತುಸವಿದುಂಡು ಮರ್ತ್ಯದವಿಷಯ ಪ್ರಪಂಚಸುಖದಲ್ಲಿ ವ್ಯವಹರಿಸಿ ಅಜ್ಞಾನಕ್ಕೆ ತಲೆಯಲ್ಲಿ ಶರಿಯಸಿಕ್ಕಿ ಮುಂದುಗಾಣದೆ ಮುಕ್ತಿಯಹೊಳಬುತಪ್ಪಿ ಸುತ್ತು ಹೋಗುವವ್ಯಥ ಪ್ರಾಣಿಗಳಕಂಡು ನಗುತಿರ್ದನು ನೋಡಾ ನಮ್ಮ ಅ ॥ ೬ ॥ ಸತ್ತುಹೋಗುವರೆಲ್ಲ ಸ್ವರ್ಗಪಥಸ್ತರೇ ಅಲ್ಲಲ್ಲಾ ಕೈದುವಹಿಡಿದವರಲ್ಲಾ ಮಹಾಕಲಿಗಳೇ ಅಲ್ಲಲ್ಲಾ ಲಿಂಗವಧರಿಸಿದವರೆ

ಲ್ಲಾ ಲಿಂಗಪ್ರಾಣಿಗಳೆ ಅಲ್ಲಲ್ಲಾ ಅದೇನುಕಾರಣವೆಂದಡೆ ಕಪಿಯ ಕೈ ಯಲ್ಲಿ ರತ್ನವಕೊಟ್ಟರೆ ಅದುಕಡಿದುನೋಡಿ ಕಲ್ಲೆದಂಬೆ ಸೂಟುವ ದಲ್ಲದೆ ಆ ರತ್ನದ ದಿವ್ಯಬೆಳಗ ನರಿವುದಯ್ಯಾ ಇಂತೀ ದುಷ್ಟದಂತೆ ಯಿದ್ದ ಜೀವಿಗಳ ಕಯ್ಯಲ್ಲಿ ದೊಡ್ಡವಿರ್ದಡೇನು ಆಲಿಂಗದಲ್ಲಿ ಮಹಾ ಘನಪರಿಮ ಕಳೆಯನರಿಯದಬಳಿಕ ಅದುದೊಡ್ಡ ಕಲ್ಲಿನಂತೆ ಅಯ್ಯಾ ಅ ॥ ೭ ॥ ಪುರುಷರಿಲ್ಲದ ಸ್ತ್ರೀಯರಿಗೆ ಗರ್ಭವಿನ್ನೆಲ್ಲಿಹುದು ಬೀ ಜವಿಲ್ಲದಬಳಿಕ ವೃಕ್ಷವಿನ್ನೆಲ್ಲಿಹುದು ಹಾಲಿಲ್ಲದಬಳಿಕ ತುಪ್ಪವಿನ್ನೆ ಲ್ಲಿಹುದು ಪರಮಶ್ರೀಗುರವಿನ ವುಪದೇಶವಿಲ್ಲದ ಲಿಂಗಜಡಪಾಷಾಣ ಕ್ಕೆ ಪರಮಶಿವನಕಳೆ ಯಿನ್ನೆಲ್ಲಿಹುದು ಇದುಕಾರಣ ಉಪದೇಶವಿಲ್ಲದ ಲಿಂಗವು ಜಡಪಾಷಾಣವು ಅದರನ್ನ ಅನಂತಕೋಟಿವರುಷ ಪೂಜೆ ಯಮಾಡಿದರು ವ್ಯರ್ಥವಲ್ಲದೆ ಸಾರ್ಥಕವಿಲ್ಲನೋಡಾ ಇಂತೀಭೇದ ವನರಿಯದೇ ಮೂಢಮತಿಯಿಂದ ಜಡಪಾಷಾಣವ ಪೂಜಿಸಿ ಈಷ ಣತ್ರಯವೆಂಬ ಸಂಕೋಲೆಯನಿಕ್ಕಿ ಬಂದನವಡೆದು ಭವದಲ್ಲಿಘಾಸಿ ಯಾಗುವಹೇಸಿ ಮೂಳರಕಂಡು ನಾಚಿತಯ್ಯಾ ಯನ್ನಮನವು ॥ಅ॥ ೮ ॥ ಗುರುದೀಕ್ಷೆಯಿಲ್ಲದ ಲಿಂಗವು ಧರೆಯೆಕಲ್ಲೆಂದೆನಿಸಿತ್ತು ಗುರು ದೀಕ್ಷೆಯಿಲ್ಲದನರನು ಶರಣನಸಮಯಕ್ಕೆ ಹೊರಗೆ ಅದೆಂತೆಂದೊಡೆ, ಸುಟ್ಟಮಡಿಕೆಯಲ್ಲಿ ನೀರುತುಂಬಿದಡೆ ಥಿಟವಾಗಿನಿಲ್ಲುವದಲ್ಲದೆ ಹಸಿ ಯಮಡಿಕೆಯಲ್ಲಿ ನೀರುತುಂಬಿದರೆ ದಿಟವಾಗಿನಿಲ್ಲುವದೆಹೇಳಾ ಇದು ಕಾರಣ ಗುರುದೀಕ್ಷೆಯಿಲ್ಲದವನ ಸುಜ್ಞಾನಿಯಾದರೂ ಅವನಜ್ಞಾ ನವು ಪ್ರಯೋಜನಕ್ಕೆಬಾರದು ಅವನಷ್ಟುಕ್ರಿಯದ ನಾಚರಿಸಿದರು ಅವನಕ್ರಿಯವು ನಿಷ್ಫಲವುನೋಡಾ ॥ ಅ ॥ ೯ ಗುರಶಿಷ್ಯಸಂಬಂಧ ವೆಂದಡೆ ಹೇಳುವೆಕೇಳಿರೋ ಸದ್ಭಕ್ತ ಶರಣಜನಂಗಳೆಲ್ಲರು ಶ್ರೀಗು ರುಶಿಷ್ಯರು ಉಪದೇಶವಮಾಡುವಕಾಲದಲ್ಲಿ ಶಿಷ್ಯನಸ್ಥೂಲತನುವು ಸೂಕ್ಷ್ಮತನುವು ಕಾರಣತನುವೆಂಬ ತನುತ್ರಯಗಳಲ್ಲಿ ಮುಸುಕಿದ ಅಣವಮಲ ಮಾಯಾಮಲ ಕಾರ್ಮಿಕಮವೆಂಬ ಮಲತ್ರಯಗಳಕ

ಳಿದು ಮಾಯಾಪ್ರಕೃತಿಕಾಯದ ಪೂರ್ವಾಶ್ರಯವನ್ನು ಚಿದಾಗ್ನಿಯಿಂದಸುಟ್ಟು ಚಿತ್ಕಾಯವೆಂದೆನಿಸಿ ಆ ಚಿತ್ಕಾಯಸ್ವರೂಪವಾದ ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ. ಶ್ಲೋ॥ ಯಥಾಕುಲತಥಾ ಭಾವೋ ಯಥಾಭಾವಸ್ತಥಾಮನಃ । ಯಥಾಮನ ಸ್ತಥಾದೃಷ್ಟಿ ಯಥಾದೃಷ್ಟಿಸ್ತಥಾಸ್ಥಲ ॥ ೧ ॥ ಯೆಂಬ ಆಗಮೋಕ್ತವಾಗಿ ಆ ಶಿಷ್ಯನ ಪಶ್ಚಿಮದೇಶದಲ್ಲಿ ಬೆಳಗುತಿರ್ದ ನಿತ್ಯನಿರಂಜನ ಪರಮಕಳೆಯನ್ನು ಧ್ಯಾನಿಸಿ ಭಾವಸ್ಥಳಕ್ಕೆತಂದು ಆ ಭಾವಸ್ಥಳದಿಂದ ಮನಸ್ಥಳಕ್ಕೆತಂದು ಆಮನಸ್ಥಳದಿಂದ ದೃಷ್ಟಿಸ್ಥಳಕ್ಕೆತಂದು ಆ ದೃಷ್ಟಿಸ್ಥಲದಿಂದ ಕರಸ್ಥಲಕ್ಕೆತಂದು ಆಕರಸ್ಥಲದಿಂದ ಸಾಕಾರಮೂರ್ತಿಯಲ್ಲಿತುಂಬಿಸಿ ಯಿಷ್ಟಲಿಂಗವೆನಿಸಿ ಕರಸ್ಥಲದಲ್ಲಿ ಮೂರ್ತಿಗೊಳಿಸಿ ಆಲಿಂಗಕ್ಕೆ ಜಂಗಮಪಾದತೀರ್ಥ ಪ್ರಸಾದವನೆ ಪ್ರಾಣಕಳೆಯುಂಡರ್ಪಿರಿ ಮತ್ತು ಯಿಷ್ಟಲಿಂಗವೇ ಆನಿಷ್ಟಪಂಚಕಗಳೆಂಬಕ ತಲೆಯು ನೋಡಿಸುವದಕ್ಕೆ ಚಾತುರ್ಯವೆಂದು ನಂಬುಗೆಯುಗೊಳಿಸಿ ಮತ್ತ ಮಾವಿಷ್ಟಲಿಂಗದಲ್ಲಿ ವೃತಕಟಿ, ವರ್ತುಳ, ಗೋಮುಖ, ನಾಳ, ಗೋಳಕವೆಂಬ ಆರುಸ್ಥಲಗಳತೋರೆ ಆ ಆರುಸ್ಥಲಂಗಳಲ್ಲಿ ನಕಾರ, ಮಕಾರ, ಶಿಕಾರ, ವಕಾರ, ಯಕಾರ, ಓಂಕಾರವೆಂಬ ಆರುಪ್ರಣವುಗಳನ್ನು ಬೋಧಿಸಿ ಆ ಆರುಪ್ರಣಮಂಗಳನೆ ಆಚಾರಲಿಂಗ ಗುರುಲಿಂಗ ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಂಗಳೆಂಬ ಆರುಲಿಂಗಂಗಳೆಂದರ್ಪಿಸಿ ಆ ಆರುಲಿಂಗಂಗಳಿಗೇ ಘ್ರಾಣ ಜಿಹ್ವನೇತ್ರ ತ್ವಕ್ಕು, ಶ್ರೋತ್ರ, ಹೃದಯವೆಂಬ ಆರು ಇಂದ್ರಿಯಂಗಳನೆ ಆರುಮುಖಂಗಳೆಂದು ತಿಳುಸಿ ಆ ಮುಖಂಗಳಿಗೆ ಗಂಧ, ರುಚಿ, ರೂಪು, ಸ್ಪರ್ಶನ, ತೃಪ್ತಿ, ಎಂಬಾರು ಪದಾರ್ಥಗಳನ್ನು ಶ್ರದ್ಧಾ, ನೈಷ್ಟಿಕಾ ಸಾವಧಾನ, ಅನುಭಾವ, ಆನಂದ, ಸಮರಸವೆಂಬಾರು ಭಕ್ತಿಗಳಿಂದರ್ಪಿಸಿ ಸಕೀಲವ ತೋರಿಸಬಲ್ಲಾತನೇ ಗುರುವು ಆಗುರುವಿನಕಾರುಣ್ಯದಿಂದ ಪಡದಂಥಾ ಯಿಷ್ಟಲಿಂಗವನ್ನು ಕರಮನಭಾವ ಮಂಟ

ವದಲ್ಲಿ ಮೂರ್ತಿಗೊಳಿಸಿ ಸಗುಣಪೂಜೆ ನಿರ್ಗುಣಪೂಜೆ ಕೇವಲನಿ
ರ್ಗುಣಪೂಜೆಯನ್ನೇವೂಡಿ ಆಲಿಂಗದ ಮಹಾಬೆಳಗಿನೊಳಗೆ ತನ್ನಂ
ಗದ ಕಳೆಯನಡಗಿಸಿ ಪುರಿಕರ್ಪೂರ ಸಂಯೋಗದಂತೆ ಅವಿರಳ ಸ
ಮರಸ ವಾಗಿರ್ಪಾತನೆ ಶಿಷ್ಯನು ಯಿಂತೀ ಅರುಹು ಆಚಾರಸನ್ನ
ಹಿತ ಗುರುಶಿಷ್ಯರಿಬ್ಬರು ಬಯಲು ಬಯಲು ಬೆರದಂತೆ ನಿರವಯುವ
ಬ್ರಹ್ಮದಲ್ಲಿ ನಿಷ್ಪತ್ತಿಯ ನೈದಿಪ್ಪರುನೋಡಾ ಯಿಂತೀ ಅರುಹಿನವಿ
ಚಾರವನರಿಯದೆ ಮೂಡುವ ಮೂಟವೆಲ್ಲಾ ಅಜ್ಞಾನಗಡಣವೊಳಗು
ಈ ಅಜ್ಞಾನಗುರುಶಿಷ್ಯರ ವಿಧಿಯಂತಾಯಿತೇದಡೆ ಹುಟ್ಟುಗುರು
ಡನಕೈಯ್ಯ ಕೆಟ್ಟಗುಣವಪಿಡಿದು ಬಟ್ಟೆಯಕಾಣದೆ ಕಮರಿಯಬಿದ್ದು
ಸತ್ತಂತಾಯಿತುಕಾಣಯ್ಯ ॥ ೧೦ ॥ ನೋಡಿದರೊ ನೋಡಿದರೊ
ವೆಂದು ವಿಚಿತ್ರವ ಶಿಷ್ಯನೆಂಬ ಹೆಂಡತಿಯ ಶ್ರೀ ಗುರುವೆಂಬಗಂಡನು
ಹಸ್ತಮಸ್ತಕ ಸಂಯೋಗವೆಂಬ ಕೂಟವಕೂಡಲು ಷಡಕ್ಷರವೆಂಬ
ಮಂತ್ರವೀರ್ಯವು ಚಲಿವೆಯಾಗಿ ಶಿಷ್ಯನೆಂಬ ಹೆಂಡತಿಯ ಕರ್ನವೆಂಬ
ಗರ್ಭಪ್ರವೇಶವಾಗಲು ಮನಬಸುರಾಗಿ ಕಂಗಳೆಂಬ । ಯೋನಿಯಲ್ಲಿ
ಲಿಂಗವೆಂಬ ಮಗುವಂಹಡದು ಅಂಗೈಯೆಂಬ ತೊಟ್ಟಲಲ್ಲಿಕ್ಕಿ ಮಂಗ
ಳಸ್ತೋತ್ರವೆಂಬ ಜೋಗುಳವಂಹಾಡಿ ಅಖಂಡೇಶ್ವರನೆಂಬ ಹೆಸರಿ
ಟ್ಟರುನೋಡಾ ಯಿದುಕಾರಣ ನೀವೆಮಗೆ ಮಗನಾದಿರಿ ನಾನಿಮಗೆ
ತಾಯಾದೆನಯ್ಯಾ ॥ ೧೧ ॥ ಶ್ರೀಇಷ್ಟಗುರುಸ್ವಾಮಿ ಯಿಷ್ಟಲಿಂಗವೇ
ನಿನ್ನಪ್ರಾಣವೆಂದು ನಿರೂಪಿಸಿದೆನು ಆ ನಿರೂಪವನು ಮಹಾಪ್ರಸಾ
ದವೆಂದು ಕೈಕೊಂಡು ಯಿಷ್ಟಲಿಂಗದಲ್ಲಿ ನೈಷ್ಟಿಬೆರಗಾಗಿ ಆಚರಿಸು
ವಲ್ಲಿ ಆ ಯಿಷ್ಟಲಿಂಗದಗೋಳಕವು ತನ್ನಹಸ್ತದಿಂದ ಪರಹಸ್ತದಿಂ
ದಾದರೂ ಕಿತ್ತುಬಂದರೆ ಸಂದೇಹಗೊಳಲಾಗದು ಮರಳಿಮುನ್ನಿ
ನಂತೆ ಅದುಧರಿಸಿಕೊಂಬುವದು ಯಿದುನಿರಾಳದಚ್ಚು ವೀರಶೈವದ
ನಚ್ಚು ಪುರಾತನರಮಚ್ಚು ಸರ್ವಗಣಂಗಳಿಗೆ ಸನ್ಮತವು ಅದಂತೆಂ
ದೊಡೆ ಭೀಮಾಗಮದಲ್ಲಿ ಮಹೇಶ್ವರನವಾಕ್ಯ, ಶ್ಲೋ ॥ ಪಯೋಗಿ

ಶಿವಭಕ್ತಶ್ಚ ನಸಂಖ್ಯವೀರಶೈವನಾಂ । ಪುನರ್ಬಂಧತದಾಕೃತ್ಯಾದಲಿ
ಲಿಂಗಂದಾರಯತ್ಸದಾ ॥ ೧॥ ಹಸ್ತೇನಲಿಂಗಹೃಚ್ಛಾತುಪುನರ್ಬಂಧೇ
ನಧಾರಯೇತ್ । ಸಂದೇಹಂನಾಸ್ತಿವೀರಾಣಾಂಯಿತ್ಯಾಹಂಪರಮೇ
ಶ್ವರೀ ॥ ೨ ॥ ಯೆಂಬುದಾಗಿ ಯಿಂತಪ್ಪ ಶಿವನವಾಕ್ಯವನ್ನು ಮೀರಿ
ಸಂದೇಹಗೊಂಡು ಸಾಯುಬೇಕೆಂಬ ಸೂತಕವುನವ ಪಾತಕ ಹೊಲೆ
ಯರ ಮುಖವನೋಡಲಾಗದಯ್ಯಾ ॥ ಅ ॥ ೧೨ ॥ ಶ್ರೀಗುಗು ಕರು
ಣಿಸಿ ಕರಸ್ಥಲಕ್ಕೆಕೊಟ್ಟ ಇಷ್ಟಲಿಂಗವನ್ನು ಶುದ್ಧಶಾಧಾನದಿಂದ ಧರಿ
ಸಿಕೊಂಡು ಲಿಂಗವೇಪತಿ ತಾನೇಸತಿಯೆಂಬ ಭಾವದಿಂದ ಆಚರಿಸು
ವಕಾಲದಲ್ಲಿ ಆಲಿಂಗವು ಮೋಸದಿಂದಪಹರಿಸಿ ಹೋದರೆ ಆರಿಸಿನೋ
ಡಿ ಸಿಕ್ಕಿದಲ್ಲಿ ಸೂಕ್ಷ್ಮವಿಚಾರ ತಿಳಿದು ಧರಿಸಿಕೊಂಬುವದು ಮತ್ತಂ
ಲಿಂಗವುವೃತ್ತ, ಕಟಿ, ವರ್ತುಳ, ಗೋಮುಖ, ನಾಳ, ಗೋಳಕ
ವೆಂಬ ಷಡುಸ್ಥಲಂಗಳಲ್ಲಿ ಭಿನ್ನವಾದಡೆಯು ಕಣ್ಣಿಗೆ ಕಾಣಿಸಿಕೊಳ್ಳದ
ಹೋದಡೆಯು ಆ ಲಿಂಗಕ್ಕೆ ಪ್ರಾಣತ್ಯಾಗವಮಾಡಬೇಕಲ್ಲದೆ ಅಲ್ಲಿ ಹಿಂ
ದುಮುಂದು ನೋಡಲಾಗದು ಇದಕ್ಕೆ ಶಿವನವಾಕ್ಯವೇ ಸಾಕ್ಷಿ ॥
ಶ್ಲೋ ॥ ಗುರುನಾದುತ್ತಲಿಂಗಂತು ಸಾವಧಾನೇನ ಧಾರಯೇತ್ ।
ಪ್ರಮಾದಾತ್ಪತಿತೇಲಿಂಗಂ ಪ್ರಾಣೇನಪಿಪರಿತ್ಯಜೇತ್ ॥ ವೃತ್ತಿನಾ
ಸಮಂಪೀಠಂ ಗೋಳಕಂಮಧ್ಯಗೋಮುಖಂ । ಭಿನ್ನಷಡ್ವಿಧಸ್ಥಾ
ನೇನ ತಥ ಪ್ರಾಣ್ಣಂ ಶರಣಂತ್ಯಜೇತ್ ॥ ೨ ॥ ಎಂಬುದಾಗಿ ಇಂತಪ್ಪ
ಲಿಂಗಕ್ಕೆ ಐಕ್ಯವಾದ ಶರಣನನೆ ನೀವೆಂದು ಕಾಂಬೆನಯ್ಯಾ ॥ ಅ ॥ ೧೩ ॥
ಸದ್ಗುರುಕಾರುಣ್ಯವಪಡೆದು ಲಿಂಗಾಂಗಸಮರಸವುಳ್ಳಂಥಾ ವೀರಶೈವ
ಭಕ್ತಮಾಹೇಶ್ವರ ರೆನಿಸಿಕೊಂಡಬಳಿಕ ತಮ್ಮಂಗದ ಮೂಲಣಲಿಂಗವು
ಷಡುಸ್ಥಾನಂಗಳಲ್ಲಿ ಭಿನ್ನಪವಾದಡೆ ಆ ಲಿಂಗದಲ್ಲಿ ತನ್ನಪ್ರಾಣವ ಬಿ
ಡಬೇಕಲ್ಲದೆ ಮರಳಿ ಭಿನ್ನವಾದ ಲಿಂಗವ ಧರಿಸಲಾಗದು ಅದೇನು
ಕಾರಣವೆಂದರೆ ತಾನು ಸಾಯಲಾರದ ಜೀವದಾಶೆಯಿಂದ ಆ ಭಿನ್ನ
ವಾದ ಲಿಂಗವಧರಿಸಿದರೆ ಮುಂದೆ ಚಂದ್ರಸೂರ್ಯರುಳ್ಳನಕಾ ನರಕಸ

ಮುದ್ರದಲ್ಲಿಬಿದ್ದು ಮುಳಿಗ್ಯಾಡುವ ಪ್ರಾಪ್ತಿಯುಂಟಾದಕಾರಣ ಇದಕ್ಕೆಸಾಕ್ಷಿ ಸೂಕ್ಷ್ಮಾಗಮೆ. ಶ್ಲೋ ॥ ಶಿರೋನಿರ್ಗೊ ಮುಖಂಚ ಮಧ್ಯವೃತ್ತಂಚಪೀಠಕಂ । ಷಟ್‌ಸ್ಥಾನ ಛಿದ್ರಯೋಗೇಚತಲ್ಲಿಂಗ ನೈವಧಾರಯೇತ್ ॥ ೧ ॥ ತಥಾಪಿಧಾರಣಾಧ್ಯಾನಿ ರೌರವಂನರಕಂ ವ್ರಜೇತ್ ॥ ೨ ॥ ಇಂತಪ್ಪ ನರಕಜೀವಿಗಳ ಯೆನಗೊಮ್ಮೆ ತೋರದಿರಯ್ಯಾ ॥ ಅ ॥ ೧೪ ॥ ಸಕಲಗುಣಂಗಳಸಾಕ್ಷಿಯಾಗಿ ಶ್ರೀ ಗುರುದೇವನು ಕರಸ್ಥಲಕ್ಕೆ ಕರುಣಿಸಿಕೊಟ್ಟ ಯಿಷ್ಟಲಿಂಗದಲ್ಲಿ ನಿಷ್ಟೆನಿಬ್ಬರಕಾಗಿ ಶರಣಸತಿ ಲಿಂಗಪತಿಯೆಂಬ ಭಾವವಬಿಡದೆ ಆಚರಿಸುವಲ್ಲಿ ವಾಸರವಿಹೋದಡೆ ತನ್ನ ಪ್ರಾಣತ್ಯಾಗವ ಮಾಡಬೇಕಲ್ಲದೇ ಜೀವದಕಕ್ಕುಲಾತಿಯಿಂದ ಉಳಿಯಲಾಗದು ಮರಳಿ ಮತ್ತೊಂದುಲಿಂಗವಧರಿಸಲಾಗದು ಅದೇನುಕಾರಣವೆಂದರೆ ಕಾಷ್ಟದಲ್ಲಿ ಅಗ್ನಿಯಿರ್ಪುದಲ್ಲದೆ ಕರಿಗೊಂಡದ್ದಲಲ್ಲಿ ಯಲ್ಲಿರ್ಪುದೆ ಮುನ್ನ ಗುರುವುಪದೇಶವಿಲ್ಲದ ದೇಹದಲ್ಲಿ ಶಿವಕಳೆಯಿರ್ಪುದೇ ಗುರುವುಪದೇಶವಾಗಿ ಲಿಂಗವ್ರತವ ನಾಚರಿಸಿ ಮರಳಿ ಲಿಂಗಭಾಹ್ಯ ವ್ರತಗೇಡಿಯಾದ ದೇಹದಲ್ಲಿ ಶಿವಕಳೆ ಯಿನ್ನೆಲ್ಲಿಹುದು ಆ ಶಿವಕಳೆಯಿಲ್ಲದ ದೇಹಕ್ಕೆ ಮರು ಲಿಂಗಧಾರಣವಾದಡೇನು ಆಲಿಂಗ ಪ್ರೇತಲಿಂಗ ಆತಭೂತಪ್ರಾಣಿ ಆಲಿಂಗ ಪೂಜೆ ಯೆಷ್ಟುದಿನಮಾಡಿದಡೇನು ಮುಂದೆಮುಕ್ತಿಯಿಲ್ಲ ಅವನಿಗೆ ರಾಜನರಕವೇ ಪ್ರಾಪ್ತಿಯಾಗಿರ್ಪುದು ನೋಡಾ ಇದಕ್ಕೆ ಸಾಕ್ಷಿ ॥ ಶ್ಲೋ ॥ ಲಿಂಗಬಾಹ್ಯವ್ರತಂಭ್ರಷ್ಟಂ ಪುನರ್ಲಿಂಗಂತುಧಾರಯೇತ್ । ತತ್ಪೂಜಾನಿಷ್ಫಲಂಚೈವ ರೌರವಂನರಕಂವ್ರಜೇತ್ ॥ ೧ ॥ ಪ್ರೇತಲಿಂಗೇನಸಂಸಾರಿ ಭೂತಪ್ರಾಣೇನಜಾಯತೆ ॥ ಪ್ರಭಾತೆತನ್ಮುಖಂ ದೃಷ್ಟ್ವಾ । ಕೋಟಿಜನ್ಮೇನಸೂಕರಃ ॥ ೨ ॥ ಎಂಬುದಾಗಿ ಇಂತೆಪ್ಪ ಲಿಂಗಬಾಹ್ಯ ವ್ರತಭ್ರಷ್ಟನಮುಖವ ಪ್ರಾತಃಕಾಲದಲ್ಲಿ ನೋಡಿದವರಿಗೆ ಕೋಟಿವ್ಯಾಳ್ಯೆ ಶುನಿಸೂಕರ ಬಸುರಲ್ಲಿ ಬರ್ಪುದು ತಪ್ಪದು ನೋಡಾ ॥ ೧ ॥ ಲಿಂಗಭಿನ್ನ ಭಿನ್ನವಾದರೆ ಸ್ಥೂಲಸೂಕ್ಷ್ಮವನ

ರಿಯಬೇಕು ಸ್ಥೂಲವಾವುದು ಸೂಕ್ಷ್ಮವಾವುದೆಂದಡೆ ಈ ಲಿಂಗಕ್ಕೆ ಪೀಠದಲ್ಲಿ ಅಕ್ಕಿಯತೂಕ ಮೇಣವನೊತ್ತಿ ನೋಡಲು ವಳಗಾದಡೆ ಸ್ಥೂಲ ಆ ಮೇಣ ಹೆಚ್ಚಾದಡೆ ಸೂಕ್ಷ್ಮ ಮತ್ತಾ ಲಿಂಗದ ವರ್ತುಲ ಗೋಮುಖದಲ್ಲಿ ಅರ್ಧ ಅಕ್ಕಿ ಸರಿಭಾಗವೂಡದಲ್ಲಿ ಗಿರ್ಧಯೆನಿಸಿತ್ತು ಆ ಗಿರ್ಧ ಅಕ್ಕಿಯತೂಕ ಮೇಣವನೊತ್ತಿ ನೋಡಲು ವಳಗಾದಡೆ ಸ್ಥೂಲ ಹೆಚ್ಚಾದಡೆ ಸೂಕ್ಷ್ಮ ಮತ್ತಾ ಲಿಂಗದ ಮಸ್ತಕವಿಂದ ಕೆಳಗಣ ಪೀಠವಪರಿಯಂತ್ರವಾಗಿ ಕೂದಲು ಮುಳುಗುವಷ್ಟು ಸೀಳಿದಡೆ ಸ್ಥೂಲ ಆ ಕೂದಲು ಹೆಚ್ಚಾದಡೆ ಸೂಕ್ಷ್ಮ ಇಂತೀ ಉಭಯರ್ಧವಳಿದು ಸೂಕ್ಷ್ಮವಾದರೆ ಆ ಲಿಂಗದಲ್ಲಿ ಐಕ್ಯವಾಗಬೇಕು ಅದೆಂತೆಂದಡೆ, ಶ್ಲೋ॥ ವೀಹೇಯೆಧಾರ್ಧಂಪ್ರಚ್ಛನ್ನಂ। ಕೇಶಾಣಗೃಹ್ಯಪದೂಏರಃ॥ ಪೀಠಾವಿಲಿಂಗಪರಿಯಂತಂ। ತ್ಯಜೇತ್ಪ್ರಾಣಂನಗಾತ್ಮಜ॥ ೧॥ ತಂಡುಲಾರ್ಧಪೀಠಮಧ್ಯೆ। ತೆಸರ್ಧಂ ವೃತ್ತಗೋಮುಖ॥ ಶಿಲಮೂತ್ರೇಣಯೇಲಿಂಗ। ತದಾವಿತ್ಯತ್ಯಜೆದಸು॥ ೨॥ ಎಂಬುದಾಗಿ ಇಂತಪ್ಪ ಲಿಂಗೈಕ್ಯವಾದ ಮಹಾಶರಣರು ಮೂರುಲೋಕಕ್ಕೆ ನಿಲುಕರುನೋ ಅಖಂಡೇಶ್ವರಾ॥ ೧೬॥ ಎಂಭತ್ತುನಾಲ್ಕುಲಕ್ಷ ಜೀವರಾಸಿ ಮಂಡಲದೊಳಗೆ ಒಂದೊಂದುಜನ್ಮದೊಳಗೆ ಸತ್ತುಹುಟ್ಟಿ ಸುತ್ತಿಸುಳಿದು ಸುಖದುಃಖಂಗಳಿಂದ ನೊಂದು ತೊಳಲಿಬಳಲುವ ಜೀವನಿಗೆ ಬಡವಂಗೆ ಕೊಡಹೊನ್ನು ದೊರಕೊಂಡಂತೆ ಮನುಷ್ಯದೇಹವು ದೊರಕೊಂಡಲ್ಲಿ ಶಿವಕೃಪೆಯಿಂದ ಗುರುಕಾರುಣ್ಯವಾಗಿ ಅಂಗದಮೇಲೆ ಲಿಂಗಧಾರಣವಾದಬಳಿಕ ಆಲಿಂಗದಮೇಲೆ ಪ್ರಾಣ ಪ್ರತಿಷ್ಠೆಯಮೂಡಿ ನಿಮಿಷಾರ್ಧ ವಗಲದಿರಬೇಕು ಇಷ್ಟುಳ್ಳಾತಂಗೆ ಶಿವನಲ್ಲಿಸವಲ್ಲದೆ ಅಂತರಂಗದಲ್ಲಿ ಪ್ರಾಣಲಿಂಗದ ಪರಿಪೂರ್ಣಬೆಳಕುಕಂಡೆವು ಇಷ್ಟಲಿಂಗದ ಹಸ್ತಗ್ಯಾತಕ್ಕೆಂದು ಆ ಇಷ್ಟಲಿಂಗವ ಕಡಿಗೆ ತೆಗದುಹಾಕಿ ಲಿಂಗಬಾಹ್ಯನಾಗಿ ವ್ರತಗೇಡಿಯೂದಾತಗೆ ಒಂದುಕೋಟಿ ಕಲ್ಪಾಂತರವು ನರಕದೊಳಗಿದ್ದು ಅಲ್ಲಿಂದ

ಚೌರ್ಯಾಶಿ ಲಕ್ಷಜನ್ಮದಲ್ಲಿ ಬಂಧನಂಬಡುತಿರ್ಪನಲ್ಲದೆ ಶಿವನಲ್ಲಿ ಅವಿರಳ ಸಮರಸವಿಲ್ಲನೋಡಾ ಅದೆಂತೆಂದೊಡೆ, ಶ್ಲೋ॥ ಅಂಗೇಚ ಲಿಂಗಸಂಬಂಧ ಲಿಂಗೇಚಪ್ರಾಣಸಂಯುತಂ । ನಿಮಿಷಾರ್ಧವಿಯೋಗೇನ ನರಕಕೋಟಿಲಮಕ್ಷಯ ॥ ೧ ॥ ಎಂಬುದಾಗಿ ಇಂತಪ್ಪ ಅದ್ವೈತ ಹೀನಮಾನವರ ಯೆನಗೊಮ್ಮೆ ತೋರದಿರಯ್ಯ ॥ ೧೭ ॥ ಶ್ರೀ ಗುರುವಿನಕರ ಗರ್ಭದಲ್ಲಿ ಉದಯವಾದ ಶರಣಸತಿ ನಾನು ಶ್ರೀ ಗುರುವಿನ ಹೃದಯಗರ್ಭದಲ್ಲಿ ಉದಯವಾದ ಲಿಂಗಪತಿಗೆ ಎನ್ನ ಮದುವೆಯ ಮಾಡುವಕಾಲದಲ್ಲಿ ಸಹಸ್ರದಳ ಕಮಲವೆಂಬ ಸಾವಿರಕಂಭಗಳ ಮಂಟಪವರಚಿಸಿ ಆ ಮಂಟಪದ ಮಧ್ಯದಲ್ಲಿ ಪಂಚಪತ್ರವೆಂಬ ಪಂಚಮುದ್ರೆಯ ರಂಗವಾಲೆಯನಿಕ್ಕಿ ಪಂಚಮುದ್ರೆಯೆಂಬಾ ಪಂಚಪ್ರಣವವೆಂಬ ಪಂಚಕಲಶವಮಾಡಿ ಆ ಪಂಚಕಲಶಗಳಿಗೆ ಸ್ವಾನುಭಾವಜ್ಞಾನವೆಂಬ ಸುರಗಿಯಸುತ್ತಿ ಆ ಮಧ್ಯದಲ್ಲಿ ಯೆನಗೆ ಶೃಂಗಾರವಮಾಡಿದರೆಂತೆನಲು ಸರ್ವಾಚಾರ ಸಂಪತ್ತೆಂಬ ಶೀರೆಯನುಡಿಸಿ ಸಮ್ಯಜ್ಞಾನವೆಂಬ ಕುಪ್ಪಸವತೊಡಿಸಿ ಸದ್ಭಕ್ತಿಯೆಂಬ ಬಳೆಯಧರಿಸಿ ಏಕೋಭಾವ ನೈಷ್ಟಿಯೆಂಬ ತಾಳಿಯಕಟ್ಟಿ ನಿಜಮುಕ್ತಿಯೆಂಬ ಮೂಗುತಿಯನಿಟ್ಟು ಶಿವಮಂತ್ರವೆಂಬ ಕರ್ನದೋಲೆಯನಿಟ್ಟು ಸತ್ಕ್ರಿಯವೆಂಬ ಆಭರಣವನಿಡಿಸಿ ಪರಮೇಶ್ವರನೆಂಬ ಪ್ರಕಾಶದ ಚಿದ್ವಿಭೂತಿಯನೆತಂಘು ಎನ್ನ ಲಲಾಟದಲ್ಲಿ ಪಟ್ಟವಗಟ್ಟಿ ಸತಿಸಂಗವಗಲದಿರೆಂದು ಎನ್ನ ಪತಿಯ ಶರಗತಂದು ಎನ್ನ ಶರಗಿಗೆಕೂಡಿಸಿ ಷಡುಸ್ಥಲ ಬಾಹ್ಯದಗಂಟಿಕ್ಕಿ ಪತಿಭಕ್ತಿ ಅಗಲದಿರೆಂದು ಯೆನ್ನ ಮುಂಗೈಯಲ್ಲಿ ಸಕಲಗಣಂಗಳ ಸಾಕ್ಷಿಯಾಗಿ ಬೇರೆದಿನವೀರ ಕಂಕಣವಕಟ್ಟಿ ಜಂಗಮದ ಪಾದತೀರ್ಥಪ್ರಸಾದವೆಂಬ ಭೂಮವಮಾಡಿ ಮದುವೆಯಮಾಡಿದರೆಂದು ಇಂದು ಯೆನಗೆ ಯವ್ವನವಾಯಿತು ಏಳು ನೆಲೆಯಮೇಲುಪ್ಪರಿಗೆಯಮೇಲೆ ಲೀಲೆಯಿಂದ ಕೂಡಿಸುಖಿಸಿರೆಂದು ಯೆನ್ನ ॥ ಅ ॥ ೧೮ ॥ ಎಲೆಶಿವನೇ ನೀನು ಯೆನ್ನ ಮೆಚ್ಚಿ

ಕೈವಿಡಿದ ಕಾರಣ ಯೆಮ್ಮವರು ಸಕಲಗಣಂಗಳ ಸಾಕ್ಷಿಯುಮಾಡಿ
ನಿನಗೆ ಯನ್ನ ಮದುವೆಯುಮಾಡಿಕೊಟ್ಟರು. ನೀನು ಯನ್ನಗಲಿ
ದರೆ ಗುರುದ್ರೋಹಿ ನಾನು ನಿನ್ನಗಲಿದರೆ. ಸಮಯಕ್ಕೆ ಹೊರಗ ಅ
ದೆಂತೆಂದಡೆ, ಮುನ್ನ ಶ್ರೀ ಗುರುಸ್ವಾಮಿಯನ್ನ ಪ್ರಾಣದೊಳಗೆ ನಿ
ನ್ನ ಪ್ರಾಣವ ಹುದುಗಿಸಿ ಯೆಂದೆಂದು ಅಗಲಬ್ಯಾಡಿರೆಂದು ನಿರೂಪಿ
ಸ್ಸಿದನು ಆ ನಿರೂಪವನ್ನು ಮಹಾಪ್ರಸಾದವೆಂದು ಕೈಕೊಂಡಬಳಿಕ
ನಾವಿಬ್ಬರೂ ಯೆಂದೆಂದಿಗೂ ಅಗಲದಿರಬೇಕಯ್ಯಾ ॥ ೮ ॥ ೧೯ ॥
ಪುರುಷನೆಂದು ಕರವುತಿರ್ಪರು ಜಗವೆಲ್ಲಾ ನಾನು ಪುರುಷನಲ್ಲವ
ಯ್ಯಾ ಅದೆಂತೆಂದೊಡೆ, ಹೊರಗಣಸಾಕಾರವೇ ನೀನು ವಳಗಣ ನಿ
ರಾಕಾರವೇನಾನು ಮತ್ತು ಹೊರಗಣ ಸಾಕಾರ ಪುರುಷರೂಪಾಗಿ
ನೀವು ವೊಳಗಣ ನಿರಾಕಾರವೇ ಸ್ತ್ರೀರೂಪುನಾನಾಗಿ ನಿಮಗೆ
ರಾಣಿವಾಸವಾದೆನಯ್ಯಾ ಗಂಡನುಳ್ಳ ಗರ್ತಿಯರೆಲ್ಲರು ನಿಮ್ಮಗಂಡರ
ಕುರುಹು ಹೇಳಿರೆ ನೀವರಿಯದಿದ್ದರೆ ನಾನು ನನ್ನಗಂಡನಕುರುಹು
ಹೇಳೇನುಕೇಳಿರೆ ಹೊಳೆವಕೆಂಜಡೆಗಳ ಬೆಳಗುವ ಭಾಳಲೋಚನದ
ಥಳಥಳಿಸುವ ಸುಲಿಪಲ್ಲಿನ ಕಳೆದುಂಬಿನೋಡುವ ಕಂಗಳನೋಟದ
ಸೊಗಸಿಂದನಗುವ ಮುಗುಳ್ನಗೆಯು ರತ್ನದಂತೆಬೆಳಗುವ ರಂಗುದ
ಟ್ಟಿಯು ಚಂಪಕದ ತೆನೆಯಂತೆ ಯಿಂಪಾದನಾಶಿಕದ ಶಶಿಯಂತೆ ಬೆಳ
ಗೆಸೆವ ಕದಪಿನ ಮಿಸುಂಯಡೆಭುಜದ ಕಂಠದಶೃಂಗಾರದ ಕುಕ್ಷಿಯ
ಸುಳಿದೆಗದನಾಭಿಯು ತೊಳಪತೊಡೆಯು ಮಣಿವಾದದಹರಡಿನ ನಕ್ಷ
ತ್ರದಂತೆ ಹೊಳೆವವಚ್ಚೆಯು ಚರಣಕಮಲದಲ್ಲಿ ಹರಿಯುನ ಯೆನದ
ಕುರುಹಿನ ಸಕಲಸೌಂದರ್ಯವ ನೊಳಕೊಂಡು ರವಿಕೋಟಿ ಪ್ರಭೆ
ಯಂತೆ ರಾಜಿಸುವ ರಾಜಾಧಿರಾಜ ನಮ್ಮಯಖಂಡೇಶ್ವರನೆಂಬ ನಲ್ಲ
ನಕುರುಹು ಯಿಂತುಂಟು ಕೇಳಿರವ್ವ ನಲ್ಲನಕಾಣದೆ ತಲ್ಲನಗೊಳುತಿ
ರ್ದು ನೋಡಾ ಯನ್ನಮನವು ಜಾಗ್ರಾವಸ್ಥೆಯಲ್ಲಿ ನಲ್ಲನಚಿಂತೆ
ಯಿಂದಸುಳಿವುತಿರ್ದೆನವ್ವಾಸ್ವಪ್ನಾವಸ್ಥೆಯಲ್ಲಿ ನಲ್ಲನಚಿಂತೆಯಿಂದೆ

ವ್ಯೆಮರವಿದ್ದೆನವ್ವಾ ಸರ್ವಾವಸ್ಥೆಯಲ್ಲಿ ಯಖಂಡೇಶ್ವರನೆಂಬ ನಲ್ಲನಕೂಡಬೇಕೆಂಬ ಭ್ರಾಂತಿಯಲ್ಲಿ ಬಡವಾಗುತಿದ್ದೆನವ್ವಾ ॥ ೨೨ ॥ ಆತನಾಳಾಪದಿಂದ ಹಗಲಾದಂದಿನರಿಯೆನವ್ವಾ ಆತ ನಾಳಾಪದಿಂದ ಯಿರುಳಾದುದ ನರಿಯೆನವ್ವಾ ಅಖಂಡೇಶ್ವರನೆಂಬ ಪ್ರಾಣದೊಲ್ಲಭನ ಕೂಡಬೇಕೆಂಬ ಭ್ರಾಂತಿಯಿಂದ ಹೋದುದಬಂದುದ ನಾನರಿಯದಿರ್ದೆನವ್ವಾ ॥ ೨೩ ॥ ತನ್ನನಲ್ಲದೆ ಅನ್ಯರನೋಡೆನವ್ವಾ ತನ್ನನಲ್ಲದೆ ಅನ್ಯರಮುಟ್ಟೆನವ್ವಾ ತನ್ನನಲ್ಲದೆ ಅನ್ಯರ ನೆನೆಯ ನವ್ವಾ ತನ್ನನಲ್ಲದೆ ಅನ್ಯರಬಯಸೆನವ್ವಾ ತನ್ನನಗಲಿ ಯಿನ್ನೆಂತು ಬದುವೆನವ್ವಾ ಅಖಂಡೇಶ್ವರನೆಂಬ ನಲ್ಲನಮುಳಿಸು ತಿಳುಹಿರವ್ವಾ ॥ ೨೪ ॥ ಜೀವದವಡಯನಲ್ಲಿ ಜೀವಿಸಲಾರೆನವ್ವಾ ನಿಮಿಷ ನಿಮಿಷಾರ್ಧವಾದರೂ ಬಾಳಲಾರೆನವ್ವಾ ಹೇಳಲಿಂನೇನು ನೋವುಬಂದಿತವ್ವಾ ಕಂಡರೆಹೇಳಿರವ್ವಾ ನನ್ನತಂಗಿಯ ಭಾವನಕರದು ತೋರಿರವ್ವಾ ನಮ್ಮ ಅಖಂಡೇಶ್ವರನೆಂಬ ನಲ್ಲನ ॥ ೨೫ ॥ ಬಾರನೇತಕವ್ವಾ ನಮ್ಮ ಮನೆಯೊತಾ ತೋರನೇತಕವ್ವಾ ತನ್ನದಿವ್ಯರೂಪವ ಬೀರನೇತಕವ್ವಾ ತನ್ನ ಅತಿಸ್ನೇಹವ ಇನ್ನೇನ ಸೈರಿಸುವೆನವ್ವಾ ಇನ್ನುಹ್ಯಾತಾಳುವೆನವ್ವಾ ತನುತಾಪಗೊಳುತಕೆ ಮನತಲ್ಲಣಗೊಳುತ್ತದೆ ಅಖಂಡೇಶ್ವರನೆಂಬ ನಲ್ಲನತೋರಿಸಿ ಯನ್ನಪ್ರಾಣವ ನುಳುಹಿಕೊಳ್ಳಿರವ್ವಾ ॥ ೨೬ ॥ ಝುಲ್ಲುಝುಲ್ಲಂದಡೆ ನಲ್ಲಬರುತ್ತಾನೆಂದು ಯೆಲ್ಲಾಹಾದಿಯ ಮೆಟ್ಟನೋಡುತಿದ್ದೆನವ್ವಾ ನಲ್ಲನಸೊಲ್ಲುಲಾಲಿಸಿ ಕೇಳುತಿದ್ದೆನವ್ವಾ ಆಖಂಡೇಶ್ವರನೆಂಬ ನಲ್ಲನಕಂಡರೆ ಮಹಾಸಂತೋಷವವ್ವಾ ಕಾಣದಿರ್ದಡೆ ಕಡುದುಃಖಕೇಳಿರವ್ವಾ ॥ ೨೭ ॥ ಹಗಲೆಹನ್ನೆರಡುತಾಸು ತನ್ನಹಂಬಲದಲ್ಲಿ ವ್ಯಾಳ್ಯೆವ ಕಳವುತಿರ್ದೆನವ್ವಾ ಇರುಳೆ ಹನ್ನೆರಡುತಾಸು ತನ್ನಯುದ್ದುದ್ದು ನೋಡುತಿದ್ದೆನವ್ವಾ ಅಖಂಡೇಶ್ವರನೆಂಬ ನಲ್ಲನ ಹಂಬಲದಿಂದ ಸರ್ವಸಂಗವ ತೊರೆದನವ್ವಾ ನೋಡಿರವ್ವಾ ॥ ೨೮ ॥ ಬಾರಬಾರಯ್ಯಾ ಗಂಡನೆ ಇನ್ಯಾತಕ್ಕೆನಾ

ಚುವೆ ನಾನು ಸರಿವಿಂಡಿಯರೊವಬಳಿಕ ಇನ್ಯಾತಕೆ ವಿನಕಾಲಕೋಗ ಲಾಡುವೆ ತುಂಬಿಸೆಜವ್ವನ ಸದಲಿಹೋಗುತ್ತದೆ ಸುರತಸಂಗವ ಚುಂಬನಂಗಳಿಂದೆಕೂಡಿ ಪರಿಣಾಮಗೊಳ್ಳಯ್ಯೋ ಯನ್ನ ಅಖಂಡೇಶ್ವರಾ॥ ನೋಡುನೋಡಯ್ಯೋ ಗಂಡನೆಯೆನ್ನ ಕಂಗಳುಪ್ಪರಿಗೆಯಮೇಲೆ ಕುಳ್ಳಿರ್ದು ಸಕಲವಿಚಿತ್ರವ ಆಡುಆಡಯ್ಯೋಗಂಡನೆ ಎಂನವಮನದ ಕೊನೆಯಲ್ಲಿ ಮಹಾಜ್ಞಾನವುಯ್ಯಾಲಿಯುಕಟ್ಟ ನಿಮ್ಮಮನಬಂದ ಪರಿಯಲ್ಲಿ ಕೂಡುಕೂಡಯ್ಯೋಗಂಡನೆ ಯನ್ನಸತ್ಯಲೆಗಂಳಿಂದಸ ವಿಡೋರಿಯಖಂಡೇಶ್ವರಾ ॥೩೦॥ ಸೊಕ್ಕಿದಜವ್ವನದ ಕಕ್ಕಸಕುಚದ ಸಡಲಿಡಸೋಲುವಮುಡಿಯ ಬಡನಡುವಿನ ಬಳಕುವ ಹೆಣ್ಣಿನಕೂಡ ಸ್ನೇಹವನಗಲಿ ಹೋಗುವದು ಎಂಥಾ ವಿಡದಚಾರಿತ್ರವೇಅವ್ವಾ ಅಖಂಡೇಶ್ವರ ನಿಲ್ಲಿವೆಂಬ ಚಿಂತೆಯಿಂದ ವನ್ನುಸಂಗಣಿಸಿ ತನುವುಕರಗಿಹೋಯಿತುನೋಡಿರವ್ವಾ ॥೩೧॥ ಇಂದಿನ ಯಿರುಳಿನಲ್ಲಿ ನಲ್ಲನು ಛಲವಾತುತ್ತ ಬಂದುಮೆಲ್ಲನೆಯನ್ನ ಕೈವಿಡಿದನವ್ವಾ ಅಲ್ಲಿವುಟಶೀರೆ ಯನಿರಗಳು ಸಡಲಿಬಿದ್ದವವ್ವಾ ತೊಟ್ಟಿರವೆಕೆಯು ಗಂಟುಬಿಚ್ಚಿ ಕಡೆಪಾದವವ್ವಾ ಅಖಂಡೇಶ್ವರನೆಂಬ ನಲ್ಲನುಯನ್ನ ಬಿಗಿಯೆಪ್ಪಿತಳ್ಕೈಸಿಕೊಂಡು ಕೂಡಿವಸುಖವ ಯಿದಿರಿಟ್ಟು ಹೇಳಲಾರೆನು ಕೇಳಿರವ್ವಾ ಚಂದ್ರಶಾಲೆಯಲ್ಲಿ ಬಂದುನಿಂತವನ್ಯಾರೆಂದು ಕೇಳಹೋದರೆ ಅಲ್ಲಿಹೊಂಧಿ ಯನ್ನ ನರದನವ್ವಾ ಆತನ ಸೌಂದರ್ಯ ಕೋಟಿಕಂದರ್ಪರಂತಿರ್ದ್ದವವ್ವಾ ಆತನ ಅಂಗದಬೆಳಕು ಅನಂತಕೋಟಿ ಸೂರ್ಯರಪ್ರಭೆಯಂತೆ ಯಿರ್ದ್ದವವ್ವಾ ಅಖಂಡೇಶ್ವರನೆಂಬ ನಲ್ಲನ ಅಂಗಶೃಂಗಾರದ ಬೆಳಗನೋಡಲ್ಲವ್ಮದೆ ಕಂಗಳಮುಚ್ಚಿ ನೆರದನುಕೇಳವ್ವಾ ನಲ್ಲನ ಕೂಡಿದೆ ಸುಖವಮೆಲ್ಲನುಸುರುವೆ ಕೇಳರವ್ವಾ ಏಳುನೆಲೆಯ ಮಂಟಪದ ಮಾಣಿಕ್ಯದುಪ್ಪರಿಗೆಯಮೇಲೆ ಚಪ್ಪರಮಂಚವಹಾಸಿ ಪ್ರೊಪ್ಪಡವನೀಡಿ ಕರ್ಪೂರವೀಳ್ಯವಕೊಟ್ಟು ಲಜ್ಜೆಗೆಟ್ಟು ನಾಚಿಕೆತೊರದು ತನುರ್ಝುರ್ಝುರಿತವಾಗಿ ತಕ್ಕೈಸಿ ಚುಂಬಿನಾದಿಗಳಿಂದ ಅವುರ್ದ್ದ

ರ್ಪ ಅಸ್ತಿಗಳು ನುಗ್ಗುನುರಿಯಾಗಿ ಮನಪರಿಣಾಮದ ಸುಗ್ಗಿಯೊಳಗೆ ಪರವಶಗೊಂಡಿರ್ಪನು ಅಖಂಡೇಶ್ವರ ನೆಂಬನಲ್ಲಕಾಡಿ ||೩೪|| ಕೇಳುಕೇಳಿರಿ ಕೇಳಿರಿಯೆಲ್ಲರು ಮನಕ್ಕೆ ಮನೋಹರವಾದ ಕಂಗಳಿಗೆ ಮಂಗಳವಾದ ಶೃಂಗಾರದನಲ್ಲ ಬಂದುಯೆನ್ನ ತೆಕ್ಕೊಳಗೆ ಮಾಡಿಕೊಂಡ ಒಂದು ವಿಪರೀತವ ಹೇಳುವೆ ಮನವೊಲಿದು ಅಲಿಸಿರವ್ವಾ ಯೆನ್ನ ತನುವಿನೊಳಗೆ ತನ್ನ ತನುವನಿಟ್ಟು ಮಹಾತನುವ ಮಾಡಿದ ಯನ್ನ ಮನದೊಳಗೆ ತನ್ನ ಮನವನಿಟ್ಟು ಘನಾಘನವಮಾಡಿದ ಯೆನ್ನ ಪ್ರಾಣದೊಳಗೆ ತನ್ನ ಜೀವನವನಿಟ್ಟು ಸದ್ಭಾವವಮಾಡಿದ ಯೆನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು ಚಿತ್ಕರಣಂಗಳ ಮಾಡಿದ ಯೆನ್ನೇಂದ್ರಿಯಂಗಳೊಳಗೆ ತಂನಿಂದ್ರಿಯಂಗಳನಿಟ್ಟು ತಂನಿಂದ್ರಿಯಂಗಳ ಮಾಡಿದ ಯೆನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು ನಿರ್ವಿಷಯಂಗಳಮಾಡಿದವನಾಗಿ ಅಖಂಡೇಶ್ವರನೆಂಬ ನಲ್ಲನೊಳಗ ಕರ್ಪೂರವೆಂಣುವುರಿಯು ಪುರುಷನಪ್ಪಿ ತಾವಳಿದಂತಾದನುಕೇಳಿರವ್ವಾ ||೩೫|| ನಿಚ್ಚ ನಿಚ್ಚ ಶರಣಂಗ ಪರಮಾನಂದವೋಕುಳಿಯುತಾನೆಕೇಳಿರೊ ನಿಚ್ಚ ನಿಚ್ಚ ಸಂಮ ಅಖಂಡೇಶ್ವರಂಗೆ ವಸನ್ತೈಭವಂಗಳು ತಾನೇಕಾಣಿರೊ ||೩೬|| ಯೆಲೆಶಿವನೆ ನಿಮ್ಮಲ್ಲಿನಾನೊಂದುಬೇಡುತ್ತಿಹನು ನೀನೊಲಿದು ಕರುಣಿಸಯ್ಯ ಎನಗೆ ನಿಮ್ಮ ಶರಣರ ಸಂಚರಿತದ ಮಹಾಘನ ಮಹಿಮೆಯ ಕೇಳುವಲ್ಲಿ ಅಹೃದಯ ಕಮಲವರಳುವಂತೆ ಮಾಡಯ್ಯ ನಿಮ್ಮ ಶರಣರ ನಿಜಮೂರ್ತಿಗಳ ಕಂಡಲ್ಲಿ ಯನ್ನ ಸರ್ವಾಂಗವು ಗುಡಿಕಟ್ಟಿ ಕಂಗಳಲ್ಲಿ ಪರಿಣಾಮ ಜಲವುಕಿ ಅವರಚರಣ ಕಮಲದಮೇಲೆ ಸುರಿವಂತೆಮಾಡಯ್ಯಾ ನಿಮ್ಮಶರಣರ ಶಿವಾನುಭಾವವ ಸಂಪಾದನೆಯ ಮಾಡುವಲ್ಲಿ ಯನ್ನ ಕರ್ಣದ್ವಾರದಲ್ಲಿ ಸಕಲಗುಣಂಗಳನ್ನು ನಾಮುಚಿತಾಮುಂಚೆಯುಂದು ಗ್ರಹಿಸುವಂತೆ ಮಾಡಯ್ಯಾ ನಿಮ್ಮಶರಣರ ನಿಜವನರಿಬಗೊಂಡ ಶರಣರಲ್ಲಿ ಅವರಸಂಗವನ್ನು ಹೆರಹಿಂಗದಿರುವಂತೆ ಮಾಡಯ್ಯ ಯ

ನ್ನ ||ಅಖ|| ೩೭ || ಅಂಗಕ್ಕೆ ಆಚಾರವೇ ಚಲುವು ಮನಕ್ಕೆ ಮಹಾ ನುಭಾವವೇ ಚಲುವು ಆತ್ಮಂಗೆ ಅರುಹೇಚಲುವು ಅಖಂಡೇಶ್ವರ ನೆಂಬ ನಿಜವ ವಿಂಬುಗೊಂಡ ಶರಣರ ಸಂಗವೇ ಚಲುವು ||೩೮|| ಶರ ಣರ ಸಂಗದಿಂದ ತನುವು ಶುದ್ಧವಪ್ಪುದುನೋಡಿರೋ ಶರಣಸಂಗ ದಿಂದ ಮನನಿರ್ಮಲ ವಪ್ಪುದುನೋಟಿರೋ ಶರಣಸಂಗದಿಂದ ಮನ ನಿರ್ಮಲ ವಪ್ಪುದುನೋಡಿರೋ ಶರಣರಸಂಗದಿಂದ ಸಕಲಕರಣೇಂ ದ್ರಿಯಂಗಳು ಲಿಂಗಮುಖ ವಪ್ಪವುನೋಡಿರೊ ನಮ್ಮ ಅಖಂಡೇಶ್ವ ರನ ಶರಣರಸಂಗದಿಂದ ಮುಂದೆ ಸತ್ಪಥವು ದೊರಕೊಂಬುವದು ತ ಪ್ಪದುನೋಡಿರೊ ||೩೯|| ಸಕಲ ಗಣಂಗಳು ತಮ್ಮ ವಚನಾನಭವ ವೆಂಬ ಪರಮಾಮೃತವನ್ನು ಯನ್ನಕರವೆಂಬ ಕುರುಹ ಕಟ್ಟಿಯಾತ ಕವೆರಿಯಲು ಅದುಮನದಲ್ಲಿ ಮೂಶಿ—ಯೊಗಿವಳಗೆ ಪ್ರಾಣಲಿಂಗ ವಾಯಿತು ಹೊರಗೆ ಯಿಷ್ಟಲಿಂಗವಾಯಿತು ಯನ್ನ ಹೊರವಳ ಭರಿ ತವಾದ ಅಖಂಡೇಶ್ವರನೆಂಬ ಪರಶಿವನುಡಿಸಿದಂತೆ ವಚನರಚನೆಯ ನುಡಿದೆನಲ್ಲದೆ ಯೆನ್ನ ಮನಕ್ಕೆ ಬಂದಂತೆ ನುಡಿಯಲಿಲ್ಲ ಕೇಳಿರಣ್ಣಾ ||೪೦|| ಅನಭಾವಿಗಳಸಂಗ ಕೀಟಕ ಭ್ರಮರವಾದಂತೆ ಕೇಳಿರೋ ಅನುಭಾವಿಗಳ ಸಂಗಪುರುಷಲೊಹದಂತೆ ಕೇಳಿರೊ ನಮ್ಮ ಅಖಂ ಡೇಶ್ವರ ಲಿಂಗದೊಡನೆ ಬೆರದಶಿವಾನುಭಾವಿಗಳಸಂಗ ಕರ್ಪೂರಜ್ಯೋತಿ ಯಂತೆ ಕಾಣಿರೊ ||೪೧|| ಅಗ್ನಿಯಸಂಗದಿಂದ ಕಾನನಸುಟ್ಟಂತೆ ಜ್ಯೋತಿಯ ಸಂಗದಿಂದ ಯೆನ್ನಹುಟುಹೊಂದುಗಳು ನಷ್ಟವಾಗಿ ಕೆಟ್ಟುಹೋದವುನೋಡಾ ||೪೨|| ಕಾಯವೇ ಕೈಲಾಸವಾಗಿ ಮನ ವೇ ಮಹಾಜ್ಞಾನವಾಗಿ ಭಾವವೇ ಪುಷ್ಪದಪೂಜೆಯೊಗಿ ಅಖಂಡ ಪರಿಪೂರ್ಣ ಜ್ಞಾನದಬೆಳಗಿನೊಳಗೆ ಸುಳಿವ ಮಹಾಶರಣರ ತೋ ರಿಸಿ ಬದುಕಿಸಯ್ಯಾ ಯನ್ನ ||ಅಖ|| ೪೩ || ಒಬ್ಬರು ನಡೆದಾಚರಣಿ ಯಲ್ಲಿ ನಡಿಯರು ಒಬ್ಬರ ಹಿಡಿದ ಶೀಲವ ಹಿಡಿಯರು ಒಬ್ಬರು ನು ಡಿದ ಭಾಷೆಯ ನುಡಿಯರು ಅದೇನುಕಾರಣ ವೆಂದರೆ ತಮ್ಮಲಿಂಗ

ಮಚ್ಚು ನಡಿವರು ತಮ್ಮಲಿಂಗ ಮಚ್ಚು ನುಡಿವರು ಇದುಕಾರಣ ಅ
ಖಂಡೇಶ್ವರ ನಿಮ್ಮ ಶರಣರು ಪರಮಸ್ವತಂತ್ರ ಶೀಲರು ||೪೪|| ಶೀಲ
ವಂತರೆಂದು ಶೀಲಸಂಪಾದನೆಯ ಮಾಡುವ ಕರ್ಮಿಗಳನೇ ನೆಂಬೆನ
ಯ್ಯಾ ಗುರುಭಕ್ತಿಯಿಂದೇನು ಶುದ್ಧವಾಗಲಿಲ್ಲ ಲಿಂಗಪೂಜೆಯಿಂದ
ಮನವು ಶುದ್ಧವಾಗಲಿಲ್ಲ ಜಂಗಮದಾಸೋಹವಿಂದೆ ಥನವು ಶುದ್ಧ
ವಾಗಲಿಲ್ಲ ಸಟೆಯ ಸಂಸಾರ ಶರಧಿಯೊಳಗೆ ಮುಳಿಗಿ ಕುಟಿಲವ್ಯಾ
ಪಾರವಂನಂಗೀಕರಿಸಿ ನಾವು ಧಿಟಶೀಲವಂತರೆಂದು ನುಡಿದುಕೊಂಬುವ
ಘಟಿಂಗಭಂಡರ ವಿಧಿಯಂತಾಯಿತೆಂದರೆ ಹೆಂಡದಗಡಿಗಿಗೆ ವಿಭೂತಿ
ಮಂಡಲವ ಬರೆದಂನಾಯಿತುಕಾಣಾ ||೪೫|| ಶಿವನೆ ಗುರುವೆಂದು ಗು
ರುವಿಂಗೆ ತನುವಂನರ್ಪಿಸಿ ಶಿವನೆ ಲಿಂಗವೆಂದು ಲಿಂಗಕ್ಕೆ ಮನವನರ್ಪಿ
ಸಿ ಶಿವನೆಜಂಗಮವೆಂದು ಜಂಗಮಕ್ಕೆ ಥನವನರ್ಪಿಸಿ ಆ ಗುರುಲಿಂಗ
ಜಂಗಮದಥನ ಪ್ರಸಾದವ ಪಡೆದು ನಿಜಮುಕ್ತಿಯ ನೈದಲರಿಯ
ದೆ ನನ್ನ ಶೀಲಹೆಚ್ಚು ತನ್ನ ಶೀಲಹೆಚ್ಚೆಂದು ಕುಲಸೂತಕ ಛಲಗ್ರಸ
ಕರಿಂದ ಒಬ್ಬರೊಬ್ಬರ ಹಳಿದಾಡುವ ಶೀಲವಂತರ ಮೆಚ್ಚುವನೇ
ನಮ್ಮ ||೪೬|| ಶೀಲಶೀಲವೆಂದು ನುಡಿವುತಿರ್ಪರೆಲ್ಲರು ಶೀಲದ ಹೊಲ
ಬನರ್ಯಾರು ಅರಿಯರಲ್ಲಾ ಕೆರೆಭಾವಿ ಬಳ್ಳಕೊಳ್ಳ ಹೊಳಗಳನೀರಬಳ
ಸದಿರ್ದರೇ ಶೀಲವೇ ಕೊಡಕ್ಕೆ ಪಾವಡಹಾಕಿ ಚಿಲುಮೆ ಶೀತಾಳ
ತಂದರೆ ಯಿದುಶೀಲವೇ ಒಬ್ಬಭಂಗಿವುಳ್ಳ ಗುಂನಿಯಬಿಟ್ಟರೆ ಶೀಲವೇ
ಬೆಳದಬೆಳಸುಕಾಯಿ ಹಂಣುಗಳ ಬಿಟ್ಟರೆ ಶೀಲವೇ ವುಪ್ಪು ಯುಂ
ಹಾಲು ತುಪ್ಪ ಯಿಂಗು ಮೆಣಸು ಅಡಿಕೆ ಬೆಲ್ಲಗಳ ಬಿಟ್ಟರೆ ಶೀಲವೇ
ಪರಿಪಾಕವಬಿಟ್ಟು ಸ್ವಯಂಪಾಕದಲ್ಲಿದ್ದರೆ ಶೀಲವೇ ಭವಿಯಕಾಣ
ಭಾರದಂತಿದರೆ ಶೀಲವೇ ಅಲ್ಲಲಾ ಅದೇನುಕಾರಣವೆಂದರೆ ಇಂತಿವೆ
ಲ್ಲವು ಹೊರಗಣವ್ಯವಹಾರವು ಇನ್ನು ಅಂತರಂಗದ ಅರಿಷಡ್ವರ್ಗಂಗ
ಳೆಂಬ ಭವಿಗಳ ಕಳೆಯಲಿಲ್ಲಾ ಮಾಯಾಮೋಹಬೆಳವುಳ್ಳ ಗುಂನಿಯ
ಬಿಡಲಿಲ್ಲ ಸಂಸಾರವಿಷಯ ರಸವೆಂಬ ಹಳ್ಳಕೊಳ್ಳ ಕೆರೆಭಾವಿಗಳ

ಲಲ್ಲಿ ಅಷ್ಟಮದಗಳೆಂಬ ವುಪ್ಪು ಯೆಂಣೆ ತುಪ್ಪ ಹಾಲು ಇಂಗು ಮೆ
ಣಸು ಅಡಿಕ ಬೆಲ್ಲಗಳ ಬಿಡಲಿಲ್ಲ ಸಕಲ ಕರಣಂಗಳೆಂಬ ಬೆಳಸ ಫಲಂ
ಗಳ ಬಿಡಲಿಲ್ಲ ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವಡವ ಮು
ಚ್ಚಿ ನಲ್ಲ ಚಿತ್ತೊಕ್ಕಡವೆಂಬ ಬಲುವೆಯಲ್ಲ ಚಿದಾಮೃತವೆಂಬ ಶೀತಳ
ವತಂದು ಚಿನ್ಮಯ ಲಿಂಗಕ್ಕೆ ಅಭಿಷೇಕವ ಮಾಡಲಿಲ್ಲ ಇಂತೀ ಅಂತ
ರಂಗದ ವಿಚಾರವ ನರಿಯದೆ ಹಾಳಸಂಕಲ್ಪದಿಂದ ಬಹಿರಂಗದ ದಾ
ರ್ಥಂಗಳಬಿಟ್ಟು ಮುಕ್ತಿಯ ಪಡವೆನೆಂಬ ಯುಕ್ತಿಗೇಡಿಗಳಿಗೆ ಭವ
ಬಂಭವ ಬಂಧನಂಗಳು ಹಿಂಗಲಿಲ್ಲ ಜನನಮರಣಂಗಳು ಜಾರಲಿಲ್ಲ
ಸಂಸಾರಮಾಯಾ ಮೋಹವ ನೀಗಲಿಲ್ಲ ಇಂತಪ್ಪ ಅಜ್ಞಾನಿಗಳ
ವಿಧಿಯಂತಾಯಿತೆಂದರೆ ಹುತ್ತದೊಳಗಣಹಾವು ಕೊಲ್ಲುವೆನೆಂದು
ಸೋಲಿ ಹುತ್ತವಬಡಿಯುವ ಮರುಳನಂತಾಯಿತುನೋಡಾ ||೪೭||
ಯಿಷ್ಟಲಿಂಗದಲ್ಲಿ ತನುವಡಗಿ ಪ್ರಾಣಲಿಂಗದಲ್ಲಿ ಮನವನಡಗಿಸಿ ಭಾವ
ಲಿಂಗದಲ್ಲಿ ಜೀವನವ ನಿಕ್ಷೇಪಿಸಿ ಅಯಿಷ್ಟಪ್ರಾಣ ಭಾವಲಿಂಗವಂದಾ
ದ ಮಹಾಘನವರ ಬ್ರಂಹದಲ್ಲಿ ತಾನಡಗಿ ತಾನೆಂಬ ನೆನಹಡಗಿ ದ್ವಂ
ದ್ವಂಕರ್ಮಂಗಳನೀಗಿ ಅಪರಿಪೂರ್ಣ ಪರಬ್ರಹ್ಮವೇ ತಾನಾದುದೇ ಮ
ಹಾಶೀಲವಯ್ಯಾ ||೪೮|| ಶರಣನಾದರೆ ಮುರಿದಬಂಗಾರ ಬಳಗಾರ
ದಲ್ಲಿ ಚಿಚಿ ದಂತಿರಬೇಕು ಲಿಂಗದಲ್ಲಿ ಶರಣನಾದರೆ ಕರಗುಕಟ್ಟಿರದ
ಲೋಹಪುತ್ತಳಿಯಂತಿರಬೇಕು ಲಿಂಗದಲ್ಲಿ ಇಂತೀ ಸಮರಸ ಭಾವವ
ನರಿಯದ ಹುಸಿಗುಂಡಿನಂತೆ ವೇಷವಧರಿಸಿ ಗ್ರಾಸಕ್ಕೆ ತಿರುಗುವ
ವೇಷಗಳ್ಳರಯೆನ ಗೊಂಮೆ ತೋರದಿರಯ್ಯಾ ||೪೯|| ತಾಮಸಗು
ಣಂಗಳಲ್ಲಿಬಿದ್ದು ತ್ವರಿತ ವಿಷಯಂಗಳಲ್ಲಿ ಹರಿದಾಡಿಭವಗಳಲ್ಲಿಬಿದ್ದು
ತ್ವರಿತವಿಷಯಂಗಳಲ್ಲಿ ಹರಿದಾಡಿ ಭವಗಳಲ್ಲಿ ಬಿದ್ದು ತ್ವರಿತವಿಷಯಂ
ಗಳಲ್ಲಿ ಹರಿದಾಡಿ ಸತ್ತುಹುಟ್ಟುವಾತ ಗುರುಸ್ಥಳಕ್ಕೆಸಲ್ಲ ಚರಸ್ಥಲಕ್ಕೆ
ಸಲ್ಲ ಪರಸ್ಥಲಕ್ಕೆಸಲ್ಲ ಗುರುಸ್ಥಲವೆಂದರೆ ಘನಲಿಂಗಸ್ಥಲವು ಚರಸ್ಥಲ
ವೆಂದರೆ ಅತೀತಸ್ಥಲವು ಪರಸ್ಥಲವೆಂದರೆ ವಿರಕ್ತಿಸ್ಥಲವು ಇಂತೀ ತ್ರಿ

ವಿಧಸ್ಥಲದ ನಿರ್ಣಯವ ಬಲ್ಲಾತನೇ ಈಸ್ಥಲಗಳಿಗೆ ಯೋಗ್ಯನೆಂಬನು ಈ ತ್ರಿವಿಧಸ್ಥಲದ ನಿರ್ಣಯವ ನರಿಯದೆ ತ್ರಿವಿದಮನದಲ್ಲಿ ಭಂಗಿತರಾದವರ ಎನಗೊಮ್ಮೆ ತೋರದಿರಯ್ಯಾ ||೫೦|| ಘನಲಿಂಗದವರೆಂದು ನುಡಿದುಕೊಂಬ ಬಿನುಗುಹೊಲೆಯರನೇ ನೆಂಬನಯ್ಯಾ ಹೊಟ್ಟೆಯಕಿಚ್ಚಿಗೆ ಒಟ್ಟೆದಬಣ್ಣವೆ ಸುಟ್ಟಾತ ಘನಲಿಂಗದೇವರೆ ಕೊಟ್ಟಾವಳಗ ಕೊಡದಾತಹೊರಗೆ ಎಂದುಲಿಂಗವ ಮೆಟ್ಟಿಮೆಟ್ಟಿಕರಿವಾತ ಘನಲಿಂಗದೇವರೆ ಪಡೆಯನವೇಷವಧರಿಸಿ ಪಡಲಕಿಚಿಗೆ ತುಡುಗನಾಯಂತೆ ಕಡಿದುಕನ್ನೆವ ನಿಕ್ಕುವಾತೆ ಘನಲಿಂಗದೇವರೆ ಹವುದಾದುದು ಅಲ್ಲಮಾಡಿ ಅಲ್ಲವಾದುದು ಹವುದುಮಾಡಿ ಅಧರ್ಮ ಅನ್ಯಾಯದಲ್ಲಿ ಹೊಡದಾಡಿ ಹೊಲಬುದಪ್ಪಿ ಮಡಿದುಹೋಗುವ ಬಾಯಬಡಿಕ ಭ್ರಷ್ಟಮಾದಿಗರ ಘನಲಿಂಗದೇವರೆಂದರೆ ಅಘೋರನರಕತಪ್ಪದಯ್ಯಾ ||೫೧|| ಸತ್ಯಾಸತ್ಯವೆಂದು ವಿವರಿಸಿತಿಳಿದುಅಸತ್ಯವಕಳೆದು ನಿತ್ಯವಸಾಧಿಸ ಬಲ್ಲಾತನೇ ಘನಲಿಂಗದೇವರೆಂಬೆನು ನಿತ್ಯಾನಿತ್ಯವ ವಿವರಿಸಿತಿಳಿದು ಅನಿತ್ಯಕಳೆದು ನಿತ್ಯವಹಿಡಿಯಬಲ್ಲರೆ ಘನಲಿಂಗದೇವರೆಂಬೆನು ಪುಣ್ಯಾಪಾಪವೆಂದು ವಿವರಿಸಿತಿಳಿದು ಪಾಪವಕಳೆದು ಪುಣ್ಯವಗ್ರಹಿಸಬಲ್ಲರೆ ಘನಲಿಂಗದೇವರೆಂಬೆನು ಧರ್ಮಕರ್ಮಂಗಳ ವಿವರಿಸಿತಿಳಿದು ಕರ್ಮವ ಕಳಿದು ಧರ್ಮವ ಬಿಡದಿರಬಲ್ಲರೆ ಘನಲಿಂಗದೇವರೆಂಬೆನು ಆಚಾರ ಅನಾಚಾರವೆಂದು ವಿವರಿಸಿ ತಿಳಿದು ಅನಾಚಾರವ ಕಳೆದು ಆಚಾರ ಸಂಪನ್ನನಾಗಬಲ್ಲರೆ ಘನಲಿಂಗದೇವರೆಂಬೆನು ಇಂತೀ ಉಭಯ ನ್ಯಾಯವ ನರಿಯದೆ ಸಟೆಯನೆ ದಿಟವಮಾಡಿ ದಿಟಯನೆ ಸಟೆಯಮಾಡಿ ಘಟವಹೊರೆವ ಕುಟಿಲಕುಹಕರ ತುಟಿಯತನಕಾ ಮೂಗಕೊಯ್ದು ಕಟವಾಯಶೀಳಿ ಕನ್ನಡಿಯ ತೋರಿ ಕಷ್ಟಜನ್ಮದಲ್ಲಿ ಹುಟ್ಟಿಸದೆ ಬಿಡುವನೇ ನಮ್ಮ ||ಅಖ|| ೫೨ || ಪರಧನವ ಹಿಡಿಯದೆ ಪರಸ್ತ್ರೀಯರ ಮುಟ್ಟದೆ ಪರದೈವವ ಪೂಜಿಸದೆ ಪರಹಿಂಸೆಯ ಮಾಡದೆ ಪರಲೋಕದ ಫಲವಬಯಸದೆ ಪರನಿಂದ್ಯವ

ಕೇಳದೆ ಗರ್ವಾಹಂಕಾರದಲ್ಲಿ ಬೆರೆಯದೆ ಕರಣಾದಿ ಗುಣಂಗಳಲ್ಲಿ ಹರಿಯದೆ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮರಿಯದೆ ನಿತ್ಯವಾದಾಚಾರವ ತೊರೆಯದೆ ಸರ್ವಾಚಾರ ಸಂಪನ್ನನಾದ ಮಹಾತ್ಮನೇ ಅನಾದಿಗುರುಪಟ್ಟಕೆ ಘನನಾದ ಮಹಾಘನಪರಶಿವಮೂರ್ತಿಯೆಂಬೆನಯ್ಯಾ ಮಹಾಂತಿನ ಕೂಡಿದ ದೇವದೇವರುಗಳೆಂಬ ಭ್ರಾಂತಿಗುಣದ ಭ್ರಷ್ಟರನೇ ನೆಂಬೆನಯ್ಯಾ ಮಹಾಂತೆ ದಡಗುರುಮಹಾತ್ಮೆ ಲಿಂಗಮಹಾತ್ಮೆ ಜಂಗಮಮಹಾತ್ಮೆ ಪಾದೋದಕ ಮಹಾತ್ಮೆ ಪ್ರಸಾದಮಹಾತ್ಮೆ ಮಂತ್ರಮಹಾತ್ಮೆಯೆಂಬ ಅಷ್ಟಾವರ್ಣದ ಘನಮಹಾತ್ಮೆಯ ನರಿದು ಆ ಅಷ್ಟಾವರ್ಣವೇ ಅಂಗವಾಗಿ ಪಂಚಾಚಾರವೇ ಪ್ರಾಣವಾಗಿ ಅನಂತಸ್ಥಲ ಕುಲಗಳ ನೊಳಕೊಂಡು ಪರಬ್ರಹ್ಮವ ಕೂಡುಕ ಸಮರಸಭಾವ ಸಕೀಲ ಭೇದವನರಿಯದೆ ಆಶಾಕ್ಲೇಶದಲ್ಲಿ ಕಟ್ಟುವಡೆದು ಕಾಸು ವೀಸುಮಠವನೆಗೆ ಬಡಿದಾಡುವ ಭಾವಭ್ರಷ್ಟರಲ್ಲಿ ಮಹಾಂತಿನ ಘನಯಿನ್ನೆಲ್ಲಿಹುದೋ ಇಂತಪ್ಪ ಮಹಾಂತಿನ ಅರುಹುಮರುಹಿನ ಘನವನರಿಯದೆ ನಾನು ಮಹಾಂತಿನ ಕೂಡಿದದೇವರೆಂದು ಹೊರಗೆ ಆಡಂಬರ ವೇಷವತಾಳಿ ಜಡೆಯಬಿಟ್ಟರೇನು ಆಲದಮರಕ್ಕೆ ಬೇರಿಳಿದಂತೆ ಸರ್ವಾಂಗಕ್ಕೆ ಭಸ್ಮವ ಪೂಸಿದರೇನು ಚಪ್ಪರದ ಕಗುಂಬಳಕಾಯಿಬಿದ್ದಂತೆ ಸ್ನಾನಸ್ನಾನಕ್ಕೆ ರುದ್ರಾಕ್ಷಿಯ ಧರಿಸಿದರೇನು ಎರಂಡಗಿಡದ ಕೊನೆಯ ಬೆಟ್ಟಂತೆಕಾಣಾ ||೫೪|| ಅಂತರಂಗದಲ್ಲಿ ಅರುಹಿನ ಸುದ್ಧಿಯನರಿಯದೆ ಬಹಿರಂಗದಲ್ಲಿ ಕಂಥೆ ಕರ್ಪರ ದಂಡ ಕಮಂಡಲ ಭಸ್ಮಗುಂಡಿಗೆ ಯೆಂಬ ಪಂಚಮುದ್ರೆಗಳಧರಿಸಿ ಧರೆಯಮಂಡಲದೊಳಗೆ ಚರಿಸುವ ಅಂಣಗಳಕಂಡು ಬೆರಗದೆನಯ್ಯಾ ಅದೇನುಕಾರಣವೆಂದರೆ ಪರಜನರ ಮೆಚ್ಚಿಸುವೆನೆಂದು ಜಾತಿಕಾರನ ಪೋಲುವೇಷವ ಧರಿಸಿ ಪಡಲಹೂರುವಂತೆ ಕೊಟಕೊಂಬುವ ಭಕ್ತನ ಮೆಚ್ಚಿಸುವನೆಂದು ಮೃಡನ ವೇಷವಧರಿಸಿ ಪಡಲಕಕ್ಕುಲಾತಿ ಯಿಂಪೆತಿರುಗುವ ಕಡುಪಾತಕ ಜ.

ಡಜೀವಿಗಳ ಮುಖವ ನೋಡಲಾಗದಯ್ಯಾ ||೫೫|| ಅನುಪಮಲಿಂಗ ದಲ್ಲಿ ಅಂಗಮದ ಪ್ರಾಣಗಳಡಗಿಸಿ ಅವಿರಳಸಮರಸ ದಿಂದರ್ಪಿಸಿ ಮಹಾಶರಣನ ಅರುಹಿನಪಂಚಮುದ್ರೆಗಳಾವೆಂದರೆ ಸರ್ವಾಚಾರ ಸಂಪತ್ತೆಂಬ ಕಂಥೆ ಅಜಾಂಡಗುಂಡಿಗೆ ಅನಾದಿಯೆಂಬ ಕರ್ಪರ ಯಿಂತೀಅರುಹಿನ ಪಂಚಮುದ್ರೆಗಳ ಅಂತರಂಗದಲ್ಲಿ ಧರಿಸಿ ಹೆರಗೆ ಬಹಿರಂಗದಮೇಲೆ ಮುಂನಿಂಕ್ರಿಯ್ಯದಂತೆ ಪಂಚಮುದ್ರೆಗಳ ಧರಿಸಿಕೊಂಡು ಮೂಯೂವಿರಹಿತವೆಂಬ ಪಾವುಗೆಯ ಮೆಟ್ಟಿಕೊಂಡು ಲೋಕಪಾವನ ಮಾಡುತ್ತ ಭಕ್ತಿ ಭಿಕ್ಷಾಂದೇಹಿಯೆಂಗಿ ಸುಳಿವ ಮಹಾಘನ ಪರಮ ಮಹಾಂತಿನ ಜಂಗಮದ ಶ್ರೀಪಾದಕ್ಕೆ ನಮೋ ನಮೋ ಯೆಂಬೆನಯ್ಯಾ ಅಖಂಡೇಶ್ವರಾ || ೫೬ || ನಾದಬಿಂದುಕಳೆ ತೀತವಾದ ಪರವಸ್ತುವೇ ಮಹಾಂತುನೋಡಾ ಅದಿಮಧ್ಯಾಂತವಿಲ್ಲದ ಪರವಸ್ತುವೇ ಮಹಾಂತುನೋಡಾ ಉಪಮಾತೀತವ ಅಜ್ಞಾನಕ್ಕೆ ಗೋಚರವಾದ ಪರವಸ್ತುವೇ ಮಹಾಂತುನೋಡಾ ಇಂತಪ್ಪ ಮಹಾಂತಿನ ಮಹಾಜಂಗಮದ ಶ್ರೀಪಾದವತೋರಿಸಿ ಬದುಕಿಸಯ್ಯಾ ಯೆನ್ನ ಯೆಖಂಡೇಶ್ವರಾ || ೫೭ || ವಿರಕ್ತನೆನಿಸುವಾತಗೆ ಆವಚಿನ್ಹವೆಂದಡೆ ವಿಷಯವಿಕಾರವ ಸುಟ್ಟಿರಬೇಕು ಭಯಕ್ಕೆ ನಿರ್ಭಯನಾಗಿರಬೇಗು ಸತ್ವರಜ ತಮೋಗುಣಂಗಳ ನಿಟ್ಟೊರಸಬೇಕು ಅದಂತೆಂದೊಡೆ ಶ್ಲೋಕ || ವಿಕಾರಂವಿಷಯಂದೂರಂರಕಾರಂರಾಗವರ್ಜಿತಂ | ತಕಾರಂತ್ರೈಗುಣಂನಾಸ್ತಿ ವಿರಕ್ತಸ್ಯ ಸುಲಕ್ಷಣಂ || ೧ || ಎಂಬುದಾಗಿ ಇಂತಪ್ಪ ವಿರಕ್ತನ ಶ್ರೀಪಾದಕ್ಕೆ ನಮೋನಮೋ ಯೆಂಬೆನಯ್ಯಾ ಯೆಖಂಡೇಶ್ವರಾ || ೫೮ || ಹಲವುವೇಷವಧರಿಸಿ ಹಲವುಭಾಷೆಯಕಲಿತು ಹಲವುವಿಷಯಕ್ಕೆ ಹರಿದಾಡಿದರೇನು ಕಾಲಾರಿಯಂತಲ್ಲದೆ ನಿಜವಿರಕ್ತನಲ್ಲನೋಡಾ ಅದೇನುಕಾರಣ ವೆಂದಡೆ, ತನುವಿನ ಆಶೆಯ ಮೀಸಲುಹಿಂಪದಾಗಿ ಊರಾಶ್ರಯವಬಿಟ್ಟು ಕಾಡಾಶ್ರಮ ಗಿರಿ ಕಂದರದಲ್ಲಿರ್ದರೇನು ಹಗಲುಕಂಣುಕಾಣದ ಗೂಗೆಯಂತಲ್ಲದೆ

ನಿಜವಿರಕ್ತಿಯೆಲ್ಲನೋಡಾ ಅದೇನುಕಾರಣವೆಂದಡೆ ಮನವಪರಿಯು ಡಗಿದಾಗಿ ಹಸಿವುತೃಷೆಯುಬಿಟ್ಟು ಮಾತನಾಡದೆ ಮೌನಗೊಂಡಿರ್ದ ಡೇನು ಕಲ್ಲು, ಮರ, ಮೋಟ, ಗುಲ್ಮಂಗಳಂತಲ್ಲ ನಿಜವಿರಕ್ತಿಯಲ್ಲ ನೋಡಾ ಅದೇನುಕಾರಣವೆಂದಡೆ, ವಿಷಯ ವ್ಯವಹಾರಹಿಂಗದಾಗಿ ನಿದ್ರೆಯತೊರದುಯೆದ್ದು ಕುಳ್ಳಿರ್ದಡೇನು ಕಳ್ಳವ್ರಾರಹೊಕ್ಕು ಪ್ರ ಲಾವಡಗುವನೆ ಕಾಮರೆಯಲ್ಲಿ ಕುಳಿತಂತಲ್ಲದೆ ನಿಜವಿರಕ್ತಿಯಲ್ಲನೋ ಡಾ ಅದೇನುಕಾರಣವೆಂದಡೆ, ಅಂತರಂಗದಘನ ಗಂಭೀರಮಹಾಬೆಳ ಗಿನ ಶಿವಸಮಾಧಿಯ ನರಿಯದಕಾರಣ ಇಂತಪ್ಪ ಹೊರವೇಷದದಂ ಬಕ ಜೊಳ್ಳಮನದವರಿಗೆ ವಿರಕ್ತರೆಂದರೆ ಮೆಚ್ಚರಯ್ಯಾ ನಿಮ್ಮಶರ ಣರ ॥ ೪೯ ॥ ಬಹುಕ್ರಿಯವನಟಸದೆ ಬಹುಶಾಸ್ತ್ರಕ್ಕೆ ಮುಖವಾ ಗದ ಬಹುವ್ಯಾಪಾರದಲ್ಲಿ ತೊಳಲದೆಬಹುಭಾಷೆವಂತನಾಗದೆ ಹುಸಿಕ ಳವು ಪರದಾರಾಹಿಂಸಕ್ಕೆ ಚಿತ್ತವೆಳಸದೆ ಸುಖದುಃಖಕ್ಕೆ ಚಿಂತಿಸದೆ ನಿಂದಾಸ್ತುತಿಗೆ ಹಿಗ್ಗಿಕುಗ್ಗದೆ ಹಿಂದುಮುಂದುನೆಣಿಸದೆ ಹಿರಿಯತನ ಕ್ಕೆಹೋಗದೆ ಶಿವಜ್ಞಾನಸಂಪನ್ನನಾಗಿ ಶಿವಮಂತ್ರದಲ್ಲಿ ಸುಯಿಧಾ ನಿಯಾಗಿ ಶಿವಜ್ಞಾನದಲ್ಲಿ ಪರಾಯಣನಾಗಿ ಏಕಾಂತ ವಾಸಿಯಾಗಿ ಭಿಕ್ಷಾಹಾರಿಯಾಗಿ ಅಂಗಮನದಾಸೆಹಿಂದುಳಿದು ಲಿಂಗನೆನಹುಮುಂ ದುಗೊಂಡು ಶಿವಾಣತೆಯಿಂದ ಬಂದ ಬಂದವ ಪದಾರ್ಥವ ಲಿಂಗಾ ರ್ಪಿತವಮಾಡಿ ಲಿಂಗದನಡೆ ಲಿಂಗದನುಡಿ ಲಿಂಗದನೋಟ ಸರ್ವಾಂಗ ಲಿಂಗ ಭರಿತನಾಗಿ ಕರ್ಪೂರವ್ರಾ ಪುರಿಯಪ್ಪಿ ನಿರ್ವಯಲಾದಂತೆ ತ ನುವು ಇಷ್ಟಲಿಂಗವನಪ್ಪಿ ಮನವು ಪ್ರಾಣಲಿಂಗವನಪ್ಪಿ ಭಾವವು ಅ ಖಂಡಬಯಲ ಬ್ರಹ್ಮವನಪ್ಪಿ ತಾನುಧಾನಾದ ಮಹಾಜ್ಞಾನ ಪರಮ ವಿರಕ್ತನ ಶ್ರೀಪಾದಕ್ಕೆ ನಮೋನಮೋ ಯೆಂಬನಯ್ಯಾ ॥ ೬೦ ॥ ಚರಣದೊಳಗೆ ಚರಣವಿಟ್ಟುನಡೆವ ಭೇದವು ನಿಮ್ಮಶರಣರೆಗಲ್ಲದೆವ್ರು ಳಿದವರಿಗಳ ವಡದುನೋಡಾ ಕರದದೊಳಗೆ ಕರವನಿಟ್ಟು ಮುಟ್ಟ ವಭೇಧವು ನಿಮ್ಮಶರಣರಿಗಲ್ಲದೆ ವುಳಿದವರಿಗಳ ವಡದುನೋಡಾ

ಘ್ರಾಣದೊಳಗೆ ಘ್ರಾಣವನಿಟ್ಟು ವಾಸಿಸುವಭೇದವು ನಿವ್ಮ್ಮಶರಣರಿಗಲ್ಲದೆ ವುಳಿದವರಿಗಳ ವಡದುನೋಡಾ ಕಿವಿಯೊಳಗೆ ಕಿವಿಯನಿಟ್ಟು ಕೇಳಿಶಿವಭೇದವು ನಿವ್ಮ್ಮಶರಣರಿಗಲ್ಲದೆ ವುಳಿದವರಿಗಳ ವಡಬುನೋಡಾ ಮನದೊಳಗ ಮನವನಿಟ್ಟು ಸೆನೆವಷೇದವು ನಿವ್ಮ್ಮಶರಣರಿಗಲ್ಲದೆ ವುಳಿದವರಿಗಳೆ ವಡದುನೋಡಾ ಭಾವದೊಳಗೆ ಭಾವನಿಟ್ಟು ಸುಳಿವಭೇದವು ನಿವ್ಮ್ಮಶರಣರಿಗಲ್ಲದೆ ವುಳಿದವರಿಗಳ ವಡದುನೋ ||೬೧|| ಯನ್ನ ವುವ್ವೇ ಬಸವಣ್ಣನು ಯನ್ನ ಮನವೇ ಚನ್ನಬಸವಣ್ಣನು ಯನ್ನ ಪ್ರಾಣವೇ ಪ್ರಭುದೇವರು ಯನ್ನ ಸರ್ವ್ವಕರಣಂಗಳೆಲ್ಲಾ ಅಸಂಖ್ಯಾತ ಮಹಾಗಣಂಗಳಾಗಿರ್ಪರಾಗಿ ಅಖಂಡೇಶ್ವರಾ ನಿವ್ಮೊಳಗೆನಿಜವು ಸಾಧ್ಯವಾಯಿತಯ್ಯಾ ಯನಗೆ || ೬೨ || ಬಸವಣ್ಣನೆ ಗುರುವೆನಗೆ ಬಸಣ್ಣನ ಲಿಂಗವೆನಗೆ ಬಸವಣ್ಣನ ಜಂಗಮವೆನಗೆ ಬಸವಣ್ಣನೆ ಪಾದೋದಕವೆನಗೆ ಬಸವಣ್ಣನೆ ಪ್ರಸಾದವೆನಗೆ ಬಸವಣ್ಣನೆ ವಿಭೂತಿಯೆನಗೆ ಬಸವಣ್ಣನೆ ರುದ್ರಾಕ್ಷಿಯೆನಗೆ ಬಸವಣ್ಣನೆ ಮಂತ್ರವೆನಗೆ ಬಸವಣ್ಣನೆ ಅಷ್ಟಾವರಣವೆನಗೆ ಬಸವಣ್ಣನೆ ಪಂಚಾಚಾರವೆನಗೆ ಬಸವಣ್ಣನೆ ಷಡುಸ್ಥಲ ಬ್ರಹ್ಮವೆನಗೆ ಬಸವಣ್ಣನೆ ಸರ್ವ್ವಾಚಾರ ಸಂಪತ್ತಾಗಿ ಬಸವಣ್ಣನ ಹಾಸಿಕೊಂಡು ಬಸವಣ್ಣನ ಹೊದ್ದುಕೊಂಡು ಬಸವಣ್ಣನ ತೋರಿಕೊಂಡು ಬಸವಣ್ಣನ ಧರಿಸಿಕೊಂಡು ಬಸವಣ್ಣನ ಚಿದ್ಗರ್ಭದೊಳಗೆ ಕುಳ್ಳಿರ್ದು ನಾನು ಬಸವಣ್ಣ ಬಸವಾಬಸವಾ ಯನ್ನುತಿರ್ದೆನಯ್ಯಾ ಅಖಂಡೇಶ್ವರಾ||೬೩ ಬಸವನನಾಮವು ಕಾಮಧೇನು ಕಾಣಿರೊ ಬಸವನನಾಮವು ಕಲ್ಪವೃಕ್ಷವುಕಾಣಿರೊ ಬಸವನನಾಮವು ಚಿಂತಾಮಣಿಯುಕಾಣಿರೊ ಬಸವನನಾಮವು ಪರುಷದಖಣಿಯುಕಾಣಿರೊ ಬಸವನನಾಮವು ಸಂಜೀವನದ ಮೂಲಿಕೆಯು ಕಾಣಿರೊ ಇಂತಪ್ಪ ಬಸವನಾಮಾಮೃತವು ಯನ್ನ ಜಿಹ್ವೆಯತುಂಬಿ ಸಕಲ ಕರಣೇಂದ್ರಿಯಗಳು ತುಂಬಿ ಹೊರಸೂಸುವ ಸರ್ವಾಂಗರೋಮ ಕುಳಿಗಳೆಲ್ಲಾ ವೇಧಿಸುತ್ತಾಗಿ

ನಾನು ಬಸವಕ್ಷರವೆಂಬ ಹಡಗವನೇರಿ ಬಸವಾ ಭಸವಾಯೆಂದು ಭವಸಾಗರವ ದಾಟಿದೆನಯ್ಯಾ ಅಖಂಡೇಶ್ವರಾ || ೬೪ || ಜಗದಮಧ್ಯದಲ್ಲಿ ಶರಣಜನಿಸಿದಡೇನು ಆಜಗದಸ್ವರೂಪನೇ ಅಲ್ಲಲ್ಲಾ ಅದೇನು ಕಾರಣವೆಂದಡೆ, ಕೋಗಿಲೆಯತತ್ತಿಯು ನೊಡದು ಕಾಗಿಯು ಮರಿಯಮಾಡಿ ಸಲಹಿದಡೇನು ಅದುತನ್ನ ಕೋಗಿಲೆಯ ಹಿಂಡುಕೂಡುವಡಲದೆ ಮರಳಿಕಾಗೆಯ ಹಿಂಡಬೆರವುದಹೇಳಾ ಲೋಕದಮಧ್ಯದಲ್ಲಿ ಅನಾದಿ ಪರಶಿವನ ಶರಣನು ಲೋಕೋಪಚಾರವಾಗಿ ಜನಿಸಿದಡೇನು ತನ್ನಮುನ್ನಿನ ಶಿವತತ್ವವನೆ ಬೆರವನಲ್ಲದೆ ಮರಳಿಲೋಕದ ಬೆರೆಯನೋಡಾ ಅಖಂಡೇಶ್ವರಾ || ೬೫ || ಶರಣನುಗಮನಿಯೊದಡೆ ಹಿರಿದೆಂಬರ ನಿರ್ಗಮನಿಯೊವಡೆ ಕಿರಿದೆಂಬರು ನಾವಿದನ್ನರಿಯೆವಯ್ಯಾ ಶರಣಾ ಆಶ್ರಮವಂತನಾದಡೆ ಕಿರಿದೆಂಬರು ನಿರಾಶ್ರಮವಂತನಾದಡೆ ಹಿರಿದೆಂಬರು ನಾವಿದನರಿಯೆವಯ್ಯಾ ಶರಣಾ ಸರ್ವವ್ಯಾಪಾರಿಯಾದಡೆ ಕಿರಿದೆಂಬರು ನಾವಿದನರಿಯುವಯ್ಯಾ ಶರಣಾ ಭೋಗೋಪಿಯೊದಡೆ ಕಿರಿದೆಂಬರು ನಿರ್ಭೋಗಿಯೊದರೆ ಹಿರಿದೆಂಬರು ನಾವಿದನರಿಯುವಯ್ಯಾ ಹುರಿದಬೀಜ ಮರಳಿ ಹುಟ್ಟುಬಲ್ಲದೆ ಬೆಂದನುಲಿ ಕಟ್ಟುವಡೆವುದೆ ಹುಟ್ಟಗೆಟ್ಟ ಶರಣಸಟಿಯ ದೇಹವಧರಿಸಿ ಸಾಕಾರವೆನಿಸಿ ಲೋಕದೊಳಗಿರ್ದಡೇನು ಲೋಕದಂತಾತನೇ ಅಲ್ಲಲ್ಲಾ ಆತನ ಪರಿಪ್ರಕಾರ ಬೇರೆಕಾಣಿರೋ ಅದಂತೆಂದಡೆ, ಬೆರಸಿನೊಳಗಣಮಡ್ಡು ಅಗ್ನಿಯಸೋಂಕಿ ಅಗ್ನಿಸ್ವರೂಪವಾಗಿ ತೋರುವಂತೆ ಆಶರಣನ ತನುಮನಭಾವ ಸರ್ವಕರಣೇಂದ್ರಿಯಗಳೆಲ್ಲಾ ಲಿಂಗವನಪ್ಪಿ ಲಿಂಗಮಯವಾಗಿ ತೋರುತಿರ್ಪನಾತ ಆತ ಆವಾವಕ್ರಿಯೆದಲ್ಲಿರ್ದಡೇನು ಆವಾವ ಭೋಗದಲ್ಲಿರ್ದಡೇನು ಕುಂದುಕೊರತೆಯಿಲ್ಲ ಹಿಂದೆ ಶಂಕೆಯಿಲ್ಲ ಮುಂದೆಜನ್ಮವಿಲ್ಲ ಆ ಶರಣನು ಯಂತಿರ್ದಂತೆಂದಡೆ, ಸಹಜ ಪರಬ್ರಹ್ಮವಾಗಿರ್ಪನು ನೋಡಿರೋನಮ್ಮ || ೮ || ಸಂದೇಹ ಸೂತಕಿಯಲ್ಲಾ ಶರಣ ಬಂದಿತೋಬಾರದೋಯೆಂಬ ತಥ್ಯಮಿಥ್ಯರಾ

ಗದ್ವೇಷ ಯಲ್ಲಾ ಶರಣ ನಿಂದಾಸ್ತುತಿಗೆ ಹಿಗ್ಗಿ ಕುಗ್ಗುವನಲ್ಲ ಶರಣ ಇದುಕಾರಣ ॥ ಅ ॥ ।ನಿಮ್ಮಶರಣಾನವರಿಯೊವೆ ಲೋಕದೊಳಗು ಯಿಲ್ಲ ಕಾಷ್ಟದಲ್ಲಿಬೊಂಬೆಯುಮೂಡಿ ಪಟ್ಟೆನೂಲ ಸೂತ್ರವಮೂಡಿ ತೆರೆಯುಮರೆಯಲ್ಲಿನಿಂದು ಸೂತ್ರಿಕಕುಣಿಸಿದಡೆ ಕುಣಿವುತಿರ್ಪದಲ್ಲದೆ ಆ ಕಾಷ್ಟದಬೊಂಬೆ ತನ್ನತಾನೆಕುಣಿವುದೇಅಯ್ಯಾ ಯನ್ನತನುವೆಂಬ ಅಚೇತನಬೊಂಬೆಗೆ ಪ್ರಾಣವಾಯುವೆಂಬ ಜೀವನಸೂತ್ರಹೂಡಿವುನವೆಂಬತೆರೆಯ ಮರೆಯಲ್ಲಿನಿಂದು ನೀನಾಡಿಸಿದಡೆ ನಾನಾಡುತಿರ್ಪೆನಲ್ಲದೆ ಯುನಗೆಬೇರೆಸ್ವತಂತ್ರವೇಹೇಳಾ ॥ ಅ ॥ ೬೮ ॥ ಯನ್ನತನುವೆಂಬ ನಡೆಗಳೆಲ್ಲಾ ನಿಮ್ಮನಡೆಗಳಯ್ಯಾ ಯೆನ್ನನುಡಿಗಳೆಲ್ಲಾ ನಿಮ್ಮ ನುಡಿಗಳಯ್ಯಾ ಯೆನ್ನನೋಡು ನೋಟವೆಲ್ಲಾ ನಿಮ್ಮನೋಟವಯ್ಯಾ ಯೆನ್ನಕೇಳುದ ಕೇಳ್ವಿಕೆಯೆಲ್ಲಾ ನಿಮ್ಮಕೇಳ್ವಿಕೆಯುಯ್ಯಾ ನಾನು ಆವಾವಪರಿಯಲ್ಲಿ ಆಡುವ ಆಡಿಕೆಗಳೆಲ್ಲಾ ನಿಮ್ಮಬೆಡಗಿನಲೀಲೆಯಯ್ಯಾ ॥ ೬೯ ॥ ಲಿಂಗಾಂಗಸಮರಸವ ನರಿಯದೆ ಖಂಡಿತಬುದ್ಧಿಯಿಂದ ಲಿಂಗವಬೇರಿಟ್ಟುಕೊಂಡು ಸಕಲಭೋಪ ಭೋಗವನರ್ಪಿಸಿದೆವೆಂಬೀ ಭಂಗಗೇಡಿಗಳ ಮಾತುಕೇಳಲಾಗದು ಅದೆಂತೆಂದಡೆ ಆಲಿಂಗಕ್ಕೆ ಶರಣಲಲಾಟದಲ್ಲಿ ಗಂಧಾಕ್ಷತೆ ಶೃಂಗಾರವಲ್ಲದೆ ಬೇರ ಮತ್ತೆ ಗಂಧಾಕ್ಷತೆಯು ಶೃಂಗಾರವುಂಟೆ ಆಲಿಂಗಕ್ಕೆ ಶರಣನಕರ್ಣದಲ್ಲಿ ಪಂಚಮಹಾ ವಾದ್ಯದ ಕೇಳಿಕೆಯಲ್ಲದೆ ಬೇರೆಮತ್ತೆ ಕೇಳಿಕೆಯುಂಟೆ ಆಲಿಂಗಕ್ಕೆ ಶರಣನಕಂಗಳಲ್ಲಿ ನಾನಾವಿಚಿತ್ರದ ರೂಪಿನವಿನೋದವದೆ ಮತ್ತೇ ವಿನೋದವುಂಟೆ ಆ ಲಿಂಗಕ್ಕೆ ಶರಣಜಿಹ್ವೆಯಲ್ಲಿ ಷಡುರಸಾನ್ನ ನೈವೇದ್ಯವಲ್ಲದೆ ಮತ್ತೆ ನೈವೇದ್ಯವಲ್ಲದೆ ಮತ್ತೆ ನೈವೇದ್ಯವುಂಟೆ ಆಲಿಂಗಕ್ಕೆ ಶರಣನ ತ್ವಕ್ಕಿನಲ್ಲಿ।ವಸ್ತ್ರಾಭರಣ ಅಲಂಕಾರವಲ್ಲದೆ ಬೇರೆಮತ್ತೆ ಅಲಂಕಾರವುಂಟೆ ಆ ಲಿಂಗಕ್ಕೆ ಶರಣನ ಪರಮಹೃದಯುಕಮಲವೇ ನಿಜಾನಂದವಾಸವಲ್ಲದೆ ಬೇರೆ ಮತ್ತೆ ನಿಜಾವಾಸವುಂಟೆ ಇಂತಾ ಶರಣನ ಸನ್ನಹಿತಲಿಂಗ ಲಿಂಗಸನ್ನಿಹಿತ ಶರಣನೆಂ

ಬುದ ನರಿಯದಬಳಿಕ ಅನಂಕಾಲ ಲಿಂಗವಧರಿಸಿಕೊಂಡು ಲಿಂಗಾಂಗಿ ಯನಿಸಿದಡೇನು ಅದುಪಶುವಿತೊಡೆಯಲ್ಲಿ ಬರದಮುದ್ರೆಯಂತೆ ಕಾಣ್ಯಾ ಅಯ್ಯಾ ‖ ೨೦ ‖ ತನುವಿನಕಯಲ್ಲಿರ್ದ ಘನಲಿಂಗವನ್ನು ಮನೋಮಂಟಪದಲ್ಲಿ ಕುಳ್ಳಿರಿಸಿ ನೆನಹಿನ ಪರಿಣಾಮವ ಕೊಡಬಲ್ಲಾತನೇಶರಣನುಮತ್ತಾಲಿಂಗವನ್ನು ಕರ್ಣಮಂಟಪದಲ್ಲಿ ಕುಳ್ಳಿರಿಸಿ ಶಬ್ದದಪರಿಣಾಮವ ಕೊಡಬಲ್ಲಾತನೇ ಶರಣನು ಮತ್ತಾಲಿಂಗವನ್ನು ಘ್ರಾಣಮಂಟಪದಲ್ಲಿ ಕುಳ್ಳಿರಿಸಿ ಗಂಧದಪರಿಣಾಮವ ಕೊಡಬಲ್ಲಾತನೇ ಶರಣನು ಮತ್ತಾಲಿಂಗವನ್ನು ಜಿಹ್ವೆಮಂಟಪದಲ್ಲಿ ಕುಳ್ಳಿರಿಸಿ ರುಚಿಯಪರಿಣಾಮವ ಕೊಡಬಲ್ಲಾತನೇ ಶರಣನು ಮತ್ತಾಲಿಂಗವ ಸರ್ವಾಂಗಮಂಟಪದಲ್ಲಿ ಕುಳ್ಳಿರಿಸಿ ಸರ್ವಪರಿಣಾಮವ ಕೊಡಬಲ್ಲಾತನೇ ಶರಣನು ಇವಲ್ಲದೆ ಅಂಗವಿಕಾರ ಆತ್ಮಸುಖಿಗಳೆಲ್ಲರು ಭವದಕುರಿಗಳಯ್ಯಾ ‖ ೨೧ ‖ ಅನಾದಿಪರವಸ್ತುವು ತನ್ನ ಸ್ವಲೀಲೆ ಭಾವದಿಂದ ತಾನೇಅಂಗವಾದುದು ತಾನೇ ಲಿಂಗವಾದುದು ತಾನೇ ಸಂಗಮವಾದುದು ತಾನೇಸಮರಸ ವಾದುದೆಂಬ ನೇನವನಿತ್ಯಕ್ಕೆ ಶರಣ ಬಲ್ಲನಲ್ಲದೆ ವುಳಿದಕಣ್ಣ ಗೆಟ್ಟಂಣಗಳೆತ್ತಬಲ್ಲರಯ್ಯಾ ಅಖಂಡೇಶ್ವರಾ ‖ ೨೨ ‖ ಅನಾದಿಶಿವಾಂಶಕರಾದ ಶರಣರಿಗಲ್ಲದೆ ಮಧ್ಯವಾಗದುನೋಡಾ ಅಖಂಡೇಶ್ವರಾ ನಿಮ್ಮಲ್ಲಿ ನಿಜಐಕ್ಯದಪದವು ‖ ೨೩ ‖ ಶರಣಲಿಂಗಕ್ಕೆ ನೋಡುವಕಂಗಳು ಮಂದಲ್ಲದೆ ಯರಡಿಲ್ಲಕಾಣಿರೊ ಶರಣಲಿಂಗಕ್ಕೆ ವಾಸಿಸುವ ನಾಸಿಕವಂದಲ್ಲದೆ ಯರಡಿಲ್ಲಕಾಣಿರೊ ಶರಣಲಿಂಗಕ್ಕೆ ರುಚಿಸುವ ಜಿಹ್ವೆವಂದಲ್ಲದೆ ಯರಡಿಲ್ಲಕಾಣಿರೊ ಶರಣಲಿಂಗಕ್ಕೆ ಸೋಂಕುವ ತ್ವಕ್ಕುವಂದಲ್ಲದೆ ಯರಡಿಲ್ಲಕಾಣಿರೊ ಶರಣಲಿಂಗಕ್ಕೆ ನೆನವಮನವು ಮಂದಲ್ಲದೆ ಯರಡಿಲ್ಲಕಾಣಿರೊ ನಮ್ಮಅಖಂಡೇಶ್ವರನೋಡಿ ಚಿರದೆ ಶರಣ ಲಿಂಗಕ್ಕೆ ಅಂಗಮನ ಪ್ರಾಣಗಳೊಂದಲ್ಲದೆ ಯರಡಿಲ್ಲಕಾಣಿರೋ ‖ ೨೪ ‖ ಅರಿದಲ್ಲಿಶರಣ ಮರದಲ್ಲಿಶರಣ ಮಾನವನೆಂದು ನುಡಿದ ಅಜ್ಞಾನಿಗಳಮಾತು ಕೇಳಲಾಗದು ಅದೇನುಕಾ

ರಣವೆಂಥರೆ ಜಗದಗಲಗುರಿಯಹೂಡಿ ಮುಗಿಲಗಲ ಬಾಣವನೆಸದರೆ ತಪ್ಪಿಕಡಿಗೆಬೀಳುವ ಸ್ಥಾನವುಂಟೇ ಇದುಕಾರಣ ಅಖಂಡೇಶ್ವರರ ಶರಣನಲ್ಲಿ ತೋರುವತೋರಿಕೆಯಲ್ಲವು ಲಿಂಗತಾನೇ ॥ ಅ ॥ ೭೫ ॥ ಅನಂತಕೋಟಿ ಬ್ರಹ್ಮಾಂಡಂಗಳ ನೊಳಕೊಂಡ ಮಹಾಘನಲಿಂಗದಲ್ಲಿ ತನ್ನಂಗಮನ ಪ್ರಾಣೇಂದ್ರಿಯ ವಿಷಯಕರಣಂಗಳಹೊಳಿ ತಾನಿಲ್ಲದೆನಡೆವುತ್ತಾ ತಾನಿಲ್ಲದೆನುಡಿವುತ್ತಾ ತಾನಿಲ್ಲದೆಹಿಡಿವುತ್ತಾ ತಾನಿಲ್ಲದೆಬಿಡುವುತ್ತಾ ತಾನಿಲ್ಲದೆನೋಡುತ್ತಾ ತಾನಿಲ್ಲದೆಳಡುತ್ತಾ ಬಯಲಬೊಂಬೆಯಂತೆ ಸುಳಿವಮಹಾಶರಣರ ತೋರಿಬದುಕಿಸಯ್ಯಾ ಯನ್ನ ॥ ಅ ॥ ೭೬ ॥ ಯನ್ನತನುವಿನೊಳಗೆ ತನುವಾಗಿರ್ದಿರಯ್ಯಾನೀವು ಯನ್ನಮನದೊಳ ಮನರೂಪಾಗಿರ್ದಿರಯ್ಯಾನೀವು ಯನ್ನ ಪ್ರಾಣದೊಳಗೆ ಪ್ರಾಣರೂಪಾಗಿರ್ದರಯ್ಯಾನೀವು ಯನ್ನಭಾವದೊಳಗೆ ಬಾವರೂಪಾಗಿರ್ದಿರಯ್ಯಾನೀವು ಇಂತು ಯೆನ್ನೊಳಗೆನೀವು ಈ ಪರಿಯಲಿರ್ದಿರಾಗಿ ನಾನಿಮ್ಮೊಳಗೆ ಚಿನ್ನಭಿನ್ನಣದಂತೆ ರನ್ನದೀಪ್ತಿಯಂತೆ ಜ್ಯೋತಿಯಪ್ರಭೆಯಂತಿರ್ದೆನಯ್ಯಾ ॥ ಅ ॥ ೭೭ ॥ ಅಂಗಕ್ಕೆ ಇಷ್ಟಲಿಂಗದ ಸತ್ಕ್ರಿಯುವನಳವಡಿಸಿಕೊಂಡು ಪ್ರಾಣಕ್ಕೆ ಪ್ರಾಣಲಿಂಗವ ಸಮಜ್ಞಾನದಾಚಾರವ ಸಂಮಂಧಿಸಿಕೊಂಡು ಅಂಗಲಿಂಗ ಭಿನ್ನಭಾವವಳಿದು ವಳಹೊರಗೆಲ್ಲಾ ಅಖಂಡಜ್ಞಾನಮಯವಾದ ಶರಣಂಗೆ ವಾರತಿಥಿಲಗ್ನಗಳಿಲ್ಲಾ ಶುಭಾಶುಭಂಗಳಿಲ್ಲಾ ಸ್ತುತಿನಿಂದಾ ಪೂಜ್ಯಾಪೂಜ್ಯಗಳಿಲ್ಲ ಅಖಂಡೇಶ್ವರ ನಿಮ್ಮಶರಣಯಂತಿರ್ದಂತೆ ಸಹಸ್ರಬ್ರಹ್ಮವಾಗಿರ್ಪನು ॥ ೭೮ ॥ ಘನಮಹಾಲಿಂಗಕ್ಕೆ ಮನವೇಪೀಠವಾಗಿ ತನುವೇ ಶಿವಾಲಯುವಾಗಿ ನೆನಹೇ ಪೂಜೆಯಾಗಿ ಧ್ಯಾನವೇತೃಪ್ತಿಯಾಗಿ ಅಂಬುಧಿಯೊಳು ಮುಳುಗಿದ ಪೂರ್ಣಕುಂಡವಂತೆ ನಿಮ್ಮ ಅವಿರಳವಿದ್ಯ ಮಹಾಬೆಳಗಿನೊಳಗೆಮುಳುಗಿ ನಾನು ನೀನೆ ಭವಭಯದ ಕುರುಹುಮರದು ಯೆನೇನು ಅರಿಯದಿರ್ದೆನಯ್ಯಾ ಅಖಂಡೇಶ್ವರಾ ॥ ೭೯ ॥ ಶಿವಶಿವಾಯೇನೆಂಬೆ ಯೇನೆಂಬೆನಯ್ಯಾ ಶರಣಾ

ಘನವನು ಶರಣರಮಹಿಮೆಯನು ಶರಣರಚರಿತ್ರೆಯನು ಶಿವನೇಬಲ್ಲ ನಲ್ಲದೆ ವುಳಿದಮನುಷ್ಯರು ಅದಂತಿಳಿವವರಯ್ಯಾ ಹೊರಗಿನಕ್ರಿಯೆವು ಅನಂತಪ್ರಕಾರವಾದರೂ ವಳಗೆರಕಕೂಡಿದಂತೆ ಕ್ಷೀರಕ್ಷೀರಬೆರದಂತೆ ಮಾರುತಾಂಬರಸಂಯೋಗದಂತೆ ಶಿಖಿಕರ್ಪೂರದ ನಿಷ್ಪತ್ತಿಯೊದಂತೆ ಸಚ್ಚಿದಾನಂದ ಪರಬ್ರಹ್ಮವಕೂಡಿ ಬೆಚ್ಚಿ ಬೆರಗಾಂತಿರ್ಪ ಭವರಹಿತಶರಣರು ಅಮಲ ಜ್ಞಾನಸ್ವರೂಪರು ಅವರೇ ಜೀವನ್ಮುಕ್ತರು ಅವರೇ ಮಹಾಂತವ ನುಂಗಿದ ಮಹಾಂತರುನೋಡಾ ಅಖಂಡೇಶ್ವರಾ ‖ ೮೦ ‖

ಐಕ್ಯಸ್ಥಲವು ‖ ಕ್ಷುತ್ಪಿಪಾಸ ಶೋಕ, ಮೋಹ, ಜನನ, ಮರಣಂಗಳೆಂಬ ಷಡೂರ್ಮೆಗಳ ಹುಡಿಮಾಡಿ ಸುಟ್ಟುರುಹಿ ಕಾಮ, ಕ್ರೋಧ,ಲೋಭ,ಮೋಹ, ಮದ, ಮತ್ಸರ, ವೆಂಬ ಅರಿಷಡ್ವರ್ಗಂಗಳ ಬೇರುಕಿತ್ತುಸುಟ್ಟು ಇಷ್ಟಲಿಂಗಕೆ ನಿಷ್ಟೆಯಿಂದ ಜಲಗಂಧಾಕ್ಷತೆ ಪುಷ್ಪಧೂಪದೀಪ ನೈವೇದ್ಯ ತಾಂಬೂಲವೆಂಬ ಅಷ್ಟವಿಧಾರ್ಚನೆಯಂಮಾಡಿ ಅದಲ್ಲದೆ ಮತ್ತಾಲಿಂಗವನ್ನು ಧ್ಯಾನಮುಖದಿಂದ ಅಂತರಂಗಕ ಬಿಜಯಂಗೈಸಿ ಹೃದಯಕಮಲ ಕರ್ಣಿಕಾಸ್ಥಾನದಲ್ಲಿ ಕುಳ್ಳಿರಿಸಿ ಪ್ರಾಣಾಯಾಮ ನಿರ್ಗುಣ ದಷ್ಟವಿಧಾರ್ಚನೆಯಂಮಾಡಿ ಚಿತ್ತಸ್ವಸ್ಥನಾಗಿ ಭಾವವುಬಯಲ ಬ್ರಹ್ಮದಲ್ಲಿಹೂಳಿ ಹೋಗಿ ತಾ ನಿಲ್ಲದಿರೆಂಬುದ ನಳಿದು ವುರಿಗೊಂಡ ಕರ್ಪೂರದಂತೆ ಅವಿರಳ ಸಮರಸವಾಗಿರ್ಪಾತನೇ ನಿಜಲಿಂಗೈಕ್ಯನುನೋಡಾ ಅದೆಂತೆಂದಡೆ, ಶ್ಲೋ॥ ಷಡೂರ್ಮೆಷಡ್ವರ್ಗ ಚ ನಾಸ್ತಿಚಾಷ್ಟವಿಧಾರ್ಚನಂ । ನಿಭಾರ್ವೋ ನಿಜಲಿಂಗೈಕ್ಯ ಶಿಖಿಕರ್ಪೂರಯೋಗವತ್ ‖ ೧ ‖. ಎಂಬುದಾಗಿ ಯಿಂತಪ್ಪ ಲಿಂಗೈಕ್ಯರ ಮಹಾಘನ ನಿಜವನಿಲುವಿಂಗೆ ನಮೋ ನಮೋ ಯೆಂಬೆನಯ್ಯಾ ‖ ಅ ‖ ೧ ‖ ವೇದಶಾಸ್ತ್ರಗಳ ಆಗಮಪುರಾಣಗಳ ನಾಮ ಆದಿಯ ಪಥವಸಾಧಿಸಬೇಕೆಂಬ ಭೇದ ಶುದ್ಧಭ್ರಾಂತಿಜ್ಞಾನಯಿಲ್ಲನೋಡಾ ಲಿಂಗೈಕ್ಯನು ಷಡುಸ್ಥಾನಂಗಳಸಾಧಿಸಿ ಘಟವಹೂ

ರುವನಲ್ಲನೋಡಾ ಲಿಂಗೈಕ್ಯನು ಕಾರುಮನವ ಕಳೆವಳನಡಿಸಿ ಲೋಕದರಂಜನೆಯನುಡಿಸಿ ಸಾಧಿಸಿ ಕುರಹಿಲ್ಲವ ಬ್ರಹ್ಮದಲ್ಲಿ ತೆರಹಿಲ್ಲವಿರ್ಪನೋಡಾ ಯಖಂಡೇಶ್ವರಾ ನಿಮ್ಮನಿಜಲಿಂಗೈಕ್ಯನೂ ॥ ೨ ॥ ಸಗುಣನಲ್ಲ ನಿರ್ಗುಣನಲ್ಲನೋಡಾ ಲಿಂಗೈಕ್ಯನು ಸಾಕಾರನಲ್ಲ ನಿರಾಕಾರನಲ್ಲನೋಡಾ ಲಿಂಗೈಕ್ಯನು ಶೂನ್ಯನಲ್ಲ ನಿಃಶೂನ್ಯನಲ್ಲನೋಡಾ ಲಿಂಗೈಕ್ಯನು ಜ್ಞಾನಿಯಲ್ಲ ಅಜ್ಞಾನಿಯಲ್ಲನೋಡಾ ಲಿಂಗೈಕ್ಯನು ಕಾಮಿಯಲ್ಲ ನಿಷ್ಕಾಮಿಯಲ್ಲನೋಡಾ ಲಿಂಗೈಕ್ಯನು ದ್ವೈತನಲ್ಲ ಅದ್ವೈತನಲ್ಲನೋಡಾ ಲಿಂಗೈಕ್ಯನು ಕರ್ತೃವಲ್ಲ ಭೃತ್ಯನಲ್ಲ ನೋಡಾ ಲಿಂಗೈಕ್ಯನು ಇಂತೀತೆರದಲ್ಲ ತೋರುವ ತೋರಿಕೆಯೆಲ್ಲವು ತಾನೇಯಾಗಿ ಇಹಪರದಗತಿಯ ಗೆಡಿಸಿ ಪರಿಪೂರ್ಣಬ್ರಹ್ಮದಲ್ಲಿ ತನ್ನ ಕುರುಹಡಗಿಸಿ ನಿರ್ವಯಲಾಗಿಪ್ಪ ನಿಜಲಿಂಗೈಕ್ಯನು ಏನೆಂದುಪಮಿಸಬಹುದಯ್ಯಾ ॥ ೩ ॥ ಸಾವಯನಲ್ಲ ನಿರವಯನಲ್ಲನೋಡಾ ಲಿಂಗೈಕ್ಯನು ಗಮನಿಯಲ್ಲ ನಿಗಮನಿಯಲ್ಲನೋಡಾ ಲಿಂಗೈಕ್ಯನು ಸುಮನಸಾರಾಯ ಸುಜ್ಞಾನಭರಿಮನೋಡಾ ಲಿಂಗೈಕ್ಯನುತ ಅಮಲದಬ್ರಹ್ಮದಕೂಟ ಅಚಲಿತ ಅಭೇದ್ಯನುನೋಡಾ ಲಿಂಗೈಕ್ಯನು ಅನ್ವಯಭಾವ ಅಗಣಿತಮಹಿಮನುನೋಡಾ ॥ ಅ ॥ ನಿಮ್ಮನಿಜಲಿಂಗೈಕ್ಯನು ॥ ೪ ॥ ಸರ್ವಾಚಾರಸಂಪತ್ತನರಿದಲ್ಲದೆ ನಿಜಬಯಲಪವವುಕಾರಬಾರದುನೋಡಾ ಆಶಿರಿಯು ಸರ್ವಾಚಾರ ಸಂಪತ್ತು ಕಾಣಬಾರದುನೋಡಾ ಆಶಿರಿಯು ಸರ್ವಾಚಾರ ಸಂಪತ್ತು ಯಂತೆನಲು ಷಡ್ಭೂತಂಗಳಲ್ಲಿ ಷಡ್ವಿಧಮಂತ್ರಂಗಳ ನೆಲೆಗೊಳಿಸಿ ಆ ಷಡ್ವಿದಮಂತ್ರಗಳನ ಷಡ್ವಿದಚಕ್ರಗಳೆಂದುತಿಳಿದು ಆ ಷಡ್ವಿದಚಕ್ರಂಗಳಿಗೆ ಷಡ್ವಿಧದೇವತೆಗಳನ್ನು ಷಡ್ವಿದ ಅಂಗವೇದಾಧಾರಗೊಳಿಸಿ ಆ ಷಡ್ವಿಧ ಲಿಂಗಕ್ಕೆ ಷಡ್ವಿದಕರಣಂಗಳನ ಷಡ್ವಿದ ಹಸ್ತಂಗಳೆಂದು ಅರಿದಳವಡಿಸಿಕೊಂಡು ಆಷಡ್ವಿಧಹಸ್ತಂಗಳಿಗೆ ಷಡ್ವಿಧಲಿಂಗಗಳವಡಿಸಿಕೊಂಡು ಆಷಡ್ವಿಧಲಿಂಗಕ್ಕೆ ಷಡ್ವಿದ ಇಂದ್ರಿಯಂಗಳನ ಷಡ್ವಿಧಮುಖಂಗಳೆಂದು

ಸಮರ್ಪಿಸಿ ಷಡ್ವಿಧಮುಖಂಗಳಿಗೆ ವಳಹೊರಗೆಲ್ಲಾ ಷಡ್ವಿಧಲಿಂಗ ಬೆಳಗುತುಂಬಿ ತೊಳಗಿಬೆಳಗುವ ಷಡ್ವಿಧ ವಿಷಯಂಗಳನೆ ಷಡ್ವಿಧ ಪದಾರ್ಥಂಗಳೆಂದರಿದು ಷಡ್ವಿಧಭಕ್ತಿಯಿಂದ ಷಡ್ವಿಧಮುಖಂಗಳಿಗೆ ಸಮರ್ಪಿಸಿ ವಳಹೊರಗಲ್ಲಾ ಷಡ್ವಿಧಲಿಂಗವ ಬೆಳಗುತುಂಬಿ ತೊಳಗಿ ಬೆಳಗುದಿರ್ಪುದ ನೋಡಾ ||೫|| ಯುತೆದೆರಹಿಲ್ಲವ ಷಡ್ವಿಧಲಿಂಗವ ಬೆಳಗಿನೊಳಗೆ ತನ್ನ ಷಡ್ವಿಧಲಿಂಗದ ಕಳೆಗಳೆಲ್ಲವನಡಗಿಸಿ ತಾನೆಂಬಕುರುಹುತೋರದೆ ಪ್ರಸಾದೇ ಸರ್ವಾಚಾರ ಸಂಪತ್ತು ನೋಡಾ ಇಂತಪ್ಪ ಸರ್ವಾಚಾರಸಂಪತ್ತು ಸಿಮ್ಮ ಪೂರ್ಣವಲುಮೆಯು ಶರಣರಿಗಲ್ಲದೆ ವುಳಿದವರಿಗಳವಡದಯ್ಯಾ ಗರ್ವಾಹಂಕಾರವ ನಳಿದು ಸರ್ವಕರಣಂಗಳು ತರವಾಗ್ನಿ ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡ ಲಿಂಗೈಕ್ಯಂಗೆ ಅಖಂಡಪರಿಪೂರ್ಣ ಮಹಾಘನಲಿಂಗವೇ ಭಾಜನವಾಗಿ ಅಂಘನ ಮಹಾಘನ ಲಿಂಗಕ್ಕೆ ನಿಜಲಿಂಗೈಕ್ಯನೆ ಆ ಭಾಜನವಾಗಿ ಅಂಗಲಿಂಗವೆಂಬ ಪ್ರಭೆಯಭಾವವಳಿದು ಕ್ಷೀರಕ್ಷೀರ ಬೆರಸಂತೆ ಅವಿರಳಸಮರಸವಾಗಿರ್ಪ ಲಿಂಗಕ್ಕೆ ಏಕಭಾಜನವಲ್ಲದೆ ವುಳಿದವರಿಗೆಲ್ಲಿಯದಯ್ಯಾ ||೬|| ಅಂಗದಲ್ಲಿವ ಗುಣವಳಿಯದೆ ಪ್ರಾಣದಪ್ರಪಂಚುಹಿಂಗದ ಭಾವಭ್ರಮೆಯು ಹಿಂಗದೆ ಮನಸ ಮಾಯೆಯಡಗದೆ ಆತ್ಮನೆಂಬಲಹು ಮತಕಡದೆ ಲಿಂಗಕ್ಕೆ ತಮಗೆ ಏಕಭಾಜನವೆಂದು ನುಡಿವ ಕಾಕುಮಾನವರನೇ ನೆಂಜನಯ್ಯಾ ||೭|| ಮನವೆಂಬವರಳಿಗೆ ಸಕಲಕರಣಂಗಳೆಂಬ ತಂಡುಲವಹಾಕಿ ಸುಜ್ಞಾನವೆಂಬ ವನಿಕೆಯಪಿಡಿದು ಪರಮರಿಣಾಮ ದೊಳಗೋಲ್ಯಾಡುತ್ತಾ ಕುಟ್ಟಿ ಅಜ್ಞಾನವೆಂಬ ತವುಡಕೇರಿ ಚಿತ್ತಕರಣಂಗಳೆಂಬ ಅಕ್ಕಿಯಂತೆಗದುಕೊಂಡು ಸದ್ಭಾವವೆಂಬ ಭಾಂಡದಲ್ಲಿ ತುಂಬಿ ಪರಮಾನಂದ ಜಲವೆಂಬ ಯಸರನಿಟ್ಟು ತ್ರಿಪುಟಯೆಂಬ ಒಲೆಯುಮಾಡಿ ಭೇದಾಗ್ನಿಯೆಂಬ ಬೆಂಕಿಯ ಪುಟವನಿಕ್ಕಿ ಅರಿಷಡ್ವರ್ಗಂಗಳೆಂಬ ಸೌದೆಯಹಚ್ಚಿ ಮಹಾಜ್ಞಾನವೆಂಬ ಪಾಕವಮಾಡಿ ಪರಿಪೂರ್ಣವೆಂಬ ಪರಿಮಾಣದಲ್ಲಿ ಘಸಣಿಸಿಕೊಂಡು ಅಖಂಡಪರಿಪೂರ್ಣ

ವು ಘನಲಿಂಗಕ್ಕೆ ಸಲಿಸಬಲ್ಲಾತನೇ ಶರಣನು ಆತನಪಿಜಾನುಭಾವಿ ಆತನು ನಿಜಲಿಂಗೈಕ್ಯನು ಇಂತಿ ಭೇದವನರಿಯದೆ ಮಂಚಿನ ಪರಿಯಣದಲ್ಲಿ ಲೋಹದವಾತೆಯಲ್ಲಿ ಮನಬಂದಪರಿಯಲಿ ಹೊಯಿಹೊಯಿದು ವಟ್ಟಿಸಿಕೊಂಡು ಬಾಯಿಗೆ ಬಂದಂತೆ ಕಿಂಬವ ಭಾರೀಕರಿಗೆ ಏಕಭಾಜನವೆಲ್ಲಿಹದಯ್ಯಾ ||೮|| ಬಾರಯ್ಯಾಬಾರಯ್ಯಾಗಂಡನೇ ಯೆನ್ನಘ್ರಾಣವೆಂಬ ಭಾಜನದಲ್ಲಿ ನಿಮಗೆ ಸುಗಂಧಪದಾರ್ಥವೆಂಬ ಸುಯಿಧಾನವಗಡಣಿಸಿವುಣಲಿಕ್ಕುವೆ ಬಾರಯ್ಯಾ ಬಾರಯ್ಯಾಗಂಡನೇ ಯೆನ್ನ ಜಿಹ್ವೆಯೆಂಬ ಭಾಜನದಲ್ಲಿ ನಿಮಗೆ ಸುರುಚಿಪದಾರ್ಥವೆಂಬ ಸುಯಿಧಾನವಗಡಣಿಸಿ ಉಣಲಿಕ್ಕುವೆ ಬಾರಯ್ಯಾ ಬಾರಯಗಂಡನೇ ಯೆನ್ನ ನೇತ್ರವೆಂಬ ಭಾಜನದಲ್ಲಿ ಸುರೂಪುಪದಾರ್ಥವೆಂಬ ಸುಯಿಧಾನವ ಗಡಣಿಸಿ ಉಣಲಿಕ್ಕುವೆ ಬಾರಯ ಬಾರಯ್ಯಾಗಂಡನೇ ಯೆನ್ನತ್ವಕ್ಕುಯೆಂಬ ಭಾಜನದಲ್ಲಿ ಸುಸ್ಪರ್ಶನವೆಂಬ ಪದಾರ್ಥಸುಯಿಧಾನವಗಡಣಿಸಿ ಉಣಲಿಕ್ಕುವೆ ಬಾರಯ್ಯಾ ಬಾರಯ್ಯಾಗಂಡನೇ ಯೆನ್ನಶ್ರೋತ್ರವೆಂಬ ಬಾಜನದಲ್ಲಿ ಸುಶಬ್ದವೆಂಬ ಪದಾರ್ಥವ ಸುಯಿಧಾನಕಗಡಣಿಸಿ ನಿಮಗೆ ಉಣಲಿಕ್ಕುವೆನಯ್ಯಾ ಬಾರಯ್ಯಾ ಬಾರಯ್ಯಾಗಂಡನೇ ಯೆನ್ನ ಮನವೆಂಬ ಭಾಜನದಲ್ಲಿ ನೆನಹೆಂಬ ಸುಯಿಧಾನವಗಡಣಿಸಿ ವುಣಲಿಕ್ಕುವೆನಯ್ಯಾ ನಿಮನಿಮಗೆ ||೯|| ಕೇಳಿಕೇಳಿರವ್ವಾ ನಮ್ಮಮನೆತನದ ವೊಂದುಬೆಡಗುಬಿನ್ನಣವ ಯೆನ್ನಕಟ್ಟಿದ ಮುಡಿಯ ಸಡಲಿಸಿದ ಯೆನ್ನವುಟ್ಟುದು ಕಳೆದುಕೊಂಡ ಯೆನ್ನತೊಟ್ಟುದು ಬಿಡಿಸಿದ ಯೆನ್ನ ಲಜ್ಜೆನಾಚಿಕೆಯ ತೋರಿಸಿದಾ ಯೆನ್ನ ಮೌನದಲ್ಲಿರಿಸಿದಾ ಯೆನ್ನಕರವಿಡಿದುಕೊಂಡು ತಾನುಂಬ ಪರಿಯಣದಲ್ಲಿ ಯೆನ್ನಕೂಡಿಕೊಂಡು ವುಂಡನುಕೇಳಿರವಾ ನಮ್ಮ ||ಅಖ|| ೧೦ || ಲಿಂಗದೊಡನೆಸಹ ಭೋಜನವಮಾಡುವ ಲಿಂಗವಂತರೆಲ್ಲಾ ಕೇಳಿರೋ ನಿಮ್ಮತನುವು ಸಂಸಾರವಿಷಯ ಪ್ರಪಂಚದಲ್ಲಿ ಮುಳಿಗಿರುವದು ನಿಮ್ಮಮನವು ಮಲತ್ರಯಗಳಲ್ಲಿ ಸುತ್ತುತಿರ್ಪುದು ನಿಮ್ಮಮನವು ಭ

ವಭವದಲ್ಲಿ ತೊಳಲುತಿರ್ಪದು ನೀವಿಂತುಮಲಮಯ ಸರೂಪವಾ
ಗಿರ್ದು ಭಯವಿಲ್ಲದೆ ಅಮಲಲಿಂಗದೊಡನೆಸಹ ಭೋಜನವಮಾಡಿ
ದರೆ ಅಘೋರನರಕದಲ್ಲಿ ಕ್ಕಡೆಮಾಣ್ಬನೇನಮ್ಮ ||ಅಖ|| ೧೧ || ಪ್ರಾ
ಣವೇ ಶಿವೆಂದು ದೇಹವನಂಡಲಿವಾಗ ಬಾಯಸವಿಯನುಂಬವರ
ಲ್ಲದೇ ಲಿಂಗದೇವನ ನೆನಹುಯಲ್ಲಿಹುದೋ ಲಿಂಗದೇವಮರದು ಅಂ
ಗಕ್ಕೆ ಕೊಟ್ಟರೆ ಅದೇಯೆಂಜಲವುನೋಡಾ ಅಂತಹ ಯೆಂಜಲೋಗರ
ವ ಮರಳಿ ಲಿಂಗಕ್ಕೆ ನೋಡಲಾಗದು ನೋಡಾ ಅದೇನುಕಾರಣವೆಂ
ದರೆ ಕಂಡವರಕಂಡು ತಾನುಂಡ ಯೆಂಜಲವ ಮರಳಿ ವರಳಿ ಭೋ
ಭೋಜಿಯಕಟ್ಟಿ ಲಿಂಗಕ್ಕೆತೋರಿದರೆ ಹುಳುಗೊಂಡದಲ್ಲಿಕ್ಕುವನು
ನೋಡಾ ನಮ್ಮ ||ಅಖ|| ೧೨ || ಕಾಯದಕಳವಳದಲ್ಲಿ ಕಂಗೆಟ್ಟು
ಜೀವನುಪಾಪಿಯಲ್ಲಿ ಸುಳಿದು ಪಂಚೇಂದ್ರಿಯಂಗಳ ಸಂಚರಿಸಿ ಅರಿ
ಷಡ್ವರ್ಗಂಗಳಿಂದ ಹರಿದಾಡುವ ಅಷ್ಟಮದಂಗಳಲ್ಲಿ ಕಟ್ಟುಪಡೆದು
ಇಂತೀ ಅಂಗಪ್ರಕೃತಿ ಅಜ್ಞಾನದಲ್ಲಿ ಮಗ್ನವಾಗಿರ್ದು ಮಹಾಘನ
ಲಿಂಗದೊಡನೆಸಹ ಭೋಜನಮಾಡುವ ಮರಹಿನಮಾನವರೆಲ್ಲರು ಕ
ಲ್ಪಕಲ್ಪಾಂತರ ನರಕಸಮುದ್ರದಲ್ಲಿ ಮುಳಗಾಡುತಿರ್ಪರಯ್ಯಾ ಕಾ
ಯದಕಳವಳದಲಿ ಕಂಗೆಟ್ಟು ಸಂಸಾರದೊಳಗಿದ್ದು ಸದ್ಭಕ್ತನು
ಲಿಂಗದೊಡನೆಸಹ ಭೋಜನವಮಾಡಬೇಕಾದರೆ ಜಂಗಮದ ಪ್ರಸಾ
ದವಕೈಕೊಂಡು ತನ್ನಲಿಂಗಕ್ಕೆ ಅರ್ಪಿಸಿ ಆಲಿಂಗದೊಡನೆಸಹ ಭೋ
ಜನವ ಮಾಡಬೇಕಲ್ಲದೆ ಜಂಗಮದ ಪ್ರಸಾದವಿಲ್ಲದ ಲಿಂಗದೊಡನೆ
ಸಹ ಭೋಜನ ಮಾಡಲಾಗದು ಅದೇನುಕಾರಣವೆಂದರೆ ಆಜಂಗಮ
ದ ಪ್ರಸಾದಲಿಂಗಕ್ಕೆ ಪರಮಪೀಠ ಜೀವಾಳವಾದಕಾರಣ ಅಂತಪ್ಪ
ಜಂಗಮದಲ್ಲಿ ರೂಪು ಕುರೂಪು ಕುಲಛಲವ ನೋಡಲಾಗದಯ್ಯಾ
ಆಜಂಗಮದಲ್ಲಿ ವಿದ್ಯಾಶಾಸ್ತ್ರ ಬುದ್ಧಿ ವರ್ತನೆ ಜ್ಞಾನಾಚಾರ ಮಾ
ತಿನಜಾಣ್ಮೆಯ ಹುಡುಕಲಾಗದು ಆಜಂಗಮದಲ್ಲಿ ಪ್ರೌಢ ನೀಚವ
ನರಸಲಾಗದು ಆ ಜಂಗಮದಲ್ಲಿ ಹಾಸ್ಯರಹಸ್ಯವು ದ್ವೇಷವು ದಾಸೀ

ನಂಗಳ ಮಾಡಲಾಗದು ಆಜಂಗಮದಲ್ಲಿ ಪಂಕ್ತಿಭೇದ ಪಾಕಭೇದವ ಮಾಡಲಾಗದು ಆಜಂಗಮದಲ್ಲಿ ಮದಮತ್ಸರಂಗಳಿಂದಹಗೆ ತನವ ಸಾಧಿಸಲಾಗದುಆ ಜಂಗಮನಮೇಲೆ ಮಿಥ್ಯಕಲಾಪದಿಂದೆ ಇಲ್ಲದೆ ಅಪ ರಾಧವ ಕಲ್ಪಿಸಲಾಗದು ಆಜಂಗಮಕ್ಕೆ ಕೋಪಾಟೋಪವುದ್ರೇಕ ದಿಂದ ನಿಷ್ಠೂರವಾಕ್ಯವ ನುಡಿಯಲಾಗದು ಆಜಂಗಮವು ಹಾದಿ ಬೀದಿ ಬಜಾರಂಗಳಲ್ಲಿ ತಮ್ಮಗರ್ವದಿಂದ ಬೀಗಿ ಬೆರದುಕೊಂಡು ಹೋಗಲಾಗದು ಆಜಂಗಮದ ಸನ್ನಿಧಿಯಲ್ಲಿ ಆನೆ ಕುದುರೆ ಅಂದಳ ಪಲ್ಲಕಿಯ ನೇರಲಾಗದು ಆಜಂಗಮವು ಬರುವಾಗ ಇದರಲ್ಲಿ ತೂ ಗುತೊಟ್ಟಿಲದಲ್ಲಿ ಚಪ್ಪರಮಂಚದಲ್ಲಿ ಗಗನುಪ್ಪರಿಗೆ ವುನ್ನತ ಚೌಕಿ ಯಲ್ಲಿ ಕುಳ್ಳಿರಲಾಗದು ಆಜಂಗಮವು ತನ್ನ ಕರುಣದಿಂದ ಲಿಂಗಾ ರ್ಪಿತಕ್ಕೆ ಜಯಸಿಟ್ಟು ಮನಿಗೆ ಬಂದಲ್ಲಿಕಂಡು ಅಡ್ಡಮೊರೆಯ ನಿಕ್ಕ ಲಾಗದು ಇಂತೀ ಬೇದಗುಣಂಗಳ ಜಂಗಮದಲ್ಲಿ ಮಾಡುತಾವತಾ ಮಸ ಭಕ್ತಂಗೆ ಗುರುವಿಲ್ಲ(ವೆ)ಂದಿಗೂಯಿಲ್ಲ ಇಂತಪ್ಪ ಆಜ್ಞಾನಿ ತಾಮಸಬಕ್ತನು ಲಿಂಗದೊಡನೆಸಹ ಭೋಜನವಮಾಡಿದರೆ ಶುನಿ ಸೂಕರಕು ಕಕ್ಕುಟಗಳ ಬಸುರಲ್ಲಿಬಂದು ಚಂದ್ರಸೂರ್‍ಯರುಳ್ಳನಕಾ ಹೊಲೆಯರ ಬಾಗಿಲಲ್ಲಿ ಕಾಯಿದುಕೊಂಡಿರ್ಪನುನೋಡಾ ||ಅಖ|| ||೧೪|| ನಡವಕಾಲದಲ್ಲಿ ನಿಮ್ಮ ಕೂಡ ನಡೆವೆನಯ್ಯಾ ನೋಡುವಕಾ ಲದಲ್ಲಿ ನಿಮ್ಮಕೂಡ ನೋಡುವೆನಯ್ಯಾ ಕೇಳುವ ಕಾಲದಲ್ಲಿ ನಿಮ್ಮ ಕೂಡಕೇಳುವೆನಯ್ಯಾ ಸೋಂಕುವ ಕಾಲದಲ್ಲಿ ನಿಮ್ಮಕೂಡ ಸೋಂ ಕುವೆನಯ್ಯಾ ವಾಸಿಸುವಕಾಲದಲ್ಲಿ ನಿಮ್ಮಕೂಡೆ ವಾಸಿಸುವೆನ ಯ್ಯಾ ರುಚಿಸುವಕಾಲದಲ್ಲಿ ನಿಮ್ಮಕೂಡೆ ರುಚಿಸುವೆನಯ್ಯಾ ನೆನವ ಕಾಲದಲ್ಲಿ ನಿಮ್ಮ ಕೂಡನೆನೆವೆನಯ್ಯಾ ಮರವಕಾಲದಲ್ಲಿ ನಿಮ್ಮ ಕೂಡಮರೆವೆನಯ್ಯಾ ಅರಿವಕಾಲದಲ್ಲಿ ನಿಮ್ಮಕೂಡ ಅರಿವೆನಯ್ಯಾ ಇನಮಂಡಲದಕಿರಣದಂದೆ ಸಕಲ ತೋರಿಕೆಯ ತೋರುವಕಾಲದಲ್ಲ ನಿಮ್ಮಕೂಡತೋರುವೆನಾಗಿ ಅಖಂಡೇಶ್ವರಾ ನಿಮ್ಮಲ್ಲಿ ಎನಗೆ ಸಹ

ಭೋಜನವು ಸಮನಿಸಿತ್ತುನೋಡಾ ||೧೫|| ಎನಗೆ ನೀವೆಚಿದಾನಂ ದವಯ್ಯಾ ನಿಮಗೆನಾನೆ ಚಿದ್ಭಾಂಡವಯ್ಯಾ ಎನಗೆನೀವೇ ಚಿದ್ಭೋ ಜನವಯ್ಯಾ ನಿಮಗೆ ನಾನೇ ಚಿದ್ಭಾಜನವಯ್ಯಾ ಎನಗೆನೀವೇ ಸಕಲದ್ರವ್ಯ ಪದಾರ್ಥವಯ್ಯಾ ನಿಮಗೆ ನಾನೇ ಸಕಲಪದಾರ್ಥ ದ್ರ ವ್ಯವಯ್ಯಾ ನಾನು ನೀವು ವೊಂದೇಹರಿವಾಣದಲ್ಲಿಸಹ ಭೋಜನವ ಮಾಡುತಿರ್ಪೆವಾಗಿ ಅಖಂಡೇಶ್ವರಾ ನಾನು ನೀನೆಂಬುವ ವುಭಯದ ಕೀಲು ಕಳಚಿತ್ತುನೋಡ |ಅಖ|| ೧೬ || ಪರಮಪ್ರಣೆಯಿಂದೆ ಧರ ಣಿಗೆಬಂದು ಗುರುಲಿಂಗಜಂಗಮದ ಭಕ್ತಿಯ ನಳವಡಿಸಿಕೊಂಡು ಷ ಡುಸ್ಥಲ ಬ್ರಹ್ಮದನುವರಿದು ನೂರೊಂದುಸ್ಥಲ ಕುಲಗಳ ಕರತಲಾ ಮಲಕವಾಗಿ ತಿಳಿದು ನಿಜೈಕ್ಯಪದದಲ್ಲಿ ನಿರವಯಲಾದರು ಬಸವಣ್ಣ ಮೊದಲಾದ ಸಂಖ್ಯಾತ ಮಹಾಗಣಂಗಳು ಅದೆಂತೆಂದರೆ ಸಂಗನಬಸ ವಣ್ಣನು ಕಪ್ಪಡಿಯಲ್ಲಿ ಸಂಗನೊಳಗೆ ಬಯಲಾದರು ಅಕ್ಕಮಹಾ ದೇವಿ ಅಲ್ಲಮಪ್ರಭುದೇವರು ಶ್ರೀಶೈಲಕದಳಿಯ ಜ್ಯೋತಿರ್ಮ ಯಲಿಂಗದೊಳಗೆ ಬಯಲಾದರು ಹಡಪದಪ್ಪಣ್ಣ ನ್ನಿಲಲೋಚನೆ ಯ ಮಗಳುಮೊದಲಾದ ಕೆಲವು ಗಣಂಗಳು ತಮ್ಮತಮ್ಮ ಲಿಂಗದಲಿ ಬಯಲಾದರು ಚನ್ನಬಸವಣ್ಣ ಮಡಿವಾಳ ಮಾಚಿದೇವರು ಕಿನ್ನ ರಿಯ ಬ್ರಹ್ಮತಂದೆಗಳ ಮೊದಲಾದ ವುಳಿದ ಗಣಂಗಳೆಲ್ಲರು ವುಳಿವೆ ಮಹಾಮನೆಯಲ್ಲಿ ಘನಲಿಂಗದೊಳಗೆ ಬಯಲಾದರು ಇಂತಪ್ಪ ಸ ಕಲ ಗಣಂಗಳಿಗೆ ಮಮಸ್ಥಾನದಲ್ಲಿ ನಿರವಯಲಪದವ ಕರುಣಿಸಿ ಕೊಟ್ಟಾತ ನೀನೊಬ್ಬನೇ ಅಲ್ಲದೆ ಮತ್ತಾರುಕಾಣೆನಯ್ಯಾ ಇಂತಪ್ಪ ಸಕಲಗುಣಂಗಳ ತೊತ್ತಿನಮಗನೆಂದು ಯನ್ನ ನೆತ್ತಿಕೊಂಡು ಸಲ ಹಿದಿರಾಗಿ ಯನಗೆ ನಿರೈಕ್ಯನಿಜವಯಲ ಪದವಯಲಿಯೆಂದರೆ ವು ತ್ಪತ್ತಿಸ್ಥಿತಿಗೆ ಪ್ರಳಯಂಗಳಿಗೆ ಹೊರಗಾದ ನಿಮ್ಮಪರಾತ್ಮರ ಮಹಾ ಹೃದಯ ಕಮಲಕರ್ಣಿಕಾವಾಸ ಮಧ್ಯಸೂಕ್ಷ್ಮ ಬಯಲೊಳಗೆನ್ನ ನಿರ್ವಯಲಮಾಡಿಕೊಳ್ಳಯ್ಯಾ ಯನ್ನ ||ಅಖ|| ೧೭ || ಸಕಲಮಾ

ರ್ತಿಯಾಗಿ ಯಿಷ್ಟಲಿಂಗವಾಯಿತು ನಿಷ್ಕಳಮೂರ್ತಿಯಾಗಿ ಪ್ರಾಣ ಲಿಂಗವಾಯಿತು ಕೇವಲ ನಿರ್ವಯಲಮೂರ್ತಿಯಾಗಿ ಭಾವಲಿಂಗ ವಾಯಿತು ಸಕಲಮೂರ್ತಿಗೆ ಕ್ರಿಯಾನಿಷ್ಕಳಮೂರ್ತಿಗೆ ಜ್ಞಾನ ಕೇವಲ ನಿರ್ವಯಲಮೂರ್ತಿಗೆ ವೈರಾಗ್ಯ ಆನಂದಸ್ಥೂಲವೇ ಕಾ ಯಸೂಕ್ಷ್ಮವೇ ಪ್ರಾಣ ಕಾರಣವೇವಸ್ತು ನೇತ್ರ ಜಿಹ್ವೆ ಶ್ರೋತ್ರ ತ್ವಕ್ಕು ಹೃದಯ ಘ್ರಾಣವೆಂಬ ಇವು ಸೂಕ್ಷ್ಮದ ಷಡ್ವಿಧಲಿಂಗವು ಇವಕ್ಕೆ ಓಂ ನಮಶ್ಶಿವಾಯ ಯೆಂಬುದೇ ತೃಪ್ತಿ ಸಂತೋಷವೇಕಾ ರಣ ಮಹಾಕಾರಣವೇ ಪರಿಣಾಮ ತೂರ್ಯಾತೀತವಾಗಿ ಸರ್ವಕೇಳಿ ಕೆಯಕೇಳಿ ನಿಜಾನಂದವಾಗಿಹುದು ವಿರಾಟನಿಸುವ ನಾದವಾಗಿ ಹೊರಬಿದ್ದುನುಡಿದು ಭೇರೀನಾದದಂತೆ ಆಕಾಶಧ್ವನಿಯಂತೆ ತನಗೆ ತಾನೇ ಕೇಳುವಸು ಹಿರಣ್ಯ ಗರ್ಭಬಿಂದುವಿನ ಮನೆಯಲ್ಲಿ ಗಾಳಿಯ ಪಟಕ್ಕೆ ಚರಚರಕಿಯ ಕಟ್ಟನುಡಿಸುವಂತೆ ತೇಜವಾಗಿ ಶಂಕಧ್ವನಿ ಯಂತೆ ತೋರುತ್ತಿಹಸುನಾದ ಕರಡಗುಲಡಮೇಲೆ ತೇಜವಿಹುದು ಅದುತುಂಬಿದ ಹುಣ್ಣುಮೆಯ ಬೆಳದಿಂಗಳದಂತೆ ಚಂದ್ರಜ್ಯೋತಿ ಯ ಬೆಳಕಿನಂತೆ ತೋರ್ಪದು ಕಳೆಯಾದಮನೆಯಲ್ಲಿ ಯರಡಂಗು ಲ ಪ್ರಮಾಣಮೂಲ ಪ್ರಕೃತಿ ಮೂತಿನಮೇಲೆ ಭ್ರೂಮಧ್ಯ ಪ್ರ ಮಾಣದಲ್ಲಿ ಓಂಕಾರಧ್ವನಿಯಂತೆ ಗಂಟೆಯಬಾಸಿದಂತೆ ತಟತಟನ ಹಾರಿ ಅದು ಭ್ರೂಮಧ್ಯಸ್ಥಾನದಲ್ಲಿ ತೋರುವನಾದವೇ ಶಬ್ದನಿಶ್ಶ ಬ್ದವೇಬಿಂದುದಯನಾದ ದೊಳಗಿರ್ಪನಾದವೇ ಓಂಕಾರಜ್ಯೋ ತಿ ಬಿಂದುದಯ ಪ್ರಕಾಶ ಭ್ರೂಮಧ್ಯದ ಪಣಿಯಮೇಲೆ ಯರಡಂಗು ಲದಲ್ಲಿ ಕಾಣಿಸುತ್ತಿಹುದು ಅದು ಮನದಿಂದ ಕಂಡಿತೊ ಎಂದರೆ ನೆನ ಹು ಅಂತಃಕರಣ (ಓಂ ನಮಶ್ಶಿವಾಯ) ಎಂಬ ಪ್ರಣಮಜ್ಯೋತಿಯು ತೋರಿತು ಚಿತ್ತದತೋರಿಕೆ ಅರವತ್ತಾರುಕೋಟಿ ಪ್ರಣಮಜ್ಯೋ ತಿಯ ಕಿರಣದಲ್ಲಿ ತೋರಿಸಿ ಬೀದಿಯಬೆರಿಸಿ ಪ್ರಮಾಥಿಯ ನೆನಹು ಮಾತ್ರ ತೋರುತ್ತಿಹುದೋ ಹೊರದೃಷ್ಟಿವಳಗಿಟ್ಟು ವಳದೃಷ್ಟಿ

ಹೊರಗೆ ಪರಿಪೂರ್ಣವಾಗಲು ಒಳಗೆ ಹೊರಗೆ ನೋಡುವ ಶಿವಶರಣನ ಮನಭಾವಕ್ಕೆ ಆನಂದವೇ ತೋರುತ್ತಿಹುದು ದಿನಕರಕಾಂತಿ ಮಧ್ಯಾಹ್ನದಬಿಸಲು ಅಂಬರಂಗಡ ಛಾಯುದಂತೆ ನಿರ್ಮಲದರ್ಪಣದ ಪ್ರತಿಬಿಂಬದಂತೆ ತನ್ನರೂಪತಾನೆ ನೋಡಿದಾತನು ಜೀವನ್ಮುಕ್ತನಲ್ಲ ಅಂತಾಭವದ ಬಳ್ಳಿಯುಹರಿದು ನಿತ್ಯಾನಂದ ನಿರ್ಮಲ ನಿರಾವರಣ ನಿಜಚಿನ್ಮಯನಾಗಿಹುದು ಇಂತು (ಓಂ ನಮಃಶ್ಶಿವಾಯ ಎಂಬ) ಪೂರ್ವಪ್ರಣವುವ ಅಳಿನೆತ್ತಿಯ ಸ್ಥಾನದಲ್ಲಿ ಅರುಹಿನಮನೆಯುಂಟ ಅದಕ್ಕೆತಟ್ಟ ಅಂತರಂಗಡಬಾಯುಲ್ಲಿ ಯಡಬಲವು ಯರಡುಕರ್ನ ದ್ವಾರಂಗಳಲ್ಲಿ ನುಡಿಯು ಕೇಳಿವರೆ ಸುನಾದವಾಯಿತು ಅದುದಶನಾದಗಳಿಂದ ಶರಭಿ ನಿಸ್ವರಮೇಗೆ ಗರ್ಜನೆ ಬೇರಿಕಭೆಳೆ ಗಂಟೆಶಂಖವೇಣಿ ಭ್ರಮರನಾದಂಗಳೆಂಬ ದಶನಾದಂಗಳೆಂನು ಗುರುಮುಖದಿಂದರಿದು ಆದಶನಾದಂಗಳೊಳಗಾಪ ಸುನಾದವನ್ನು ಇರಳು ಹಗಲೆಯುಡೆದೆರಹಿಲ್ಲದೆ ಲಾಲಿಸುಕೇಳುವದು ಶಿವಯೋಗೀಶ್ವರನು ಅದುಪ್ರಸಾದಿಯಲಿಂಗಸ್ಥಲ ವಿಶುದ್ಧಿಯುಮನೆಶರಸಣಸ್ಥಲ ಆಸ್ಥಳದಲ್ಲಿ ನಾದವಕೇಳಿದವರಿಗೆ ಜಾಗ್ರತ ಸ್ವಪ್ನ ಸುಷುಪ್ತಿಗಳೆನಿಪ ಮೂರುಅವಸ್ಥೆಗಳು ತುತ್ರಯಂಗಳು ತೂರ್ಯದಲ್ಲಿ ಹರಿದುಹೋಗುವವು ಸುನಾದದಲ್ಲಿ ಮನಸಿಟ್ಟು (ಓಂ ನಮಃಶ್ಶಿವಾಯ) ಎಂಬ ಮಂತ್ರವಕೇಳಿ ಪರಿಣಾಮಿಸಿದವರಿಗೆ ಸ್ವಪ್ನವು ಯೆಂದೆಂದಿಗು ತೋರದು ಇರುವೆಸುಳಿದರೆ ಯೆಚ್ಚರಿಕೆ ಧಿಗುಲು ಭಯಭೋಗಿತೆಂದರೆ ನೀನಾರೆಲಾಯೆಂದು ಮಾತನಾಡಿಸಿ ಬಿಡಿಸಿಬಿಡುವನು ಅಪ್ರಣವದ ಘೋಷವು ಸತ್ಯನೆಂಬೆ ಇಂತೀದಿವಸ ಹನ್ನೆರಡು ತಾಸಿನೊಳಗೆ ತನುವತನುವ ಬಿಡುವಸಮಯುದಲ್ಲಿ ಆಘೋಷ ನಿರ್ಘೋಷವಾಗಿ ನಾದನುಡಿಯುದು ಲಕ್ಷ್ಯವಿಟ್ಟು ನೋಡಿದರೆ ತೋರದು ಅಂಗುಳ ಪ್ರಮಾಣವಾಗಿ ವಸ್ತುವುಂಗುಟ್ಟಕ್ಕೆ ಬರುವದು ವೃಕ್ಷವನೇರಿದ ಸರ್ಪದಂತೆ ಬ್ರಹ್ಮರಂಧ್ರದ ಕೊನೆಯುಲ್ಲಿ ಯೇರುವದು ಹೆದ್ದುಂಬೆಯು ಕೊಳವೆಯೋಪಾದಿಯು

ಲ್ಲಿ ವಸ್ತುವ ಅಲಿನೆತ್ತಿಯು ಸ್ಥಾನವಲ್ಲಿ ಯೇರಿಹೋಗುವವು ಈ ಮ
ನೆಯ ಶಿವಶರಣಬಲ್ಲ ಇದುಹಂನೆರಡುತಾಸು ಹೊತ್ತಿನ ಪುರುಸತ್ತಿಗೆ
ಹೇಳಿದಅರುಹು ಯಿಂತಪ್ಪವಸ್ತುವಿನ ನಿಲುಕಡೆ ಯೆಬಂತಾ ಶಿವ
ಶರಣನು ತನ್ನ ಆವಸಾನದಕಾಲದ ಯಚ್ಚರಿಕೆಯನು ನರಿದು ಗೋ
ವುಮಲಗುವ ಷುಘರಣಿಯಂ ಮಾಡುವದು ಗೋಮಯ ಗೋ
ಮೂತ್ರ ಗೋಕ್ಷೀರ ಗೋದಧಿ ಗೋಘೃತ ಗೋರೋಜನವೆಂಬ
ಷಡುಸಮ್ಮಾರ್ಜನೆಯಂಮಾಡಿ ಶಿವಲಿಂಗಜಂಗಮದ ಧೂಳಪಾದಾ
ರ್ಚನೆಯ ಉದಕವಮಾಡಿಸಿ ಸಮಾರ್ಜನೆಯುಮಾಡುವದು ರಂಗ
ವಾಲೆಯತುಂಬುವದಂ ಭಸ್ಮವಂ ತಳಿವುದು ಪಾದೋದಕ ಪ್ರಸಾ
ದವಂ ಸಲಿಸಿ ಶಿವಗಣಂಗಳಿಗೆ ವಂದನೆಯುಮಾಡಿ ಅಸಮ್ಮಾರ್ಜನೆ
ಯಲ್ಲಿ ಗದ್ದುಗೆಯಂಮಾಡಿ ಅದರಮೇಲೆ ಮೂರ್ತಮಾಡಿ ಓಂ ನಮ
ಶಿವಾಯಯೆಂಬ ಮಂತ್ರಸ್ಮರಣೆ ಮಾಡುವದು ಹಸ್ತದಲ್ಲಿ ಇಷ್ಟಲಿಂ
ಗವ ಹಿಡಿದುಕೊಂಡು ಇರುವಂತಿಗೆ ಶಾವಂತಿಗೆ ಮೊಲ್ಲಮಲ್ಲಿಗೆ ಜಾಜಿ
ಕರವೀರ ಸುರಹೊನ್ನೆ ಸಂಪಿಗೆಯ ಪುಷ್ಪವು ಮರುಗ ಪಚ್ಚದವನ
ಬಿಲ್ವಪತ್ರೆ ಮೊದಲಾದ ಸಮಸ್ತ ಪತ್ರೆಗಳಂಧರಿಸಿ ಶಿವಲಿಂಗವನ್ನು
ಮನವಲಿದು ಕಂಗಳತುಂಬ ನೋಡುವ ಧಾದೇವ ಭಕ್ತರುಬಂದರೆ
ಶರಣಾರ್ತಿ ಮಜ್ಜನವನೀಡಿ ಶ್ರೀವಿಭೂತಿಯಧರಿಸಿ ಪುಷ್ಪಪತ್ರೆಗಳಂ
ಧರಿಸಿ ಯಂದು ಅವರಹಿಡಿದು ಶರಣಾರ್ತಿಸ್ವಾಮಿಗಳೆಂದು ಹೇಳಿ
ಶಿವಾರ್ಪಿತವಂ ಮಾಡಿಯೆಂದು ಬಿನ್ನಪಂಮಾಡುವದು ಮದುವೆಯ
ಮಾಂಗಲ್ಯಅರ್ಥವುತ್ಸಹ ಶಿಶುವುನಹೆಸರಿಡುವಹಾಂಗೆ ಹರುಷದೈರ್ಯ
ಭೂಷಣವಾಗಿರೆ ದಾನಂಗಳಂಮಾಡಿ ಓಂನಮಃಶ್ಶಿವಾಯ ಯೆಂಬಮಂ
ತ್ರವಂ ಭೋಗರೆಯೆ ನಿರ್ಮಲತ್ವದಿಂದ ಶಿವಜಂಗಮ ಪಾದವನ್ನು
ಮಸ್ತಕದಮೇಲೆ ಇಡಿಸುವದು ಹಿತವಂತರಾದರು ವೀರಶೈವದಪುರಾ
ಮ ವಚನಂಗಳಂ ಕೇಳಿಸುವದು ಯೆಡಬಲದಲ್ಲಿ ಸಕಲಭಕ್ತಮಾ
ಹೇಶ್ವರರು ಓಂ ನಮಶ್ಶಿವಾಯಯೆಂಬ ಮಂತ್ರವನ್ನು ಆಶರಣನ

ಕರ್ಣಗಳಲ್ಲಿ ಉಚ್ಚರಿಸುವದು ಹಡಗದ ಹಗ್ಗವ ಮತ್ತೊಂದುಹಡ
ಗಕ್ಕೆ ಹಾಕಿಬಿಗಿದರೆ ಹಡಗಕ್ಕೆ ಹಡಗಕೂಡಿ ಸಮುದ್ರದಲ್ಲಿ ತೆರೆ
ಯೇಪಾಪಿಯಲ್ಲಿ ಹಡಗಮುಂಬಿಟ್ಟು ಪ್ರತಿಹಡಗದೊಳಗೆ ಮೂರ್ತಿ
ಮಮಾಡಿದಂತೆ ಮಂತ್ರಸಂಮಂಧವಾಗಿ ವುರಿಕರ್ಪ್ಪೂರಗೊಂಡಂತಾಯಿ
ತುನೋಡಾ ಶರಣದೇಹವು ಪ್ರಾಣವು ಇದುಗುಹ್ಯಕೆ ಗುಹ್ಯ ಗೋ
ಪ್ಯಕ್ಕೆ ಗೋಪ್ಯ ರಹಸ್ಯಕ್ಕೆ ರಹಸ್ಯ ನೋಡಾ ॥ ೧೮ ॥ ಏನೆಂಬೆನೇ
ನೆಂಬೆನಯ್ಯಾ ಬಂದುಯರಡಾದು ಏನೆಂಬೆ ನೇನೆಂಬೆನಯ್ಯಾ ಸರ್ವ
ತೋರಿಕೆ ನಿರ್ವಯಲಾದುದ ಏನೆಂಬೆ ನೇನೆಂಬೆನಯ್ಯಾ ಅಖಂಡೇಶ್ವ
ರಾ ನಿಮ್ಮೊಳಗೆಯನಗೆ ಸಮರಸಸೌಖ್ಯವು ಸಮ್ಮಂಧವಾದುದ ॥
೧೯ ॥ ತನುವಿನಕೈಯಲ್ಲಿ ಮೂರ್ತಿಗೊಂಡಿರ್ದ ಘನಮಹಾಲಿಂಗ
ದೊಡನೆ ಮನಬಂದುಬೇಟವಮಾಡಲು ತನಮನವೆರಡು ವುರಿಗೊಂಡಿ
ರ್ದ ಕರ್ಪೂರದಂತೆಕಾಣಾ ಯಖಂಡೇಶ್ವರಾ ॥ ೨೦ ॥ ಅಂಗವು ಲಿಂ
ಗವಗ್ರಹಿಸಿತು ಲಿಂಗವು ಮನವಗ್ರಹಿಸಿತು ಅಜ್ಞಾನವಗ್ರಹಿಸಿತು ಅ
ಜ್ಞಾನವಗ್ರಹಿಸಿತು ಅಜ್ಞಾನವು ಪರಿಹಾಮವಗ್ರಹಿಸಿತು ಪರಿಣಾ
ಮವು ಪರಿಪೂರ್ಣವಗ್ರಹಿಸಿತು ಪರಿಪೂರ್ಣವು ಪರಬ್ರಹ್ಮವ ಗ್ರಹಿ
ಸಿತು ಯಖಂಡೇಶ್ವರ ಶರಣಂಗೆ ಯೂವಬಂಧನವಿಲ್ಲ ॥ ೨೧ ॥ ನಾನಿ
ಹಪರಿಯಂತರ ನೀನುಂಟು ನೀನಿಹಪರಿಯಂತರ ನಾನುಂಟು ನಾನು
ನೀನೆಂಬುವ ವುಭಯಸಂದವಳಿದಬಳಿಕ ಇನ್ನೇನುಂಟುಹೇಳಾ ॥
೨೨ ॥ ತನುವಿಹಪರಿಯಂತರ ನಿಮ್ಮಪೂಜಿಸಿದೆನಯ್ಯಾ ಮನವಿಹಪ
ರಿಯಂತರ ನಿನ್ನ ನೆನದೆನಯ್ಯಾ ಭಾವವಿಹಪರಿಯಂತರ ನಿಮ್ಮಭಯ
ಸಿದೆನಯ್ಯಾ ಯಿಂತಿವೆಲ್ಲವು ನಿಮ್ಮಲ್ಲಿ ಸ್ವಯವಾದಬಳಿಕ ಗಜಭುಕ್ತ
ಕಪಿತ್ಥದಂತಿರ್ದೆನಯ್ಯಾ ಯಖಂಡೇಶ್ವರಾ ॥ ೨೩ ॥ ತನುನಿಮ್ಮದಾ
ದಬಳಿಕ ಬ್ಯಾರೆಯನಗೆ ತನುವಿಲ್ಲವಯ್ಯಾ ಮನನಿಮ್ಮದಾದಬಳಿಕ
ಬ್ಯಾರೆಯನಗೆ ಮನವಿಲ್ಲವಯ್ಯಾ ಧನನಿಮ್ಮದಾದಬಳಿಕ ಬ್ಯಾರೆಯ
ನಗೆ ಧನವಿಲ್ಲವಯ್ಯಾ ಅಖಂಡೇಶ್ವರಾ ॥ ನಿಮ್ಮಪೂಜಿಸಿದನೆಂದಡೆ ತ

ನುವಿಲ್ಲವಯ್ಯಾ ಎನಗೆ ಅದೇನುಕಾರಣವೆಂದಡೆ, ಅರುಹಿಲವಯ್ಯಾ ಯೆನಗೆ ಅದೇನುಕಾರಣವೆಂದಡೆ ಆ ಅರುಹುನೀವೆಯಾಗಿ ಅಖಂಡೇಶ್ವರಾ ॥ ನಿಂಮೊಳಗೆನಾನು ವುರಿಗೊಂಡ ಕರ್ಪೂರದಂತಿರ್ದೆನಯ್ಯಾ॥ ೨೪ ॥ ಯೆನ್ನ ಕಾಲಕಲ್ಪಿತಗಳ ಹೊರಗಾದವಯ್ಯಾ ಯೆನ್ನ ಭವಬಂಧನಂಗಳು ಹೊರಗಾದವಯ್ಯಾ ಯೆನ್ನ ವುತ್ಪತ್ತಿ ಸ್ಥಿತಿಲಯಂಗಳು ಹೆರಗಾದವಯ್ಯಾ ಇಂತಿವೆಲ್ಲವು ಹೊರಗಾದವಾಗಿ ಅಖಂಡೇಶ್ವರಾ ॥ ನಾನೊಬ್ಬನೇ ನಿಮ್ಮೊಳಗಾದೆನಯ್ಯಾ ॥ ೨೫ ॥ ಕನ್ನಡಿಯನೋಡುವಲ್ಲಿ ಪ್ರತಿಬಿಂಬ ಕಾಣಿಸುತಿರ್ಪದು ಆನೋಟವುಅಳಿದಲ್ಲಿ ಪ್ರತಿರೂಪನಿಜರೂಪದಲ್ಲಿ ಅಡಗಿದಂತೆ ಅನುಪಮಬ್ರಹ್ಮದಲ್ಲಿ ನೆನಹುದೋರಿ ಚಿತ್ತನಿಸಿತು ಆಚಿತ್ತಿನಿಂದ ಚಿನ್ನಾದಚಿದ್ಬಿಂದು ಚಿತ್ಕಳೆಗಳು ಆ ಮೂಲಚಿತ್ತ ಸ್ವರೂಪವಾದ ಶರಣಂಗೆ ದೇಹಪ್ರಾಣಾತ್ಮಗಳಾಗಿ ಅಂಗಕ್ಕೆ ಪದಾರ್ಥಂಗಳಾಗಿರ್ಪವು ಆ ಪದಾರ್ಥವು ಲಿಂಗಮುಖಕ್ಕೆ ಸಮರಸವೇದಿಸಿ ಆಚಿತ್ತು ಚಿದ್ಗನವಬೆರಿಯಲು ಮುನ್ನಿನಂತೆ ಏಕವಾಯಿತಯ್ಯಾ ॥ ೨೬ ॥ ಅಹುದೆನಲೊಮ್ಮೆ ಅಲ್ಲವೆನಲೊಮ್ಮೆ ಇಲ್ಲವೆನಲೊಮ್ಮೆ ಬೇಕೆನಲೊಮ್ಮೆ ಬೇಡೆನಲೊಮ್ಮೆ ಅಖಂಡೇಶ್ವರಾ ॥ ನೀವೆಂತಿರ್ದಂತೆ ಸಹಜವಾಗಿರ್ದೆನಯ್ಯಾ ॥ ೨೭ ॥ ನಾದನಿಜವೆಂಬೆನೇ ನಾದನಿಜವಲ್ಲ ಬಿಂದುನಿಜವೆಂಬೆನೇ ಬಿಂದುನಿಜವಲ್ಲ ಕಳೆನಿಜವೆಂಬೆನೇ ಕಳೆನಿಜವಲ್ಲ ಆನಾದ ಬಿಂದುಕಳೆಗಳೆಂದೊರೆದ ಜಗವುನಿಜವೆಂಬೆನೇ ಜಗವುನಿಜವಲ್ಲ ಆ ಜಗದಮಧ್ಯದಲ್ಲಿ ತೋರಿದಲೀಲೆ ನಿಜವೆಂಬೆನೇ ಆಲೀಲೆಯು ನಿಜವಲ್ಲ ಇನ್ನಾವದು ನಿಜವೆಂದಡೆ ಅಲ್ಲಿಅಹುದು ಯಿಲ್ಲವುಂಟು ಬೇಕು ಬೇಕು ಬೇಡೆಂಬೆಭಾವಕ್ಕೆ ಬಲ್ಲದೆತಾನಿದಿರೆಂಬ ಶಂಕೆದೊರದು ಅಖಂಡಪರಿಪೂರ್ಣನಾದ ಮಹಾಘನವೇ ನಿಮ್ಮನಿಲುವದನಿಜವಯ್ಯಾ ॥ ೨೮ ॥ ಆ ಮಹಾಘನಬೆಳಗಿನೊಳಗೆ ನಾನೆಂಬುದನರಿಯದಿರ್ದೆನಯ್ಯಾ ಏನೇನುಅರಿಯದೆ ಮೌನದಿಂ ಮರದಿರ್ದನಯ್ಯಾ ॥ ೨೯ ॥ ಖಂಡಿತಭಯುವಳಿದು ಅಖಂಡಿತಪರಬ್ರಹ್ಮ

ದಲ್ಲಿ ಅವಿರಳಸಮರಸದಿಂದ ಮನಕ್ರೀಯೆಂಬುದೇನು ಧ್ಯಾನಮೌನವೆಂಬುದೇನು ನೇಮನಿತ್ಯವೆಂಬುದೇನು ತಪವೆಂಬುದೇನು ಅರುಹು ಆಚಾರವೆಂಬುದೇನು ಕುರುಹುಪೂಜೆಯೆಂಬುದೇನು ಇಂತೀಮರೆವುಳ್ಳನಕ್ಕಾ ಭಿನ್ನಫಲಪ್ರಾಪ್ತಿಯಲ್ಲದೆ ಅವಿರಳ ಸಮರಸ ಸೌಖ್ಯ ನಿರ್ವಯಲ ಪದವು ಯಲ್ಲಿಹುದೋ ಇದನರಿತು ಇಂತಿವೆಲ್ಲಾ ಹಾಳಸಂಕಲ್ಪ ವಿಪರೀತಭ್ರಾಂತಿ ಜ್ಞಾನವೇತನ್ನ ನಿಜವೇನಿಲವೆಂದು ತಿಳಿದುದನ್ಯಾಯದಂತೆ ದೇಹವಿರ್ದು ನಿರ್ದೇಹಿ ಯೊಗಿರ್ಪನಯ್ಯಾ ॥ ೩೦ ॥ ಅನಂತಸಾಧನಂಗಳಕಲಿತ ಐಗಾರನು ಅಭ್ಯಾಸಕಲಿಸುವನಲ್ಲದೆ ಆತಮರಳಿ ಅಭ್ಯಾಸಮಾಡುವನೇಅಯ್ಯಾ ಅಖಂಡಪರಿಪೂರ್ಣ ಪರಬ್ರಹ್ಮವನೊಡಗೂಡಿದ ಮಹಾಘನಪರಶಿವಶರಣನು ಸತ್ಕ್ರಿಯೆಯನಾಚರಿಸಿದಡು ಲೋಕೋಪಚಾರವಾಗಿ ಆಚರಿಸುವನಲ್ಲದೆ ಮರಳಿತಾನು ಫಲಪದ ಮುಕ್ತಿಯಪಡೆವೆನೆಂದು ಆಚರಿಸುವನೇನಯ್ಯಾ ಮರಳಿಯಿದುಕಾರಣ ನಿಮ್ಮಶರಣನು ಯೆಷ್ಟು ಸತ್ಕ್ರಿಯವನಾಚರಿಸಿದರು ಘೃತಸೋಕಿರಸನನಂತೆ ನಿರ್ಲೇಪನಾಗಿಪ್ಪನಯ್ಯಾ ಯಖಂಡೇಶ್ವರಾ ॥ ೩೧ ॥ ಹಿಂದಣಸಂಚಿತವಹರಿದು ಮುಂದಃಭಯವಮರದು ವುಭಯಸಂಧಿಗಡಿದು ಅಖಂಡಬ್ರಹ್ಮವೇ ತಾನಾದಶರಣಂಗೆ ಜನನವಿಲ್ಲ, ಮರಣವಿಲ್ಲ, ಕಾಲವಿಲ್ಲ, ಕಲ್ಪಿತವಿಲ್ಲ, ಸುಖವಿಲ್ಲ, ದುಃಖವಿಲ್ಲ. ಪುಣ್ಯವಿಲ್ಲ, ಪಾಪವಿಲ್ಲ ಪ್ರಳಯ ಮಹಾಪ್ರಳಯಂಗಳು ಮುನ್ನವೇಯಿಲ್ಲ ಇದುಕಾರಣವಾಗಿ ಅನಂತಕೋಟಿ ಅಜಾಂಡವಳಿದು ಹೋದಡೆಯು ಅಖಂಡೇಶ್ವರಾ ನಿಮ್ಮಶರಣನಿತ್ಯವಾಗಿ ವುಳಿತಿಹನು ಇಂದ್ರಚಂದ್ರರು ಪ್ರಳಯವಾಗಿಹೋದರು ಶರಣನೇನೆಂದು ಅರಿಯನ ಹರಿವಿರಿಂಚಿಗಳು ಪ್ರಳಯವಾಗಿಹೋದರು ಶರಣನೇನೆಂದು ಅರಿಯನ ಮನುಮುನಿಗಳು ಪ್ರಳಯವಾಗಿಹೋದರು ಶರಣನೇನೆಂದು ಅರಿಯನು ಪಂಚಾಶತ್ಕೋಟಿ ಬ್ರಹ್ಮಾಂಡ ಪ್ರಳಯವಾಗಿ ಹೋದರು ಶರಣನೇನೆಂದು ಅರಿಯನು ॥ ಅ ॥ ನಿಮ್ಮಶರಣನೇನೆಂದುಅರಿಯ ॥

೩೩ ॥ ಘನಕ್ಕೆ ಘನವಾದವಸ್ತುವಿನಲ್ಲಿ ಮನವಡಗಿದ ಮಹಾಮಹಿಮಂಗೆ ಮರಳಿನೆನೆಯಬೇಕೆಂಬುದಿಲ್ಲ ನೆನದುಧ್ಯಾನಿಸಿ ಬೇಕೆಂಬದಿಲ್ಲ ಕಂಡುಕೂಡಬೇಕೆಂಬುವದಿಲ್ಲ ॥ ಅ ॥ ನಿಮ್ಮನೊಡಗೂಡಿದಶರಣಂಗೆ ಯೇನೆಂಡನೇಯಿಲ್ಲ ॥ ೩೪ ॥ ತೆರಹಿಲ್ಲ ತರಹಿಲ್ಲವಯ್ಯಾ ನಡೆನೋಟಕೆ ತೆರಹಿಲ್ಲ ತರಹಿಲ್ಲವಯ್ಯಾ ನುಡಿಗಡಣಕ್ಕೆ ತೆರಹಿಲ್ಲ ತೆರಹಿಲ್ಲವಯ್ಯಾ ಮಹಾಜ್ಞಾನಕ್ಕೆ ತೆರಹಿಲ್ಲ ತರಹಿಲ್ಲವಯ್ಯಾ ಭಾವಭಾವಕ್ಕೆ ॥ಅ॥ ಯುಲ್ಲವ್ರುನೀವೆ ಯೂವಿರಾಗಿ ನಿಂಮೊಳಗೆನೀವೆತ್ರಿಳಿವ್ರುತಿಪ್ಪಿರಿ ನಿಮ್ಮೊಳಗೆನೀವೆ ಅರಿವ್ರುತ್ತಿಪ್ಪಿರಯ್ಯಾ ॥ ೩೫ ॥ ಯಲ್ಲಿನೋಡಿದಲ್ಲಿ ನೀನೇದೇವಾ. ಯಲ್ಲಿಮುಟ್ಟಿದಲ್ಲಿ ನೀನೇದೇವಾ ಯಲ್ಲಿಭಾವಿಸಿದಲ್ಲಿ ನೀನೇದೇವಾ ಯಲ್ಲೆಡೆಯಲ್ಲಿ ನಿಮ್ಮಮಹಾಪ್ರಭೆಯೇ ಮುಸುಕಿತಾಗಿ॥ಅ॥ ನಾನುನೀನೆಂಬುವಡಕ್ಕೆ ತೆರಹಿಲ್ಲದೇವಾ ॥ ೩೬ ॥ ಅಂಡಾಭರಣರು ಘನವೆಂಬೆನೆ ಅಂಡಾಭರಣರು ಘನವಲ್ಲ ರುಂಡಾಭರಣರು ಘನವೆಂಬೆನೆ ರುಂಡಾಭರಣರು ಘನವಲ್ಲ ಗಂಗಾಧರರು ಘನವೆಂಬೆನೆ ಗಂಗಾಧರರುಘನವಲ್ಲ ಗೌರೀವಲ್ಲಭರು ಘನವೆಂಬೆನೆ ಗೌರೀವಲ್ಲಭರು ಘನವಲ್ಲ ಚಂದ್ರಶೇಖರರು ಘನವೆಂಬೆನೆ ಚಂದ್ರಶೇಖರರುಘನವಲ್ಲ ನಂದಿವಾಹನರು ಘನವೆಂಬನೆ ನಂದಿವಾಹನರುಘನವೆಂಬೆ ನಂದಿವಾಹನರು ಘನವಲ್ಲ ತ್ರಿಯಂಬಕರರ ಘನವೆಂಬೆನೆ ತ್ರಿಯಂಬಕರು ಘನವಲ್ಲ ತ್ರಿಪ್ರುರವೈರಿಗಳು ಘನವೆಂಬೆನೆ ತ್ರಿಪುರವೈರಿಗಳು ಘನವಲ್ಲ ಪಂಚಮುಖರು ಘನವೆಂಬೆನೆ ಪಂಚಮುಖರು ಘನವಲ್ಲ ಫಣಿಕುಂಡಲರು ಘನವೆಂಬೆನೆ ಫಣಿಕುಂಡಲರು ಘನವಲ್ಲ ನೀಲಲೋಹಿತರು ಘನವೆಂಬೆನೆ ನೀಲಲೋಹಿತರು ಘನವಲ್ಲ ಅದೇನುಕಾರಣವೆಂದಡೆ, ಇಂತಿನಿವರಾದಿಯಾಗಿ ಅನಂತಕೋಟಿ ರುದ್ರಗಣಂಗಳು ಶರಣನ ಸರ್ವಾಂಗದಲ್ಲಿ ಅಡಗಿಹರಾಗಿ ॥ ಅ ॥ ನಿಮ್ಮಶರಣರ ಘನಕ್ಕೆ ಘನವೆಂಬೆನಯ್ಯಾ ಪೃಥ್ವಿ ಅಡಗುವಡಕ್ಕೆ ಅಪ್ಪುವೇ ಆಶ್ರಯುವಾಗಿರ್ಪ್ಪದು ಅಪ್ಪ ಅಡಗುವಡಕ್ಕೆ ಅಗ್ನಿಯೇ ಆಶ್ರಯುವಾಗಿರ್ಪ್ಪದು ಆ ಅಗ್ನಿ ಅಡಗುವಡಕ್ಕೆ ವಾಯು

ವೇ ಆಶ್ರಯವಾಗಿರ್ಪುದು ವಾಯು ಅಡಗುವದಕ್ಕೆ ಆಕಾಶವೇ ಆಶ್ರಯವಾಗಿರ್ಪುದು ಆಕಾಶ ಅಡಗುವದಕ್ಕೆ ಆತ್ಮವೇ ಆಶ್ರಯವಾಗಿರ್ಪುದು ಆತ್ಮ ಅಡಗುವದಕ್ಕೆ ಆದಿಯೇ ಆಶ್ರಯವಾಗಿರ್ಪುದು ಆದಿಅಡಗುವದಕ್ಕೆ ಅನಾದಿಯೇ ಆಶ್ರಯವಾಗಿರ್ಪುದು ಅನಾದಿ ಅಡಗುವದಕ್ಕೆ ಶೂನ್ಯವೇ ಆಶ್ರಯವಾಗಿರ್ಪುದು ಶೂನ್ಯಅಡಗುವದಕ್ಕೆ ನಿರ್ವಯಲೇ ಆಶ್ರಯವಾಗಿರ್ಪುದು ನಿರ್ವಯಲಡಗುವದಕ್ಕೆ ನಿಜವೇಆಶ್ರಯವಾಗಿರ್ಪುದು ನಿಜವು ಅಡಗುವದಕ್ಕೆ ॥ ಅ ॥ ನಿಮ್ಮಶರಣಗೆ ಪರಮಹೃದಯಕಮಲವೇ ಆಶ್ರಯವಾಗಿರ್ಪುದಯ್ಯ ಅನುಪಮ ಶರಣರ ನೆನಹಿನಕೊನೆಯಲ್ಲಿ ಘನಲಿಂಗವು ಆ ಘನಲಿಂಗದ ನೆನಹಿನಕೊನೆಯಲ್ಲಿ ನಿರಾಳವು ಆ ನಿರಾಳದಕೊನೆಯಲ್ಲಿ ಆದಿಮಹಾಘನಲಿಂಗವು ಆ ಆದಿಮಹಾಘನದಕೊನೆಯಲ್ಲಿ ನೆನಹಿನ ಚಿಚ್ಛಕ್ತಿ ಆ ಚಿಚ್ಛಕ್ತಿಯನೆನಹಿನಕೊನೆಯಲ್ಲಿ ಪರಮೇಶ್ವರನು ಆ ಪರಮೇಶ್ವರನ ನೆನಹಿನಕೊನೆಯಲ್ಲಿ ಪರಶಕ್ತಿ ಆ ಪರಶಕ್ತಿಯ ನೆನಹಿನಕೊನೆಯಲ್ಲಿ ಸದಾಶಿವನು ಆ ಸದಾಶಿವನ ನೆನಹಿನಕೊನೆಯಲ್ಲಿ ಆದಿಶಕ್ತಿ ಆ ಆದಿಶಕ್ತಿಯ ನೆನಹಿನಕೊನೆಯಲ್ಲಿ ಈಶ್ವರನು ಆ ಈಶ್ವರನ ನೆನಹಿನಕೊನೆಯಲ್ಲಿ ಇಚ್ಛಾಶಕ್ತಿ ಆ ಯಿಚ್ಛಾಶಕ್ತಿಯ ನೆನಹಿನಕೊನೆಯಲ್ಲಿ ಮಹೇಶ್ವರನು ಆ ಮಹೇಶ್ವರನ ನೆನಹಿನಕೊನೆಯಲ್ಲಿ ಜ್ಞಾನಶಕ್ತಿ ಆ ಜ್ಞಾನಶಕ್ತಿಯ ನೆನಹಿನಕೊನೆಯಲ್ಲಿ ಶ್ರೀ ರುದ್ರಮೂರ್ತಿ । ಆ ಶ್ರೀರುದ್ರಮೂರ್ತಿ ನೆನಹಿನಕೊನೆಯಲ್ಲಿ ಕ್ರಿಯಾಶಕ್ತಿ ಆ ಕ್ರಿಯಾಶಕ್ತಿಯ ನೆನಹಿನಕೊನೆಯಲ್ಲಿ ವಿಷ್ಣು ಆ ವಿಷ್ಣುವಿನ ನೆನಹಿನಕೊನೆಯಲ್ಲಿ ಲಕ್ಷ್ಮಿ ಆ ಲಕ್ಷ್ಮಿಯ ನೆನಹಿನಕೊನೆಯಲ್ಲಿ ಬ್ರಹ್ಮ ಆ ಬ್ರಹ್ಮನೆನಹಿನಕೊನೆಯಲ್ಲಿ ಸರಸ್ವತಿ ಆ ಸರಸ್ವತಿಯನೆನಹಿನಕೊನೆಯಲ್ಲಿ ಸಕಲಚರಾಚರಂಗಳು ಇಂತಿವೆಲ್ಲವು ಶರಣನ ನೆನಹುದೋರಿದಲ್ಲಿಯೇ ತೋರುತಿರ್ಪವು ಆದುಕಾರಣ ॥ ಅ ॥ ನಿಮ್ಮಶರಣನು ಘನಕ್ಕೆ ಘನಮಹಿಮ ಮಹಾಜ್ಞಾನಕ್ಕೆ ಗೋಚರನು ವೃಪಮೂರ್ತಿತನನೋಡಾ ॥

೩೯ ॥ ಆಕಾಶದಲ್ಲಿತೋರುವ ಇಂದ್ರಚಾಪವಡಗುವದಕ್ಕೆ ಆಕಾಶವೇ ಆಶ್ರಯವಲ್ಲದೇ ಬೇರೆಮತ್ತೆ ಆಶ್ರಯವುಂಟೇ ಅಯ್ಯಾ ಗಾಳಿಯಿಂದ ತೋರಿದಸುಳಿಗಾಳಿ ಯಡಗುವದಕ್ಕೆ ಗಾಳಿಯು ಆಶ್ರಯವಲ್ಲದೇ ಬೇರೆಮತ್ತೆ ಆಶ್ರಯವುಂಟೆಅಯ್ಯಾ ಅಗ್ನಿಯಲ್ಲಿತೋರಿದ ಕಿಡಿಗಳಡಗುವದಕ್ಕೆ ಅಗ್ನಿಯೇ ಆಶ್ರಯವಲ್ಲದೇ ಬೇರೆಮತ್ತೇ ಆಶ್ರಯವುಂಟೇಅಯ್ಯಾ ಆದಿಅನಾದಿಯಿಂದ ತತ್ತ್ವಾದ ಪರವಸ್ತುವಿನಲ್ಲಿ ರೂಪಿಸಿ ತೋರಿದ ನಿಜೈಕ್ಯವಡಗುವದಕ್ಕೆ ಆಪರವಸ್ತುವೇ ಆಶ್ರಯವಲ್ಲದೆ ಬೇರೆಮತ್ತೆ ಆಶ್ರಯವುಂಟೆ ॥ ಅ ॥ ೪೦ ॥ ಬಯಲು ಬಯಲುಬೆರದಲ್ಲಿ ಮೋರೆಯುಂಟೆಅಯ್ಯಾ ಕ್ಷೀರ ಕ್ಷೀರ ಕೂಡಿದಲ್ಲಿ ಮಗಲಿರೂಪಿಸಿ ಹಿಡಿಯಲುಂಟೆಅಯ್ಯಾ ನಿಮ್ಮೊಳಗೊಡಗೂಡವೆರದ ನಿಜೈಕ್ಯನ ಕುರುಹು ಮರಳಿ ತೋರಲುಂಟೆಅಯ್ಯಾ ॥ ಅ ॥ ದಿನದಿನವುಕೂಡಿದಂತೆ ಬಯಲುಬಯಲುಬೆರದಂತೆ ಮಾತುಮಾತುಕಲತಂತೆ ಜ್ಯೋತಿಜ್ಯೋತಿವಂದಾದಂತೆಯಖಂಡೇಶ್ವರಾನಿಮ್ಮೊಳಡವೆರದವೆರದ ನಿಜೈಕ್ಯನಕುರುಹುಯೆಂತುಂಟಯ್ಯಾ ॥ ೪೧ ॥ ಕೇಳಿಕೇಳಿರಯ್ಯಾಮರ್ತ್ಯಲೋಕದಮಹಾಗಣಂಗಳುನೀವೆಲ್ಲಾ ನಾವುನಮ್ಮಲಿಂಗದೊಳಗೆಲಿಂಗಸಹಿತಐಕ್ಯವಾಗುವರವುಯಿಂತೆಂದಡೆ ಕೇಳಿರಯ್ಯಾಏಕಚಿತ್ತರಾಗಿಲಾಲಿಸಿರಯ್ಯಾ ಷಣ್ಮುಖನೆಂಬ ಗಣೇಶ್ವರನ ಹೃದಯಕಮಲದಲ್ಲಿ ಸಾನಂದನೆಂಬಗಣೇಶ್ವರನು ಮೂರ್ತಿಗೊಂಡಿರ್ಪನು ಸಾನಂದನೆಂಬಗಣೇಶ್ವರನ ಹೃದಯಕಮಲದಲ್ಲಿ ವಿಶ್ವತೋಮುಖನೆಂಬಗಣೇಶ್ವರನು ಮೂರ್ತಿಗೊಂಡಿರ್ಪನು ಆವಿಶ್ವತೋಮುಖನೆಂಬಗಣೇಶ್ವರನ ಹೃದಯಕಮಲದಲ್ಲಿಅನಾದಿನಾಥನೆಂಬಗಣೇಶ್ವರನುಮೂರ್ತಿಗೊಂಡಿರ್ಪನು ಆಅನಾದಿನಾಥನೆಂಬಗಣೇಶ್ವರನ ಹೃದಯಕಮಲಧಲ್ಲಿ ಗೋಳಿನಾಥನೆಂಬಗಣೇಶ್ವರನುಮೂರ್ತಿಗೊಂಡಿರ್ಪನು ಆಗೋಳಕನಾಥನೆಂಬಗಣೇಶ್ವರನಹೃದಯಕಮಲದಲ್ಲಿ ಆಗಯ್ಯನೆಂಬಗಣೇಶ್ವರನುಮೂರ್ತಿಗೊಂ

ಡಿರ್ಪನು ಆಅಸಾಧ್ಯನೆಂಬಗಣೇಶ್ವರನಹೃದಯಕಮಲದಲ್ಲಿ ಯಕಂ ಡೇಶ್ವರನೆಂಬಗಣೇಶ್ವರನುಮೂರ್ತಿಗೊಂಡಿರ್ಪನು ಆಯಖಂಡೇಶ್ವ ರನಹೃದಯಕಮಲದಲ್ಲಿಜ್ಯೋತಿರ್ಮಯನೆಂಬಗಣೇಶ್ವರನು ಮೂರ್ತಿ ಗೊಂಡಿರ್ಪನಾಜ್ಯೋತಿರ್ಮಯನೆಂಬಗಣೇಶ್ವರನಹೃದಯಕಮಲದಲ್ಲಿ ಅಭೇದ್ಯನೆಂಬಗಣೇಶ್ವರನುಮೂರ್ತಿಗೊಂಡಿರ್ಪನುಆಅಭೇದ್ಯನೆಂಬ ಗಣೇಶ್ವರನಹೃದಯಕಮಲದಲ್ಲಿಅಪ್ರಮಾಣನೆಂಬಗಣೇಶ್ವರನುಮೂ ರ್ತಿಗೊಂಡಿರ್ಪನು ಆಅಪ್ರಮಾಣನೆಂಬ ಗಣೇಶ್ವರನಹೃದಯಕಮ ಲದಲ್ಲಿ ಅವಾಚಾತ್ಮಕನೆಂಬಗಣೇಶ್ವರನು ಮೂರ್ತಿಗೊಂಡಿರ್ಪನು ಆಅವಾಚಾತ್ಮಕನೆಂಬ ಗಣೇಶ್ವರನ ಹೃದಯಕಮಲದಲ್ಲಿ ಶೂನ್ಯನಿ ರಾಲಂಬನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು ಆಶೂನ್ಯನಿ ರಾಲಂಬನೆಂಬ ಗಣೇಶ್ವರನ ಹೃದಯಕಮಲದಲ್ಲಿ ನಮ್ಮ ಅಖಂಡೇ ಶ್ವರಲಿಂಗಸಹಿತನಿರವಯನಿರಾಲಂಬ ನಿದ್ವೈತಬಾರದೇಇರ್ಪವುಕೇಳಿ ರಯ್ಯಾ ॥ ಶರಣನಿದ್ದಲ್ಲಿಸಕಲತೀರ್ಥಂಗಳಿರ್ಪವು ಶರಣನಿದ್ದಲ್ಲಿಕೈಲಾಸ ಮೇರುಮಂದರಕುಲಶೈಲಂಗಳಿರ್ಪವು ಶರಣನಿದ್ದಲ್ಲಿಈರೇಳುಭುವನಹ ದಿನಾಲ್ಕುಲೋಕಂಗಳಿರ್ಪವು ನಮ್ಮಅಖಂಡೇಶ್ವರನಶರಣನಿದ್ದಲಿ ಅನಂ ತಕೋಟಿಬ್ರಹ್ಮಾಂಡಗಳಿರ್ಪವುನೋಡಾ॥ ಬಯಲಸ್ತ್ರೀಯಳೆನಿರವ ಯಲಪುರುಷನನ್ನುಕೂಡಲು ಚಿದ್ಭಾವವೆಂಬಶಿಶುವುಹುಟ್ಟಿತು ಆಶಿಶು ವಿನಮಹಾಭಾವವೆಂಬ ಬಯಲುತೊಟಲೊಳಗೆಮಲಗಿಸಿನಿರಾಳನಿ ಶ್ಶೂನ್ಯಗಳೆಂಬನೇಸು ಗಳಕಟ್ಟಿತೂಗಿ ಜೋಗುಳವಪಾಡಲು ಆಶಿಶು ವುತನ್ನಿಂದತಾನೆತನ್ನದತಾಯಿಗಳ ಇಬ್ಬರನುಂಗಿತು ಆತನ್ನದತಾಯಿಗ ಳನುಂಗಲೊಡನೆನಿರಾಳನಿಃಶ್ಶೂನ್ಯವೆಂಬನೇಣುಗಳುಹರಿದವು ಆನಿರಾ ಳನಿಃಶೂನ್ಯವೇನೇಣುಹರಿಯಲೊಡನೆ। ಆಶಿಶುವು ತೊಟ್ಟಿಲಸಹವಾಗಿ ಬಟ್ಟಬಯಲಾಯಿತು ಆಶಿಶುವುತೊಟ್ಟಿಲಸಹವಾಗಿಬಟ್ಟಬಯಲಾಗ ಲೊಡನೆಅಖಂಡೇಶ್ವರನೆಂಬ ಬಯಲಿಗೆ ಬಯಲು ಬಚ್ಚಬರಿಯಚ್ಚ ಘನ ಗಂಭೀರಮಹಾಬಯಲೊಳಗೆನಾನೆತ್ತಹೋದೆನೆಂದರಿಯೆನು ॥

ಸಾಕಾರನಿರಾಕಾರವಿಲ್ಲದಬಯಲುಪ್ರಕೃತಿನಿವೃತ್ತಿಯಿಲ್ಲದಬಯಲು ಅಖಂಡೇಶ್ವರನೆಂಬಬಯಲೊಳಗೆ ನಾನೆತ್ತಹೋದೆನೆಂದರಿಯೆನುಭಾವವಿಲ್ಲದಜೀವವಿಲ್ಲದ ಬಯಲು ಮನವಿಲ್ಲದ ಬಯಲುಅಖಂಡೇಶ್ವರನೆಂಬಬಯಲೊಳಗೆನಿಷ್ಪತ್ತಿ ಯಾಗಿದ್ದನುಆದಿಯಿಲ್ಲದಅನಾದಿಯಿಲ್ಲದಬಯಲು ಶೂನ್ಯನಿಃಶೂನ್ಯವಿಲ್ಲದೆಬಯಲು ಸಾರಾಳ ನಿರಾಳವಿಲ್ಲದಬಯಲು ಸಾವಯನಿರವಯವಿಲ್ಲದಬಯಲು ಅಖಂಡೇಶ್ವರನೆಂಬ ಬಯಲಲ್ಲಿಯಬಯಲಮಹಾಘನಬಚ್ಚಬರಿಯಬಯಲೊಳಗೆ ಯುಚ್ಚರವಡಗಿನಾನೆತ್ತಹೋದೆನೆಂದರಿಯೆನು। ೪೮ ||

ಶ್ರೀಮತ್ಪರಮಪರತರಪಾವನರೂಪಪಂಚಮುಖದಶಭುಜತ್ರಿನೇತ್ರನೀಲಗ್ರೀವಪದಲೋಚನಚಂದ್ರಮೌಳಿರತ್ನಕಿರೀಟಸರ್ವಾಂಗಮೌಕ್ತಿವೇದಹಾರಭೂಷಣ ತೊಡೆಯಲ್ಲಿಗೌರಿ ಮುಡಿಯಲ್ಲಿಗಂಗೆ ಕಡೆಗಣ್ಣನೋಟ ಕರುಣಸಾಗರದ ಸುರರವಾಲಗೆ ಋಷಿಗಳಸೇವೆ ಪ್ರಮಥಗಣ ರುದ್ರಗಣ ವೃಷಗಣ ಭಕ್ತಮಹಾಗಣದನರವೆ ಅಷ್ಟೈಶ್ವರ್ಯಸಕಲಸಂಪತ್ತಿನಿನ್ದಮೂರ್ತಿಗೊಂಡಿರ್ದ ರಾಜಾಧಿರಾಜಮಹಾಮಹಿಮಅರಸುಅಖಂಡೇಶ್ವರನ ಶ್ರೀಚರಣಕ್ಕೆ ನಮೋನಮೋಯೆಂದುಧನ್ಯಧನ್ಯನಾದೆನು||

ಇತಿ ಅಖಂಡೇಶ್ವರ ವಚನವು ಸಂಪೂರ್ಣಮಾದುದು.

ಬಳ್ಳಾರಿ.
ಕರ್ನಾಟಕ ಬುಕ್‌ಡಿಪೋ ಪ್ರೆಸ್‌ನಲ್ಲಿ ಮುದ್ರಿಸಲ್ಪಟ್ಟಿತು.

ಹಾತೀಮತಾಯಿ ಕ

ಇದು ಕೇವಲ ಪರೋಪಕಾರದ ದಿಗ್ದ ಶ
ಯುಕವಾದದ್ದಿದ್ದು ಪ್ರತಿ ಒಬ್ಬನು ಅನುಕ
ಮಾಡಲಿಕ್ಕೆ ಯೋಗ್ಯವಾಗಿದೆ ಇದರಲ್ಲಿ ಕಥಾ
ನಾದ ಹಾತೀಮನು ಕಥಾನಾಯಕಿಯೂದ
ಬಾನು ಎಂಬವಳ ಏಳುಪ್ರಶ್ನೆಗಳಿಗೆ ಸಮರ್ಪ
ಉತ್ತರಗಳನ್ನು ಹೇಳಿ ಅವಳನ್ನು ಮುನೀರಪ
ರಾಜಪುತ್ರನಿಗೆ ವಿವಾಹ ಮಾಡಿಸಿದನೆಂಬ ಸಂ
ವರ್ಣಿಸಲ್ಪಟ್ಟಿದೆ. ಈ ಕಥೆಯು ಹಿಂದೂಸ್ತಾ
ಹಾರಾಷ್ಟ್ರ ಭಾಷೆಯಲ್ಲಿ ಪ್ರಚುರವಾಗಿ ಅ
ಪ್ರತಿಗಳು ಖರ್ಚಾಗಿ ಹೋದದನ್ನು ಹೋಗು
ದನ್ನು ಕಂಡು ಕನ್ನಡ ಭಾಷೆಯಲ್ಲಿ ಭಾಷಾಂ
ತಿಸಿ ಕ್ರಯಕ್ಕೆ ಸಿದ್ಧಮಾಡಲ್ಪಟ್ಟಿದೆ.

ಕ್ರಯ ೧-ಕ್ಕೆ ೧—೦—೦

ಎಸ್. ಕೆ. ಕೃಷ್ಣಸ್ವಾಮಿ ಶೆಟ್ಟಿ ಅಂಡ್
ಕರ್ನಾಟಕ ಬುಕ್‌ಡಿಪೋ ಛಾಪಖಾನೆ, ಕೊಲಂಬ